ಭಾನುವಾರ, ಮಾರ್ಚ್ 29, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 87 | ಪುಟ 22
● www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಶಾಸಕ ಪ್ರದೀಪ್ ಈಶ್ವರ್‌ಗೆ ಪೊರಕೆ ಪ್ರದರ್ಶನ 8

ಆರ್‌ಸಿಬಿ ಶುಭಾರಂಭ

ವೇಗಿ ಜೇಕಬ್ ಡಫಿ (22ಕ್ಕೆ 3) ಅವರ ಬೌಲಿಂಗ್ ದಾಳಿಯ ನೆರವಿನಿಂದ ಆರ್‌ಸಿಬಿ ತಂಡವು ಶನಿವಾರ ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿತು



ಇಂದಿನ ಸಂಚಿಕೆಯೊಂದಿಗೆ ಪ್ರಜಾವಾಣಿ ಕ್ಲಾಸಿಫೈಡ್ಸ್ ಪುರವಣಿ ಇದೆ

ಸಂಘರ್ಷ ಕಣಕ್ಕೆ ಹೂಥಿ ಪ್ರವೇಶ

ಟೆಹರಾನ್ (ಎಎಫ್‌ಪಿ): ಇರಾನ್ ಬೆಂಬಲಿತ, ಯೆಮನ್‌ನ ಹೂಥಿ ಬಂಡುಕೋರರು ಪಶ್ಚಿಮ ಏಷ್ಯಾ ಸಂಘರ್ಷ ಕಣ ಪ್ರವೇಶಿಸಿರುವುದಾಗಿ ಘೋಷಿಸಿಕೊಂಡಿದ್ದು, ಇಸ್ರೇಲ್ ವಿರುದ್ಧ ಶನಿವಾರ ಕ್ಷಿಪಣಿ ದಾಳಿ ನಡೆಸಿದ್ದಾರೆ. ಹೂಥಿ ಬಂಡುಕೋರರ ಪ್ರವೇಶದಿಂದ ಕೆಂಪು ಸಮುದ್ರದ ಮೂಲಕ ಸರಕು ಸಾಗಾಣಿಕೆ ಹಡಗುಗಳ ಸಂಚಾರಕ್ಕೆ ಅಡ್ಡಿ ಎದುರಾಗುವ ಆತಂಕ ಸೃಷ್ಟಿಯಾಗಿದೆ. 14

ಅವಳ ಸಾಧನೆ ಸಂಭ್ರಮ

ಪ್ರಜಾವಾಣಿ ಚಿತ್ರ



ಮೈಸೂರಿನಲ್ಲಿ ಶನಿವಾರ ನಡೆದ 'ಪ್ರಜಾವಾಣಿ ಸಾಧಕಿಯರು- 2026' ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರಾದ ಸವಿತಾ, ಕಮಲಮ್ಮ, ಶಂಕರವ್ವ ಲಮಾಣಿ, ಎಸ್. ಆಶಾ, ಜಾನು, ಎಂ.ಗೌಸಿಯಾ ಖಾನ್, ಗಿರಿಜಮ್ಮ ಸಾರಂಗ, ರಾಗಿಣಿ, ಟಿ.ಸಿ.ದೀಪಿಕಾ ಅವರೊಂದಿಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಸ್.ಮುದಗಲ್, ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ರಂಗಕರ್ಮಿ ಬಿ.ಜಯಶ್ರೀ ಹಾಗೂ ಚಲನಚಿತ್ರ ನಟ ಅಂಕಿತಾ ಅಮರ್ (ನಿಂತವರಲ್ಲಿ ಎಡದಿಂದ ಮೊದಲನೆಯವರು) ಪಾಲ್ಗೊಂಡರು

ದ್ವಿಭಾಷಾ ನೀತಿ ಮಾಡಿಲ್ಲ: ಸಿ.ಎಂ

ಮೈಸೂರು: 'ರಾಜ್ಯದಲ್ಲಿ ದ್ವಿಭಾಷಾ ನೀತಿಯನ್ನು ಇನ್ನೂ ಮಾಡಿಲ್ಲ. ತೃತೀಯ ಭಾಷೆ ಹಿಂದಿಯನ್ನು ಕಡ್ಡಾಯ ಮಾಡಬಾರದು ಎಂದು ಹೇಳಿದ್ದೇವೆ. ಇದು ಈ ವರ್ಷದಿಂದಲೇ ಜಾರಿಯಾಗಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ವಿವರ 9

ಕಾಡಂಚಿನ ಜನರ ನಿತ್ಯ ರೋದನ

ಕುದುರೆಮುಖ ರಾಷ್ಟ್ರೀಯ ಉದ್ಯಾನ: ಅರಣ್ಯದಲ್ಲಿ ಉಳಿದ ಜನರ ನಿಕೃಷ್ಟ ಜೀವನ

● ವಿಜಯಕುಮಾರ್ ಎಸ್.ಕೆ.

ಒಳನೋಟ

ಚಿಕ್ಕಮಗಳೂರು: ಆನೆ ಕಾಲಿಗೆ ಸಿಗುತ್ತೇವೊ, ಹುಲಿ ಬಾಯಿಗೆ ಆಹಾರವಾಗುತ್ತೇವೊ ಗೊತ್ತಿಲ್ಲ. ಕಾಡೊಳಗಿನ ಗೋಳು ಸಾಕಾಗಿದೆ, ಸರ್ಕಾರದ ಮುಂದೆ ಅಂಗಲಾಚಿ ಸುಸ್ತಾಗಿದೆ. ಮನೆಗೆ ಬರಲು ದಾರಿ ಇಲ್ಲ, ಹೊರಗೆ ಹೋಗಲು ದಿಕ್ಕಿಲ್ಲ. ಬದುಕುಳಿಯಲು ಯಾವ ಉತ್ಸಾಹವೂ ಉಳಿದಿಲ್ಲ. ಇನ್ನೇನಿದ್ದರೂ ಸಾಯುವುದೊಂದೇ ಮುಂದಿನ ದಾರಿ, ನಿಮ್ಮೆದುರೇ ಹಗ್ಗ ಬಿಗಿದುಕೊಳ್ಳಲೇ?...

ಹೀಗೆಂದು ಕಣ್ತುಂಬಿಕೊಂಡವರು ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗೆ ಉಳಿದಿರುವ ಮನೆಯೊಂದರ ನಿವಾಸಿ ಶಿವಶಂಕರ. ಕೊಡಿಗೆ ಜನವಸತಿಯ ಮನೆಯೊಂದರ ಮುಂದೆ ನಿಂತು ಸಮಸ್ಯೆ ಆಲಿಸುತ್ತಿದ್ದ 'ಪ್ರಜಾವಾಣಿ' ತಂಡವನ್ನು ದೂರದಿಂದ ನೋಡಿ ಓಡೋಡಿ ಬಂದ ಅವರು, 'ಕಾಡಿನಿಂದ ಹೊರಗೆ ಕರೆದೊಯ್ಯುತ್ತೇವೆ ಎಂದು ಸಮೀಕ್ಷೆ ಮಾಡಿಕೊಂಡು ಹೋಗಿ ನಾಕ್ಕೈದು ವರ್ಷವಾಗಿವೆ. ಆ ನಂತರ ಯಾವ ಅಧಿಕಾರಿನೂ ಈ ಕಾಡಿಗೆ ಕಾಲಿಟ್ಟಿಲ್ಲ. ನಮಗೆ ಈ ನರಕದಿಂದ ಮುಕ್ತಿ ಕೊಡಿಸುವಿರೊ, ನಾವು ಆತ್ಮಹತ್ಯೆ ಮಾಡಿಕೊಳ್ಳಬೇಕೊ' ಎಂದು ದುಃಖದ ನಡುವೆ ಪ್ರಶ್ನಿಸಿದರು.

ಇವರ ಈ ಹತಾಶೆಯ ಆಕ್ರೋಶಕ್ಕೆ ಕಾರಣಗಳನ್ನು ಕೇಳಬೇಕಿರಲಿಲ್ಲ. ಅವರನ್ನು ಹುಡುಕಿಕೊಂಡು ಹೋದ ದಾರಿಯೇ ಎಲ್ಲವನ್ನೂ ಅರ್ಥ ಮಾಡಿಸಿತ್ತು. ಹೀಗೆ ರಾಷ್ಟ್ರೀಯ ಉದ್ಯಾನ ದೊಳಗೆ ಹಲವು ಜನವಸತಿಗಳು ಉಳಿದುಕೊಂಡಿವೆ. ಹೊರ ಬರಲು ಅವರು ಒಪ್ಪಿಕೊಂಡಿದ್ದರೂ, ಕರೆ ತಂದು ಪುನರ್ವಸತಿ ಕಲ್ಪಿಸಲು 25 ವರ್ಷಗಳಿಂದ ಸರ್ಕಾರಗಳು ದಿನ ದೂಡುತ್ತಿವೆ. ಇಂತಹ ಜನವಸತಿಯನ್ನು ಹುಡುಕಿ ಹೊರಟಿದ್ದ ನಮಗೆ ಅವರ ಪರವಾಗಿ ಹೋರಾಟ ನಡೆಸುತ್ತಿರುವ ಹೋರಾಟಗಾರರಲ್ಲಿ ಒಬ್ಬರಾದ ದಿನೇಶ್ ಹೆಗ್ಗಡೆ ಅವರ ಸಂಪರ್ಕ ದೊರೆಯಿತು. 6



ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗಿನ ಮಲ್ನಾಡು ಗ್ರಾಮದಲ್ಲಿ ಮಳೆಗಾಲದಲ್ಲಿ ಕಂಡು ಬರುವ ಸ್ಥಿತಿ



ಉದ್ಯಾನವನದ ಸೂಕ್ಷ್ಮ ವಲಯ ಮತ್ತು ಕಂದಾಯ ಭೂಮಿಯಲ್ಲಿರುವ ಎಲ್ಲಾ ಜಮೀನು ಮತ್ತು ಮನೆಗಳಿಗೆ ಪುನರ್ವಸತಿ ಪರಿಹಾರವನ್ನು ತ್ವರಿತವಾಗಿ ನೀಡಬೇಕು

ದಿನೇಶ್ ಹೆಗ್ಗಡೆ, ಸಂತ್ರಸ್ತರ ಪರ ಹೋರಾಟಗಾರ

ಇಲ್ಲಿ 300 ಕುಟುಂಬಗಳು ಸ್ಥಳಾಂತರಕ್ಕೆ ಒಪ್ಪಿವೆ. ಇದಕ್ಕೆ ₹300 ಕೋಟಿ ಬೇಕಿದೆ. ಕೇಂದ್ರದಿಂದ ಬರಬೇಕಿರುವ ₹500 ಕೋಟಿ ಅನುದಾನ ಕೇಳಲಾಗಿದೆ. ಹಂತ-ಹಂತವಾಗಿ ಸ್ಥಳಾಂತರ ಮಾಡಲಾಗುವುದು

ಈಶ್ವರ ಬಿ.ಖಂಡ್ರೆ, ಅರಣ್ಯ ಸಚಿವ

ಎಲ್‌ಪಿಜಿ ಮೇಲ್ವಿಚಾರಣೆಗೆ ಜಿಲ್ಲಾ ಸಮಿತಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎಲ್‌ಪಿಜಿ ಸಿಲಿಂಡರ್‌ಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಗಾಗಿ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ರಚಿಸಲು ಆಹಾರ ಇಲಾಖೆ ಆದೇಶ ಹೊರಡಿಸಿದೆ.

ಆದರೆ, ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಉಪ ಚುನಾವಣೆ ನಡೆಯುತ್ತಿರುವುದು ಮೇಲ್ವಿಚಾರಣೆಗೆ ತೊಡಕಾಗಿದೆ.

ಇರಾನ್, ಅಮೆರಿಕ-ಇಸ್ರೇಲ್ ಯುದ್ಧದ ಬಿಸಿ ಭಾರತದ ತೈಲ ಕ್ಷೇತ್ರಕ್ಕೂ ತಟ್ಟಿದೆ. ದೇಶದಲ್ಲಿನ ನೈಸರ್ಗಿಕ ಅನಿಲ ಮತ್ತು ಎಲ್‌ಪಿಜಿ ಉತ್ಪನ್ನಗಳ ಪೂರೈಕೆ ಮತ್ತು ವಿತರಣೆಯ ನಿಯಂತ್ರಣ ಕುರಿತು ಹಲವು ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಎಲ್ಲ ರಾಜ್ಯಗಳಿಗೂ ಸೂಚನೆ ನೀಡಿದೆ. ಕೇಂದ್ರದ ಸೂಚನೆಯಂತೆ ಕರ್ನಾಟಕದ ಪ್ರತಿ ಜಿಲ್ಲೆಯಲ್ಲೂ ಮೇಲ್ವಿಚಾರಣಾ ಸಮಿತಿ ರಚಿಸಲು ಆಹಾರ ಇಲಾಖೆ ಆದೇಶ ಹೊರಡಿಸಿತ್ತು.

ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಮೇಲ್ವಿಚಾರಣಾ ಸಮಿತಿ ರಚಿಸಲಾಗಿದೆ. ಜಿಲ್ಲಾ ಪಂಚಾಯಿತಿ ಸಿಇಒ, ಎಸ್.ಪಿ, ಜಿಲ್ಲಾ ಆರೋಗ್ಯಾಧಿಕಾರಿ, ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿ ಸದಸ್ಯರಾಗಿರುತ್ತಾರೆ. ಆಹಾರ ಇಲಾಖೆಯ ಉಪ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಾರೆ. 14

ನೇಪಾಳ: ಮಾಜಿ ಪ್ರಧಾನಿ ಒಲಿ ಬಂಧನ

ಕಾಠ್ಮಂಡು (ಪಿಟಿಐ): ಕಳೆದ ವರ್ಷ ನೇಪಾಳದಲ್ಲಿ ನಡೆದಿದ್ದ ಜೆನ್-ಝಿ ಪ್ರತಿಭಟನೆಯನ್ನು ಹತ್ತಿಕ್ಕಿ, 76 ಮಂದಿಯ ಸಾವಿಗೆ ಕಾರಣರಾಗಿದ್ದಾರೆ ಎಂಬ ಆರೋಪದಲ್ಲಿ ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ (74) ಮತ್ತು ಅಂದಿನ ಗೃಹ ಸಚಿವ ರಮೇಶ್ ಲೆಖಕ್ (62) ಅವರನ್ನು ಶನಿವಾರ ಬೆಳಗಿನ ಜಾವ ಬಂಧಿಸಲಾಗಿದೆ.



ಕೆ.ಪಿ. ಶರ್ಮಾ ಒಲಿ

ಪ್ರತಿಭಟನೆ ಮತ್ತು ಅದರ ಸುತ್ತಲಿನ ಘಟನಾವಳಿ ಸಂಬಂಧ ತನಿಖೆ ನಡೆಸಲು ಹಂಗಾಮಿ ಸರ್ಕಾರವು ತನಿಖಾ ಸಮಿತಿಯೊಂದನ್ನು ರಚಿಸಿತ್ತು. ಸಮಿತಿಯು ಇತ್ತೀಚೆಗೆ 900 ಪುಟಗಳ ವರದಿ ನೀಡಿದೆ. ಜೊತೆಗೆ, 8 ಸಾವಿರ ಪುಟಗಳ ಸಾಕ್ಷ್ಯಗಳನ್ನೂ ಸಲ್ಲಿಸಿದೆ. ಶುಕ್ರವಾರವಷ್ಟೇ ರಚನೆಯಾದ ಹೊಸ ಸರ್ಕಾರವು ಸಮಿತಿಯ ಶಿಫಾರಸನ್ನು ಜಾರಿ ಮಾಡಿದೆ.

ಪ್ರತಿಭಟನೆ ವೇಳೆ ಮೃತಪಟ್ಟವರಲ್ಲಿ 48 ಜನರ ಎದೆ ಮತ್ತು ತಲೆಗೆ ಗುಂಡು ತಗುಲಿತ್ತು. 14

ಚಿನಕುರುಳಿ ಪ್ರಕಾಶ್ ಶೆಟ್ಟಿ



ಬೆಂಗಳೂರು ಉತ್ತರ

₹4,344 ಕೋಟಿ
ಬಜೆಟ್ ಒಟ್ಟು ಗಾತ್ರ

₹4,341.20 ಕೋಟಿ
ಒಟ್ಟು ವೆಚ್ಚ

ಸ್ವೀಕೃತಿ

- ಆಸ್ತಿ ತೆರಿಗೆ, ಕರ– ತೆರಿಗೆ ₹1,112.99 ಕೋಟಿ
- ತೆರಿಗೆಯೇತರ ಆದಾಯ ₹1,342.79 ಕೋಟಿ
- ಕೇಂದ್ರ ಸರ್ಕಾರದ ಅನುದಾನ ₹153.29 ಕೋಟಿ
- ರಾಜ್ಯ ಸರ್ಕಾರದ ರಾಜಸ್ವ ಅನುದಾನ ₹103.97 ಕೋಟಿ
- ರಾಜ್ಯ ಸರ್ಕಾರದ ಬಂಡವಾಳ ಅನುದಾನ ₹782.27 ಕೋಟಿ
- ಬಾಂಡ್‌ಗಳು– ಅಸಾಧಾರಣ ಆದಾಯ ₹837.23 ಕೋಟಿ

ವೆಚ್ಚಗಳು

- ಸಿಬ್ಬಂದಿ ₹476.97 ಕೋಟಿ
- ಆಡಳಿತ ₹110.69 ಕೋಟಿ
- ಘನತ್ಯಾಜ್ಯ ₹301.27 ಕೋಟಿ
- ಕಾರ್ಯಾಚರಣೆ– ನಿರ್ವಹಣೆ ₹312.10 ಕೋಟಿ
- ಆರೋಗ್ಯ, ಶಿಕ್ಷಣ, ಕಲ್ಯಾಣ ₹321.24 ಕೋಟಿ
- ಸಾರ್ವಜನಿಕ ಅಭಿವೃದ್ಧಿ ಕಾಮಗಾರಿ ₹2,681.57 ಕೋಟಿ
- ಠೇವಣಿ– ಕರಗಳ ಮರುಪಾವತಿ ₹137.23 ಕೋಟಿ

- ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ₹248 ಕೋಟಿ ಮೊತ್ತದಲ್ಲಿ 197.90 ಕಿ.ಮೀ ಉದ್ದದ ವಾರ್ಡ್ ರಸ್ತೆಗಳ ಅಭಿವೃದ್ಧಿ ಹಾಗೂ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯಡಿ ₹248 ಕೋಟಿ ಮೊತ್ತದಲ್ಲಿ 187 ಕಿ.ಮೀ ಉದ್ದದ ಮುಖ್ಯ ಮತ್ತು ಉಪ ಮುಖ್ಯರಸ್ತೆಗಳ ಅಭಿವೃದ್ಧಿ.

ಜಾಹೀರಾತು ನೀತಿಯಿಂದ ಹೆಚ್ಚುವರಿ ಶುಲ್ಕದ ಮೇಲೆ ಕಣ್ಣು

ಅನುಷ್ಠಾನವಾಗದ ಪ್ರೀಮಿಯಂ ಎಫ್‌ಎಎಆರ್ ಮೇಲೆ ಆಸರೆ

ನಿರೀಕ್ಷೆ ಹತ್ತಾರು, ಯೋಜನೆ ನೂರಾರು

₹20,220.48 ಕೋಟಿ
ಐದು ನಗರ ಪಾಲಿಕೆಗಳ ಬಜೆಟ್ ಒಟ್ಟಾರೆ ಮೊತ್ತ

₹3,922.81 ಕೋಟಿ
ರಾಜ್ಯ ಸರ್ಕಾರದಿಂದ ನಿರೀಕ್ಷಿತ ಅನುದಾನ

₹788.15 ಕೋಟಿ
ಕೇಂದ್ರ ಸರ್ಕಾರದಿಂದ ನಿರೀಕ್ಷಿತ ಅನುದಾನ

• ಆರ್.ಮಂಜುನಾಥ್

ಬೆಂಗಳೂರು: ಉತ್ತರ, ದಕ್ಷಿಣ ಹಾಗೂ ಪಶ್ಚಿಮ ನಗರ ಪಾಲಿಕೆಗಳು ತಮ್ಮ ಮೊದಲ 'ಬೃಹತ್' ಬಜೆಟ್‌ಗಳಲ್ಲಿ ಹತ್ತಾರು ನಿರೀಕ್ಷೆಗಳೊಂದಿಗೆ ನೂರಾರು ಯೋಜನೆಗಳನ್ನು ಅನುಷ್ಠಾನಗೊಳಿಸುವ 'ಗ್ರೇಟರ್' ಆಶಯವನ್ನು ವ್ಯಕ್ತಪಡಿಸಿವೆ. ಆದರೆ, ಬಹುತೇಕ ನಿರೀಕ್ಷೆಗಳು ಕೈಗೆಟುಕದ ಗಗನ ಕುಸುಮವಾಗಿವೆ.

ಆಸ್ತಿಗೆ ತೆರಿಗೆ ಸಂಗ್ರಹದಲ್ಲಿ ಐದು ತಿಂಗಳಲ್ಲೇ ಯಶಸ್ಸು ಕಾಣದ ಪಾಲಿಕೆಗಳು, ಹಿಂದಿನ ವರ್ಷಕ್ಕಿಂತ ದುಪ್ಪಟ್ಟು ಸಂಗ್ರಹಿಸುವ ಕನಸನ್ನು ಕಂಡಿವೆ. ತೆರಿಗೆ ಪಾವತಿಸದ ಆಸ್ತಿಗಳನ್ನು ಹರಾಜು ಹಾಕುವಲ್ಲಿ ವಿಫಲವಾಗಿದ್ದು, ಅದನ್ನು ಪಾಲಿಕೆಗಳೇ ಮಾರ್ಗಸೂಚಿ ದರದಲ್ಲಿ ಖರೀದಿಸುವ ಯೋಜನೆ ಇದೆ. ಆದರೆ, ಸುಸ್ತಿದಾರರ ಬಾಕಿ ಹೊರತಾದ ನೂರಾರು ಕೋಟಿ ಹಣವನ್ನು ಆಸ್ತಿ ಮಾಲೀಕರಿಗೆ ನೀಡುವ ಶಕ್ತಿಯನ್ನು ಪಾಲಿಕೆಗಳು ಹೊಂದಿಲ್ಲ ಎಂಬುದು ಅವುಗಳ 'ಬ್ಯಾಲೆನ್ಸ್ ಶೀಟ್'ನಿಂದಲೇ ಬಹಿರಂಗವಾಗಿದೆ.

ಅನುಷ್ಠಾನವಾಗದ ಪ್ರೀಮಿಯಂ ಎಫ್‌ಎಎಆರ್ ಮೇಲೆ ಅತಿಹೆಚ್ಚು ಅವಲಂಬಿತವಾಗಿ ನೂರಾರು ಕೋಟಿಗಳನ್ನು ಸಂಗ್ರಹಿಸುವ ಗುರಿಯನ್ನು ಪಾಲಿಕೆಗಳು ಹೊಂದಿವೆ. ರಿಯಲ್ ಎಸ್ಟೇಟ್ ಡೆವಲಪರ್‌ಗಳ ಆಕ್ಷೇಪಣೆಯಿಂದ ಪ್ರೀಮಿಯಂ ಎಫ್‌ಎಆರ್ ಅನುಷ್ಠಾನವಾಗಲು ಕಾನೂನು ತೊಡಕಿದೆ. ಅದು ಪರಿಹಾರವಾಗಲು ಸಾಕಷ್ಟು ಸಮಯ ಬೇಕು. ಇನ್ನು ಅದು ಅನುಷ್ಠಾನವಾದರೂ ಅದರ ಖರೀದಿ, ಮಾರಾಟ ಹಾಗೂ ಪಾಲಿಕೆಗಳಿಗೆ ಬರುವ ಶುಲ್ಕಕ್ಕೆ ದೀರ್ಘ ಸಮಯವೇ ಬೇಕು. ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಯೋಜನೆಯಲ್ಲಿ ಹಲವು ಅಕ್ರಮಗಳಾಗಿವೆ ಎಂಬುದನ್ನು ಉಪ ಮುಖ್ಯಮಂತ್ರಿಯವರೇ ಒಪ್ಪಿಕೊಂಡಿದ್ದು, ಅದರ ನಿವಾರಣೆ ಸಾಧ್ಯವಾಗಿಲ್ಲ. ಇನ್ನು ಪ್ರೀಮಿಯಂ ಎಫ್‌ಎಆರ್‌ನಲ್ಲೂ ಇಂತಹ ಅಡೆತಡೆಗಳು ಇರುವುದರಿಂದ, ಅದನ್ನೇ ನೆಚ್ಚಿಕೊಂಡಿರುವ ಯೋಜನೆಗಳಿಗೆ ಹಣ ಒದಗಿಸಲು ಸಾಧ್ಯವಾಗುವುದಿಲ್ಲ.

ಜಾಹೀರಾತು ಶುಲ್ಕ, ವಾಹನ ನಿಲುಗಡೆ ಶುಲ್ಕ, ಉದ್ದಿಮೆ ಪರವಾನಗಿಯಿಂದ ಬರುವ ವರಮಾನವನ್ನೂ ನೆಚ್ಚಿಕೊಂಡು ಯೋಜನೆಗಳನ್ನು ರೂಪಿಸಲಾಗಿದೆ. ಸ್ವಂತ ಬಲದಿಂದ ಸಂಪನ್ಮೂಲ ಕ್ರೋಢೀಕರಿಸುವ ಕಸರತ್ತು ನಡೆಸಿರುವ ನಗರ ಪಾಲಿಕೆಗಳು, ಅದರಲ್ಲಿ ಶೇ 50ರಷ್ಟನ್ನು ಸಾಧಿಸಿದರೇ ಅದೇ ಅತಿದೊಡ್ಡ ಯಶಸ್ಸು. ಆದರೆ, ಅಂತಹ ಉದಾಹರಣೆ, ನಗರ ಪಾಲಿಕೆ, ಬೃಹತ್ ನಗರ ಪಾಲಿಕೆಗಳಲ್ಲೇ ದಶಕಗಳಿಂದ ದಾಖಲಾಗಿಲ್ಲ.

ಇನ್ನು, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಅನುದಾನವನ್ನು ನಿರೀಕ್ಷಿಸಿ, ನಗರ ಪಾಲಿಕೆಗಳು ಬಜೆಟ್ ಮಂಡಿಸಿವೆ. ರಾಜ್ಯ ಸರ್ಕಾರ ಪ್ರತಿ ವರ್ಷ ನೀಡುತ್ತಿರುವ ₹3,000 ಕೋಟಿಯನ್ನು ₹3,900 ಕೋಟಿ ನೀಡುತ್ತದೆ ಎಂದು ನಿರೀಕ್ಷಿಸಿ, ಅದನ್ನು ಹಂಚಿಕೊಂಡಿವೆ. ಇದರಲ್ಲಿಯೂ ₹900 ಕೋಟಿ ಕೊರತೆಯಾಗಲಿದೆ. ಇನ್ನು, ಜನಪ್ರತಿನಿಧಿಗಳಿಲ್ಲದ ಪಾಲಿಕೆಗಳಿಗೆ ಕೇಂದ್ರ ಸರ್ಕಾರ ಅನುದಾನ ನೀಡುವುದನ್ನು ಐದು ವರ್ಷದಿಂದ ನಿಲ್ಲಿಸಿದೆ. ಆದರೂ, ಕೇಂದ್ರದಿಂದ ಸುಮಾರು ₹800 ಕೋಟಿ ನಿರೀಕ್ಷಿಸಲಾಗಿದೆ.

ರಾಜ್ಯ ಸರ್ಕಾರ, ಇನ್ನೂ ₹4,000 ಕೋಟಿ ಅನುದಾನವನ್ನು ಪ್ರಕಟಿಸಿದ್ದು, ಅದು ಕಳೆದ ಆರ್ಥಿಕ ವರ್ಷದಿಂದ ಬಾಕಿ ಉಳಿದಿದೆ. ಆ ಅನುದಾನ ಬಿಡುಗಡೆಯಾದರೂ ಅದು ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿಗೆ (ಬಿ–ಸ್ಮೈಲ್) ಹೋಗುತ್ತದೆ. ಸುರಂಗ ರಸ್ತೆ, ಕಾರಿಡಾರ್‌ಗಳಿಗೆ ಈ ಹಣ ವೆಚ್ಚವಾಗಲಿದೆ ಎಂದು ರಾಜ್ಯ ಸರ್ಕಾರ ಹಿಂದಿನ ಬಜೆಟ್‌ನಲ್ಲೇ ಸ್ಪಷ್ಟಪಡಿಸಿದೆ. ಆ ಹಣ ನಗರ ಪಾಲಿಕೆಗಳ ಯೋಜನೆಗೆ ಸಿಗುವುದಿಲ್ಲ.

ಹೀಗಾಗಿ, ನಗರ ಪಾಲಿಕೆಗಳು ಸ್ವಂತ ಆರ್ಥಿಕ ಕ್ರೋಢೀಕರಣದಲ್ಲಿ ಯಶಸ್ಸು ಸಾಧಿಸದೇ ಹೋದರೆ, ಅದರ ನಿರೀಕ್ಷೆಯಲ್ಲಿ ರೂಪಿಸಲಾಗಿರುವ ಸಮಗ್ರ ನಗರದ ಅಭಿವೃದ್ಧಿಯ ನೂರಾರು ಯೋಜನೆಗಳು ಬಜೆಟ್‌ನ ಅಂಕಿ–ಅಂಶಗಳಾಗಿಯೇ ಉಳಿಯುತ್ತವೆ.

ಅನುದಾನ ನಿರೀಕ್ಷೆ

ಪಾಲಿಕೆ	ರಾಜ್ಯ ಸರ್ಕಾರ	ಕೇಂದ್ರ ಸರ್ಕಾರ
ಕೇಂದ್ರ	₹741.58 ಕೋಟಿ	₹142.92 ಕೋಟಿ
ಪೂರ್ವ	₹420.28 ಕೋಟಿ	₹114.09 ಕೋಟಿ
ಪಶ್ಚಿಮ	₹1,196.72 ಕೋಟಿ	₹224.56 ಕೋಟಿ
ಉತ್ತರ	₹886.24 ಕೋಟಿ	₹153.29 ಕೋಟಿ
ದಕ್ಷಿಣ	₹677.99 ಕೋಟಿ	₹153.29 ಕೋಟಿ

ಉಸ್ತುವಾರಿ ಸಚಿವರ ನಿಧಿ ₹300 ಕೋಟಿ

ಐದು ನಗರ ಪಾಲಿಕೆಗಳಲ್ಲಿ ನಗರದ ಉಸ್ತುವಾರಿ ಸಚಿವರಿಗೆ ಒಟ್ಟಾರೆ ₹300 ಕೋಟಿ ನಿಧಿಯನ್ನು 'ವಿವೇಚನೆಗೆ ಒಳಪಟ್ಟ ಅನುದಾನ'ವಾಗಿ ಮೀಸಲಿಡಲಾಗಿದೆ. ಈ ನಿಧಿಯಲ್ಲಿ ಅವರು ಯಾವ ಕಾಮಗಾರಿಗಾದರೂ ಅಥವಾ ಯಾವ ಶಾಸಕರ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳಿಗಾದರೂ ನೀಡಬಹುದು. ನಗರ ಉಸ್ತುವಾರಿ ಸಚಿವರು ಉಪ ಮುಖ್ಯಮಂತ್ರಿಯೂ ಆಗಿರುವುದರಿಂದ ಈ ಹಣವನ್ನು ಪಾಲಿಕೆಗಳು ಒದಗಿಸಲೇ ಬೇಕಾಗುತ್ತದೆ. ಇದಲ್ಲದೆ, ಮೇಯರ್, ಉಪ ಮೇಯರ್, ಆಯುಕ್ತ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿವೇಚನೆಗೆ ಒಳಪಟ್ಟ ಅನುದಾನ, ವಿಶೇಷ ವಿವೇಚನೆಗೆ ಒಳಪಟ್ಟ ಅಭಿವೃದ್ಧಿ ಕಾಮಗಾರಿ ನಿಧಿಯಾಗಿ ಪ್ರತಿ ಪಾಲಿಕೆಗಳು ತಲಾ ₹40 ಕೋಟಿಯನ್ನು ಹೊಂದಿವೆ. ಮೇಯರ್ ಉಪ ಮೇಯರ್, ಸ್ಥಾಯಿ ಸಮಿತಿ ಇಲ್ಲದ್ದರಿಂದ ಆಡಳಿತಾಧಿಕಾರಿ ಆ ನಿಧಿಗಳನ್ನು ಮಂಜೂರು ಮಾಡುತ್ತಾರೆ.

ಬೆಂಗಳೂರು ದಕ್ಷಿಣ

₹3,826.43 ಕೋಟಿ
ಬಜೆಟ್ ಒಟ್ಟು ಗಾತ್ರ

₹3,825.95 ಕೋಟಿ
ಒಟ್ಟು ವೆಚ್ಚ

ಸ್ವೀಕೃತಿ

- ಆಸ್ತಿ ತೆರಿಗೆ, ಕರ– ತೆರಿಗೆ ₹1,101.30 ಕೋಟಿ
- ತೆರಿಗೆಯೇತರ ಆದಾಯ ₹1,087.03 ಕೋಟಿ
- ಕೇಂದ್ರ ಸರ್ಕಾರದ ಅನುದಾನ ₹153.29 ಕೋಟಿ
- ರಾಜ್ಯ ಸರ್ಕಾರದ ಬಂಡವಾಳ ಅನುದಾನ ₹677.99 ಕೋಟಿ
- ಬಾಂಡ್‌ಗಳು– ಅಸಾಧಾರಣ ಆದಾಯ ₹606.82 ಕೋಟಿ
- ಇತರ ಅನುದಾನಗಳು ₹200 ಕೋಟಿ


ವೆಚ್ಚಗಳು

- ಸಿಬ್ಬಂದಿ ₹372.66 ಕೋಟಿ
- ಆಡಳಿತ ₹102.34 ಕೋಟಿ
- ಘನತ್ಯಾಜ್ಯ ₹300 ಕೋಟಿ
- ಕಾರ್ಯಕ್ರಮ– ₹286 ಕೋಟಿ
- ಕಾರ್ಯಾಚರಣೆ– ನಿರ್ವಹಣೆ ₹356.61 ಕೋಟಿ
- ಸಾರ್ವಜನಿಕ ಅಭಿವೃದ್ಧಿ ಕಾಮಗಾರಿ ₹1,661.95 ಕೋಟಿ
- ಬಿಸ್ಮೈಲ್ ಕಾಮಗಾರಿ ₹625.40 ಕೋಟಿ
- ಠೇವಣಿ– ಕರಗಳ ಮರುಪಾವತಿ ₹120.82 ಕೋಟಿ

- ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಅಂಗವಿಕಲರು, ಪೌರಕಾರ್ಮಿಕರು, ಹಿರಿಯ ನಾಗರಿಕರು, ಬೀದಿಬದಿ ವ್ಯಾಪಾರಿಗಳು, ಲಿಂಗತ್ವ ಅಲ್ಪಸಂಖ್ಯಾತರು ಸಹಿತ ವಿವಿಧ ಸಮುದಾಯಗಳ ಏಳಿಗೆಗೆ ಕಲ್ಯಾಣ ಯೋಜನೆ

'ಉತ್ತರದ ಕಲ್ಯಾಣ'ಕ್ಕೆ ಕಸರತ್ತು

• ಕೆ.ಎಸ್.ಸುನಿಲ್



ಈ ಬಜೆಟ್ ಸಮಗ್ರ, ಸಮೃದ್ಧ ನಗರವನ್ನು ರೂಪಿಸುವ ದಿಕ್ಸೂಚಿಯಾಗಿರುವುದೆಂಬ ವಿಶ್ವಾಸವಿದೆ. ಪ್ರತಿಯೊಂದು ರೂಪಾಯಿ ವೆಚ್ಚದಲ್ಲಿ ಸಮಾಜದ ಅಭಿವೃದ್ಧಿಯನ್ನು ಕಾಣುವುದು ಬಜೆಟ್‌ನ ಆಶಯವಾಗಿದೆ. ಇದು ಕೇವಲ ಪಾಲಿಕೆಯ ಅಂಕಿ ಅಂಶಗಳಾಗಿರದೆ ಸಮಾಜದ ಭವಿಷ್ಯವನ್ನು ರೂಪಿಸುವ ಕೈಗನ್ನಡಿ ಆಗುವುದೆಂದು ಭಾವಿಸುತ್ತೇನೆ
ಪೊಮ್ಮಲ ಸುನಿಲ್ ಕುಮಾರ್
ಆಯುಕ್ತ, ಉತ್ತರ ನಗರ ಪಾಲಿಕೆ

ಬೆಂಗಳೂರು: ಬೆಂಗಳೂರು ಉತ್ತರ ಮಹಾನಗರ ಪಾಲಿಕೆಯ ಪ್ರಥಮ ಬಜೆಟ್‌ನಲ್ಲಿ ಮಹಿಳೆಯರ ಸಬಲೀಕರಣ, ಆರೋಗ್ಯ, ಶಿಕ್ಷಣ, ಮೂಲಸೌಕರ್ಯ, ಘನತ್ಯಾಜ್ಯ ನಿರ್ವಹಣೆ, ಕೆರೆಗಳ ಪುನರುಜ್ಜೀವನ ಹಾಗೂ ನಗರಾಭಿವೃದ್ಧಿಗೆ ಒತ್ತು ನೀಡಲಾಗಿದೆ.

ಯಲಹಂಕದ ಅಂಬೇಡ್ಕರ್ ಭವನದ ಕಚೇರಿಯಲ್ಲಿ ಶನಿವಾರ ಆಯುಕ್ತ ಪೊಮ್ಮಲ ಸುನಿಲ್ ಕುಮಾರ್ ಅವರು ₹2.80 ಕೋಟಿ ಉಳಿತಾಯ ಬಜೆಟ್ ಮಂಡಿಸಿದರು. ಸುಮಾರು 1 ತಾಸು 10 ನಿಮಿಷ ಬಜೆಟ್ ವಾಚಿಸಿದರು.

ಮಹಿಳೆಯರಿಗಾಗಿ 'ಅಕ್ಕ ಕೆಫೆ', ಹೊಸ ಆಸ್ಪತ್ರೆಗಳ ಸ್ಥಾಪನೆ ಹಾಗೂ ಮೇಲ್ದರ್ಜೆಗೇರಿಸುವುದು ಸೇರಿದಂತೆ ಹಲವಾರು ಜನಪರ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಪೌರಕಾರ್ಮಿಕರು ಮತ್ತು ದುರ್ಬಲ ವರ್ಗಗಳ ಕಲ್ಯಾಣಕ್ಕೂ ವಿಶೇಷ ಆದ್ಯತೆ ನೀಡಲಾಗಿದೆ.

ಏಳು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಪಾಲಿಕೆ, ಆಸ್ತಿ ತೆರಿಗೆಯಿಂದ ₹826 ಕೋಟಿ ಆದಾಯವನ್ನು ಹಾಗೂ 'ಬಿ' ರಿಜಿಸ್ಟರ್‌ಗಳಲ್ಲಿ ದಾಖಲಾಗಿರುವ ಆಸ್ತಿಗಳನ್ನು ಎ –ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ಮೂಲಕ ₹680 ಕೋಟಿ ಆದಾಯ ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ.

ಅಲ್ಲದೇ ಖಾಲಿ ನಿವೇಶನ ಸ್ವತ್ತುಗಳಿಗೆ ಏಕ ನಿವೇಶನ ಮೂಲಕ ಅರ್ಜಿ ಸ್ವೀಕರಿಸುತ್ತಿದ್ದು, ₹100 ಕೋಟಿ ಆದಾಯ ನಿರೀಕ್ಷಿಸಲಾಗಿದೆ.

ನಗರ ಯೋಜನೆ ವಿಭಾಗದಿಂದ ಕಟ್ಟಡ ನಕ್ಷೆ ಮಂಜೂರಾತಿ, ಪ್ಲಿಂತ್/ಪ್ರಾರಂಭಿಕ ಪ್ರಮಾಣ ಪತ್ರ, ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಸಂಬಂಧ ಶುಲ್ಕ, ಪ್ರೀಮಿಯಂ ಎಫ್.ಎ.ಆರ್ ಶುಲ್ಕ, ಏಕ ನಿವೇಶನ ನಕ್ಷೆ ಮಂಜೂರಾತಿ ಹಾಗೂ ಇನ್ನಿತರೆ ಮೂಲಗಳಿಂದ ಅಂದಾಜು ₹817.37 ಕೋಟಿ ಆದಾಯ ನಿರೀಕ್ಷಿಸಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರಿಗೆ ನೆರವು: ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ಸ್ವಾವಲಂಬಿಗಳಾಗಲು ಹಾಗೂ ಸ್ವಯಂ ಉದ್ಯೋಗಕ್ಕಾಗಿ ಒಂದು ಬಾರಿಗೆ ಆರ್ಥಿಕ ಸಹಾಯ ನೀಡುವ ನಿಟ್ಟಿನಲ್ಲಿ ಗರಿಷ್ಠ ₹50 ಲಕ್ಷ ಸಹಾಯಧನ ನೀಡಲು ಉದ್ದೇಶಿಸಲಾಗಿದೆ. ಸಮುದಾಯದ ಕಲ್ಯಾಣ ಕಾರ್ಯಕ್ರಮಕ್ಕೂ ಅನುದಾನ ಮೀಸಲಿಡಲಾಗಿದೆ.

ಮಹಿಳಾ ಕಲ್ಯಾಣ ಕಾರ್ಯಕ್ರಮಕ್ಕಾಗಿ ಅನುದಾನ ಮೀಸಲಿರಿಸಿದ್ದು, ತರಬೇತಿ ಪಡೆದ ಸುಮಾರು 400 ಮಹಿಳೆಯರಿಗೆ ಜೀವನೋಪಾಯಕ್ಕಾಗಿ ಹೊಲಿಗೆ ಯಂತ್ರಗಳನ್ನು ನೀಡಲು ಮತ್ತು ಉದ್ಯೋಗಸ್ಥ ಮಹಿಳೆಯರಿಗೆ ಎಲೆಕ್ಟ್ರಿಕ್ ದ್ವಿಚಕ್ರ ವಾಹನ ವಿತರಿಸಲಾಗುತ್ತದೆ. ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ಮಹಿಳಾ ಸ್ವ ಸಹಾಯ ಸಂಘದ ಆರ್ಥಿಕ ಸಬಲೀಕರಣಕ್ಕಾಗಿ 'ಕೆಫೆ ಸಂಜೀವಿನಿ' ಎಂಬ ಕ್ಯಾಂಟೀನ್‌ಗಳನ್ನು ಸ್ಥಾಪಿಸುವ ಮೂಲಕ ನಗರ ಪ್ರದೇಶದಲ್ಲಿ ಸ್ಥಳೀಯ ಆಹಾರವನ್ನು ಶುಚಿ–ರುಚಿಯಾಗಿ ಕೈಗೆಟುಕುವ ದರದಲ್ಲಿ ಒದಗಿಸುವ ಉದ್ದೇಶದಿಂದ 'ಅಕ್ಕ ಕೆಫೆ'ಯನ್ನು ಪ್ರಾರಂಭಿಸಲಾಗುತ್ತದೆ.

ಅನಧಿಕೃತ ಜಾಹೀರಾತಿಗೆ ಕಡಿವಾಣ: ಅನಧಿಕೃತ ಜಾಹೀರಾತುಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಟೆಂಡರ್‌ನಲ್ಲಿ ನಿಗದಿಪಡಿಸಿದ ಮೊತ್ತದ ಎರಡರಷ್ಟು ದಂಡವನ್ನಾಗಿ ವಿಧಿಸಲಾಗುವುದು. ಅಲ್ಲದೇ ಅನಧಿಕೃತವಾಗಿ ಜಾಹೀರಾತು ಅಳವಡಿಸುವವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗುವುದು.

ಹೊಸ ಜಾಹೀರಾತು ನಿಯಮಗಳ ಅನುಷ್ಠಾನದಿಂದಾಗಿ ಉತ್ತರ ಪಾಲಿಕೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸುಮಾರು ₹108 ಕೋಟಿ ಆದಾಯ ಸಂಗ್ರಹಿಸುವ ಗುರಿ ಹೊಂದಲಾಗಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಹಿಂದುಳಿದ ಮತ್ತು ಅಲ್ಪಸಂಖ್ಯಾತರು, ಪೌರಕಾರ್ಮಿಕರ ಅವಲಂಬಿತರು ಸೇರಿ ಸುಮಾರು 350 ಅರ್ಹ ಫಲಾನುಭವಗಳಿಗೆ ಆಟೊ, ಕಾರು ಖರೀದಿಸಲು ಆರ್ಥಿಕ ನೆರವು ನೀಡುವ ನಿಟ್ಟಿನಲ್ಲಿ ಇ–ಸಾರಥಿ ಯೋಜನೆ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಇದು ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿ ವಾಯು ಮಾಲಿನ್ಯ ನಿಯಂತ್ರಿಸುವ ಆಶಯಕ್ಕೆ ಪೂರಕವಾಗಿದೆ.

ಪ್ರಾಧಿಕಾರದ ಎಲ್ಲಾ ವಾರ್ಡ್‌ಗಳಲ್ಲಿ ಸಾಂಪ್ರದಾಯಿಕ ಬೀದಿದೀಪ ತೆರವುಗೊಳಿಸಿ, ಇಂಧನ ದಕ್ಷತೆಯ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಿ, ವಿದ್ಯುತ್ ಉಳಿತಾಯ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗಿದ್ದು, 12,41,42 ಬೀದಿದೀಪಗಳ ಪೈಕಿ ಈಗಾಗಲೇ 49,767 ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸಲಾಗಿದೆ.

ಕೆರೆಗಳ ಅಭಿವೃದ್ಧಿಗೆ ಕ್ರಮ: ಶ್ರೀನಿವಾಸಪುರ ಕೆರೆ ಮತ್ತು ಮಲ್ಲಸಂದ್ರ ಗುಡ್ಡೆ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಕೆರೆಗಳ ಅಭಿವೃದ್ಧಿಗೆ ₹40 ಕೋಟಿ ಅನುದಾನ ಮೀಸಲಿರಿಸಲಾಗಿದೆ. ಬಾಣಸವಾಡಿ ಕೆರೆ, ಲಿಂಗರಾಜಪುರ ಕೆರೆ, ಬ್ಯಾಟಗುಂಟೆಪಾಳ್ಯ ಕೆರೆ ಮತ್ತು ರಾಮಚಂದ್ರಪುರ ಕೆರೆಗಳನ್ನು ಪುನರ್‌ಜೀವನಕ್ಕೆ ವಿಸ್ತೃತ ಯೋಜನಾ ವರದಿ ತಯಾರಿಸಲು ಯೋಜಿಸಿರುವುದು ಸಕಾರಾತ್ಮಕ ಅಂಶವಾಗಿದೆ.

30 ಕಿ.ಮೀ ರಸ್ತೆ ವಿಸ್ತರಣೆ


ಆರ್‌ಎಂಪಿ–2015ರ ಅನ್ವಯ 12 ರಸ್ತೆಗಳ ವಿಸ್ತರಣೆ ಕೈಗೆತ್ತಿಕೊಳ್ಳಲಾಗಿದೆ. ಒಟ್ಟು 30.05 ಕಿಲೋ ಮೀಟರ್ ಉದ್ದದ ರಸ್ತೆಗಳ ವಿಸ್ತರಣೆಗೆ ಉದ್ದೇಶಿಸಲಾಗಿದ್ದು, ಈ ಪೈಕಿ 22.5 ಕಿ.ಮೀ. ಉದ್ದದ ಟ್ಯಾನರಿ ರಸ್ತೆ, ನೇಹಾ ಪ್ರಕಾಶ್ ರಸ್ತೆ, ಕೆರೆಕೋಡಿ ರಸ್ತೆ, ಬಾಗಲೂರು ಮುಖ್ಯ ರಸ್ತೆ, ಕೋಗಿಲು–ಕಟ್ಟಿಗೆನಹಳ್ಳಿ ರಸ್ತೆ, ಕೋಗಿಲು–ಪಾಲನಹಳ್ಳಿ ರಸ್ತೆ, ಜಕ್ಕೂರು ಡಬಲ್ ರಸ್ತೆ, ಜಕ್ಕೂರು ರೈಲ್ವೆ ಸಮಾನಾಂತರ ರಸ್ತೆ ಕಾಮಗಾರಿಗಳನ್ನು ಈ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು.

ಅಲ್ಲದೇ ಹೊಸದಾಗಿ 7.95 ಕಿ.ಮೀ (ನಿಟ್ಟೆ ಮೀನಾಕ್ಷಿ, ಎಂಜಿನಿಯರಿಂಗ್ ಕಾಲೇಜು ರಸ್ತೆ, ಸಂದೀಪ್ ಉನ್ನಿಕೃಷ್ಣನ್ ರಸ್ತೆ ಬಳಿಯ ಗ್ಯಾಸ್ ಪೈಪ್‌ಲೈನ್ ರಸ್ತೆ, ದಾಸರಹಳ್ಳಿ ಮುಖ್ಯರಸ್ತೆ, ಹೆಣ್ಣೂರು–ಬಾಗಲೂರು ರಸ್ತೆ) ಉದ್ದದ ರಸ್ತೆ ವಿಸ್ತರಣೆಗೆ ಯೋಜಿಸಿದ್ದು, ಇದಕ್ಕಾಗಿ ₹ 25 ಕೋಟಿ ಅನುದಾನ ಮೀಸಲಿಡಲಾಗಿದೆ.

- ಸಾರ್ವಜನಿಕರ ಉಪಯೋಗಕ್ಕಾಗಿ ನಗರದ 50 ಉದ್ಯಾನಗಳಲ್ಲಿ ಶೌಚಾಲಯ
- 'ಹಸಿರು ಉದ್ಯಾನ, ಆರೋಗ್ಯರ ನಗರ' ಎಂಬ ಕಾರ್ಯಕ್ರಮ ಪರಿಚಯಿಸಿ, ಉದ್ಯಾನಗಳ ಅಭಿವೃದ್ಧಿ ಮತ್ತು ಉನ್ನತೀಕರಣಕ್ಕಾಗಿ ₹ 25 ಕೋಟಿ



- ಪಾಲಿಕೆ ವ್ಯಾಪ್ತಿಯಲ್ಲಿ ಕಪ್ಪು ಚುಕ್ಕೆಗಳ ಪ್ರದೇಶಗಳಲ್ಲಿ ತ್ಯಾಜ್ಯ ಬಿಸಾಡುವವರನ್ನು ಗುರುತಿಸಲು ಒಟ್ಟು 110 ಸಿ.ಸಿ.ಟಿ.ವಿ ಕ್ಯಾಮೆರಾ
- 'ಮಿಷನ್ ಕ್ಲೀನ್ ಏರ್‌ಪೋರ್ಟ್ ರೋಡ್' ಎಂಬ ಶೀರ್ಷಿಕೆಯೊಂದಿಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಬಳ್ಳಾರಿ ರಸ್ತೆಯ ಸುಮಾರು 34 ಕಿ.ಮೀ ರಸ್ತೆ ಸ್ವಚ್ಛ
- ಇಂದಿರಾ ಕ್ಯಾಂಟೀನ್‌ನಲ್ಲಿ ವಾರದಲ್ಲಿ ಮೂರು ದಿನ ರಾಗಿ ಮುದ್ದೆ ಸೇರಿ ಕಿರುಧಾನ್ಯ ಆಧಾರಿತ ಆಹಾರ
- ಆರೋಗ್ಯಕರ ಹಾಗೂ ವೈಜ್ಞಾನಿಕ ವಿಧಾನದಲ್ಲಿ ಮಾಂಸ ಮಾರಾಟ ಮಾಡಲು ಆಧುನಿಕ ಸೌಲಭ್ಯ ಹೊಂದಿದ ಕಸಾಯಿಖಾನೆ
- ವಿಶೇಷ ಮೂಲ ಸೌಕರ್ಯ ಯೋಜನೆಗಳು, ಮುಖ್ಯಮಂತ್ರಿ ಮೂಲ ಸೌಲಭ್ಯ ಅಭಿವದ್ಧಿ ಯೋಜನೆಗಳಿಗೆ ₹935.56 ಕೋಟಿ
- ಪಾಲಿಕೆ ವ್ಯಾಪ್ತಿಯ ಕೆರೆಗಳಲ್ಲಿ ಬೋಟಿಂಗ್ ವ್ಯವಸ್ಥೆ ಮಾಡಲು ಕ್ರಮ
- ಘನತ್ಯಾಜ್ಯ ನಿರ್ವಹಣೆಗೆ ₹301 ಕೋಟಿ
- ಪೌರ ಕಾರ್ಮಿಕರ ಕಲ್ಯಾಣಕ್ಕೆ ₹10 ಕೋಟಿ
- ಉದ್ಯಾನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ₹62 ಕೋಟಿ



- ಸೊಳ್ಳೆಗಳ ನಿಯಂತ್ರಣಕ್ಕೆ ₹8.86 ಕೋಟಿ
- ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ₹11 ಕೋಟಿ

ಪಾವತಿಗಳು

ವಿಭಾಗ	2025-26 ಪರಿಷ್ಕೃತ	2026-27ರ ಅಂದಾಜು
ಕೌನ್ಸಿಲ್	₹1.54 ಕೋಟಿ	₹5.47 ಕೋಟಿ
ಸಾಮಾನ್ಯ ಆಡಳಿತ	₹21.05 ಕೋಟಿ	₹184.11 ಕೋಟಿ
ಕಂದಾಯ	₹224.71 ಕೋಟಿ	₹190.97 ಕೋಟಿ
ನಗರ ಯೋಜನೆ– ನಿಯಂತ್ರಣ	₹434.80 ಕೋಟಿ	₹465.73 ಕೋಟಿ
ಸಾರ್ವಜನಿಕ ಕಾಮಗಾರಿ	₹444.31 ಕೋಟಿ	₹2443.76 ಕೋಟಿ
ಘನತ್ಯಾಜ್ಯ ನಿರ್ವಹಣೆ	₹249.18 ಕೋಟಿ	₹538.88 ಕೋಟಿ
ಸಾರ್ವಜನಿಕ ಆರೋಗ್ಯ (ಸಾಮಾನ್ಯ)	₹36.43 ಕೋಟಿ	₹91.76 ಕೋಟಿ
ಸಾರ್ವಜನಿಕ ಆರೋಗ್ಯ (ವೈದ್ಯಕೀಯ)	₹9.57 ಕೋಟಿ	₹13.95 ಕೋಟಿ
ತೋಟಗಾರಿಕೆ	₹21.08 ಕೋಟಿ	₹82.07 ಕೋಟಿ
ನಗರ ಅರಣ್ಯೀಕರಣ	₹6.43 ಕೋಟಿ	₹11.66 ಕೋಟಿ
ಸಾರ್ವಜನಿಕ ಶಿಕ್ಷಣ	₹17.36 ಕೋಟಿ	₹22.91 ಕೋಟಿ
ಸಮಾಜ ಕಲ್ಯಾಣ	₹131.64 ಕೋಟಿ	₹289.89 ಕೋಟಿ

100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ

ಸರ್ವಜ್ಞ ನಗರ ಹಾಗೂ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 100 ಹಾಸಿಗೆ ಸಾಮರ್ಥ್ಯವುಳ್ಳ ಆಸ್ಪತ್ರೆ ನಿರ್ಮಾಣವಾಗುತ್ತಿದೆ. ಆಸ್ಪತ್ರೆಗೆ ಸುಸಜ್ಜಿತ ಉಪಕರಣ, ಸಲಕರಣೆ ಒದಗಿಸಿ, ಸಾರ್ವಜನಿಕ ಸೇವೆಗೆ ಸಮರ್ಪಿಸಲಾಗುವುದು.


ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ಡಿ.ಜೆ. ಹಳ್ಳಿ, ಮುನಿರೆಡ್ಡಿ ಪಾಳ್ಯ ಹೆರಿಗೆ ಆಸ್ಪತ್ರೆಗಳನ್ನು 30 ಹಾಸಿಗೆ ಸಾಮರ್ಥ್ಯವುಳ್ಳ ಸಮುದಾಯ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಲಾಗುವುದು. ಸಾಮಾನ್ಯ ಶಸ್ತ್ರಚಿಕಿತ್ಸೆ, ದಂತ ಚಿಕಿತ್ಸೆ, ತಜ್ಞ ವೈದ್ಯರು, ಪ್ರಸೂತಿ ತಜ್ಞರು, ಮಕ್ಕಳ ತಜ್ಞರು ಹಾಗೂ ತುರ್ತು ಸೇವೆ ಹಾಗೂ ಆಂಬುಲೆನ್ಸ್ ಸೇವೆ ಒದಗಿಸಲಾಗುವುದು.

ನಮ್ಮ ಕ್ಲಿನಿಕ್, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅಗತ್ಯ ಉಪಕರಣಗಳು, ಡೆಂಟಲ್ ಕ್ಲಿನಿಕ್ ಸ್ಥಾಪಿಸಲಾಗುವುದು. ಇದಕ್ಕಾಗಿ ₹35 ಕೋಟಿ ಅನುದಾನ ಮೀಸಲಿಡಲಾಗಿದೆ. ಗಂಗಾನಗರ ಡಯಾಲಿಸಿಸ್ ಕೇಂದ್ರದ ಜೊತೆಗೆ ಸಂಜಯನಗರ, ಮಲ್ಲಸಂದ್ರ ಡಯಾಲಿಸಿಸ್ ಕೇಂದ್ರಗಳಲ್ಲಿ ಉಚಿತ ಡಯಾಲಿಸಿಸ್ ಸೇವೆಗಳು ಪ್ರಾರಂಭಿಸಲಾಗಿದೆ.

ಸರ್ವಜ್ಞ ನಗರ, ಬ್ಯಾಟರಾಯನಪುರ ಮತ್ತು ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರಗಳಲ್ಲಿ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತದೆ.

ಸುರಕ್ಷಿತ ನಗರ ನಿರ್ಮಾಣದ ಕನಸು

• ಬಾಲಕೃಷ್ಣ ಪಿ.ಎಚ್.



ಸುಸ್ಥಿರತೆ, ನಿರ್ಲಕ್ಷ್ಯದ ಬದಲು ಸುರಕ್ಷತೆ, ಹೊರಗಿಡುವಿಕೆಯ ಬದಲು ಸೇರ್ಪಡೆ, ಪ್ರತಿಕ್ರಿಯೆಯ ಬದಲು ಯೋಜನೆಗಳ ಮೂಲಕ ಎಲ್ಲರೂ ಒಟ್ಟಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯನ್ನು ದೇಶಕ್ಕೆ ಮಾದರಿ ನಗರ ಸ್ಥಳೀಯ ಸಂಸ್ಥೆಯಾಗಿ ಪರಿವರ್ತಿಸಲಾಗುವುದು
ರಮೇಶ್ ಕೆ.ಎನ್.
ಆಯುಕ್ತ, ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಬೆಂಗಳೂರು: ಭವಿಷ್ಯದ ಪೀಳಿಗೆಗೆ ಹಸಿರು, ಸುರಕ್ಷಿತ, ಸಮಾನ, ಶಾಶ್ವತ ಮತ್ತು ಜೀವಂತಿಕೆಯ ನಗರ ನಿರ್ಮಿಸುವ ಕನಸಿನ ಘೋಷಣೆಯೊಂದಿಗೆ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಮೊದಲ ಬಜೆಟ್ ಅನ್ನು ಶನಿವಾರ ಮಂಡಿಸಲಾಯಿತು.

ಇತಿಹಾಸ, ಪರಂಪರೆ, ನವೋದ್ಯಮಗಳ ಸಂಕಲನವಾಗಿರುವ ಪಾಲಿಕೆಯ ಬಜೆಟ್ ಅನ್ನು ಆಯುಕ್ತ ರಮೇಶ್ ಕೆ.ಎನ್. ಅವರು 45 ನಿಮಿಷ ಓದಿದರು.

ಅಂದಾಜು 147 ಚದರ ಕಿಲೋಮೀಟರ್ ವಿಸ್ತೀರ್ಣ, ₹26 ಲಕ್ಷ ಜನಸಂಖ್ಯೆ ಹೊಂದಿರುವ ದಕ್ಷಿಣ ನಗರ ಪಾಲಿಕೆಯಲ್ಲಿ ಸ್ವಂತ ಸಂಪನ್ಮೂಲಗಳಿಂದ ₹2,795.15 ಕೋಟಿ ಆದಾಯದ ನಿರೀಕ್ಷೆಯೊಂದಿಗೆ ಮುಂದಡಿ ಇಟ್ಟಿದ್ದು, ₹48.21 ಲಕ್ಷ ಮಿಗತೆ ಬಜೆಟ್ ಮಂಡಿಸಲಾಗಿದೆ.

ಈಜಿಪುರ ಎತ್ತರಿಸಿದ (ಎಲಿವೇಟೆಡ್) ಕಾರಿಡಾರ್ ಅನ್ನು ಈ ವರ್ಷ ಸೆಪ್ಟೆಂಬರ್ ಅಂತ್ಯದೊಳಗೆ ಮುಕ್ತಾಯಗೊಳಿಸುವ ಗುರಿ ಇಟ್ಟುಕೊಂಡಿರುವುದು ಸಕಾರಾತ್ಮಕ ಅಂಶವಾಗಿದೆ.

ಆಡಳಿತ ವಿಕೇಂದ್ರೀಕರಣ ಮಾಡಿ ಅಸ್ತಿತ್ವಕ್ಕೆ ತರಲಾಗಿರುವ ದಕ್ಷಿಣ ನಗರ ಪಾಲಿಕೆಯಲ್ಲಿ 72 ವಾರ್ಡ್‌ಗಳಿದ್ದು, ಪ್ರತಿ ವಾರ್ಡ್‌ನ ಅಭಿವೃದ್ಧಿಗೆ ₹ 2.25 ಕೋಟಿ ಹಂಚಿಕೆ ಮಾಡಲು ಒಟ್ಟು ₹162 ಕೋಟಿ ಮೀಸಲಿಡಲಾಗಿದೆ. ವಾರ್ಡ್ ಕಚೇರಿಗಳನ್ನು ಈ ವರ್ಷ ತೆರೆಯಲು ಪಾಲಿಕೆ ಮುಂದಾಗಿದೆ. ಪಾಲಿಕೆಗೊಂದು ಸ್ವಂತ ಕಟ್ಟಡ ಆಗಬೇಕಿದ್ದು, ಬನಶಂಕರಿ ದೇವಸ್ಥಾನದ ಮುಂಭಾಗದಲ್ಲೇ ನಿರ್ಮಿಸಲು ಕ್ರಿಯಾಯೋಜನೆ ರೂಪಿಸಿದೆ. ₹150 ಕೋಟಿ ವೆಚ್ಚದ ಕಾಮಗಾರಿ ಈ ವರ್ಷ ಆರಂಭವಾಗಲಿದೆ.

₹1,101 ಕೋಟಿ ಆಸ್ತಿ ತೆರಿಗೆ: ಆಸ್ತಿಗಳ ತೆರಿಗೆಯನ್ನು ಹೆಚ್ಚಿಸದೇ ವೈಜ್ಞಾನಿಕವಾಗಿ ತರಿಗೆ ಸಂಗ್ರಹಕ್ಕೆ ಒತ್ತು ನೀಡಿ, ₹1,101 ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಕಡಿಮೆ ತೆರಿಗೆ ಘೋಷಿಸಿರುವ ಪ್ರಕರಣಗಳನ್ನು ಪತ್ತೆ ಮಾಡಿ ಮರು ಮೌಲ್ಯಮಾಪನ ಕೈಗೊಂಡು ಆದಾಯ ಹೆಚ್ಚಿಸಲು ಕ್ರಮ ವಹಿಸಲಾಗಿದೆ.

ಎಲ್ಲ ಆಸ್ತಿಗಳನ್ನು ಕಾಲಮಿತಿಯೊಳಗೆ ಡಿಜಿಟಲೀಕರಣಗೊಳಿಸಲು ಮುಂದಾಗಿದೆ. 5.13 ಲಕ್ಷ ಆಸ್ತಿಗಳ ಪೈಕಿ ಈಗಾಗಲೇ 1.83 ಲಕ್ಷ ಆಸ್ತಿಗಳಿಗೆ ಇ–ಖಾತಾ ನೀಡಲಾಗಿದೆ. ಉಳಿದ ಆಸ್ತಿಗಳಿಗೆ ಶಿಬಿರ ನಡೆಸಿ ತ್ವರಿತವಾಗಿ ನೀಡಲು ಕ್ರಮ ಕೈಗೊಂಡಿದೆ.

ಟಿಡಿಆರ್: ಮುಖ್ಯ ರಸ್ತೆಗಳ ವಿಸ್ತರಣೆ, ಜಯನಗರ ರಾಘವೇಂದ್ರ ಸ್ವಾಮಿ ದೇವಸ್ಥಾನ ಜಂಕ್ಷನ್, ವೇಗಾಸಿಟಿ ಜಂಕ್ಷನ್ ಸೇರಿದಂತೆ ಹಲವೆಡೆ ಗ್ರೇಡ್ ಸಪರೇಟರ್, ಜಂಕ್ಷನ್ ಅಭಿವೃದ್ಧಿ ಕಾಮಗಾರಿಗಳಿಗೆ ಭೂಸ್ವಾಧೀನ ಅನಿವಾರ್ಯ. ಅಭಿವೃದ್ಧಿ ಕಾರ್ಯಗಳಿಗೆ ಟಿಡಿಆರ್ ನೀಡಿ ಭೂಸ್ವಾಧೀನ ಪಡಿಸಿಕೊಳ್ಳಲು ₹50.45 ಕೋಟಿ ಮೀಸಲಿರಿಸಿದೆ.

ರಸ್ತೆ ಅಭಿವೃದ್ಧಿ: ಡೈರಿ ಸರ್ಕಲ್‌ನಿಂದ ನೈಸ್ ರಸ್ತೆವರೆಗೆ ಬನ್ನೇರುಘಟ್ಟ ರಸ್ತೆ ಅಭಿವೃದ್ಧಿ, ಬನಶಂಕರಿ ದೇವಸ್ಥಾನದಿಂದ ಹೊರವರ್ತುಲವರೆಗೆ, ಬೇಗೂರು ಮುಖ್ಯರಸ್ತೆಯಿಂದ ಬೇಗೂರು ಕೊಪ್ಪ ರಸ್ತೆವರೆಗೆ ಅಗಲೀಕರಣ ಮಾಡಲು ಯೋಜನೆ ರೂಪಿಸಲಿದೆ.

ಕಟ್ಟಡಗಳೇ ಆಧಾರ: ಕಟ್ಟಡ ನಕ್ಷೆ ಮಂಜೂರಾತಿ, ಸ್ವಾಧೀನಾನುಭವ ಪ್ರಮಾಣಪತ್ರಗಳನ್ನು ವಿತರಿಸುವ ಶುಲ್ಕಗಳ ಮೂಲಕ ನಗರ ಯೋಜನೆ ವಿಭಾಗದಿಂದ ₹382 ಕೋಟಿ ನೀರೀಕ್ಷಿಸಲಾಗಿದೆ. ಪ್ರೀಮಿಯಂ ಎಫ್‌ಎಆರ್ ನೀತಿಯಿಂದ ₹360 ಕೋಟಿ ಆದಾಯ ನಿರೀಕ್ಷಿಸಲಾಗಿದ್ದು, ಈ ಅನುದಾನ ಬಿಸ್ಮೈಲ್ ಮೂಲಕ ಅಭಿವೃದ್ಧಿ ಯೋಜನೆಗೆ ವಿನಿಯೋಗವಾಗಲಿದೆ. ಏಕ ನಿವೇಶನ ಅನುಮೋದನೆ ವ್ಯವಸ್ಥೆಯಿಂದ ₹175 ಕೋಟಿ ಆದಾಯ ಬರಲಿದೆ.

ಜನಸ್ನೇಹಿ ಪಾದಚಾರಿ ಮಾರ್ಗ, ವೈಜ್ಞಾನಿಕವಾಗಿ ಡಾಂಬರೀಕರಣ, ಚರಂಡಿ ನಿರ್ಮಾಣ, ಜಂಕ್ಷನ್‌ಗಳ ಅಭಿವೃದ್ಧಿ, ಸೈಕ್ಲಿಸ್ಟ್ ಸ್ನೇಹಿ–ಪಾದಚಾರಿ ಸ್ನೇಹಿ–ವೃದ್ಧರ ಸ್ನೇಹಿ–ಮಕ್ಕಳ ಸ್ನೇಹಿ ರಸ್ತೆ ನಿರ್ಮಿಸಲು ಯೋಜಿಸಿದೆ. ₹433 ಕೋಟಿ ವೆಚ್ಚದಲ್ಲಿ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳನ್ನು, ವಾರ್ಡ್ ರಸ್ತೆಗಳನ್ನು ಮೇಲ್ದರ್ಜೆಗೇರಸಲಾಗುತ್ತಿದೆ. ಪಿಪಿಪಿ ಮಾದರಿಯಲ್ಲಿ 18 ಸ್ಕೈವಾಕ್ ನಿರ್ಮಾಣಗೊಳ್ಳಲಿದೆ.

ಸೋರಿಕೆ ತಡೆಗೆ ಜಾಗೃತ ದಳ

ತೆರಿಗೆ ತಪ್ಪಿಸುವಿಕೆ, ಸೋರಿಕೆಯನ್ನು ತಡೆಗಟ್ಟಲು, ಅಕ್ರಮ ಕಟ್ಟಡಗಳ ಮೇಲೆ ನಿಗಾ ವಹಿಸಲು, ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲು ಕಂದಾಯ, ಎಂಜಿನಿಯರಿಂಗ್, ಆರೋಗ್ಯ ಶಾಖೆಯ ಅಧಿಕಾರಿಗಳನ್ನು ಒಳಗೊಂಡ ವಿಶೇಷ ಜಾಗೃತ ದಳ ರಚನೆ ಮಾಡಲು ನಿರ್ಧರಿಸಲಾಗಿದೆ.

ನಗರ ಯೋಜನೆ, ಪರಿಸರ, ಘನತ್ಯಾಜ್ಯ ನಿರ್ವಹಣೆ, ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳ ತಜ್ಞರ ಬೌದ್ಧಿಕ ಮತ್ತು ತಾಂತ್ರಿಕ ಜ್ಞಾನವನ್ನು ಪಾಲಿಕೆಯ ಅಭಿವೃದ್ಧಿಗೆ ಬಳಸಿಕೊಳ್ಳಲು ತಜ್ಞರ ಸಮಿತಿ ರಚಿಸಲು ಪಾಲಿಕೆ ಮುಂದಾಗಿದೆ.

ಹೊಸ ಜಾಹೀರಾತು ನೀತಿ

ವ್ಯವಸ್ಥಿತ ಹೊಸ ಜಾಹೀರಾತು ನೀತಿ ಜಾರಿಗೆ ತರುವ ಮೂಲಕ ಪ್ರಮುಖ ಕಾರಿಡಾರ್‌ಗಳು, ರಸ್ತೆಗಳನ್ನು ಗುರುತಿಸಿ ಅಲ್ಲಿ ಜಾಹೀರಾತು ಬಿಲ್ ಬೋರ್ಡ್‌ಗಳ ಮೂಲಕ ಗರಿಷ್ಠ ಆದಾಯವನ್ನು ಗಳಿಸಲು ಪಾಲಿಕೆ ಮುಂದಾಗಿದೆ. ಹೋರ್ಡಿಂಗ್ ಹಂಚಿಕೆಯನ್ನು ಡಿಜಿಟಲ್ ಮೇಲ್ವಿಚಾರಣೆಯ ಮೂಲಕ ಮಾಡುವ ಉದ್ದೇಶವಿದೆ. ಹೊಸ ಜಾಹೀರಾತು ನೀತಿ ಮೂಲಕ ₹126 ಕೋಟಿ ಆದಾಯ ನಿರೀಕ್ಷಿಸಲಾಗಿದೆ.


ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಸ್ಕೈವಾಕ್‌ಗಳಲ್ಲಿ ವಾಣಿಜ್ಯ ಜಾಹೀರಾತುಗಳಿಗೆ ಅವಕಾಶ ಮಾಡಿಕೊಟ್ಟು ಪಾಲಿಕೆಯ ಆದಾಯ ಹೆಚ್ಚಿಸಲು ಕ್ರಮ ವಹಿಸಿದೆ.

ಆದಾಯ ಹೆಚ್ಚಿಸಲು ಎಐ

ಕೃತಕ ಬುದ್ಧಿಮತ್ತೆ ಎಲ್ಲ ರಂಗಕ್ಕೂ ಕಾಲಿಡುತ್ತಿದ್ದು, ಬೆಂಗಳೂರು ದಕ್ಷಿಣ ನಗರ ಪಾಲಿಕೆ ವಿಭಾಗದ ವ್ಯಾಪ್ತಿಯಲ್ಲಿ ಸಂಪನ್ಮೂಲ ಕ್ರೋಢೀಕರಣ ಮತ್ತು ಆದಾಯ ಗಳಿಸುವ ಯೋಜನೆಗಳನ್ನು ರೂಪಿಸಲು ಮಾಹಿತಿ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಿಕೊಂಡು ಒಂದು ವಿಶೇಷ ವೇದಿಕೆ ಸೃಷ್ಟಿಸಲು ಚಿಂತನೆ ನಡೆಸಿದೆ.

ಪಾವತಿಗಳು

ವಿಭಾಗ	2025-26 ಪರಿಷ್ಕೃತ	2026-27ರ ಅಂದಾಜು
ಕೌನ್ಸಿಲ್	₹1.54 ಕೋಟಿ	₹6.19 ಕೋಟಿ
ಸಾಮಾನ್ಯ ಆಡಳಿತ	₹12.81 ಕೋಟಿ	₹176.14 ಕೋಟಿ
ಕಂದಾಯ	₹193.78 ಕೋಟಿ	₹248.76 ಕೋಟಿ
ನಗರ ಯೋಜನೆ– ನಿಯಂತ್ರಣ	₹13.01 ಕೋಟಿ	₹448.23 ಕೋಟಿ
ಸಾರ್ವಜನಿಕ ಕಾಮಗಾರಿ	₹300.17 ಕೋಟಿ	₹2,033.62 ಕೋಟಿ
ಘನತ್ಯಾಜ್ಯ ನಿರ್ವಹಣೆ	₹216.44 ಕೋಟಿ	₹468.20 ಕೋಟಿ
ಸಾರ್ವಜನಿಕ ಆರೋಗ್ಯ (ಸಾಮಾನ್ಯ)	₹23.72 ಕೋಟಿ	₹82.38 ಕೋಟಿ
ಸಾರ್ವಜನಿಕ ಆರೋಗ್ಯ (ವೈದ್ಯಕೀಯ)	₹4.90 ಕೋಟಿ	₹10.57 ಕೋಟಿ
ತೋಟಗಾರಿಕೆ	₹24.46 ಕೋಟಿ	₹58.35 ಕೋಟಿ
ನಗರ ಅರಣ್ಯೀಕರಣ	₹5.47 ಕೋಟಿ	₹13.15 ಕೋಟಿ
ಸಾರ್ವಜನಿಕ ಶಿಕ್ಷಣ	₹13.36 ಕೋಟಿ	₹14.48 ಕೋಟಿ
ಸಮಾಜ ಕಲ್ಯಾಣ	₹118.34 ಕೋಟಿ	₹265.86 ಕೋಟಿ



- ರಾಜ್ಯ ಸರ್ಕಾರದ ರಾಜಸ್ವ ಅನುದಾನ ₹103.97 ಕೋಟಿ ಬಿಡುಗಡೆಯ ನಿರೀಕ್ಷೆಯನ್ನು ಪಾಲಿಕೆ ಇಟ್ಟುಕೊಂಡಿದೆ
- 16ನೇ ಕೇಂದ್ರ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ₹128.29 ಕೋಟಿ ಬಿಡುಗಡಯಾಗುವ ನಿರೀಕ್ಷೆ
- 'ಬಿ' ಖಾತೆಯ ಆಸ್ತಿಗಳನ್ನು 'ಎ' ಖಾತೆ ಆಸ್ತಿಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯಿಂದ ₹ 225 ಕೋಟಿ ಆದಾಯ
- ರಸ್ತೆ ಬದಿಯಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಸುಸಜ್ಜಿತವಾಗಿ ನಿರ್ವಹಿಸಲು ಹೊಸ ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ



- ಗಣಪತಿಪುರ, ಕೊತ್ತನೂರು, ಚುಂಚಘಟ್ಟ ಕೆರೆಗಳಿಗೆ ಸಾರಕ್ಕಿಯ ಕೊಳಚೆ ನೀರು ಶುದ್ಧೀಕರಣ ಘಟಕದಿಂದ ಶುದ್ಧೀಕರಿಸಿದ ನೀರು. ಅದೇ ಮಾದರಿಯಲ್ಲಿ ಸೋಮಸುಂದರಪಾಳ್ಯ, ಮಂಗಮ್ಮನಪಾಳ್ಯ, ಚಿಕ್ಕಬೇಗೂರು, ಗೊಟ್ಟಿಗೆರೆ ಮತ್ತು ದೊಡ್ಡಕಮ್ಮನಹಳ್ಳಿ ಕೆರೆಗಳಿಗೂ ಸಂಸ್ಕರಿಸಿದ ನೀರು
- ಬೇಗೂರು ಕೆರೆ ಮತ್ತು ಮಡಿವಾಳ ಕೆರೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಬೋಟಿಂಗ್ ವ್ಯವಸ್ಥೆ
- ಬಿಎಂಆರ್‌ಸಿಎಲ್, ಕೆ–ರೈಡ್ ಸಹಯೋಗದಲ್ಲಿ 25,000 ಗಿಡ ನೆಡಲು ಯೋಜನೆ
- ಕೆರೆಗಳ ಗಡಿಭಾಗಗಳಲ್ಲಿ 25,000 ಬಿದಿರು ನೆಡಲು ಕ್ರಮ
- ಬ್ರ್ಯಾಂಡ್ ಬೆಂಗಳೂರು ಗ್ರೀನ್ ಬೆಂಗಳೂರು ಪರಿಕಲ್ಪನೆಯಲ್ಲಿ 8 ಉದ್ಯಾನ ಅಭಿವೃದ್ಧಿ
- ಹೆಚ್ಚುವರಿ ಮಳೆ ನೀರನ್ನು ಹೀರಿಕೊಳ್ಳುವ, ಪ್ರವಾಹ ಕಡಿಮೆ ಮಾಡುವ 'ಸ್ಪಾಂಜ್ ಉದ್ಯಾನ' ಅಭಿವೃದ್ಧಿ
- ಔಷಧೀಯ ಗುಣಗಳಿರುವ ವೃಕ್ಷ ಬೆಳೆಸಲು 'ಸ್ಮೃತಿವನ' ನಿರ್ಮಾಣ
- ಈಜಿಪುರದಲ್ಲಿ 50 ಹಾಸಿಗಳ ಹೆರಿಗೆ ಆಸ್ಪತ್ರೆ ನಿರ್ಮಿಸಲು ಯೋಜನೆ
- 25 ಪ್ರಾಥಮಿಕ ಆರೋಗ್ಯ ಕೇಂದ್ರ, 49 ನಮ್ಮ ಕ್ಲಿನಿಕ್‌ಗಳಲ್ಲಿ ರಕ್ತ ಪರೀಕ್ಷೆಗೆ 'ಹಬ್ ಆ್ಯಂಡ್ ಸ್ಪೋಕ್' ಯೋಜನೆ
- ನಿತ್ಯ 50 ನಾಯಿಗಳ ಸಂತಾನ ಹರಣ ಚಿಕಿತ್ಸೆ ಮಾಡಬಲ್ಲ ಕೇಂದ್ರ ಸ್ಥಾಪಿಸಲು ಕ್ರಮ

ಬೆಂಗಳೂರು ಪಶ್ಚಿಮ



₹4,732.81 ಕೋಟಿ
ಬಜೆಟ್ ಒಟ್ಟು ಗಾತ್ರ

₹4,732.73 ಕೋಟಿ
ಒಟ್ಟು ವೆಚ್ಚ

ಸ್ವೀಕೃತಿ

- ಆಸ್ತಿ ತೆರಿಗೆ, ಕರ– ತೆರಿಗೆ **₹1,074.80** ಕೋಟಿ
- ತೆರಿಗೆಯೇತರ ಆದಾಯ **₹1,305.20** ಕೋಟಿ
- ಕೇಂದ್ರ ಸರ್ಕಾರದ ಅನುದಾನ **₹224.56** ಕೋಟಿ
- ರಾಜ್ಯ ಸರ್ಕಾರದ ರಾಜಸ್ವ ಅನುದಾನ **₹161.73** ಕೋಟಿ
- ರಾಜ್ಯ ಸರ್ಕಾರದ ಬಂಡವಾಳ ಅನುದಾನ **₹1,034.99** ಕೋಟಿ
- ಬಾಂಡ್‌ಗಳು– ಅಸಾಧಾರಣ ಆದಾಯ **₹931.53** ಕೋಟಿ

ವೆಚ್ಚಗಳು

- ಸಿಬ್ಬಂದಿ **₹488.53** ಕೋಟಿ
- ಆಡಳಿತ **₹154.21** ಕೋಟಿ
- ಘನತ್ಯಾಜ್ಯ **₹322** ಕೋಟಿ
- ಕಾರ್ಯಾಚರಣೆ– ನಿರ್ವಹಣೆ **₹531.26** ಕೋಟಿ
- ಆರೋಗ್ಯ, ಶಿಕ್ಷಣ, ಕಲ್ಯಾಣ **₹243.48** ಕೋಟಿ
- ಸಾರ್ವಜನಿಕ ಅಭಿವೃದ್ಧಿ ಕಾಮಗಾರಿ **₹2,834.67** ಕೋಟಿ
- ಠೇವಣಿ– ಕರಗಳ ಮರುಪಾವತಿ **₹158.55** ಕೋಟಿ

ಅನುದಾನ ಸಿಂಹಪಾಲು ಯೋಜನೆ ಸಾಲು ಸಾಲು

ಐದು ನಗರ ಪಾಲಿಕೆಗಳಲ್ಲಿ ಪಶ್ಚಿಮ ನಗರ ಪಾಲಿಕೆಯದ್ದೇ ಬೃಹತ್ ಬಜೆಟ್

ಚಾಣಕ್ಯರ ಮಾತಿನಂತೆ; 'ಪ್ರಜೆಯ ಸುಖದಲ್ಲಿ ರಾಜನ ಸುಖ ಇದೆ; ಪ್ರಜೆಯ ಹಿತದಲ್ಲೇ ರಾಜನ ಹಿತ ಇದೆ'. ಈ ಆದರ್ಶಗಳನ್ನು ಮನದಲ್ಲಿ ಇಟ್ಟುಕೊಂಡು, ಜನಕಲ್ಯಾಣ ಮತ್ತು ನಗರ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಪಾಲಿಕೆಯ ಈ ಪ್ರಥಮ ಬಜೆಟ್ ಅನ್ನು ಜಾರಿಗೆ ತರುವ ಸಂಕಲ್ಪ ಮಾಡಲಾಗಿದೆ.
ಡಾ. ಕೆ.ವಿ. ರಾಜೇಂದ್ರ
ಆಯುಕ್ತ, ಪಶ್ಚಿಮ ನಗರ ಪಾಲಿಕೆ ಆಯುಕ್ತ

ನಿರೀಕ್ಷಿತ ಆದಾಯ ಮೂಲ

- **₹872** ಕೋಟಿ; ಆಸ್ತಿ ತೆರಿಗೆ ರೂಪದಲ್ಲಿ ಸಂಗ್ರಹ
- **₹563** ಕೋಟಿ; ಬಿ-ಖಾತಾದಿಂದ ಎ-ಖಾತಾಗೆ ಪರಿವರ್ತನೆಯಿಂದ ಆದಾಯ
- **₹18** ಕೋಟಿ; ಭೂ ಆಸ್ತಿಗಳಿಗೆ ಎಲೆಕ್ಟ್ರಾನಿಕ್ ದಾಖಲೆಗಳ ವಿತರಣೆ
- **₹29.50** ಕೋಟಿ; 1,946 ಆಸ್ತಿಗಳಿಂದ ಬಾಡಿಗೆ
- **₹116** ಕೋಟಿ; ವಾಣಿಜ್ಯ ಜಾಹೀರಾತು ಶುಲ್ಕ
- **₹2** ಕೋಟಿ; ಸ್ಕೈವಾಕ್ ಜಾಹೀರಾತು ಶುಲ್ಕ
- **₹254.20** ಕೋಟಿ; ವಾಣಿಜ್ಯ/ ವಸತಿ ಉದ್ದೇಶದ ಸ್ವತ್ತುಗಳಿಂದ ಅಭಿವೃದ್ಧಿಯಿಂದ ಶುಲ್ಕ
- **₹380** ಕೋಟಿ; ಪ್ರೀಮಿಯಂ ಎಫ್‌ಎಆರ್‌ನಿಂದ ನಿರೀಕ್ಷಿತ ಆದಾಯ
- **₹200** ಕೋಟಿ; ಏಕ ನಿವೇಶನ ಸಮ್ಮತಿಯಿಂದ ಆದಾಯ
- **₹300** ಕೋಟಿ; ತ್ಯಾಜ್ಯ ಸಂಗ್ರಹಣೆ, ವಿಂಗಡಣೆ, ಮರುಬಳಕೆ ಹಾಗೂ ವೈಜ್ಞಾನಿಕ ವಿಲೇವಾರಿಗೆ ಬಿಎಸ್‌ಡಬ್ಲ್ಯುಎಂಎಲ್‌ಗೆ ಅನುದಾನ
- **₹20** ಕೋಟಿ; ಟಿ.ಡಿ.ಆರ್ ಕೆಲಸ ಕಾರ್ಯಗಳ ನಿರ್ವಹಣೆ, ಟಿಡಿಆರ್ ನೀಡಲು ಮೀಸಲು
- **₹25** ಕೋಟಿ; ಪ್ರತಿ ವಿಧಾನಸಭೆ ಕ್ಷೇತ್ರಕ್ಕೆ ಒಂದು ಕಸಗುಡಿಸುವ ಯಂತ್ರಕ್ಕೆ ಅನುದಾನ

- ಸುರಕ್ಷಾ ಶಾಲೆಯೊಂದಿಗೆ ವಿದ್ಯಾರ್ಥಿಗಳಿಗೆ 'ಕರ್ನಾಟಕ ದರ್ಶನ', ಒಟ್ಟಾರೆ ಶಿಕ್ಷಣಕ್ಕೆ ₹44.35 ಕೋಟಿ
- ಶ್ರೀರಾಂಪುರ ರೆಫರಲ್ ಆಸ್ಪತ್ರೆ, ಆಜಾದ್‌ನಗರ ಹೆರಿಗೆ ಆಸ್ಪತ್ರೆ, ನಂದಿನಿ ಲೇಔಟ್ ಹೆರಿಗೆ ಆಸ್ಪತ್ರೆ, ಪ್ಯಾಲೆಸ್ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ, ಮೂಡಲಪಾಳ್ಯ ಹೆರಿಗೆ ಆಸ್ಪತ್ರೆ, ಎಂ.ಸಿ.ಲೇಔಟ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ₹95.73 ಕೋಟಿಗಳ ವೆಚ್ಚದಲ್ಲಿ ಉನ್ನತೀಕರಿಸಲಾಗುತ್ತಿದೆ.
- ವಿಧಾನಸಭೆಗೊಂದು ಸಾಕುಪ್ರಾಣಿ ಸ್ನೇಹಿ ಉದ್ಯಾನ, 500 ಬೀದಿ ನಾಯಿಗಳಿಗೆ ಆಶ್ರಯ ತಾಣ

• ಆರ್. ಮಂಜುನಾಥ್

ಬೆಂಗಳೂರು: ಆದಾಯದಲ್ಲಿ ಕೊರತೆ, ಸಿಬ್ಬಂದಿ ವೇತನ ಪಾವತಿಯಲ್ಲಿ ವಿಳಂಬ, ಹಣಕಾಸಿನ ತೀವ್ರ ಸಂಕಷ್ಟದಲ್ಲಿರುವ ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ರಾಜ್ಯ ಸರ್ಕಾರದ ಅನುದಾನದಲ್ಲಿ ಸಿಂಹಪಾಲು ಗಳಿಸಿದ್ದು, ಐದು ನಗರ ಪಾಲಿಕೆಗಳಲ್ಲಿ 'ಬೃಹತ್' ಬಜೆಟ್ ಅನ್ನು ಶನಿವಾರ ಮಂಡಿಸಿದೆ.

ಮೂಲ ಬೆಂಗಳೂರಿನ ಬಹುತೇಕ ಪ್ರದೇಶವನ್ನೇ ಹೊಂದಿರುವ ಪಶ್ಚಿಮ ನಗರ ಪಾಲಿಕೆ, ತನ್ನ ಸೊಗಡನ್ನು ಉಳಿಸಿಕೊಂಡು ಅಭಿವೃದ್ಧಿಗೆ, ಆಧುನಿಕತೆಗೆ ಒತ್ತು ಕೊಡಬೇಕಾದ ಸವಾಲಿನ ನಡುವೆ, ಯೋಜನೆ ರೂಪಿಸಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಕಾಡುತ್ತಿರುವ ವಾಹನ ದಟ್ಟಣೆ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ಚಿಂತನೆಯೂ ಬಜೆಟ್‌ನಲ್ಲಿದೆ.

ಸಿಬ್ಬಂದಿಯ ವೇತನ ಪಾವತಿಗೇ ಸಂಕಷ್ಟ ಎದುರಿಸಿದ್ದ ಪಶ್ಚಿಮ ನಗರ ಪಾಲಿಕೆ, ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳಿಗೆ ₹2,800 ಕೋಟಿ ವೆಚ್ಚ ಮಾಡಲು ಮುಂದಾಗಿದೆ. ರಾಜ್ಯ ಸರ್ಕಾರದ ರಾಜಸ್ವ ಹಣದಿಂದ ಸಿಬ್ಬಂದಿ ವೇತನವನ್ನು ಭರಿಸಲು ಯೋಜಿಸಿದೆ.

ರಾಜ್ಯ ಸರ್ಕಾರದಿಂದ ಬರುವ ₹3,500 ಕೋಟಿ ಅನುದಾನದಲ್ಲಿ ₹1 ಸಾವಿರ ಕೋಟಿಗೂ ಹೆಚ್ಚು ಅನುದಾನವನ್ನು ಆರ್ಥಿಕವಾಗಿ ಸಂಕಷ್ಟದಲ್ಲಿರುವ ಪಶ್ಚಿಮ ನಗರ ಪಾಲಿಕೆ ಗಳಿಸಿಕೊಂಡು, ಆ ಅನುದಾನದಲ್ಲೇ ಸಾಲುಸಾಲು ಯೋಜನೆಗಳನ್ನು ಘೋಷಿಸಲಾಗಿದೆ. ಸ್ವಂತ ತೆರಿಗೆ, ತೆರಿಗೆಯೇತರ ರಾಜಸ್ವ, ಮುನಿಸಿಪಲ್ ಬಾಂಡ್‌ನಿಂದ ₹200 ಕೋಟಿ ಸಾಲದ ಜೊತೆಗೆ ಅಸಾಧಾರಣ ಸ್ವೀಕೃತಿಯಲ್ಲಿ ₹926 ಕೋಟಿಯನ್ನು ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರದಿಂದಲೂ ₹224 ಕೋಟಿಯನ್ನು ನಿರೀಕ್ಷಿಸಲಾಗಿದೆ. ಹೀಗಾಗಿ, 2026-27ನೇ ಸಾಲಿನಲ್ಲಿ ₹8.42 ಲಕ್ಷಗಳ ಉಳಿತಾಯ ಬಜೆಟ್ ಅನ್ನು ಮಂಡಿಸಲಾಗಿದೆ.

ರಸ್ತೆ ವಿಸ್ತರಣೆ

- ಇಟ್ಟಮಡು ರಸ್ತೆ– **5** ಕಿ.ಮೀ.
- ಕುರುಬರಹಳ್ಳಿ ಮುಖ್ಯರಸ್ತೆ– **1.4** ಕಿ.ಮೀ.
- ಮಹಾಲಕ್ಷ್ಮೀಪುರ ಪ್ರವೇಶ ರಸ್ತೆ– **3** ಕಿ.ಮೀ.
- ಹನುಮಂತ ನಗರ ಮುಖ್ಯರಸ್ತೆ– **4.5** ಕಿ.ಮೀ.
- ಹೇರೋಹಳ್ಳಿ ಪ್ರವೇಶ ರಸ್ತೆ– **0.9** ಕಿ.ಮೀ.
- ತ್ಯಾಗರಾಜನಗರ ಮುಖ್ಯರಸ್ತೆ– **1.27** ಕಿ.ಮೀ.
- ಹೊಸಕೆರೆಹಳ್ಳಿ ಮುಖ್ಯ ರಸ್ತೆಯಿಂದ ಹೊರ ವರ್ತುಲ ರಸ್ತೆ– **1.9** ಕಿ.ಮೀ.
- ಕತ್ರಿಗುಪ್ಪೆ ಮುಖ್ಯ ರಸ್ತೆಯಿಂದ **50** ಅಡಿ ರಸ್ತೆ ವಿದ್ಯಾಪೀಠ ವೃತ್ತದವರೆಗೆ– **0.780** ಕಿ.ಮೀ.

ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ಕೆ.ವಿ. ರಾಜೇಂದ್ರ ಅವರು, ಬಜೆಟ್ ಭಾಷಣದ ಕೊನೆಯಲ್ಲಿ ಮಾತ್ರ, ಆಚಾರ್ಯ ಚಾಣಕ್ಯರ ಮಾತನ್ನು ಪ್ರಸ್ತಾಪಿಸಿದರು. ಇನ್ನಾವುದೇ ಕವಿತೆ, ಮಹಾಪುರುಷರ ಮಾತು ಇರಲಿಲ್ಲ. ಭಾಷಣದ ಪುಸ್ತಕವನ್ನು ಯಥಾಸ್ಥಿತಿಯಲ್ಲಿ ಓದದೆ, ಮಾತನಾಡುವ ಶೈಲಿಯಲ್ಲಿ 45 ಪುಟಗಳ ಬಜೆಟ್ ಅನ್ನು 50 ನಿಮಿಷಗಳಲ್ಲಿ ಸಂಪೂರ್ಣ ಹವಾನಿಯಂತ್ರಿತ ಸಭಾಂಗಣದಲ್ಲಿ ಮಂಡಿಸುವ ಸಮಯದಲ್ಲಿ ನಾಲ್ಕಾರು ಬಾರಿ ಬೆವರು ಒರೆಸಿಕೊಂಡರು.

ಹತ್ತಾರು ವರ್ಷಗಳಿಂದ ಒತ್ತುವರಿಯಲ್ಲೇ ಮುಳುಗಿರುವ ಚಿಕ್ಕಲಸಂದ್ರ ಹಾಗೂ ಯಡಿಯೂರು ಕೆರೆಗಳಲ್ಲಿ ಅನಧಿಕೃತ ನಿರ್ಮಾಣ ತೆರವುಗೊಳಿಸಿ, ಕೆರೆಗಳ ಸಮಗ್ರ ಅಭಿವೃದ್ಧಿಗೆ ₹5 ಕೋಟಿ ಮೀಸಲಿಟ್ಟಿರುವುದು ಗಮನಾರ್ಹವಾಗಿದೆ. 49 ಕೆರೆಗಳನ್ನು ಹೊಂದಿರುವ ನಗರ ಪಾಲಿಕೆಗೆ ಈಗಾಗಲೇ ಅಭಿವೃದ್ಧಿಯಾಗಿರುವ ಕೆರೆಗಳ ವಾರ್ಷಿಕ ನಿರ್ವಹಣೆಗೇ ₹7.5 ಕೋಟಿ ಬೇಕಿದೆ. ಇನ್ನುಳಿದ ಕೆರೆಗಳಿಗೆ ₹13.75 ಕೋಟಿಯನ್ನಷ್ಟೇ ಮೀಸಲಿಟ್ಟಿರುವುದರಿಂದ ಕೆರೆಗಳ ಅಭಿವೃದ್ಧಿಯಿಂದ ಅಂತರ್ಜಲ ಹೆಚ್ಚಿಸುವ ಮತ್ತು ಇನ್ನಷ್ಟು ವಾಸಯೋಗ್ಯವನ್ನಾಗಿ ಮಾಡುವ ಆಯುಕ್ತರ ಮಾತುಗಳಿಗೆ ಆರ್ಥಿಕ ಬೆಂಬಲವಿಲ್ಲ.

ಹತ್ತು ವಿಧಾನಸಭೆ ಕ್ಷೇತ್ರಗಳ ಶಾಸಕರನ್ನು ಹೊಂದಿರುವ 112 ವಾರ್ಡ್‌ಗಳ 'ಬೃಹತ್' ಪಶ್ಚಿಮ ನಗರ ಪಾಲಿಕೆಯ ಆಯುಕ್ತರು, ಹತ್ತೂ ಶಾಸಕರನ್ನು ಸಮಾಧಾನಗೊಳಿಸಲು ವಿಧಾನಸಭೆವಾರು ಅನುದಾನವನ್ನು ಮೀಸಲಿಟ್ಟಿದ್ದಾರೆ.

ಕಲ್ಯಾಣಕ್ಕೆ ₹334 ಕೋಟಿ

ಪರಿಶಿಷ್ಟಜಾತಿ/ ಪರಿಶಿಷ್ಟಪಂಗಡ, ಪೌರ ಕಾರ್ಮಿಕರು, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಆರ್ಥಿಕವಾಗಿ ಹಿಂದುಳಿದಿರುವ ವರ್ಗ ಹಾಗೂ ಅಂಗವಿಕಲ ವರ್ಗದವರಿಗೆ ಶೈಕ್ಷಣಿಕ, ಆರ್ಥಿಕ, ಆರೋಗ್ಯ ಕಾರ್ಯಕ್ರಮಗಳೊಂದಿಗೆ ಸಹಾಯಧನ ನೀಡುವ ಕಲ್ಯಾಣ ಕಾರ್ಯಕ್ರಮಗಳಿಗಾಗಿ ₹334.99 ಕೋಟಿ ಅನುದಾನ ಮೀಸಲಿಡಲಾಗಿದೆ.

ಒಂಟಿ ಮನೆ ಯೋಜನೆಯಡಿ ಪ್ರತಿ ಅರ್ಹ ಫಲಾನುಭವಿಗೆ ತಲಾ ₹5 ಲಕ್ಷ ಸಹಾಯಧನದಂತೆ ಒಟ್ಟು ₹71.64 ಕೋಟಿಗಳ ಅನುದಾನ ಇರಲಿದೆ. ಮೂಲಸೌಕರ್ಯದಡಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ₹150.97 ಕೋಟಿ ಹಾಗೂ ಸಾರಥಿ ಯೋಜನೆ ಅಡಿ ಆಟೊ ಮತ್ತು ಕಾರು ವಿತರಣೆ ಕಾರ್ಯಕ್ರಮಗಳಿಗೆ ₹23.34 ಕೋಟಿ ಮೀಸಲಿಡಲಾಗಿದೆ.

ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗೆ ಸಹಾಯಧನ, ಸಣ್ಣ ಉದ್ದಿಮೆದಾರರಿಗೆ ಸಹಾಯಧನ, ಆರೋಗ್ಯ ವಿಮೆ, ಕ್ರೀಡೆ, ಕೃತಕ ಅಂಗಾಗಳ ಜೋಡಣೆಗೆ ವೈದ್ಯಕೀಯ ವೆಚ್ಚ ಹಾಗೂ ವಿದೇಶಿ ವ್ಯಾಸಂಗಕ್ಕೆ ಸಹಾಯಧನಕ್ಕೆ ಒಟ್ಟು ₹47.17 ಕೋಟಿ ಅನುದಾನ ನೀಡಲಾಗಿದೆ.

100 ಮಿಯಾವಾಕಿ ಅರಣ್ಯ, ಸೈಕಲ್ ಪಥ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ 496 ಉದ್ಯಾನಗಳಿದ್ದು, ನಿರ್ವಹಣೆಗಾಗಿ ₹47.45 ಕೋಟಿ, ಅಭಿವೃದ್ಧಿ ಮತ್ತು ಮೇಲ್ದರ್ಜೆಗೇರಿಸುವ ಕೆಲಸಗಳಿಗೆ ₹6.30 ಕೋಟಿ, ತಂತಿಬೇಲಿ ಅಳವಡಿಸಲು ₹3.25 ಕೋಟಿ ಅನುದಾನ ಮೀಸಲಿಡಲಾಗಿದೆ.

ನಗರ ಹಸಿರೀಕರಣಕ್ಕೆ ಕಡಿಮೆ ಜಾಗದಲ್ಲಿ ವೇಗವಾಗಿ ದಟ್ಟವಾದ ನೈಸರ್ಗಿಕ ಅರಣ್ಯವನ್ನು ನಿರ್ಮಿಸಲು ಪ್ರತಿ ವಿಧಾನಸಭೆ ಕ್ಷೇತ್ರದಲ್ಲಿ ಅವಶ್ಯವಿರುವ ಉದ್ಯಾನಗಳು, ಶಾಲೆಗಳು, ರಸ್ತೆ ಬದಿಗಳ ಖಾಲಿ ಜಾಗಗಳಲ್ಲಿ ಸ್ಥಳೀಯ ಜಾತಿಯ ಸಸ್ಯಗಳ '100 ಮಿಯಾವಾಕಿ ಅರಣ್ಯ' ನಿರ್ಮಿಸಲಾಗುತ್ತದೆ.

ಪಾಲಿಕೆಯ ಪ್ರತಿ ವಿಭಾಗಗಳಲ್ಲಿ ಕನಿಷ್ಠ ಒಂದರಂತೆ ಅಂಗವಿಕಲಸ್ನೇಹಿ ಉದ್ಯಾನ, ಸಾಕುಪ್ರಾಣಿ ಉದ್ಯಾನ ಹಾಗೂ ಹಿರಿಯ ನಾಗರಿಕರಿಗೆ ವಾಚನಾಲಯವನ್ನು ಸ್ಥಾಪಿಸಲಾಗುವುದು. ಪಾಲಿಕೆಯ ಕಚೇರಿಗಳು, ಮೈದಾನಗಳು ಮತ್ತು ಪಾಲಿಕೆ ಆಸ್ತಿಗಳಲ್ಲಿ ಇಂಧನ ಉಳಿತಾಯ ಮತ್ತು ಪರಿಸರ ಸಂರಕ್ಷಣೆ ಹಿತದೃಷ್ಟಿಯಿಂದ 'ಪೇ ಆ್ಯಂಡ್ ಯೂಸ್' ವಿದ್ಯುತ್ ಚಾರ್ಜಿಂಗ್ ಪಾಯಿಂಟ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಜಲಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ 20 ಉದ್ಯಾನಗಳಲ್ಲಿ ಮಳೆಯ ನೀರು ಸಂಗ್ರಹಣಾ ಘಟಕಗಳನ್ನು ಸ್ಥಾಪಿಸಲಾಗುವುದು. ಪ್ರತಿ ಘಟಕಗಳಿಗೆ ₹10 ಲಕ್ಷದಂತೆ ಒಟ್ಟು ₹2 ಕೋಟಿ ಅನುದಾನ ಮೀಸಲಿಡಲಾಗಿದೆ. ಆರೋಗ್ಯ ಮತ್ತು ಪರಿಸರ ರಕ್ಷಣೆಗಾಗಿ ಸೈಕಲ್ ಪಥಗಳನ್ನು ಪ್ರತಿ ವಿಭಾಗವಾರು ಕನಿಷ್ಠ ಐದು ಸ್ಥಳಗಳಲ್ಲಿ ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ನಾಯಂಡಹಳ್ಳಿ ಕೆರೆಯ ಸುತ್ತ ನಿರ್ಮಿಸಲು ಯೋಜನೆ ರೂಪಿಸಲಾಗುವುದು. ಮಹಾಲಕ್ಷ್ಮೀ ಲೇಔಟ್ ಕ್ಷೇತ್ರದ ಅಂಜನೇಯ ದೇವಸ್ಥಾನದ ಉದ್ಯಾನ, ಉಷಾ ಉದ್ಯಾನ, ಕುವೆಂಪು ಉದ್ಯಾನ ಮತ್ತು ಕಿರ್ಲೋಸ್ಕರ್ ಕಾಲೋನಿ ಉದ್ಯಾನವನಗಳ ಸಮಗ್ರ ಅಭಿವೃದ್ಧಿಗೆ ₹5 ಕೋಟಿ ಮೀಸಲಿರಿಸಿದೆ.

'ಬಾಂಡ್' ಸಾಲದಲ್ಲಿ 'ಬಂಡವಾಳ ಕಾಮಗಾರಿ'

ಪಶ್ಚಿಮ ನಗರ ಪಾಲಿಕೆ 'ಮುನಿಸಿಪಲ್ ಬಾಂಡ್'ಗಳ ಮೂಲಕ ₹200 ಕೋಟಿ ಸಾಲ ಪಡೆಯಲಿರುವುದರಿಂದ ಕೇಂದ್ರ ಸರ್ಕಾರ ₹26 ಕೋಟಿಗಳ ಪ್ರೋತ್ಸಾಹಧನ ನೀಡಲಿದೆ. ಇದೂ ಸೇರಿದಂತೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯಡಿ (ಸಿಎಸ್‌ಎಸ್‌ಐಪಿ) ಮುಖ್ಯ, ಉಪಮುಖ್ಯ ರಸ್ತೆಗಳು ಹಾಗೂ ಇತರೆ ಮೂಲಸೌಕರ್ಯಕ್ಕೆ ಒಟ್ಟು ₹667.74 ಕೋಟಿಗಳ ಅನುದಾನ ಮೀಸಲಿಡಲಾಗಿದೆ.

ಮುಖ್ಯಮಂತ್ರಿಯವರ ಮೂಲಸೌಕರ್ಯಕ್ಕೆ ಅಭಿವೃದ್ಧಿ ಯೋಜನೆಯಡಿ (ಸಿಎಂಐಡಿಪಿ) 174.49 ಕಿ.ಮೀ ವಾರ್ಡ್ ರಸ್ತೆಗಳನ್ನು ₹317.25 ಕೋಟಿಗಳ ಅನುದಾನದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಜಂಕ್ಷನ್‌ಗಳ ಸೌಂದರ್ಯೀಕರಣ, ಪಾದಚಾರಿ ಮಾರ್ಗಗಳ ಮೇಲ್ದರ್ಜೆ ಮತ್ತು ಸ್ಕೈವಾಕ್‌ಗಳ ನಿರ್ಮಾಣಕ್ಕೆ ₹50 ಕೋಟಿ, ಪ್ರತಿ ವಾರ್ಡ್‌ಗೆ ಬಂಡವಾಳ ಕಾಮಗಾರಿಗಳಿಗಾಗಿ ₹1.50 ಕೋಟಿ, ನಿರ್ವಹಣಾ ಕಾಮಗಾರಿಗಳಿಗಾಗಿ ಪ್ರತಿ ವಾರ್ಡ್‌ಗೆ ₹75 ಲಕ್ಷ ನೀಡಲಾಗುತ್ತದೆ.

ಕುಂಬಳಗೋಡು ವಿದ್ಯುತ್ ಚಿತಾಗಾರದ ಅಭಿವೃದ್ಧಿಗಾಗಿ ಹೆಚ್ಚುವರಿ ₹10 ಕೋಟಿ ಅನುದಾನ ನೀಡಲಾಗಿದೆ. ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜಿಸಲು ಡಾ. ರಾಜ್‌ಕುಮಾರ್ ಸಭಾಂಗಣದ ಪುನರುಜ್ಜೀವನ ಕಾರ್ಯಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ.

ಗೊರಗುಂಟೆಪಾಳ್ಯ ಜಂಕ್ಷನ್ ಅಭಿವೃದ್ಧಿ

ತುಮಕೂರು ರಸ್ತೆಯ ಗೊರಗುಂಟೆ ಪಾಳ್ಯ ಜಂಕ್ಷನ್‌ನಲ್ಲಿ 'ಟ್ರಾನ್ಸಿಟ್ ಓರಿಯೆಂಟೆಡ್ ಡೆವಲಪ್ಮೆಂಟ್' ಆಧಾರಿತವಾಗಿ ರಸ್ತೆಯನ್ನು ಅಭಿವೃದ್ಧಿ ಮಾಡಲು ₹2 ಕೋಟಿ ಮೀಸಲಿಡಲಾಗಿದೆ. ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣದ ಸುತ್ತಮುತ್ತ ಪಾದಚಾರಿಗಳಿಗೆ ಅನುಕೂಲಕರ ಮಾರ್ಗಗಳು, ಫೀಡರ್ ಬಸ್ ಸೇವೆಗಳು, ಪಾರ್ಕಿಂಗ್ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ರಸ್ತೆ ವಿಸ್ತರಿಸಲಾಗುತ್ತದೆ. ತಾಜ್ ಸಂಸ್ಥೆಯವರು ಸುಮಾರು ಆರು ಮೀಟರ್ ಜಾಗವನ್ನು ನೀಡಲಿದ್ದು, ಇತರೆ ಭೂಸ್ವಾಧೀನದಿಂದ ಒಂದು ಪ್ರತ್ಯೇಕ ಪಥವನ್ನು ನಿರ್ಮಿಸಿ, ವಾಹನ ದಟ್ಟಣೆಯನ್ನು ಕಡಿಮೆ ಮಾಡಲಾಗುವುದು ಎಂದು ಆಯುಕ್ತ ಕೆ.ವಿ. ರಾಜೇಂದ್ರ ತಿಳಿಸಿದರು.

- **₹5 ಕೋಟಿ:** ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ
- **₹5 ಕೋಟಿ:** ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ
- **₹4 ಕೋಟಿ:** ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ
- **₹5 ಕೋಟಿ:** ಕೆಂಗೇರಿ ಉಪನಗರದಲ್ಲಿ ಗಣೇಶ ಸಾರ್ವಜನಿಕ ಆಟದ ಮೈದಾನ ಅಭಿವೃದ್ಧಿ
- **₹5 ಕೋಟಿ:** ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಡಾ. ರಾಜ್‌ಕುಮಾರ್ ಕಲಾಕ್ಷೇತ್ರದ ಅಭಿವೃದ್ಧಿ
- **₹3 ಕೋಟಿ:** ಬಸವನಗುಡಿ ವಿಧಾನಸಭಾ ಕ್ಷೇತ್ರದ ಹನುಮಂತನಗರ ವಾರ್ಡ್-102ರ ವ್ಯಾಪ್ತಿಯಲ್ಲಿನ ಕುಮಾರಸ್ವಾಮಿ ಉದ್ಯಾನವನ ವೀಕ್ಷಣೆ ಗೋಪುರ ಹಾಗೂ ಸುತ್ತಲಿನ ಪ್ರದೇಶ ಅಭಿವೃದ್ಧಿ
- **₹1 ಕೋಟಿ:** ಬಸವನಗುಡಿ ವಿಧಾನಸಭಾ ಕ್ಷೇತ್ರದ ತ್ಯಾಗರಾಜನಗರ ವಾರ್ಡ್-104 ರಲ್ಲಿನ ಕಟ್ಟಡದಲ್ಲಿ ಶಾಸಕರ ಕಚೇರಿ, ಸಂಸದರ ಕಚೇರಿ ಮತ್ತು ಸಭಾಂಗಣ ನಿರ್ಮಾಣ
- **₹20 ಕೋಟಿ:** ಯಶವಂತಪುರ ವಿಧಾನ ಸಭಾ ಕ್ಷೇತ್ರದಲ್ಲಿ 50 ಹಾಸಿಗೆಗಳ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯನ್ನು ನಿರ್ಮಿಸಲು ₹20.00 ಕೋಟಿ ಯೋಜನೆ ರೂಪಿಸಿದ್ದು, ಈ ಸಾಲಿನಲ್ಲಿ ₹10 ಕೋಟಿ ಮೀಸಲಿಡಲಾಗಿದೆ

ಪಾವತಿಗಳು

ವಿಭಾಗ	2025-26 ಪರಿಷ್ಕೃತ	2026-27ರ ಅಂದಾಜು
ಕೌನ್ಸಿಲ್	0	₹29 ಕೋಟಿ
ಸಾಮಾನ್ಯ ಆಡಳಿತ	₹19.17 ಕೋಟಿ	₹184.08 ಕೋಟಿ
ಕಂದಾಯ	₹49.51 ಕೋಟಿ	₹133.74 ಕೋಟಿ
ನಗರ ಯೋಜನೆ– ನಿಯಂತ್ರಣ	₹47.01 ಕೋಟಿ	₹50.79 ಕೋಟಿ
ಸಾರ್ವಜನಿಕ ಕಾಮಗಾರಿ	₹277.09 ಕೋಟಿ	₹3,270.47 ಕೋಟಿ
ಘನತ್ಯಾಜ್ಯ ನಿರ್ವಹಣೆ	₹175.41 ಕೋಟಿ	₹515.38 ಕೋಟಿ
ಸಾರ್ವಜನಿಕ ಆರೋಗ್ಯ (ಸಾಮಾನ್ಯ)	₹34.34 ಕೋಟಿ	₹134.24 ಕೋಟಿ
ಸಾರ್ವಜನಿಕ ಆರೋಗ್ಯ (ವೈದ್ಯಕೀಯ)	₹11.13 ಕೋಟಿ	₹64.39 ಕೋಟಿ
ತೋಟಗಾರಿಕೆ	₹27.82 ಕೋಟಿ	₹74.60 ಕೋಟಿ
ನಗರ ಅರಣ್ಯೀಕರಣ	₹9.42 ಕೋಟಿ	₹22.40 ಕೋಟಿ
ಸಾರ್ವಜನಿಕ ಶಿಕ್ಷಣ	₹21.29 ಕೋಟಿ	₹44.35 ಕೋಟಿ
ಸಮಾಜ ಕಲ್ಯಾಣ	₹129.07 ಕೋಟಿ	₹209.25 ಕೋಟಿ

ಅವಳ ಸಾಧನೆ ಸಂಭ್ರಮ

ತಮ್ಮ ಸಾಧಾರಣ ಬದುಕಿನಲ್ಲಿಯೇ ಅಸಾಧಾರಣವಾದುದನ್ನು ಸಾಧಿಸಿದ ಸಾಧಕಿಯರ ಕತೆಗಳನ್ನು ಕೇಳಿ ಸಭಿಕರು ಅಚ್ಚರಿಗೊಂಡರು. ಕೆಲವರ ಕತೆಗಳು ಕಣ್ಣು ಮಂಜಾಗಿಸಿದರೆ, ಕೆಲವರ ದಿಟ್ಟತನವು ಹೆಮ್ಮೆ, ಬೆರಗು ಮೂಡುವಂತೆ ಮಾಡಿದವು. 'ಸಾಧಕಿಯರು' ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಹೀಗೆ ವಿವಿಧ ಭಾವಗಳಿಗೆ ಕಾರಣವಾಯಿತು



ದಿಟ್ಟೆಯರ ಕಥನಗಳು ಬೆಳಕಾದವೊ...

ರಂಜಿಸಿದ ಜನ್ನಿ ಗಾಯನ

ಪ್ರಶಸ್ತಿ ಪ್ರದಾನದ ನಡುವೆ ರಂಗಕರ್ಮಿ ಎಚ್. ಜನಾರ್ಧನ್ ಮತ್ತು ತಂಡದವರು ಹಾಡಿದ ಶಿಶುನಾಳ ಷರೀಫರ 'ಎಂಥ ಭಕ್ತಿವಂತಳೀಕೀ ಕುಂಬಾರಕಿ', 'ಬಿದಿರು ನಾನರಿಗಲ್ಲದವಳು', ಕುವೆಂಪು ಅವರ 'ಓ ನನ್ನ ಚೇತನ', ಪಿ.ಲಂಕೇಶರ 'ಅವ್ವ' ಕವಿತೆಗಳು ಭಾವ ತೀವ್ರತೆಯನ್ನು ಹೆಚ್ಚಿಸಿದವು.

ಪ್ರಜಾವಾಣಿ ವಾರ್ತೆ

ಮೈಸೂರು: ಅರಮನೆ ನಗರಿಯಲ್ಲಿ ಸೂರ್ಯ ಮುಳುಗುವ ಹೊತ್ತಿಗೆ ಭಾವಗಳ ತೋಟವೊಂದು ಮೈದಾಳಿತ್ತು. ಅಸಾಮಾನ್ಯ ಮಹಿಳೆಯರು ನಡೆದು ಬಂದ ಹಾದಿಯ ನೆನಪಿನ ನುಡಿಗಳು ಸಹೃದಯರ ಎದೆಯಲ್ಲಿ ಸಸಿಗಳಾಗಿ ಬೇರುಗಳ ಚಾಚಿದವು. ಬಾಳಿನ ಸಂಕಟಗಳನು ನುಂಗಿ ಸಮಾಜಕ್ಕೆ ನಗುವಿನ ನೋಟಗಳ ದಕ್ಕಿಸಿದ 'ಕುಸುಮಬಾಲೆ'ಯರ ಸಾಧನೆಯ ಹೂಗಂಧದ ಕಂಪಿನ ಕಥನಗಳು ತಂಪಿನ ಮಳೆಗರೆದವು.

ನಾಡಿನ ದಶ ದಿಕ್ಕುಗಳಲ್ಲಿ, ಬದುಕಿನ ಸವಾಲುಗಳ ಎದುರು ಕೈಚೆಲ್ಲದೇ ದಿಟ್ಟೆಯರಾಗಿ ನಿಂತು, ನಂಬಿದ ಕುಟುಂಬ ಮತ್ತು ಸಮಾಜದಲ್ಲಿ ನೆಮ್ಮದಿ ಮೂಡಿಸಿದ ಹತ್ತು ಜೀವಗಳು ಆಡಿದ ಮಮತೆಯ ಮಾತುಗಳು ಕಿಕ್ಕಿರಿದು ತುಂಬಿದ ಸಭಾಂಗಣದಲ್ಲಿ ಮಿಂಚು ಹರಿಸಿದವು. ವೇದಿಕೆಯೇರಿ ಪ್ರಶಸ್ತಿ ಸ್ವೀಕರಿಸಿದ ಸಾಧಕಿಯರಲ್ಲಿ ಸಾರ್ಥಕತೆ ಮೂಡಿದರೆ, ಭಾವುಕ ಕ್ಷಣಗಳನ್ನು ಕಣ್ತುಂಬಿಕೊಂಡ ಪ್ರೇಕ್ಷಕರಲ್ಲಿ ತಮ್ಮ ತಾಯಂದಿರ, ಮಕ್ಕಳ ಸಾಧನೆ ನೋಡಿದಷ್ಟೇ ಹೆಮ್ಮೆಯ ಭಾವ ಮೂಡಿತ್ತು.

ರೋಡ್ ರೋಲರ್ ಚಲಾಯಿಸುತ್ತಾ 30 ಮಂದಿಗೆ ಕೆಲಸ ನೀಡಿದ ಹಾವೇರಿಯ ಶಂಕರವ್ವ ಈರಪ್ಪ ಲಮಾಣಿ, ಒಂದು ಕಣ್ಣು ಕಾಣದಿದ್ದರೂ ಸವಾಲುಗಳ ಮೀರಿ ಅಂಧ ಮಹಿಳೆಯರ ಟಿ–20 ವಿಶ್ವಕಪ್ ಕ್ರಿಕೆಟ್ ಟ್ರೋಫಿ ಗೆದ್ದುಕೊಟ್ಟ ನಾಯಕಿ ತುಮಕೂರಿನ ಟಿ.ಸಿ. ದೀಪಿಕಾ ಅವರ ಕಥನಗಳು ಕಣ್ಣರಳಿಸಿದವು.

ಭಾವುಕ ಕ್ಷಣಗಳಿಗೆ ಸಾಕ್ಷಿಯಾದ ಸಮಾರಂಭ

ಶಂಕರವ್ವ ಈರಪ್ಪ ಲಮಾಣಿ, ಟಿ.ಸಿ.ದೀಪಿಕಾ ಅವರಿಗೆ ನಿವೃತ್ತ ನ್ಯಾಯಮೂರ್ತಿ ಕೆ.ಎಸ್.ಮುದುಗಲ್, ಚೆನ್ನೈ ಸಿಲ್ಕ್ಸ್ ಮತ್ತು ಶ್ರೀಕುಮಾರನ್ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ಒ.ವಿ.ಜಯಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು. ಎಂ.ಗೌಸಿಯಾ ಖಾನ್, ಜಾನು ಅವರಿಗೆ ರಂಗಕರ್ಮಿ ಬಿ.ಜಯಶ್ರೀ, ಸೈಕಲ್ ಪ್ಯೂರ್ ಅಗರಬತ್ತಿಯ ಕ್ರಿಯೇಟಿವ್ ಪರ್ಫ್ಯೂಮರ್ ಜಾಹ್ನವಿ ಮೂರ್ತಿ ಪ್ರಶಸ್ತಿ ನೀಡಿದರು. ಗಿರಿಜಮ್ಮ ರಾಚಯ್ಯ ಸಾರಂಗ, ಕಮಲಮ್ಮ ಅವರನ್ನು ಚಲನಚಿತ್ರ ನಟಿ ಅಂಕಿತಾ ಅಮರ್, ಕರ್ನಾಟಕ ಗೋಲ್ಡ್ ವಿನ್ನರ್‌ನ ಮಾರಾಟ ವ್ಯವಸ್ಥಾಪಕ ಸಿ.ಎಸ್. ಮಹೇಶ್ ಪುರಸ್ಕರಿಸಿದರು. ಎಸ್.ಆಶಾ, ಸವಿತಾ, ರಾಗಿಣಿ ಅವರಿಗೆ ಅಕ್ಕೈ ಪದ್ಮಶಾಲಿ, ಕೆಪಿಆರ್ ಹ್ಯುಂಡೈನ ವ್ಯವಸ್ಥಾಪಕ ನಿರ್ದೇಶಕ ವಿ.ಜೆ.ಹೇಮಂತ್ ಪ್ರಶಸ್ತಿ ಪ್ರದಾನ ಮಾಡಿದರು.

ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಸ್ವಾಗತಿಸಿದರು. ಸುದ್ದಿ ಸಂಪಾದಕ ಪ್ರವೀಣ ಕುಲಕರ್ಣಿ ತೀರ್ಪುಗಾರರಿಗೆ ಸ್ಮರಣಿಕೆ ನೀಡಿದರು. ಟಿಪಿಎಂಎಲ್ ಸಿಒಒ ಕಿರಣ್ ಸುಂದರ್‌ರಾಜನ್, ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಬಿ.ಎ.ರವಿ, ಜಾಹೀರಾತು ವಿಭಾಗದ ನ್ಯಾಷನಲ್ ಸೇಲ್ಸ್ ಹೆಡ್ ಆನಂದ್ ಬಿಲ್ಡಿಕರ್, ಡಿಜಿಎಂ ಅನಂತರಾಮ ಸುಬ್ರಹ್ಮಣ್ಯ, ಬ್ರ್ಯಾಂಡ್ ಮತ್ತು ಇವೆಂಟ್ ವಿಭಾಗದ ಮುಖ್ಯಸ್ಥ ಬಿ.ಆರ್.ಶ್ರೀರಾಮ್, 'ಪ್ರಜಾವಾಣಿ' ಮೈಸೂರು ಬ್ಯೂರೊ ಮುಖ್ಯಸ್ಥ ಕೆ. ನರಸಿಂಹಮೂರ್ತಿ, ಡೆಕ್ಕನ್ ಹೆರಾಲ್ಡ್ ಬ್ಯೂರೊ ಮುಖ್ಯಸ್ಥ ಟಿ.ಆರ್.ಸತೀಶ್ ಕುಮಾರ್ ಪಾಲ್ಗೊಂಡಿದ್ದರು. ಆರ್.ಜೆ.ನಿಖಿತಾ ಕಾರ್ಯಕ್ರಮ ನಿರೂಪಿಸಿದರು.



ಸಾಧಕಿಯರನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಕ್ಕೆ ಸಹಯೋಗ ನೀಡಿರುವುದು ಸಂತಸ ತಂದಿದೆ. ಸಮಾಜಕ್ಕೆ ಮರು ಕೊಡುಗೆ ನೀಡುವ ಇಂಥ ಕಾರ್ಯಕ್ಕೆ ಭವಿಷ್ಯದಲ್ಲೂ ಜತೆಯಾಗುತ್ತೇವೆ
ವಿ.ಜೆ.ಹೇಮಂತ್, ವ್ಯವಸ್ಥಾಪಕ ನಿರ್ದೇಶಕ, ಕೆಪಿಆರ್ ಹುಂಡೈ

'ಪ್ರಜಾವಾಣಿ' ಪತ್ರಿಕೆಯ ಸುದ್ದಿ ವೈಶಿಷ್ಟ್ಯದಷ್ಟೇ ಇಲ್ಲಿನ ಸಾಧಕರ ವ್ಯಕ್ತಿತ್ವವೂ ವಿಶಿಷ್ಟವಾಗಿದೆ. ಮಹಿಳೆಯರ ಬಗ್ಗೆ ಕೇವಲ ಟೀಕಿಸುವುದು ಸರಿಯಲ್ಲ. ನಮ್ಮ ದೃಷ್ಟಿ ಸರಿಪಡಿಸಿಕೊಳ್ಳಬೇಕು. ಹೆಣ್ಣು ಮಕ್ಕಳು ಎದೆಗುಂದದೆ, ಪರಿಸ್ಥಿತಿ ನಿರ್ವಹಿಸುವ ಮನೋಭಾವ ತೋರಿದರೆ ಶಕ್ತಿ ತಾನಾಗಿಯೇ ಬರುತ್ತದೆ. ಇಂತಹ ಕಾರ್ಯಕ್ರಮಗಳು ಇನ್ನಷ್ಟು ಹೆಚ್ಚಲಿ
ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥೆ

ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ನನ್ನ ಈ ದಿನದ ಸಾಧನೆ. ಈ ಸಾಧಕಿಯರೆಲ್ಲರಿಂದಲೂ ಕಲಿಯುವುದು ಬಹಳಷ್ಟಿದೆ. ಸ್ಥಿತಿ–ಗತಿಯನ್ನು ಮೀರಿದ ಸಾಧನೆ ಇವರದ್ದು. ಹೆಣ್ಣುತನ ಎನ್ನುವುದು ನಮ್ಮೆಲ್ಲರ ಅಂತರಂಗದಲ್ಲಿ ಇದೆ. ಇವತ್ತು ಹೆಂಗಸು– ಗಂಡಸುತನದ ಪರಿಕಲ್ಪನೆ ಬದಲಾಗಿದೆ. ಗಂಡು ಮಕ್ಕಳೂ ಮಮತೆ, ಪ್ರೀತಿ, ಸಹನೆ ಕಲಿಯಬೇಕಿದೆ
ಅಂಕಿತಾ ಅಮರ್, ಚಲನಚಿತ್ರ ನಟಿ

ಆಶಾಕಿರಣವಾದವು

'ಕೋಲಾರ ಜಿಲ್ಲೆಯನ್ನು ನಾಡಿನ ಇನ್ನೊಂದು ಮಲೆನಾಡನ್ನಾಗಿ ಮಾಡುತ್ತೇನೆ' ಎಂಬ ಭಗೀರಥ ಸಂಕಲ್ಪವನ್ನು ಮಾಡಿ ಕೆರೆಗಳನ್ನು ಪುನಶ್ಚೇತನಗೊಳಿಸಿದ ಜಲ ಸೇನಾನಿ ಎಸ್.ಆಶಾ ಅವರ ಭರವಸೆಯ ಮಾತುಗಳು ನಾಳಿನ ಆಶಾಕಿರಣವಾದವು.

'ಪರಿಸ್ಥಿತಿ ನನ್ನನ್ನು ಸೋಲಿಸಿರಬಹುದು. ಗಟ್ಟಿ ಮನಸ್ಸು ನನ್ನನ್ನು ಗೆಲ್ಲಿಸಿದೆ' ಎಂದು ಹೇಳಿದ ಗಾಲಿ ಕುರ್ಚಿಯಲ್ಲಿ ಕುಳಿತು, ಮಗುವನ್ನು ಸಲಹುತ್ತಾ ಮಣ್ಣಿನ ಆಭರಣಗಳನ್ನು ಮಾಡಿ ಸ್ವಾವಲಂಬಿ ಜೀವನ ಕಟ್ಟಿಕೊಂಡ ಸವಿತಾ ಸ್ಫೂರ್ತಿಯಾದರು.

ಗಾರ್ಮೆಂಟ್ ಉದ್ಯಮ ಸ್ಥಾಪಿಸಿ 80 ಜನರಿಗೆ ಉದ್ಯೋಗ ನೀಡಿ ಅನ್ನದಾತೆಯಾದ ಕಲಬುರಗಿಯ ಶಿವಲೀಲಾ ಸಿ.ಪಾಟೀಲ, ರಾಗಿ ಉತ್ಪನ್ನಗಳ ಘಟಕ ಸ್ಥಾಪಿಸಿ ಹಾಡಿ ಮಹಿಳೆಯರಿಗೆ ಆಸರೆಯಾದ ಮೈಸೂರಿನ ಜಾಗನಕೋಟೆ ಹಾಡಿಯ ರಾಗಿಣಿ ಅವರು ಪ್ರಶಸ್ತಿ ಸ್ವೀಕರಿಸುವಾಗ ಆನಂದ ಬಾಷ್ಪ ಉಕ್ಕಿತು.

ಕಿಚ್ಚೆಬ್ಬಿಸಿತು

ಬಳ್ಳಾರಿ ಗಣಿಧಣಿಗಳ ಎದುರು ಏಕಾಂಗಿಯಾಗಿ ಹೋರಾಡಿ ತುಂಡು ಭೂಮಿ ಉಳಿಸಿಕೊಂಡ ವಿಜಯನಗರ ಜಿಲ್ಲೆಯ ವಕೀಲೆ ಎಂ.ಗೌಸಿಯಾ ಖಾನ್, 'ದೊಡ್ಡದು ಮಾಡುವುದು ಏನಿಲ್ಲ. ಪ್ರೀತಿಯ ಸಣ್ಣ ಕೆಲಸವನ್ನು ಮಾಡಬೇಕು. ತೊಂದರೆಗಳು ಬಹಳಷ್ಟು ಬರಬಹುದು. ಎದುರಿಸಬೇಕು' ಎಂಬ ಮಾತು ಕಿಚ್ಚೆಬ್ಬಿಸಿತು.

'ಮಾತನಾಡುವ ಗೊಂಬೆ' ಕಲೆಯ ದೇಶದ ಮೊದಲ ಲಿಂಗತ್ವ ಅಲ್ಪಸಂಖ್ಯಾತ ಕಲಾವಿದೆ, ರಾಯಚೂರಿನ ಸಿರವಾರದ ಜಾನು ಅವರ ಹೋರಾಟದ ಪಯಣವು ಅಚ್ಚರಿಗೊಳಿಸಿತು.

ರಸ್ತೆಗಳಿಲ್ಲದ ಚಿಕ್ಕಮಗಳೂರಿನ ಮೂಡಿಗೆರೆಯ ಗುಡ್ಡುಗಾಡು ಗ್ರಾಮಗಳಲ್ಲಿ 200ಕ್ಕೂ ಮಹಿಳೆಯರಿಗೆ ಹೆರಿಗೆ ಮಾಡಿಸಿದ ಸೂಲಗಿತ್ತಿ ಕಮಲಮ್ಮ, 'ದೇವರು ಶಕ್ತಿಕೊಟ್ಟರೆ ಸಾಯುವವರೆಗೂ ಕೆಲಸ ಮಾಡುತ್ತೇನೆ' ಎಂಬ ಉತ್ಸಾಹದ ನುಡಿಗಳು ಕಾರುಣ್ಯ ಭಾವ ತಂದರೆ, ಸಾರಂಗಧರನ ಚರಿತ್ರೆಯನ್ನು ಹೇಳುವ ಜಾನಪದ ಗಾಯಕಿ ಗಿರಿಜಮ್ಮ ರಾಚಯ್ಯ ಸಾರಂಗ ಅವರ ಪ್ರತಿಭೆಯು ಕಣ್ಣರಳಿಸಿತು.

'ಸ್ತ್ರೀ ಎಂದರೆ ಸೃಷ್ಟಿ ಆಕೆಯಲ್ಲೇ ಸಮಷ್ಟಿ'

ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯೆಯರ ಜೊತೆ ಸಂವಾದ



ಸಂವಾದದಲ್ಲಿ ಪಾಲ್ಗೊಂಡ ಕೆ.ಎಸ್. ಮುದುಗಲ್, ಬಿ. ಜಯಶ್ರೀ, ಅಕ್ಕೈ ಪದ್ಮಶಾಲಿ ಹಾಗೂ ರಶ್ಮಿ

'ಸ್ತ್ರೀ ಎಂದರೆ ಸೃಷ್ಟಿ. ಆಕೆಯಲ್ಲಿ ಸಮಷ್ಟಿಯೇ ಅಡಗಿದೆ. ಒಳ್ಳೆಯದ್ದನ್ನು ಹುಡುಕುತ್ತ ಹೋದರೆ ಒಳ್ಳೆಯದೇ ಸಿಗುತ್ತದೆ'.

–ಹೀಗೆಂದು ಅಂತಿಮ ಮೂವತ್ತು ಜನರ ಪಟ್ಟಿಯಲ್ಲಿ ಛಲದ ಹತ್ತು ಸಾಧಕಿಯರನ್ನು ಹೆಕ್ಕಿ ತೆಗೆದ ಬಗೆಯನ್ನು ವಿವರಿಸಿದ್ದು ತೀರ್ಪುಗಾರರ ತಂಡ.

'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿ ಪ್ರದಾನ ಸಮಾರಂಭದ ತುಂಬಿದ ವೇದಿಕೆಯಲ್ಲಿ ನಡೆದ ಸಂವಾದದಲ್ಲಿ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಸ್. ಮುದಗಲ್, ಹಿರಿಯ ರಂಗಕರ್ಮಿ ಬಿ. ಜಯಶ್ರೀ ಹಾಗೂ ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಪಾಲ್ಗೊಂಡರು.

'ಪ್ರತಿಯೊಬ್ಬ ಮಹಿಳೆಯಲ್ಲೂ ಒಂದು ಸ್ಫೂರ್ತಿಯ ಕಿಡಿ ಸುಪ್ತವಾಗಿರುತ್ತದೆ. ಅದು ಪರೀಕ್ಷೆಗೆ ಒಳಪಟ್ಟಾಗಲೆಲ್ಲ ಹೊರಬರುತ್ತದೆ. ಅವರ ಸಹಜ ಬದುಕೇ ನಮಗೆ ಸಾಧನೆಯಾಗಿ ಕಂಡಿದೆ' ಎಂದು ಮುದಗಲ್ ಹೇಳಿದರು.

'30ರ ಪಟ್ಟಿಯಲ್ಲಿದ್ದ ಎಲ್ಲರೂ ಸಾಧಕರೇ. ಅವರ ಬದುಕೇ ಸಾಧನೆ. ಇವರೆಲ್ಲರೂ ಸವಾಲು ಎದುರಿಸುತ್ತ ಗುರಿ ತಲುಪಿದ ಪರಿ, ಅವರ ಸಾಧನೆ ಹೇಗೆ ಸಮಾಜಕ್ಕೆ ಸೇವೆ ಆಗಿದೆ? ತಮ್ಮ ನ್ಯೂನತೆಯನ್ನೇ ಸಾಧನೆಯನ್ನಾಗಿ ಪರಿವರ್ತಿಸಿಕೊಂಡಿದ್ದಾರೆ ಎಂಬೆಲ್ಲ ಅಂಶಗಳನ್ನು ಪರಿಗಣಿಸಿ ಆಯ್ಕೆ ಮಾಡಿದೆವು' ಎಂದರು.

'ಕಷ್ಟ ಬಂದಾಗ ಮಹಿಳೆ ಇನ್ನಷ್ಟು ದಿಟ್ಟೆ ಆಗುತ್ತಾಳೆ. ಇದನ್ನು ಇವರ ಸಾಧನೆಯಲ್ಲಿ ಕಂಡೆವು. ಇವರ ಬದುಕು ಸಮಾಜದ ಇತರರಿಗೆ ಪ್ರೇರಣೆ' ಎಂದು ಬಿ. ಜಯಶ್ರೀ ಪ್ರಶಂಸಿಸಿದರು.

'ಲಿಂಗತ್ವ ಅಲ್ಪಸಂಖ್ಯಾತೆಯೂ ಪ್ರಶಸ್ತಿಯ ಪಟ್ಟಿಯಲ್ಲಿದ್ದಾರೆ. ನಮಗೆ ನಿಮ್ಮ ಕರುಣೆ ಬೇಕಿಲ್ಲ. ಸಮಾನ ಅವಕಾಶ ಬೇಕು' ಎಂದು ಅಕ್ಕೈ ಪದ್ಮಶಾಲಿ ಹೇಳಿದರು.

'ಸುಧಾ'ದ ಮುಖ್ಯ ಉಪ ಸಂಪಾದಕಿ ರಶ್ಮಿ ಸಂವಾದ ನಡೆಸಿದರು.

ಪ್ರಜಾವಾಣಿ ಸಾಧಕಿಯರು
Supported by ಕರ್ನಾಟಕ ಸರ್ಕಾರ

'ಪ್ರಜಾವಾಣಿ ಸಾಧಕಿಯರು' ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ವೇದಿಕೆಯಲ್ಲಿ, ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚುಟುಕು ಸಂವಾದದಲ್ಲಿ, ತಮ್ಮ ಬದುಕಿನಲ್ಲಿ ಪ್ರೇರಣೆ ನೀಡಿದ ಮಹಿಳೆಯರ ಕುರಿತು ನೆನಪುಗಳನ್ನು ಹಂಚಿಕೊಂಡರು. ಕೆಲವು ಪ್ರಶ್ನೆಗಳಿಗೆ ನಾಚಿ ಕೆಂಪಾದರು. ಭಾಗ್ಯಗಳು ಹಾಗೂ ಗ್ಯಾರಂಟಿ ಯೋಜನೆಗಳ ಹಿಂದಿನ ಪ್ರೇರಣೆಯನ್ನು ತೆರೆದಿಟ್ಟರು. ಅವರೊಟ್ಟಿಗಿನ ಚುಟುಕು ಸಂವಾದ ಹೀಗಿದೆ:

'ಮುಂಜಾನೆ ಓದಿಸಿದವಳು ತಾಯಿ'

- **ಪ್ರಶ್ನೆ: ನಿಮ್ಮ ಜೀವನದಲ್ಲಿ ಪ್ರಭಾವ ಬೀರಿದ, ಸ್ಫೂರ್ತಿ ಕೊಟ್ಟ ಮಹಿಳೆ ಯಾರು?**

ಸಿದ್ದರಾಮಯ್ಯ: ಅಂತಹವರಿಲ್ಲ (ನಗು). ಆದರೆ ನಾನು ವಿದ್ಯಾವಂತನಾಗಲು ರಾಜಪ್ಪ ಎಂಬ ಮೇಷ್ಟ್ರು ಕಾರಣ. ನಾನು ಐದನೇ ತರಗತಿಗೆ ನೇರವಾಗಿ ಸೇರಿದೆ. ವೀರಮಕ್ಕಳ ಕುಣಿತಕ್ಕೆ ಸೇರಿದ್ದ ನಮ್ಮನ್ನು ಅವರು ನೇರವಾಗಿ ಐದನೇ ತರಗತಿಗೆ ಸೇರಿಸಿಕೊಂಡರು. ನಾನು ಕಾನೂನು ಕಾಲೇಜು ಓದುವಾಗ ಪ್ರೊ. ನಂಜುಂಡಸ್ವಾಮಿ ಪ್ರಭಾವದಿಂದ ಮುಂದೆ ಸಮಾಜವಾದಿ ಪಕ್ಷ ಸೇರಿದೆ. ರಾಜಕೀಯ ಪ್ರವೇಶಕ್ಕೆ ಅವರೇ ನನಗೆ ಪ್ರೇರಣೆ.

- **ಪ್ರಶ್ನೆ: ನೀವು ಸಮಾಜವಾದಿ ಹಿನ್ನೆಲೆಯಿಂದ ಬಂದವರು. ಯಾವತ್ತಾದರೂ ಅಡುಗೆ ಮನೆಗೆ ಹೋಗಿ ಒಂದು ದಿನ ಅಡುಗೆ ಮಾಡಿದ್ದೀರ? ಕನಿಷ್ಠ ಕಾಫಿ, ಟೀ ಮಾಡಿದ್ದೀರ?**

ಉತ್ತರ: ಇಲ್ಲ. ಡಿನ್ನರ್ ಮಾಡಿದ್ದೀನಿ ಅಷ್ಟೇ (ನಗು). ನಾನು ಬಿ.ಎಸ್‌ಸಿ ಮೊದಲ ವರ್ಷದಲ್ಲಿ ಓದುತ್ತಿದ್ದಾಗ ನಾವೇ ಅನ್ನ ಮಾಡಿಕೊಂಡು, ಹೋಟೆಲ್‌ನಲ್ಲಿ ಸಾಂಬಾರ್ ತರುತ್ತಿದ್ದೆವು. ರಾಜಕೀಯಕ್ಕೆ ಬಂದ ಮೇಲೆ ಅಡುಗೆ ಮಾಡಿಲ್ಲ. ನನ್ನ ಮನೆಯಲ್ಲಿ ಮಡದಿ, ಮಕ್ಕಳು ಯಾವತ್ತೂ ಮನೆ ಕೆಲಸಕ್ಕೆ ನನ್ನನ್ನು ಕರೆಯುತ್ತಿರಲಿಲ್ಲ.

- **ಪ್ರಶ್ನೆ: ನೀವು ಯಾವಾಗಲೂ ತಂದೆ ಬಗ್ಗೆ ಹೇಳುತ್ತಿದ್ದೀರಿ. ಆದರೆ ತಾಯಿ ಬಗ್ಗೆ ಎಲ್ಲಿಯೂ ಮಾತನಾಡಿಲ್ಲ. ಅವರ ಬಗ್ಗೆ ಹೇಳಿ.**

ಉತ್ತರ: ನಮ್ಮ ತಾಯಿ ಪಾಪ ಅವಿದ್ಯಾವಂತರು. ಆದರೆ ಅವರು ಬೆಳಿಗ್ಗೆ ನಾಲ್ಕು ಗಂಟೆಗೆ ರಾಗಿ ಬೀಸಲು ಎದ್ದು, ಓದಿಸಲಿಕ್ಕೆ ಬೆಳಿಗ್ಗೆ ನನ್ನನ್ನೂ ಏಳಿಸುತ್ತಿದ್ದರು. ಮುಖ ತೊಳೆಸಿ ಸೀಮೆಎಣ್ಣೆ ದೀಪ ಹಚ್ಚಿಟ್ಟು ಓದಲು ಕೂರಿಸುತ್ತಿದ್ದರು. ಅದಕ್ಕಾಗಿ ಬಹಳ ಕಷ್ಟಪಟ್ಟಿದ್ದಾರೆ. ನಮ್ಮಪ್ಪ ಜಿಪುಣ. ಆದರೆ ನನ್ನ ತಾಯಿ ಸ್ವಲ್ಪ ದುಡ್ಡು ಕೊಡುತ್ತಿದ್ದರು.

- **ಪ್ರಶ್ನೆ: 2013ರಲ್ಲಿ ನೀವು ಅಧಿಕಾರಕ್ಕೆ ಬಂದು ಅನ್ನ ಭಾಗ್ಯ, ಕೃಷಿ ಭಾಗ್ಯ ಸೇರಿದಂತೆ ಬೇರೆ ಬೇರೆ ಭಾಗ್ಯಗಳನ್ನು ಕೊಟ್ಟಿರಿ. ಆ ಭಾಗ್ಯ ಯಾರು ಸರ್?**

ಉತ್ತರ: ಭಾಗ್ಯ ಎನ್ನುವುದು ಮನುಷ್ಯ ಅಲ್ಲ, ಒಂದು ಪದ. ಅನೇಕ ಭಾಗ್ಯಗಳನ್ನು ನಾನು ಸಮಾಜದ ಬಡವರಿಗಾಗಿ ನೀಡಿದ್ದೇನೆ. ಅದರ ಮುಂದುವರಿದ ಭಾಗವೇ ಗ್ಯಾರಂಟಿ. ಶಕ್ತಿ ಯೋಜನೆಯಲ್ಲಿ 698 ಕೋಟಿ ಬಾರಿ ಮಹಿಳೆಯರು ಪ್ರಯಾಣಿಸಿದ್ದಾರೆ. ಎಲ್ಲ ಧರ್ಮ, ಜಾತಿ, ಭಾಷಿಕರೂ ಇದ್ದಾರೆ.

- **ಪ್ರಶ್ನೆ: ಶಕ್ತಿ ಯೋಜನೆಯಲ್ಲಿ ಅತ್ತೆ–ಸೊಸೆ ಒಟ್ಟಿಗೆ ಹೋಗಬಹುದ ಸರ್?**

ಉತ್ತರ: (ನಗು). ಖಂಡಿತ ಹೋಗಬಹುದು. 1.26 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮಿ ಹಣ ನೀಡಿದ್ದೇವೆ. ಅತ್ತೆ–ಸೊಸೆ ಯಾರು ಮನೆಯ ಯಜಮಾನಿಯರೋ ಅವರಿಗೆ ಸಿಕ್ಕಿದೆ.

- **ಪ್ರಶ್ನೆ: ನಿಮ್ಮ ಗ್ಯಾರಂಟಿ ಯೋಜನೆಗಳೆಲ್ಲ ಹೆಚ್ಚು ಮಹಿಳೆಯರ ಪರವಾಗಿ ಇರುವುದರ ಹಿಂದಿನ ಉದ್ದೇಶವೇನು?**


ಉತ್ತರ: ಮಹಿಳೆಯರು ಸ್ವಾವಲಂಬಿಗಳಾಗಬೇಕು. ಲಿಂಗ ತಾರತಮ್ಯ ಹೋಗಬೇಕು. ಮಹಿಳೆಯರು ಸಮಾಜದಲ್ಲಿ ಕಟ್ಟಕಡೆಯ ವ್ಯಕ್ತಿಗಳು. ಅವರಿಗೆ ಆರ್ಥಿಕ– ಸಾಮಾಜಿಕವಾಗಿ ಶಕ್ತಿ ಬರದಿದ್ದರೆ ಲಿಂಗತಾರತಮ್ಯ ಹೋಗದು. ಒಂದು ಕಾಲದಲ್ಲಿ ಅವರು ಅಕ್ಷರ ಸಂಸ್ಕೃತಿಯಿಂದ ವಂಚಿತ ಆಗಿದ್ದರು. ಸಂವಿಧಾನವು ಅವರಿಗೆ ಶಿಕ್ಷಣದ ಅವಕಾಶ ನೀಡಿದೆ.

- **ಪ್ರಶ್ನೆ: ನೀವು ಸಿದ್ದರಾಮನಹುಂಡಿಯಿಂದ ಮೈಸೂರಿಗೆ ಬಂದು ಓದಿದ್ದೀರಿ. ಇಡೀ ಜೀವನದಲ್ಲಿ ನೀವು ಯಾರನ್ನಾದರೂ ಲವ್ ಮಾಡಿದ್ದೀರ?**

ಉತ್ತರ: ಮಾಡಿದ್ದೆ. ಅದನ್ನು ಹೇಳಬಾರದು (ನಗು)

- **ಪ್ರಶ್ನೆ: ಅತ್ತೆ–ಸೊಸೆ ವಿಚಾರದಲ್ಲಿ ಯಾವುದೇ ದೂರು ಬರಲಿಲ್ಲವೇ?**

ಉತ್ತರ: ಇದುವರೆಗೂ ಬಂದಿಲ್ಲ.



ಸಾಧಕಿಯರ ಮನದಾಳ

ನನ್ನ ಬಗ್ಗೆ ಹೆಮ್ಮೆ ಮೂಡಿಸಿದೆ

ನಮ್ಮನ್ನು ಗುರುತಿಸಿ ವೇದಿಕೆ ಹತ್ತಿಸಿರುವುದು ಸಾಧಿಸುವ ಛಲವನ್ನು ಹೆಚ್ಚಿಸಿದೆ. ನಾನು ಲಿಂಗತ್ವ ಅಲ್ಪಸಂಖ್ಯಾತೆ ಎಂಬ ಅಳುಕು ಆಗಾಗ ಕಾಡಿದ್ದಿದೆ. ಆದರೆ, ಈ ಗೌರವವು ನನ್ನ ಬಗ್ಗೆ ಹೆಮ್ಮೆ ಮೂಡಿಸುವಂತೆ ಮಾಡಿದೆ
ಜಾನು, ರಾಯಚೂರು

ಕೆಲಸವೇ ನನ್ನ ಗುರುತು

ಕುಟುಂಬ ನಿರ್ವಹಣೆಗಾಗಿ ನಿರ್ಮಾಣ ಕೆಲಸ, ರೋಡ್ ರೋಲರ್ ವಾಹನ ಓಡಿಸುವ ಕೆಲಸ ಮಾಡಲು ಆರಂಭಿಸಿದೆ. ಇಂದು ನನ್ನ ಕೆಲಸದ ಮೂಲಕ ನನ್ನನ್ನು ಸಮಾಜದಲ್ಲಿ ಗುರುತಿಸುವಂತೆ ಮಾಡಿರುವ 'ಪ್ರಜಾವಾಣಿ'ಗೆ ಧನ್ಯವಾದಗಳು
ಶಂಕರವ್ವ ಈರಪ್ಪ ಲಮಾಣಿ, ಹಾವೇರಿ

ನಂಬಿಕೆಗೆ ಮತ್ತಷ್ಟು ಬಲ

ಮಹಿಳೆಯು ಒಂದು ಮೂಲೆಯಲ್ಲಿ ಕೂತಿರುವವಳಲ್ಲ. ಅವಳ ಕಾರ್ಯಕ್ಷೇತ್ರ ಹಿರಿದಾಗಿದೆ. ಆಕೆಯು ಧೈರ್ಯದಿಂದ ಅನೇಕ ಕೆಲಸಗಳನ್ನು ಸಾಧಿಸುತ್ತಾಳೆ ಎಂಬುದು ನನ್ನ ನಂಬಿಕೆ. ಆ ನಂಬಿಕೆಗೆ ಮತ್ತಷ್ಟು ಬಲ ಬಂದಂತಾಯಿತು
ಎಂ.ಗೌಸಿಯಾ ಖಾನ್, ವಿಜಯನಗರ

ಈ ಅನುಭವವೇ ಸಂಭ್ರಮ

ಕಾಡಂಚಿನ ಹೆಣ್ಣುಮಗಳಾದ ನನಗೂ ಇಂಥ ದೊಡ್ಡ ವೇದಿಕೆಯಲ್ಲಿ ಜಾಗ ಸಿಗುತ್ತದೆ ಎಂಬ ಅನುಭವವೇ ಸಂತಸ ತಂದಿದೆ. ನನ್ನನ್ನು ಪರಿಚಯಿಸುವ ಕೆಲಸ ಮಾಡಿರುವ 'ಪ್ರಜಾವಾಣಿ'ಯು ಇನ್ನಷ್ಟು ಉತ್ತಮ ಕೆಲಸಕ್ಕೆ ಪ್ರೇರೇಪಿಸಿದೆ
ರಾಗಿಣಿ, ಮೈಸೂರು

ಸಾರ್ಥಕ ಭಾವನೆ...

ಹೆಣ್ಣು ಮಕ್ಕಳ ಕಷ್ಟಕ್ಕೆ ಮಿಡಿಯುತ್ತಿದ್ದೆ. ಅವರ ಹೆರಿಗೆ ನೋವನ್ನು ಕಂಡು ಮಕ್ಕಳ ಹಡೆಯಲು ಸಹಕರಿಸಿದ್ದೆ. ಈ ಕೆಲಸವೇ ನನಗೂ ಒಂದು ಪ್ರಶಸ್ತಿ ದೊರಕುವಂತೆ ಮಾಡಿರುವುದು ಸಾರ್ಥಕ ಭಾವನೆ ಮೂಡಿಸಿದೆ
ಕಮಲಮ್ಮ, ಚಿಕ್ಕಮಗಳೂರು

'ಪ್ರಜಾವಾಣಿ'ಯಷ್ಟೇ ಪ್ರಶಸ್ತಿಯೂ ಪ್ರಾಮಾಣಿಕ

ಸರಳವಾಗಿ, ಉತ್ತಮವಾಗಿ ನಡೆಯುತ್ತಿರುವ ಈ ಕಾರ್ಯಕ್ರಮವು 'ಪ್ರಜಾವಾಣಿ'ಯಲ್ಲಿ ಬರುವ ವರದಿಗಳು ಎಷ್ಟು ಸತ್ಯವೋ ಅಷ್ಟೇ ಪ್ರಾಮಾಣಿಕವಾಗಿದೆ. ಉಳಿದ ಸಾಧಕಿಯರ ಪರಿಚಯ ಕೇಳಿದಾಗ ನಾನು ಇನ್ನಷ್ಟು ಸಾರ್ಥಕ ಬದುಕನ್ನು ಕಳೆಯಬೇಕಿದೆ ಅನ್ನಿಸಿತು
ಎಸ್.ಆಶಾ, ಕೋಲಾರ

ಮಹಿಳೆಯರ ಬೆಳವಣಿಗೆ ಮುಖ್ಯವೆನಿಸಿದೆ

ಪ್ರಮುಖವಾಗಿ ಮಹಿಳೆಯರು ಬೆಳೆಯುವುದು ಎಷ್ಟು ಅಗತ್ಯ ಎನ್ನುವುದನ್ನು ಕಾರ್ಯಕ್ರಮ ಮನದಟ್ಟು ಮಾಡಿತು. ಸಮಾಜದಲ್ಲಿ ಅನೇಕ ಕಾರಣಗಳಿಂದ ಹಿಂದುಳಿದ ಮಹಿಳೆಯರು ಸೂಕ್ತ ಅವಕಾಶದೊಂದಿಗೆ ಮುಂದೆ ಬಂದರೆ ಸಮಾಜ ಇನ್ನಷ್ಟು ಅಭಿವೃದ್ಧಿಯಾಗಬಹುದು ಎನ್ನುವ ಕಲ್ಪನೆ ಮೂಡಿದೆ
ಗಿರಿಜಮ್ಮ ರಾಚಯ್ಯ ಸಾರಂಗ, ರಾಮನಗರ

ಜವಾಬ್ದಾರಿ ಹೆಚ್ಚಿಸಿದ ಪ್ರಶಸ್ತಿ

'ಪ್ರಜಾವಾಣಿ'ಯು ಸಾಧಕಿ ಎಂದು ಗುರುತಿಸಿ ಪ್ರಶಸ್ತಿ ನೀಡಿರುವುದು ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ. ನನ್ನ ಐಎಎಸ್ ಗುರಿ ಸಾಧನೆಯ ಕನಸಿಗೆ ಬಲ ತುಂಬಿದೆ. ಎಚ್ಚರಿಕೆಯಿಂದ ಭವಿಷ್ಯ ರೂಪಿಸಿಕೊಳ್ಳುವ ಅಗತ್ಯವನ್ನು ಮನದಟ್ಟು ಮಾಡಿದೆ.
ಟಿ.ಸಿ.ದೀಪಿಕಾ, ಶಿರಾ

ಸ್ವತಂತ್ರ ಬದುಕಿಗೆ ಸಂದ ಗೌರವ

ಎಲೆಮರೆಕಾಯಿಯಂತೆ ಇದ್ದವರನ್ನೂ 'ಪ್ರಜಾವಾಣಿ' ಪತ್ರಿಕೆ ಗುರುತಿಸಿರುವುದು ಖುಷಿ ತಂದಿದೆ. ಒಬ್ಬ ವ್ಯಕ್ತಿಯು ಸ್ವತಂತ್ರ ಬದುಕಿಗಾಗಿ ಮಾಡುವ ಕೆಲಸವನ್ನೂ ಗುರುತಿಸಿ ಗೌರವಿಸಿರುವುದು ಬದುಕಿಗೆ ಇನ್ನಷ್ಟು ಸ್ಫೂರ್ತಿ, ಗುರಿ ನೀಡಿದೆ.
ಸವಿತಾ, ಬೆಂಗಳೂರು

ನಾಗರೀಕ ವಿಮಾನಯಾನ ಸಚಿವಾಲಯ
ಭಾರತ ಸರ್ಕಾರ

ಸುಧಾರಿತ ಮೂಲಸೌಕರ್ಯ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸಬಲ್ಲ ವಿಮಾನಯಾನದ ಬಲವರ್ಧನೆ



“ಕಳೆದ ದಶಕದಿಂದ, ಭಾರತದ ವಿಮಾನಯಾನ ಕ್ಷೇತ್ರದಲ್ಲಿ, ಎಕ್ಸ್‌ಕ್ಲೂಸಿವ್ ಕ್ಲಬ್‌ನಿಂದ ವಿಶ್ವದ ಮೂರನೇ ಅತಿದೊಡ್ಡ ದೇಸಿ ವಿಮಾನಯಾನ ಮಾರುಕಟ್ಟೆಯಾಗಿ, ಐತಿಹಾಸಿಕ ಪರಿವರ್ತನೆ ಕಂಡಿದೆ”
ಶ್ರೀ ನರೇಂದ್ರ ಮೋದಿ
ಪ್ರಧಾನಮಂತ್ರಿ

ಗೌರವಾನ್ವಿತ ಪ್ರಧಾನಮಂತ್ರಿ
ಶ್ರೀ ನರೇಂದ್ರ ಮೋದಿ
ಇವರ ದೂರದೃಷ್ಟಿಯುಳ್ಳ ನಾಯಕತ್ವದ ಅಡಿಯಲ್ಲಿ

ಉದ್ಘಾಟನೆ / ಲೋಕಾರ್ಪಣೆ

ವಿವಿಧ ವಿಮಾನ ನಿಲ್ದಾಣಗಳಲ್ಲಿ ಉಡಾನ್ ಯಾತ್ರಿ ಕೆಫೆ, ಪ್ರಯಾಣಿಕರ ಸೌಲಭ್ಯಗಳು ಮತ್ತು ಮೂಲಸೌಕರ್ಯ ಮೇಲ್ದರ್ಜೆಗೇರಿಸುವ ಕಾರ್ಯಗಳು

ಇವರಿಂದ
ಶ್ರೀ ರಾಮಮೋಹನ್ ನಾಯ್ಡು ಕಿಂಜರಪು
ಕೇಂದ್ರ ನಾಗರೀಕ ವಿಮಾನಯಾನ ಸಚಿವರು

ಭಾನುವಾರ 29ನೇ ಮಾರ್ಚ್, 2026 | ಬೆಳಿಗ್ಗೆ 10:30 | ರಾಜ್‌ಕೋಟ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಗುಜರಾತ್

ಉಡಾನ್ ಯಾತ್ರಿ ಕೆಫೆ: ಮಿತವ್ಯಯಕರ ತಿಂಡಿ ತಿನಿಸುಗಳ ಆಯ್ಕೆ – ಚಂಡೀಗಢ, ಅಮೃತ್‌ಸರ್, ರಾಜ್‌ಕೋಟ್, ಜಮ್ಮು, ವಾರಣಾಸಿ, ಪಾಟ್ನಾ, ಇಂದೋರ್, ಗ್ವಾಲಿಯರ್, ಜೈಪುರ, ಅಗರ್ತಲಾ ಮತ್ತು ಲಕ್ನೋ

ಡಿಜಿ ಯಾತ್ರಾ: ವಿಮಾನ ನಿಲ್ದಾಣಗಳಲ್ಲಿ ಸಂಪರ್ಕರಹಿತ ಮತ್ತು ಅಪರಿಮಿತ ಸಾರಿಗೆ – ಚಂಡೀಗಢ, ಡೆಹ್ರಾಡೂನ್, ಜಮ್ಮು, ಶ್ರೀನಗರ, ಅಗರ್ತಲಾ, ಇಂಫಾಲ್, ಭೋಪಾಲ್ ಮತ್ತು ಅಮೃತಸರ

ಮಕ್ಕಳ ವಲಯ: ಮಕ್ಕಳಿಗಾಗಿ ಕ್ರಿಯಾತ್ಮಕ ಆಟದ ಕೇಂದ್ರಗಳು – ಚಂಡೀಗಢ, ಆದಂಪುರ, ಬಟಿಂಡಾ, ಖಜುರಾಹೊ, ಜಮ್ಮು, ಡೆಹ್ರಾಡೂನ್, ಅಮೃತರ್, ಇಂಫಾಲ್, ಗ್ವಾಲಿಯರ್ ಮತ್ತು ಅಗರ್ತಲಾ

ಫ್ಲೈಬ್ರೇ: ಪ್ರಯಾಣದ ಸಮಯದಲ್ಲಿ ಓದುವ ಆನಂದ – ಚಂಡೀಗಢ, ಆದಂಪುರ, ಅಮೃತಸರ, ಬರೇಲಿ, ಹಿಂಡನ್, ಜಮ್ಮು, ಖಜುರಾಹೊ, ಪ್ರಯಾಗರಾಜ್, ಶ್ರೀನಗರ, ಇಂಫಾಲ, ಇಂದೋರ್, ಅಗರ್ತಲಾ, ಜಾಮ್‌ನಗರ, ಡೆಹ್ರಾಡೂನ್, ಕುಲ್ಲು ಮತ್ತು ಕಿಶನ್‌ಘರ್


ಎವಿಎಸ್‌ಎಆರ್: ಸ್ಥಳೀಯ ಕುಶಲಕರ್ಮಿಗಳಿಗೆ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸುವ ಮೂಲಕ ಸಬಲೀಕರಣ – ಚಂಡೀಘರ್, ಜಮ್ಮು, ಖಜುರಾಹೊ, ಕುಲ್ಲು (ಭುಂಟರ್) ವಾರಣಾಸಿ, ಇಂಫಾಲ್, ಇಂದೋರ್, ಗ್ವಾಲಿಯರ್, ಜಬಲ್‌ಪುರ, ಅಗರ್ತಲಾ ಮತ್ತು ಜಾಮ್‌ನಗರ

ಮೂಲಸೌಕರ್ಯ ನವೀಕರಣ: ವಿಮಾನ ನಿಲ್ದಾಣಗಳ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುವುದು – ಜೋಧ್‌ಪುರ, ಶ್ರೀನಗರ, ಭುವನೇಶ್ವರ, ದರ್ಭಂಗಾ, ಜಾರ್ಸುಗುಡ, ಇಂಫಾಲ, ಇಂದೋರ್ ಮತ್ತು ಭೋಪಾಲ್

ವೈ–ಫೈ: ಪ್ರಯಾಣದಲ್ಲಿರುವಾಗ ಸಂಪರ್ಕದಲ್ಲಿರುತ್ತದೆ – ಆದಂಪುರ, ಅಗರ್ತಲ, ಆಗ್ರಾ, ಅಲಿಘರ್, ಅಮೃತಸರ, ಅಯೋಧ್ಯೆ, ಅಜಂಗಢ, ಬರೇಲಿ, ಭುವನೇಶ್ವರ, ಬಿಕಾನೇರ್, ಚಂಡೀಘರ್, ಚಿತ್ರಕೂಟ, ದರ್ಭಾಂಗ, ಡೆಹ್ರಾಡಂ, ದಿಯೋಘರ್, ದಿಮಪುರ್, ಗಯಾ, ಗೋರಕ್‌ಪುರ್, ಹಿಂಡನ್, ಹಿಸಾರ್, ಹೊಲ್ಲೊಂಗಿ, ಇಂಫಾಲ್, ಇಂದೋರ್, ಜೈಸಲ್ಮೇರ್, ಜಮ್ಮು, ಜರ್ಸುಗುಡ, ಜೋಧಪುರ್, ಕಾಂಗ್ರಾ (ಗಗ್ಗಲ್), ಕಾನ್ಪುರ್ (ಚಕೇರಿ), ಖಜುರಾಹೊ, ಕಿಶನ್‌ಘರ್, ಕುಲ್ಲು (ಭುಂಟರ್), ಕುಶಿನಗರ, ಲೇಹ್, ಲುಧಿಯಾನ, ಮೊರಾದಾಬಾದ್, ಪಾಕ್ಯೊಂಗ್, ಪಂತ್ ನಗರ, ಪಠಾಣ್‌ಕೋಟ್, ಪಾಟ್ನಾ, ಪೋರ್ಟ್ ಬ್ಲೇರ್, ಪ್ರಯಾಗ್‌ರಾಜ್, ಪುರ್ನಿಯಾ, ರಾಜ್‌ಪುರ, ಶಿಲ್ಲಾಂಗ್, ಶಿಮ್ಲಾ, ಶ್ರೀನಗರ, ತೇಝು, ಉದಯಪುರ ಮತ್ತು ವಾರಣಾಸಿ










@AAI_Official @AirportsAuthorityOfIndiaOfficial @aaiofficial @airportsauthorityofindia @AirportsAuthorityofIndia

CBC 03111/13/0020/2526



JOIN INDIAN NAVY

INDIAN NAVY

COMBAT READY COHESIVE AATMANIRBHAR



JOIN AS AGNIVEER (SSR/MR) & SSR (MEDICAL)

Online Applications invited from unmarried Men and Women candidates for Agniveer (SSR/MR) & unmarried Men candidates for SSR (Medical)

Application Window: 14 March to 06 April 2026

Entry	Educational Qualification
AGNIVEER SSR (Senior Secondary Recruit)	Qualified in 10+2 with Mathematics & Physics from Boards of School Education recognized by Ministry of Education, Govt of India, with minimum 50% marks in aggregate. OR Passed Three years diploma course in Engineering (Mechanical/ Electrical/ Automobiles/ Computer Science/ Instrumentation Technology/ Information Technology) from Central, State and UT recognized Polytechnic Institute with 50% marks in aggregate. OR Passed Two years Vocational Course with Non-vocational subject viz, Physics and Mathematics from Education Boards recognized by Central, State and UT with 50% marks in aggregate.
AGNIVEER MR (Matric Recruit)	Matriculation Examination with minimum 50% marks in aggregate from the Board of School Education recognized by Ministry of Education, Govt of India.
SSR (Medical)	Qualified in 10+2 examination with Physics, Chemistry, Biology (PCB) from the Boards of School Education recognized by Ministry of Education, Govt of India with 50% marks in aggregate and minimum 40% in each subject.

Please scan for Online Applications

www.joinindiannavy.gov.in | www.ssc.gov.in

Employment News Dated 21 March 2026

Safeguarding Seas for a Viksit Samriddha Bharat




CBC 10701/13/0028/2526

ಕಾಡಂಚಿನ ಜನರ ನಿತ್ಯ ರೋದನ


ಕುದುರೆಮುಖ ರಾಷ್ಟ್ರೀಯ ಉದ್ಯಾನವನದೊಳಗಿನ ಮಿನಗರದಿಯಲ್ಲಿ ರಸ್ತೆ ಮಧ್ಯದಲ್ಲಿ ವಿದ್ಯಾರ್ಥಿಗಳನ್ನು ಹಳ್ಳ ದಾಟಿಸುತ್ತಿರುವ ಪೋಷಕರು


ಕಾಲು ಸಂಕವನ್ನು ದಾಟಿಕೊಂಡು ಮನೆಗೆ ತೆರಳುತ್ತಿರುವ ಜನ
ಪ್ರಜಾವಾಣಿ ಚಿತ್ರ

ಸದ್ಯ ಸರ್ಕಾರದಿಂದ ಅನುದಾನ ಬಾರದ ಕಾರಣ ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಪುನರ್ವಸತಿ ಕಾರ್ಯ ವಿಳಂಬವಾಗಿದೆ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಲಾಗಿದೆ. ಸರ್ಕಾರ ಅನುದಾನ ಬಿಡುಗಡೆ ಮಾಡಿದ ಕೂಡಲೇ ಪುನರ್ವಸತಿ ಕಾರ್ಯ ಮತ್ತೆ ಆರಂಭಿಸಲಾಗುವುದು

ಶಿವರಾಮ್ ಬಾಬು, ಕುದುರೆಮುಖ ವನ್ಯಜೀವಿ ವಿಭಾಗದ ಡಿಎಫ್‌ಒ

ವಡ್ಡನಕರ್ಕೆಯಲ್ಲಿ ಏಳು ಮನೆಗಳಿದ್ದು, ಐದು ಮನೆಗಳಲ್ಲಿ ಒಂಟಿ ಹೆಂಗಸರು ಉಳಿದಿದ್ದೇವೆ. ಹುಲಿ ನಾಲ್ಕು ದನುಗಳನ್ನು ತಿಂದಿದೆ. ಒಂಟಿಯಾಗಿ ಓಡಾಡಬೇಕು, ಮಳೆಗಾಲದಲ್ಲಿ ಹೊಳೆ ದಾಟಿ ಪೇಟೆಗೆ ಹೋಗಲು ಸಾಧ್ಯವಿಲ್ಲ. ಈ ಜೀವನಕ್ಕೆ ಸರ್ಕಾರ ಆದಷ್ಟು ಬೇಗ ಮುಕ್ತಿ ದೊರಕಿಸಿಕೊಡಬೇಕು

ಆಶಾ, ವಡ್ಡನಕರ್ಕೆ ನಿವಾಸಿ

ಕಾಡಿನಲ್ಲಿ ಸಿಲುಕಿ ಮಾನಸಿಕವಾಗಿ ಹಿಂಸೆ ಅನುಭವಿಸುತ್ತಿದ್ದೇವೆ. ಸರ್ವೆ ನಡೆಸಿ ನಾಲ್ಕೈದು ವರ್ಷಗಳಾಗಿವೆ. ಬೇರೆ ಯಾವ ಸೌಕರ್ಯವೂ ಬೇಡ, ಕೂಡಲೇ ಪರಿಹಾರ ಕೊಟ್ಟರೆ ಹೊರಗೆ ಹೋಗುತ್ತೇವೆ



ಚಂದ್ರಶೇಖರ್, ಕೊಡಿಗೆ ಗ್ರಾಮದ ನಿವಾಸಿ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಪುನರ್ವಸತಿ ಪರಿಹಾರಕ್ಕಾಗಿ ಮನವಿ ಸಲ್ಲಿಸಲಾಗಿದೆ. 2013ರ ಭೂಸ್ವಾದೀನ ಕಾಯ್ದೆಯಂತೆ 1ಕ್ಕೆ 4 ಪಟ್ಟು ಹೆಚ್ಚು ಪರಿಹಾರ ನೀಡಬೇಕು

ಮಾತೋಳ್ಳಿ ಸುನೀಲ್, ಕುದುರೆಮುಖ ರಾಷ್ಟ್ರೀಯ ಉದ್ಯಾನ ಪುನರ್ವಸತಿ ಹೋರಾಟ ಸಮಿತಿ ಅಧ್ಯಕ್ಷ

ಪುನರ್ವಸತಿ ಕಲ್ಪಿಸಿದರೆ ಮೂರ್ನಾಲ್ಕು ಪಟ್ಟು ಪರಿಹಾರ ನೀಡಬೇಕಾಗುತ್ತದೆ. ಅದಕ್ಕಾಗಿ ಮೂಲಭೂತ ಸೌಲಭ್ಯ ನೀಡದೆ ಹಿಂಸೆ ನೀಡಿ ಸ್ವಇಚ್ಛೆಯಿಂದ ಹೊರ ಹೋಗುವಂತೆ ಸರ್ಕಾರ ಮಾಡುತ್ತಿದೆ. ಇನ್ನು ಪರಿಹಾರಕ್ಕೆ 2005ರ ಎಸ್‌ಆರ್ ದರ ನಿಗದಿ ಮಾಡಿ ಮತ್ತೊಂದು ಮೋಸ ಮಾಡುತ್ತಿದೆ

ಕಲ್ಕುಳಿ ವಿಠಲ ಹೆಗ್ಗಡೆ, ಅಧ್ಯಕ್ಷರು, ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟ

ಒಂದನೇ ಪುಟದಿಂದ...

ಅವರೊಂದಿಗೆ ಕೆರೆಕಟ್ಟೆ ಚೆಕ್‌ಪೋಸ್ಟ್ ದಾಟಿ ಮುಂದೆ ಸಾಗಿ ರಾಷ್ಟ್ರೀಯ ಹೆದ್ದಾರಿಯಿಂದ ಬಲಕ್ಕೆ ಸುಮಾರು 13 ಕಿಲೋಮೀಟರ್ ನಿರ್ಜನ ಕಾಡು ದಾರಿಯಲ್ಲಿ ಸಾಗಿದೆವು.

ಕಾಲು ಹಾದಿಯೇ ರಸ್ತೆ. ಹಳ್ಳ-ಕೊಳ್ಳಗಳಲ್ಲಿ ಹರಿಯುತ್ತಿದ್ದ ನೀರಿನ ನಡುವೆಯೇ ದಾರಿ, ಮಧ್ಯಾಹ್ನ ಒಂದು ಗಂಟೆಯ ಬಿಸಿಲಿನಲ್ಲೂ ಮಬ್ಬುಗತ್ತಲಿನ ಅನುಭವ. ಆನೆ-ಹುಲಿ ಎದುರಾದರೆ ಪಾರಾಗುವುದು ಹೇಗೆ ಎಂಬ ಭಯದಲ್ಲೇ ಸಾಗಿ ಮಾಣಿಕ್ಯ ಬೆಟ್ಟದ ಬುಡದಲ್ಲಿರುವ ಕೊಡಿಗೆ ಎಂಬ ಜನವಸತಿ ಪ್ರದೇಶ ತಲುಪಿದೆವು. ಈ ಪ್ರದೇಶದಲ್ಲಿ ಅಲ್ಲೊಂದು ಇಲ್ಲೊಂದು ಮನೆಯಂತೆ ಒಟ್ಟು 12 ಕುಟುಂಬಗಳಿವೆ.

ಈ ದಾರಿಯಿಂದಲೂ ಮನೆಗಳಿಗೆ ತಲುಪಲು ಹಳ್ಳಗಳನ್ನು ದಾಟಬೇಕಾದ ಸ್ಥಿತಿ ಇದೆ. ಮಳೆಗಾಲದಲ್ಲಿ ಕಾಲು ಸಂಕ ಕೊಚ್ಚಿ ಹೋಗಿದೆ. ಮತ್ತೊಂದು ಮರದ ದಿಮ್ಮಿ ಅಡ್ಡಲಾಗಿ ಹಾಕಿ ಅದರ ಮೇಲೆಯೇ ಸಾಗಿ ಮನೆ ತಲುಪುವ ಸ್ಥಿತಿ ಹಲವರದ್ದು. ಇದೇ ರೀತಿ ದಿಮ್ಮಿಯ ಮೇಲೆ ಹಳ್ಳ ದಾಟಿ ಬಂದ ಶಿವಶಂಕರ್ ಅವರಿಗೆ ಸಹನೆಯ ಕಟ್ಟೆಯೊಡೆದಿತ್ತು. ‘ನಾವು ಸರ್ಕಾರದವರಲ್ಲ, ಪ್ರಜಾವಾಣಿ ಪತ್ರಿಕೆಯವರು’ ಎಂದು ಹೇಳಿ ಸಮಾಧಾನ ಮಾಡಬೇಕಾಯಿತು.

ಇಲ್ಲಿ ಬಿಎಸ್‌ಎನ್‌ಎಲ್ ಸೇರಿ ಯಾವ ನೆಟ್‌ವರ್ಕ್ ಇಲ್ಲ. ನೆಟ್‌ವರ್ಕ್ ಸಿಗಬೇಕೆಂದರೆ 15 ಕಿಲೋ ಮೀಟರ್ ಹೋಗಬೇಕು. 12 ಕುಟುಂಬಗಳು ಒಟ್ಟಾಗಿ ವೈಫೈ ಕೇಬಲ್ ಸಂಪರ್ಕ ಪಡೆದುಕೊಂಡಿದ್ದಾರೆ. ಮೊಬೈಲ್ ರೀಚಾರ್ಜ್ ಜತೆಗೆ ವೈಫೈ ಸಂಪರ್ಕಕ್ಕೆ ತಿಂಗಳಿಗೆ ತಲಾ ₹600 ಪಾವತಿಸಬೇಕು. ಸರ್ಕಾರ ಉಚಿತವಾಗಿ ಅಕ್ಕಿ ಕೊಡುತ್ತಿದೆ. ನ್ಯಾಯಬೆಲೆ ಅಂಗಡಿ 20 ಕಿಲೋ ಮೀಟರ್ ದೂರದಲ್ಲಿರುವುದರಿಂದ ಹೋಗಿ ಬರಲು ವಾಹನ ಬಾಡಿಗೆ ₹600 ಖರ್ಚಾಗುತ್ತದೆ. ಮಳೆಗಾಲದಲ್ಲಿ ಆರೋಗ್ಯ ಕೆಟ್ಟರೆ ಆಸ್ಪತ್ರೆಗೆ ಹೋಗಲು ವಾಹನ ಇಲ್ಲ, ಕಲ್ಲುಮುಳ್ಳಿನ ಹಾದಿಯಲ್ಲಿ ಕಷ್ಟಪಟ್ಟು ಕೆಲವು ಆಟೊರಿಕ್ಷಾಗಳು ಬರುತ್ತವೆ. ಆದರೆ, ಒಂದು ಕಡೆಯ ಹಾದಿಗೆ ₹600 ಬಾಡಿಗೆ ಪಡೆಯುತ್ತಾರೆ. ಸಂಜೆ ನಂತರ ಅವರೂ ಬರುವುದಿಲ್ಲ, ಮಳೆಗಾಲದಲ್ಲಂತೂ ಯಾವ ವಾಹನವೂ ಬರುವುದಿಲ್ಲ’ ಎಂದು ರಂಗಪ್ಪ ತಮ್ಮ ಪರಿಸ್ಥಿತಿ ವಿವರಿಸಿದರು.

‘ಆನೆಯೊಂದು ಮನೆಯ ಸುತ್ತಮುತ್ತ ಒಂದೂವರೆ ತಿಂಗಳು ಓಡಾಡುತ್ತಿತ್ತು. ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹೇಳಿದರೆ ರಾಷ್ಟ್ರೀಯ ಉದ್ಯಾನದಲ್ಲಿರುವ ಆನೆಯನ್ನು ಎಲ್ಲಿಗೆ ಕಳುಹಿಸಬೇಕು ಎನ್ನುತ್ತಾರೆ. ಏಳೆಂಟು ಬಾರಿ ಆನೆಯಿಂದ ತಪ್ಪಿಸಿಕೊಂಡಿದ್ದೇನೆ. ಮುಂದೆ ಏನೋ ಗೊತ್ತಿಲ್ಲ. ಪೇಟೆಯಿಂದ ಮನೆಗೆ ಬರುವಾಗ ಸಂಕಟವಾಗುತ್ತದೆ. ಮತ್ತೊಮ್ಮೆ ಪೇಟೆ ನೋಡುತ್ತೇನೋ ಇಲ್ಲ, ಆನೆ ಕಾಲಿಗೆ ಸಿಲುಕುತ್ತೇನೋ ಎಂಬ ಆತಂಕ ಕಾಡುತ್ತದೆ’ ಎನ್ನುತ್ತ ಗದ್ಗದಿತರಾದರು ಪ್ರಭಾಕರ್.

‘ವೈಫೈ ಕೇಬಲ್ ತುಂಡಾದರೆ, ವಿದ್ಯುತ್ ತಂತಿ ಮುರಿದರೆ ಹೇಗೋ ಮಾಹಿತಿ ಮುಟ್ಟಿಸಿದರೆ ದುರಸ್ತಿ ಮಾಡುವವರು ಬರುವುದಿಲ್ಲ. ಮೊದಲೇ ದಾರಿ ಇಲ್ಲ, ಇನ್ನು ಆನೆ ಕಾಟ ಬೇರೆ ಶೃಂಗೇರಿ ಸಮೀಪ ಇರುವ ನೆಮ್ಮಾರ್ ಗ್ರಾಮದ ತನಕ ಬಂದು ಕರೆದುಕೊಂಡು ಹೋಗಿ ಎನ್ನುತ್ತಾರೆ. ಈ ಕಗ್ಗತ್ತಲ ಕಾಡಿನಲ್ಲಿ ನಾವು ಹೇಗೆ ಬದುಕಬೇಕು’ ಎಂದು ಅವರು ಪ್ರಶ್ನಿಸುತ್ತಾರೆ.

‘ಸರ್ಕಾರದ ಜತೆಗೆ ಹವಾಮಾನವೂ ನಮಗೆ ಶತ್ರುವಾಗಿ ಕಾಡುತ್ತಿದೆ. ಅತಿಯಾದ ಮಳೆಯಿಂದ ಎಲೆಚುಕ್ಕಿ ರೋಗ ಹೆಚ್ಚಾಗಿ ಅಡಿಕೆ ಮರಗಳು ಫಸಲು ಕೊಡುವುದನ್ನು ನಿಲ್ಲಿಸಿವೆ. ಕಾಡಿನ ಉತ್ಪನ್ನಗಳನ್ನು ಮುಟ್ಟಲು ಅರಣ್ಯ ಇಲಾಖೆ ಬಿಡುವುದಿಲ್ಲ. ಜೀವನ ನಡೆಸುವುದಾದರೂ ಹೇಗೆ’ ಎಂದು ಕೇಳುತ್ತಾರೆ.

‘ಮದುವೆಯಾಗದ ಯುವಕರಿದ್ದಾರೆ. ಈ ಕಾಡಿನ ಬದುಕಿಗೆ ಹೆಣ್ಣು ಕೊಡುವವರು ಯಾರು. ಈ ಜೀವನ ನಡೆಸಲು ಯಾವ ಹೆಣ್ಣು ಮಕ್ಕಳು ಬರುತ್ತಾರೆ. ಇಂತಹ ನಿಕೃಷ್ಟಕ್ಕೆ ನಮ್ಮನ್ನು ತಳ್ಳಿ ತಮಾಷೆ ನೋಡುತ್ತಿರುವುದನ್ನು ನಾಗರಿಕ ಸರ್ಕಾರ ಎಂದು ಕರೆಯಬೇಕೆ’ ಎಂದು ಇಲ್ಲಿನ ಜನ ಆಕ್ರೋಶದಿಂದ ಪ್ರಶ್ನಿಸುತ್ತಾರೆ.

ಪುನರ್ವಸತಿಗೆ ಬೇಕು ₹300 ಕೋಟಿ

ಕುದುರೆಮುಖ ಕಾಡಿನಲ್ಲಿರುವ ಕಂದಾಯ ಭೂಮಿ ಬಿಟ್ಟು ಹೊರಗೆ ಬರಲು ಬಯಸಿರುವ 300ಕ್ಕೂ ಹೆಚ್ಚು ಕುಟುಂಬಗಳನ್ನು ಹೊರಗೆ ತರಲು ಕನಿಷ್ಠ ₹300 ಕೋಟಿ ಬೇಕಿದೆ ಎಂಬುದು ಅರಣ್ಯ ಇಲಾಖೆ ಅಧಿಕಾರಿಗಳು ಮಾಡಿರುವ ಅಂದಾಜು.

ರೈತರ ಜಮೀನು ಮತ್ತು ಮನೆಗೆ ಮೌಲ್ಯ ನಿಗದಿ ಮಾಡಬೇಕು. ಜಮೀನಿನ ಸ್ಥಿತಿ, ಅದರಲ್ಲಿರುವ ಬೆಳೆ, ಅದರ ಬಾಳಿಕೆ ಆಧರಿಸಿ ಮೌಲ್ಯ ನಿಗದಿ ಮಾಡಲಾಗುತ್ತದೆ. ತೋಟದಲ್ಲಿರುವ ಮರಗಳು, ಅವರು ವಾಸ ಇರುವ ಮನೆ, ಅದಕ್ಕೆ ಬಳಕೆ ಮಾಡಿರುವ ಮರಮುಟ್ಟು, ಮನೆಯ ಸುತ್ತಮುತ್ತ ಇರುವ ಜಾಗ ಎಲ್ಲವನ್ನು ಮೌಲ್ಯಮಾಪನ ಮಾಡಬೇಕು. ಯಾವ ದರ್ಜೆಯ (ಎ, ಬಿ, ಸಿ, ಡಿ, ಇ) ಎಂಬುದನ್ನು ತೀರ್ಮಾನಿಸಿ ಮೌಲ್ಯ ನಿಗದಿ ಮಾಡಲಾಗುತ್ತದೆ.

ಆದ್ದರಿಂದ ಪರಿಹಾರ ಮೊತ್ತ ಕನಿಷ್ಠ ₹300 ಕೋಟಿ ಬೇಕಾಗಿದೆ ಎಂಬುದು ಅರಣ್ಯ ಇಲಾಖೆ ಅಂದಾಜು. ಸಮೀಕ್ಷೆ ಪೂರ್ಣಗೊಂಡು ನಾಲ್ಕೈದು ವರ್ಷವಾದರೂ ಅನುದಾನ ಲಭ್ಯವಿಲ್ಲದ ಕಾರಣ ಪ್ರಕ್ರಿಯೆಗಳು ಮುಂದುವರಿದಿಲ್ಲ. ಆದ್ದರಿಂದ ಸ್ಥಳಾಂತರದ ಕನವರಿಕೆಯಲ್ಲೇ ಜನರ ಕಾಡಿನ ವಾಸ ಮುಂದುವರಿದಿದೆ.


ಕುದುರೆಮುಖ ರಾಷ್ಟ್ರೀಯ ಉದ್ಯಾನವನದೊಳಗಿನ ಭಲೆಕಡಿಯಲ್ಲಿನ ಕಾಲು ಸಂಕ

ಅವರ ಬದುಕು ಕಂಡು ನಿಟ್ಟುಸಿರು ಬಿಟ್ಟು ಮತ್ತೊಂದು ದಾರಿ ಹಿಡಿದು ಸಾಗಿ ಹೊಳೆಯೊಂದನ್ನು ಹಾದು ವಡ್ಡನಕರ್ಕೆ ಎಂಬ ಮತ್ತೊಂದು ಜನವಸತಿ ತಲುಪಿದೆವು. ಇಲ್ಲಿರುವ ಏಳು ಮನೆಗಳಲ್ಲಿ ಐದು ಮನೆಯಲ್ಲಿ ಮಹಿಳೆಯರು ಮಾತ್ರ ಇದ್ದಾರೆ. ಮೃತಪಟ್ಟಿರುವ ಐವರು ಪುರುಷರಲ್ಲಿ ಮೂವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದಕ್ಕೆ ಕಾರಣಗಳನ್ನು ಕೇಳಿದರೆ ಮುಗಿಲಿನತ್ತ ಮುಖ ಮಾಡಿ ಕಣ್ತುಂಬಿಕೊಳ್ಳುತ್ತಾರೆ.


ಆಶಾ

‘ಏನಂತ ಹೇಳುವುದು, ನೀವೇ ಕಣ್ಣಾರೆ ನಮ್ಮ ಬದುಕನ್ನು ನೋಡುತ್ತಿದ್ದೀರಿ. ಇಂತಹ ಸ್ಥಿತಿಯಲ್ಲಿ ಬದುಕುವುದಕ್ಕಿಂತ ಸಾಯುವುದೇ ಮೇಲು. ನಮಗೂ ಯಾವ ಆಸೆಗಳೂ ಉಳಿದಿಲ್ಲ. ಮಕ್ಕಳು ತಬ್ಬಲಿಯಾಗಬಾರದು ಎಂದಷ್ಟೇ ನಾವು ಉಳಿದಿದ್ದೇವೆ’ ಎಂದು ವಡ್ಡನಕರ್ಕೆಯ ಆಶಾ ಕಣ್ಣೊರೆಸಿಕೊಂಡರು.

‘ವನ್ಯಮೃಗಗಳ ಜತೆಗೆ ಕಾಡಿನಲ್ಲಿ ನಮ್ಮನ್ನು ಉಳಿಸಿ ಯಾವ ನಾಗರಿಕ ನಾಡನ್ನು ಸರ್ಕಾರ ಕಟ್ಟುತ್ತಿದೆ. ರಾಷ್ಟ್ರೀಯ ಉದ್ಯಾನಕ್ಕೆ ನಮ್ಮ ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಪರಿಹಾರ ನೀಡಿದ್ದರೆ ಉತ್ತಮ ಬೆಲೆ ಸಿಗುತ್ತಿತ್ತು. ಕಾಡಿನಿಂದ ಹೊರ ಬರುವ ಅನಿವಾರ್ಯತೆಯನ್ನು ಈಗ ಸೃಷ್ಟಿ ಮಾಡಿದೆ. ಅರಣ್ಯದೊಳಗೆ ಕಂದಾಯ ಜಾಗಗಳನ್ನು ಉಳಿಸಿ ಅವುಗಳಿಗೆ ಕನಿಷ್ಠ ಬೆಲೆ ನಿಗದಿ ಮಾಡಿ ಪುಡಿಗಾಸು ನೀಡಿ ಹೊರಗೆ ಕಳುಹಿಸಲು ಹೊರಟಿದೆ. ಅದನ್ನಾದರೂ ಬೇಗ ಮಾಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಐದೇ ವರ್ಷಕ್ಕೆ ಮನೆ ತೊರೆಯುವ ಮಕ್ಕಳು: ವಾಪಸ್ ಬರುವ ದಾರಿಯಲ್ಲಿ ಕಂಡ ಭಲೇಕಡಿ ಅಂಗನವಾಡಿ ಕೇಂದ್ರದಲ್ಲಿ ಒಂದೇ ಮಗು ಇತ್ತು. ಈ ಹಿಂದೆ ಬರುತ್ತಿದ್ದ ಐದು ಮಕ್ಕಳು ಈಗ ಅಂಗನವಾಡಿಗೆ ಬರುತ್ತಿಲ್ಲ. ಕೆರೆ ಗ್ರಾಮದ ಬಳಿ ಕಾಡಾನೆ ದಾಳಿಗೆ ಸಿಲುಕಿ ಇಬ್ಬರು ಮೃತಪಟ್ಟ ಬಳಿಕ ಅಂಗನವಾಡಿಗೆ ಮಕ್ಕಳನ್ನು ಕಳುಹಿಸಲು ಪೋಷಕರು ಹೆದರುತ್ತಿದ್ದಾರೆ. ಇನ್ನು ಸುತ್ತಮುತ್ತ ಸರ್ಕಾರಿ ಶಾಲೆಗಳಿಲ್ಲ. ಎಲ್ಲರ ಮಕ್ಕಳು 5ನೇ ವರ್ಷಕ್ಕೆ ಪೋಷಕರನ್ನು ತೊರೆದು ವಸತಿ ಶಾಲೆಗಳನ್ನು ಸೇರುತ್ತಾರೆ.

ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕಿನ ಹತ್ತಾರು ಜನವಸತಿಗಳ ಸ್ಥಿತಿ ಇದೇ ಆಗಿದೆ. ಜಯಪುರ, ಕಳಸ, ನೆಮ್ಮಾರು ರೀತಿಯ ಹಳ್ಳಿಗಳಲ್ಲಿರುವ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವುದು ಕಷ್ಟ. ಕನಿಷ್ಠ 15 ಕಿಲೋ ಮೀಟರ್ ದೂರದಲ್ಲಿ ಶಾಲೆಗಳಿವೆ. ಕಾಡು ದಾರಿಯಲ್ಲಿ ಹೋಗಿ ಶಾಲೆಗೆ ಬಿಟ್ಟು ಬಂದು, ಮತ್ತೆ ಸಂಜೆ ಕರೆದುಕೊಂಡು ಬರುವುದು ಅಸಾಧ್ಯದ ಮಾತು. ದಿನವಿಡೀ ಇದೇ ಕೆಲಸ ಮಾಡಬೇಕಾಗುತ್ತದೆ. ಕೂಲಿ ಮಾಡದಿದ್ದರೆ ಹೊಟ್ಟೆ ತುಂಬುವುದಿಲ್ಲ’ ಎಂದು ಜನರು ಹೇಳುತ್ತಾರೆ. ಈಗ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂದರೆ ಇರುವ ಒಂದೇ ಆಯ್ಕೆ ಎಂದರೆ ವಸತಿ ಶಾಲೆಗಳು. ನಕ್ಸಲ್ ಹೋರಾಟ ತೀವ್ರಗೊಂಡ ಬಳಿಕ ಮೆಣಸಿನಹಾಡ್ಯ, ಮೇಗಾರ್ ಮತ್ತು ಬಸರಿಕಟ್ಟೆ ಬಳಿ ಗಿರಿಜನ ವಸತಿ ಶಾಲೆಗಳನ್ನು ತೆರೆಯಲಾಗಿದೆ.

‘ಅಷ್ಟು ಚಿಕ್ಕ ಮಕ್ಕಳನ್ನು ಬಿಟ್ಟು ಇರುವುದು ನಮಗೂ ಕಷ್ಟ. ತಾಯಿ–ತಂದೆ ಜತೆ ಆಡಿ ನಲಿಯಬೇಕಾದ ಕಾಲದಲ್ಲಿ ಕೂಡಿ ಹಾಕಿದಂತೆ ಇರಲು ಮಕ್ಕಳಿಗೂ ಕಷ್ಟ. ಆದರೂ ಅಕ್ಷರ ಕಲಿಸುವ ಅನಿವಾರ್ಯತೆಯಲ್ಲಿ ಮಕ್ಕಳನ್ನು ವಸತಿ ಶಾಲೆಗಳಲ್ಲಿ ಬಿಟ್ಟಿದ್ದೇವೆ. ಮಕ್ಕಳ ಬಾಲ್ಯದ ದಿನಗಳನ್ನು ನೋಡುವ ಅದೃಷ್ಟ ನಮಗಿಲ್ಲ. ನಮ್ಮೊಟ್ಟಿಗೆ ಬಾಲ್ಯ ಕಳೆಯುವ ಭಾಗ್ಯ ಅವರಿಗೂ ಇಲ್ಲ’ ಎಂದು ಕೊಡಿಗೆಯ ಮಹಿಳೆ ಸುನಿತಾ ಕಣ್ಣೀರಾದರು.

‘ಪ್ಯಾಕೇಜ್ ನೀಡಿ ಕಾಡಿನಿಂದ ಸ್ಥಳಾಂತರ ಮಾಡಿದರೆ ಶಾಲೆಗಳಿಗೆ ಮಕ್ಕಳನ್ನು ಸೇರಿಸಿಕೊಂಡು ಅವರೊಂದಿಗೆ ಜೀವನ ಮಾಡಬಹುದು. ಅದನ್ನೂ ಸರ್ಕಾರ ಮಾಡುತ್ತಿಲ್ಲ, ಸ್ವಇಚ್ಛೆಯಿಂದ ಕೋರಿದರೂ ಸ್ಥಳಾಂತರ ಮಾಡಿಲ್ಲ. ಮೂಲಸೌಕರ್ಯ ನೀಡದೆ ಜುಗುಪ್ಸೆ ಬರಿಸಿದರೆ, ಯಾವ ಪರಿಹಾರವನ್ನೂ ಕೇಳದೆ ಹೊರ ಹೋಗುತ್ತಾರೆ ಎಂದು ಸರ್ಕಾರದ ಉಪಾಯ ಮಾಡಿರಬಹುದು. ಚಿಕ್ಕ ಮಕ್ಕಳನ್ನು ಹೆತ್ತವರಿಂದ ದೂರ ಮಾಡುವುದು ಎಷ್ಟು ಸರಿ’ ಎಂಬುದು ಅವರ ಪ್ರಶ್ನೆ.

ಈ ವನವಾಸ ಏಕೆ: ಈ ಗೋಳಿನ ಕತೆ ಒಂದು–ಎರಡು ಜನವಸತಿಯದಲ್ಲ. ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗೆ ಕಂದಾಯ ಜಾಗದಲ್ಲಿ ಉಳಿದಿರುವ 108 ಜನವಸತಿಗಳ ಸ್ಥಿತಿಯೂ ಬಹುತೇಕ ಇದೇ ಆಗಿದೆ. ಈ ವನವಾಸವನ್ನು ಸರ್ಕಾರ ತಂದೊಡ್ಡಿದ್ದಕ್ಕೆ ಇತಿಹಾಸವೇ ಇದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನದದೊಳಗೆ ಕಂದಾಯ ಭೂಮಿಯಲ್ಲಿರುವ ಜನವಸತಿ

51 ದಕ್ಷಿಣ ಕನ್ನಡ	30 ಚಿಕ್ಕಮಗಳೂರು
27 ಉಡುಪಿ	108 ಒಟ್ಟು

ಕುದುರೆಮುಖ ಸುತ್ತಮುತ್ತಲ ಗುಡ್ಡಗಳನ್ನು ಬ್ರಿಟಿಷ್ ಆಡಳಿತದ 1914ರಿಂದ 1916ರ ಅವಧಿಯಲ್ಲಿ ಮೀಸಲು ಅರಣ್ಯ ಮತ್ತು ಅಭಯಾರಣ್ಯ ಎಂದು ಘೋಷಣೆ ಮಾಡಲಾಗಿತ್ತು. ಅದು ಕಾಡಾಗಿಯೇ ಮುಂದುವರಿದಿತ್ತು. 1987ರಲ್ಲಿ ರಾಷ್ಟ್ರೀಯ ಉದ್ಯಾನ ಎಂದು ಘೋಷಣೆ ಮಾಡಲಾಯಿತು. ಘೋಷಿತ ಪ್ರದೇಶವಲ್ಲದೆ, ಗುಡ್ಡಗಳ ನಡುವೆ ಕಂದಾಯ ಜಾಗವನ್ನು ಪರಿಸರ ಸೂಕ್ಷ್ಮ ವಲಯ(ಇಎಸ್‌ಝಡ್) ಎಂದು ಗುರುತಿಸಿ ಅಲ್ಲಿನ ಗಿರಿಜನರನ್ನು ಒಕ್ಕಲೆಬ್ಬಿಸುವ ಕಾರ್ಯ ಆರಂಭವಾಯಿತು. ಇದನ್ನು ವಿರೋಧಿಸಿ ಆರಂಭವಾದ ಹೋರಾಟ ನಕ್ಸಲ್ ಚಳವಳಿ ತನಕ ತಲುಪಿತು. ಹಲವರು ಬದುಕು ಕಳೆದುಕೊಂಡರು. 25 ವರ್ಷಗಳ ನಂತರ ಏನಾಗಿದೆ ಎಂದು ತಿರುಗಿ ನೋಡಿದರೆ ಹೇಗಾದರೂ ಮಾಡಿ ಕಾಡಿನಿಂದ ಹೊರಗೆ ಕಳಿಸಿ ಎಂಬ ಹಂತಕ್ಕೆ ಜನ ತಲುಪಿದ್ದಾರೆ. ಅಂತಹ ಉಸಿರುಗಟ್ಟಿದ ಸ್ಥಿತಿಯನ್ನು ಅರಣ್ಯ ಇಲಾಖೆ ನಿರ್ಮಾಣ ಮಾಡಿದೆ.

ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಯಲ್ಲಿ 600 ಚದರ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ಇದೆ ಎಂಬುದು ಅರಣ್ಯ ಇಲಾಖೆ ಅಧಿಕಾರಿಗಳು ನೀಡುವ ಮಾಹಿತಿ. ಅದರೊಳಗಿನ ಕಂದಾಯ ಜಾಗದಲ್ಲಿರುವ ಮನೆಗಳಿಗೆ ಸಾಗಲು ರಾಷ್ಟ್ರೀಯ ಉದ್ಯಾನದ ಚೆಕ್‌ಪೋಸ್ಟ್‌ಗಳನ್ನು ದಾಟಿಕೊಂಡೇ ಹೋಗಬೇಕು. ಅಂತಹ 1300 ಕುಟುಂಬಗಳನ್ನು ಅರಣ್ಯ ಇಲಾಖೆ ಗುರುತಿಸಿದೆ. ಅವುಗಳ ಪೈಕಿ 650 ಕುಟುಂಬಗಳು ಸ್ವಇಚ್ಛೆಯಿಂದ ಹೊರಬರಲು ಒಪ್ಪಿದ್ದು, 350 ಕುಟುಂಬಗಳ ಸ್ಥಳಾಂತರವೂ ಆಗಿದೆ. ಇನ್ನೂ 300ಕ್ಕೂ ಹೆಚ್ಚು ಕುಟುಂಬಗಳು ಹೊರಬರಲು ಸಾಧ್ಯವಾಗಿಲ್ಲ.

‘1914–16ರ ಅವಧಿಯಲ್ಲಿ ಮೀಸಲು ಅರಣ್ಯ ಎಂದು ಗುರುತಿಸಿದ್ದು ಗುಡ್ಡಗಾಡು ಪ್ರದೇಶ ಮಾತ್ರ. ಅದೇ ಜಾಗವನ್ನು ಕುದುರೆಮುಖ ರಾಷ್ಟ್ರೀಯ ಉದ್ಯಾನ ಎಂದು ಆ ನಂತರ ಘೋಷಣೆ ಮಾಡಲಾಯಿತು. ಆ ಜಾಗದಲ್ಲಿ ಆಗಲೂ ಜನವಸತಿ ಇರಲಿಲ್ಲ, ಈಗಲೂ ಇಲ್ಲ. ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿರುವ ಕಂದಾಯ ಜಾಗದಲ್ಲಿ ಜನವಸತಿ ಇದೆ. ಕಂದಾಯ ಭೂಮಿಯಲ್ಲಿರುವ ಜನ ಸ್ವಇಚ್ಛೆಯಿಂದ ಪುನರ್ವಸತಿ ಕೋರಬೇಕು ಎನ್ನುವುದು ಅರಣ್ಯ ಇಲಾಖೆಯ ವಾದ.

‘ಆ ಜಾಗವನ್ನು ಅರಣ್ಯ ಎಂದು ಘೋಷಿಸಿ ಸರ್ಕಾರವೇ ಅವರಿಗೆ ಪುನರ್ವಸತಿ ಕಲ್ಪಿಸಬಹುದು. ಆದರೆ, 2006ರ ಅರಣ್ಯ ಕಾಯ್ದೆ ಪ್ರಕಾರ ಕಾಡಿನಿಂದ ಹೊರಗೆ ಬಂದವರಿಗೆ 10 ಎಕರೆ ಜಾಗ ಸೇರಿ ಮೂರು–ನಾಲ್ಕು ಪಟ್ಟು ಹೆಚ್ಚಿನ ಪರಿಹಾರ ಕೊಡಬೇಕಾಗುತ್ತದೆ. ಜನರೇ ಸ್ವಇಚ್ಛೆಯಿಂದ ಅಲ್ಲಿಂದ ಖಾಲಿ ಮಾಡಿದರೆ ಕಡಿಮೆ ಪರಿಹಾರದಲ್ಲಿ ಜನರನ್ನು ಓಡಿಸಬಹುದು ಎಂಬುದು ಅರಣ್ಯ ಇಲಾಖೆಯ ಲೆಕ್ಕಾಚಾರ’ ಎಂಬುದು ಹೋರಾಟಗಾರರ ಆರೋಪ.

‘ಯಾವುದೇ ಮೂಲಸೌಕರ್ಯ ಕಲ್ಪಿಸದೆ ಅವರು ಸ್ವಯಂ ಪುನರ್ವಸತಿಗೆ ಅರ್ಜಿ ಸಲ್ಲಿಸುವಂತೆ ಮಾಡುವುದು ಸರ್ಕಾರದ ಆಲೋಚನೆ. ಆದಕ್ಕಾಗಿಯೇ ಮೂಲಸೌಕರ್ಯ ನೀಡದೆ ಅವರನ್ನು ರೋಸಿ ಹೋಗುವಂತೆ ಮಾಡಿದೆ. ಕಂದಾಯ ಜಾಗದಲ್ಲೇ ಗೇಟ್‌ಗಳನ್ನು ನಿರ್ಮಿಸಿಕೊಂಡು ಒಳಗಿರುವ ಜಾಗವೆಲ್ಲಾ ತಮ್ಮದೇ ಎಂಬಂತೆ ಅರಣ್ಯ ಇಲಾಖೆ ನಡೆದು ಕೊಳ್ಳುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಉಡುಪಿ ಜಿಲ್ಲೆಯಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಹೆಚ್ಚಾಗಿ ಮಲೆಕುಡಿಯ ಸಮುದಾಯದವರು ವಾಸಿಸುತ್ತಿದ್ದು, ಕನಿಷ್ಠ ಮೂಲ ಸೌಕರ್ಯವಿಲ್ಲದೆ ಅವರು ಬದುಕುತ್ತಿದ್ದಾರೆ. ಅರಣ್ಯ ವ್ಯಾಪ್ತಿಯಿಂದ ಸ್ವಇಚ್ಛೆಯಿಂದ ಹೊರಬರಲು ಸಿದ್ಧರಿರುವ ಕುಟುಂಬಗಳಿಗೆ ಪರಿಹಾರ ಒದಗಿಸುವ ಕಾರ್ಯ ವಿಳಂಬವಾಗುತ್ತದೆ ಎಂಬ ದೂರುಗಳಿವೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿರುವ ಹೆಬ್ರಿ ಮತ್ತು ಕಾರ್ಕಳ ತಾಲ್ಲೂಕಿನಲ್ಲಿ ಸುಮಾರು 50ಕ್ಕೂ ಹೆಚ್ಚು ಮಲೆಕುಡಿಯ ಕುಟುಂಬಗಳು ವಾಸಿಸುತ್ತಿವೆ. ಕನಿಷ್ಠ ಮೂಲಸೌಕರ್ಯವನ್ನಾದರೂ ಒದಗಿಸಿ ಅಥವಾ ಪುನರ್ವಸತಿ ಅರ್ಜಿಗಳನ್ನಾದರೂ ತ್ವರಿತ ಗತಿಯಲ್ಲಿ ವಿಲೇವಾರಿ ಮಾಡಿ ಎಂದು ಅಲ್ಲಿನ ನಿವಾಸಿಗಳ ಒತ್ತಾಯ.

ಪೂರಕ ಮಾಹಿತಿ: ನವೀನ್‌ಕುಮಾರ್ ಜಿ., ವಿಕ್ರಂ ಕಾಂತಿಕೆರೆ, ಕೆ.ಎನ್.ರಾಘವೇಂದ್ರ (ಶೃಂಗೇರಿ).

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 29-3-2001

- **ಜಿಎಸ್‌ಎಲ್‌ವಿ: ಕಡೇ ಘಳಿಗೆಯಲ್ಲಿ ವಿಫಲ**

ಶ್ರೀಹರಿಕೋಟಾ, ಮಾ.28– (ಪಿಟಿಐ, ಯುಎನ್‌ಐ): ದೇಶೀಯವಾಗಿ ಅಭಿವೃದ್ಧಿ ಪಡಿಸಿದ ಮೊಟ್ಟ ಮೊದಲ ಭೂ ಸ್ಥಿರ ಉಪಗ್ರಹ ಉಡಾವಣ ವಾಹನ (ಜಿಎಸ್‌ಎಲ್‌ವಿ)ದ ಪ್ರಥಮ ಉಡಾವಣೆ ಇಂದು ವಿಫಲವಾಗುವುದರೊಂದಿಗೆ ಭಾರತದ ಬಾಹ್ಯಕಾಶ ಕಾರ್ಯಕ್ರಮಕ್ಕೆ ಹಿನ್ನಡೆ ಉಂಟಾಗಿದೆ.

ಜಿಎಸ್‌ಎಲ್‌ವಿ ಉಡಾವಣೆ ಕೊನೆಯ ಹಂತ ತಲುಪಿದಾಗ, ವಾಹನದ ಹಿಂಭಾಗದಲ್ಲಿ ಕೆಂಪು–ಕೇಸರಿ ಮಿಶ್ರಿತ ಬೆಂಕಿಯ ಜ್ವಾಲೆಗಳು ಹೊಮ್ಮಿದ್ದು ಪ್ರಯೋಗ ವಿಫಲವಾಗಲು ಕಾರಣವಾಯಿತು. ಜಿಎಸ್‌ಎಲ್‌ವಿ–1ಡಿ ವಾಹನ ಜಿಎಸ್‌ಎಟಿ–1 ಪ್ರಾಯೋಗಿಕ ಉಪಗ್ರಹವನ್ನು ಹೊತ್ತೊಯ್ಯಬೇಕಾಗಿತ್ತು.

75 ವರ್ಷಗಳ ಹಿಂದೆ

ಗುರುವಾರ, 29-3-1951

- **ಕಾಶ್ಮೀರ ಭಾರತ ರಾಷ್ಟ್ರದ ಅಂಗವೆಂಬುದು ನ್ಯಾಯಸಮ್ಮತ**

ನವದೆಹಲಿ, ಮಾ.28– ಈಗ ಭದ್ರತಾ ಸಮಿತಿಯ ಮುಂದಿರುವ ಕಾಶ್ಮೀರ ಕುರಿತ ಆಂಗ್ಲೊ– ಅಮೆರಿಕ ನಿರ್ಣಯವನ್ನು ಪ್ರಧಾನಿ ಪಂಡಿತ್ ನೆಹ್ರೂರವರು ಇಂದು ಸ್ಪಷ್ಟ ಭಾಷೆಯಲ್ಲಿ ಖಂಡಿಸಿದರು.

ಪಾರ್ಲಿಮೆಂಟಿನಲ್ಲಿ ವಿದೇಶಾಂಗ ಶಾಖೆಯನ್ನು ಕುರಿತ ಚರ್ಚಾಕಾಲದಲ್ಲಿ ಪ್ರಧಾನಿಗಳು ಮಧ್ಯೆ ಬಾಯಿ ಹಾಕಿ ಇಡೀ ನಿರ್ಣಯದ ತಾತ್ವಿಕ ತಳಹದಿಯೇ ತಪ್ಪು, ದೃಷ್ಟಿಕೋನದ ಮೇಲೆ ಅವಲಂಬಿತವಾದುದು ಎಂದು ಸಾರಿದರು. ಆ ನಿರ್ಣಯದ ಪರಿಣಾಮ ಯಾವುದನ್ನೂ ಭಾರತ ಒಪ್ಪಿಕೊಳ್ಳಲಾರದೆಂದರು. ಕಾಶ್ಮೀರ ನ್ಯಾಯರೀತ್ಯ, ರಾಜಕೀಯ ರೀತ್ಯ ಭಾರತ ರಾಷ್ಟ್ರದ ಒಂದಂಗ ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

29 ಮಾರ್ಚ್ 2026 ಭಾನುವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಏಕಾದಶಿ ಗಂ. 7-47 **ನಕ್ಷತ್ರ:** ಆಶ್ಲೇಷ ಗಂ. 14-38 **ಯೋಗ:** ಧೃತಿ ಗಂ. 18-20 **ಕರಣ:** ವಿಷ್ಟಿ ಗಂ 7-47 ಮೀನ ಮಾಸದ 14 ನೇ ದಿನ. **ಮಳೆ ನಕ್ಷತ್ರ:** ಉತ್ತರಾಭಾದ್ರ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00 **ಸೂರ್ಯೋದಯ:** 06-32 **ಸೂರ್ಯಾಸ್ತ:** 06-39 ಮುಸ್ಲಿಂ ದಿನಾಂಕ : 9 ಶವ್ವಾಲ್ ದಿನ ವಿಶೇಷ : ಪಾಮ್ ಸಂಡೆ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ : 8, 1

ಮೇಷ: ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿ ಸಂಬಂಧ ಕೂಡಿ ಬರುವುದು. ಅತಿಯಾದ ಭಯದ ವಾತಾವರಣ ಕೆಲಸಕ್ಕೆ ಅಡ್ಡಿ ಉಂಟುಮಾಡುವುದು. ಗುರುಗಳ ಸ್ಮರಣೆಯು ಚೈತನ್ಯವನ್ನು ನೀಡುವುದು.

ವೃಷಭ: ಕೇವಲ ಸುಖ, ಹಣ ಸಂಪಾದನೆಯಲ್ಲ, ಮನುಷ್ಯತ್ವದ ಬಗ್ಗೆಯೂ ನಿಮ್ಮ ಆಲೋಚನೆ, ಮನಸ್ಥಿತಿ ಇರಲಿ. ನಿಮ್ಮ ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ನಡೆಸಬೇಕಾಗುವುದು. ವಾಹನ ಕೊಳ್ಳುವವರಿಗೆ ಸುಕಾಲ.

ಮಿಥುನ: ಸಿಹಿ ಪದಾರ್ಥಗಳ ತಯಾರಕರಿಗೆ ಹೆಸರಾಂತ ಸಂಸ್ಥೆಯಲ್ಲಿ ಕೆಲಸ ಮಾಡುವ ಕಾಲ ಒದಗಿಬರಲಿದೆ. ಸೇವಿಸುವ ಆಹಾರದಲ್ಲಿನ ವಿಷ ಪದಾರ್ಥದಿಂದಾಗಿ ಚರ್ಮಕ್ಕೆ ಸಂಬಂಧಿಸಿದಂತೆ ಅನಾರೋಗ್ಯ ಉಂಟಾಗಬಹುದು.

ಕರ್ಕಾಟಕ: ಇನ್ನೊಬ್ಬರಿಗೆ ಉಪಕಾರ ಮಾಡಲು ಹೋಗಿ ನೀವು ಸಮಸ್ಯೆಯಲ್ಲಿ ಸಿಲುಕುವಂತೆ ಆಗಬಹುದು, ಜೋಪಾನವಾಗಿರಿ. ಪೋಷಕರಿಂದ ಅಥವಾ ಹಿರಿಯರಿಂದ ಯಾವುದೇ ವಿಷಯಗಳನ್ನು ಮುಚ್ಚಿಡುವುದು ಸರಿಯಲ್ಲ.

ಸಿಂಹ: ನಿಮ್ಮ ವೃತ್ತಿಯಲ್ಲಿ ಈಗಾಗಲೇ ಅತ್ಯಂತ ಯಶಸ್ಸು ಗಳಿಸಿರುವವರೊಂದಿಗೆ ಸಂಪರ್ಕ ಸಾಧಿಸುವ ನಿಮ್ಮ ಪ್ರಯತ್ನ ಯಶಸ್ವಿಯಾಗುತ್ತದೆ. ಆಪ್ತರೊಬ್ಬರ ನೆರವು ದೊರೆತು ಮಗನ ವಿದ್ಯಾಭ್ಯಾಸಕ್ಕೆ ಅಥವಾ ವಸತಿಗೆ ಸಹಾಯವಾಗಲಿದೆ.

ಕನ್ಯ: ವಾಹನ ಚಾಲಕ ವೃತ್ತಿಯವರಿಗೆ ಅಧಿಕ ಒತ್ತಡ ದೇಹಕ್ಕೆ ಆಯಾಸ ಮಾಡಲಿದೆ. ವಿದ್ಯುತ್ ವಲಯದ ಕಾರ್ಮಿಕರು ಎಚ್ಚರದಿಂದ ಕಾರ್ಯನಿರ್ವಹಿಸಿ. ಶೀತಬಾಧೆಯಂತಹ ಸಮಸ್ಯೆಯಿಂದಾಗಿ ಆಲಸ್ಯತನ ಹೆಚ್ಚಾಗುವುದು.

ತುಲಾ: ಸಣ್ಣ ಕೈಗಾರಿಕೆಯವರಿಗೆ ಉತ್ತಮ ಸಮಯದ ಜೊತೆ ಸೌಲಭ್ಯವನ್ನು ಪಡೆಯುವ ಪ್ರಯತ್ನ ನಡೆಸಬಹುದು. ರಾಜಕೀಯ ರಂಗಕ್ಕೆ ಸಂಬಂಧಿಸಿದಂತೆ ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣ ಇರುವುದು.

ವೃಶ್ಚಿಕ: ಧಾರ್ಮಿಕ ಕಾರ್ಯಗಳಲ್ಲಿ ನಿಮ್ಮ ಹಣವನ್ನು ತೊಡಗಿಸುವಂತಹ ಮನಸ್ಸು ಉಂಟಾಗಲಿದೆ. ಹೊಸ ವ್ಯಾಪಾರ ಆರಂಭಿಸುವ ಬಗ್ಗೆ ತಿಳಿದವರೊಂದಿಗೆ, ಮನೆಯವರೊಂದಿಗೆ ಚರ್ಚಿಸಿ ನಂತರ ತೀರ್ಮಾನಕ್ಕೆ ಬನ್ನಿ.

ಧನು: ಖರ್ಚು ವೆಚ್ಚಗಳಲ್ಲಿ ಮಿತ ವ್ಯಯ ಸಾಧಿಸಲು ಪ್ರಯತ್ನಿಸಿ ಹಾಗು ಋಣ ಮುಕ್ತರಾಗಲು ಶ್ರಮಿಸಿ. ಇನ್ನೊಬ್ಬರ ಹಣ, ವಸ್ತುವನ್ನು ನೀವು ಇಟ್ಟುಕೊಳ್ಳುವುದು ನಿಮ್ಮಿಬ್ಬರಲ್ಲಿರುವ ವಿಶ್ವಾಸವನ್ನು ಹಾಳುಮಾಡಬಹುದು.

ಮಕರ: ನಿಮ್ಮ ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತವಾದ ಸಮಯ. ರಾಸಾಯನಿಕ ಪದಾರ್ಥಗಳ ಮಾರಾಟಗಳಿಂದ ಆದಾಯ ಸಮಸ್ಯೆ ಎದುರಾಗಬಹುದು. ಮಗನ ವ್ಯವಹಾರಕ್ಕೆ ಸಂಬಂಧಿಸಿದ ಶುಭ ಸುದ್ದಿ ಬರಲಿದೆ.

ಕುಂಭ: ಇನ್ನೊಬ್ಬರ ಮಾತುಗಳನ್ನು ನಂಬಿ ಯಾವುದೇ ದಾಖಲೆಗಳಿಲ್ಲದೆ ವ್ಯವಹಾರ ಮಾಡುವುದು ನಿಮ್ಮ ಮೂರ್ಖತನದ ಪ್ರದರ್ಶನವಾದಂತೆ ಆಗುವುದು. ಕುಟುಂಬ ವರ್ಗದವರಲ್ಲಿ ಆರೋಗ್ಯ ಉತ್ತಮವಾಗಿ ಇರುವುದು.

ಮೀನ: ನಿಮ್ಮ ನಿಜವಾದ ಗೆಳೆಯ ಯಾರೆಂಬುವುದು ಸಂದರ್ಭಗಳು ನಿಮಗೆ ತಿಳಿಸಲಿದೆ. ತಂದೆ ತಾಯಿ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯ ನಡೆಸುವಿರಿ. ಕುಶಲಕರ್ಮಿಗಳಿಗೆ ಪರಸ್ಥಳದವರಿಂದ ಬೇಡಿಕೆ ಹೆಚ್ಚಲಿದೆ.

ಪದಬಂಧ 6357


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಒಪ್ಪವಾಗಿ ರಾಗದಿಂದ ಮೂಡಿರುವ ಒಲವು (4)
5.ಸೀತೆಯನ್ನು ಕದ್ದೊಯ್ದ ಲಂಕಾಧಿಪತಿ (3)
6.ತಾಯಿಯ ಮನೆಯಲ್ಲಿನ ಕಿಟಕಿ (4)
8.ಗುಡಿಸಲ ಬಳಿಯಿರುವ ಜಲಪಾತ (4)
12.ಮಂದಿಯ ಒಳಿತು (4)
14.ಇದು ಬೇರೆಯವರ ದುಡ್ಡು (4)
15.ಜನರು ನೀಡಿದ ಕಾಣಿಕೆ! (3)
16.ಹಣ್ಣಿನಿಂದ ಮಾಡಿರುವ ಖಾದ್ಯ (4)

ಮೇಲಿಂದ ಕೆಳಕ್ಕೆ

1.ಕನ್ನೆಗೆ ಗಂಡನ್ನು ಹುಡುಕುವುದು (5)
2.ಈತ ಒಳ್ಳೆಯ ಸ್ವಭಾವದವನು (4)
3.ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)
4.ಸುಲಭವಲ್ಲದುದು ಇದು (3)
7.ಯಮನ ಸಹೋದರಿ (2)
9.ಸಂಭಾವಿತ ಮನುಷ್ಯ (3)
10.ಮೆಲ್ಲನೆ ಬೀಸುವ ಗಾಳಿ (5)
11.ಏಳು ದಿನಗಳ ಅವಧಿ (2)
12.ಮಂದಿಯ ಮನಸ್ಸು (4)
13.ಮಗ್ನತೆಯನ್ನು ಹೀಗೆ ಹೇಳಿ (4)
14.ಇದು ಉತ್ತರದವರ ವೇತನ (3)



6356ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರದಾಟ 3.ಪರ್ಣಕುಟಿ 5.ಮರವೆ 6.ಹಣವಂತ 8.ತಭೂ 9.ಲೋಪ 10.ಮಿತವ್ಯಯ 12.ನಸರಿ 16.ಕಡುಕೋಪ 17.ಅಂಕವಣೆ

ಮೇಲಿಂದ ಕೆಳಕ್ಕೆ: 1.ಪದ್ಯ 2.ದಾತಾರ 3.ಪರಾಯಣ 4.ಟಿಕ 5.ಮರುಭೂಮಿ 6.ಹರೆಯ 7.ತಲೋದರಿ 11.ವ್ಯರ್ಥಾಲಾಪ 13. ಸರೀಕ 14.ಕಂಠ 15.ಪಾಣಿ

ಸುಡೊಕು 6741

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2		9			8		7
4		8						
	9					6		4
	5		7				6	
				9				2
2		3			4		7	
7								6
	1		2		9		4	
6		2				9		5

6740 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜ್ಯದ ವಿವಿಧೆಡೆ ಧಾರಾಕಾರ ಮಳೆ

ದ. ಕ, ಮೈಸೂರು, ಚಿಕ್ಕಮಗಳೂರಿನಲ್ಲಿ ಆಲಿಕಲ್ಲು ಸಹಿತ ಆರ್ಭಟಿಸಿದ ವರುಣ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವಿವಿಧೆಡೆ ಶನಿವಾರ ಗುಡುಗು ಸಿಡಿಲಿನಿಂದ ಕೂಡಿದ ಮಳೆಯಾಗಿದೆ. ಕರಾವಳಿಯಲ್ಲಿ ಎರಡು ವಾರಗಳಿಂದ ಈಚೆಗೆ ಉಷ್ಣಾಂಶ ಹೆಚ್ಚಳವಾಗಿತ್ತು. ಜನರು ಸೆಖೆಯಿಂದ ಬಸವಳಿದಿದ್ದರು. ಕೆಲವೆಡೆ ಮಳೆ ಜೊತೆ ಆಲಿಕಲ್ಲುಗಳು ಬಿದ್ದಿವೆ.

ಮಂಗಳೂರು ನಗರದಲ್ಲಿ ಸಂಜೆ ಉತ್ತಮ ಮಳೆ ಸುರಿಯಿತು. ಬೆಳ್ತಂಗಡಿ, ಉಜಿರೆ, ಧರ್ಮಸ್ಥಳ, ಮುಂಡಾಜೆ, ಅಳದಂಗಡಿ, ಗುರುವಾಯನಕೆರೆ ಸುತ್ತಮುತ್ತ ಮಧ್ಯಾಹ್ನ 3 ಗಂಟೆ ಶುರುವಾದ ಮಳೆ ಸಂಜೆವರೆಗೂ ಸುರಿಯಿತು. ಬೆಳ್ತಂಗಡಿ ಪಟ್ಟಣದ ಸಂತೆಕಟ್ಟೆಯಲ್ಲಿ ರಿಕ್ಷಾ ನಿಲ್ದಾಣದ ಚಾವಣಿ ಬಿದ್ದು ಕೆಲವು ಆಟೊರಿಕ್ಷಾಗಳಿಗೆ ಭಾಗಶಃ ಹಾನಿ ಉಂಟಾಗಿದೆ. ತೆಂಕಕಾರಂದೂರು ಗ್ರಾಮದ ಪೆರೊಡಿತ್ತಾಯನ ಕಟ್ಟೆ ಪರಿಸರದಲ್ಲಿ 20ಕ್ಕೂ ಹೆಚ್ಚು ಮನೆಗಳ ಮೇಲೆ ಮರಗಳು ಬಿದ್ದಿವೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕೊಟ್ಟಿಗೆಹಾರ, ಬಣಕಲ್ ಸುತ್ತಮುತ್ತ ಗುಡುಗು, ಸಿಡಿಲು ಸಹಿತ ಸುರಿದ ಭಾರಿ ಮಳೆ ಒಂದು ಗಂಟೆಗೂ ಹೆಚ್ಚು ಕಾಲ ಆರ್ಭಟಿಸಿತು. ಮೂಡಿಗೆರೆ ಬಸ್ ನಿಲ್ದಾಣದ ಆವರಣದಲ್ಲಿ ಎರಡು ಮರದ ಕೊಂಬೆಗಳು ಮುರಿದು ಬೈಕ್‌ಗಳ ಮೇಲೆ ಬಿದ್ದಿವೆ. ಪರಿಮಳಮ್ಮ ದೇವಾಲಯದ ಬಳಿ ಮರ ಬಿದ್ದು ಕಾರು ಜಖಂಗೊಂಡಿದೆ. ಬಿಳಗುಳದ ಬಳಿ ತೆಂಗಿನ ಮರವೊಂದು ರಾಷ್ಟ್ರೀಯ ಹೆದ್ದಾರಿ ಮೇಲೆ ಬಿದ್ದು ಕೆಲಕಾಲ ಸಂಚಾರಕ್ಕೆ ಅಡಚಣೆಯಾಗಿತ್ತು. ಕಡೂರು, ಕಳಸ, ಕೊಪ್ಪ, ನರಸಿಂಹ ರಾಜಪುರದಲ್ಲಿ ಮಳೆಯಾಗಿದೆ.

ಮೈಸೂರು ವರದಿ: ಮೈಸೂರು ನಗರದಾದ್ಯಂತ ಗುಡುಗು ಸಹಿತ ಮಳೆಯಾಗಿದೆ.



ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಪಟ್ಟಣದ ಬಿಳಗುಳದಲ್ಲಿ ರಾಷ್ಟ್ರೀಯ ಹೆದ್ದಾರಿ ಮೇಲೆ ತೆಂಗಿನ ಮರಬಿದ್ದು ವಾಹನ ಸಂಚಾರಕ್ಕೆ ಶನಿವಾರ ಅಡ್ಡಿ ಉಂಟಾಗಿತ್ತು

ತುಂಗಭದ್ರಾ: 21 ಗೇಟ್ ಅಳವಡಿಕೆ ಪೂರ್ಣ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ 21 ಗೇಟ್‌ಗಳಲ್ಲಿ ಹೊಸ ಕ್ರೆಸ್ಟ್‌ಗೇಟ್ ಅಳವಡಿಸಲಾಗಿದೆ. ಏಳು ಗೇಟ್‌ಗಳ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ.

‘ಅಣೆಕಟ್ಟೆಯಲ್ಲಿ ಒಟ್ಟು 33 ಗೇಟ್‌ಗಳಿವೆ. ಹಳೆಯ 29 ಗೇಟ್‌ಗಳನ್ನು ಸಂಪೂರ್ಣವಾಗಿ ಬಿಚ್ಚಿ ತೆಗೆಯುವ ಕೆಲಸ ಪೂರ್ಣಗೊಂಡಿದೆ.

ಈ ತಿಂಗಳ ಒಳಗೆ 23 ಗೇಟ್‌ಗಳನ್ನು ಅಳವಡಿಕೆ ಮಾಡುವ ಕಾರ್ಯ ಪೂರ್ಣಗೊಳ್ಳಲಿದೆ. ಏಪ್ರಿಲ್ ಅಂತ್ಯದ ವೇಳೆಗೆ ಬಹುತೇಕ ಗೇಟ್‌ಗಳ ಅಳವಡಿಕೆ ಪ್ರಕ್ರಿಯೆ ಅಂತಿಮ ಹಂತಕ್ಕೆ ತಲುಪಲಿದೆ’ ಎಂದು ತುಂಗಭದ್ರ ಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ಕೊಡಗು: ಕೆಲವೆಡೆ ಬಿರುಸಿನ ಮಳೆ

ಮಡಿಕೇರಿ: ಕುಶಾಲನಗರ ಸೇರಿದಂತೆ ಕೊಡಗು ಜಿಲ್ಲೆಯ ಕೆಲವೆಡೆ ಶನಿವಾರ ಬಿರುಸಿನ ಮಳೆಯಾಗಿದೆ.

ಮೂರ್ನಾಡು ಸುತ್ತಮುತ್ತಲ ಪ್ರದೇಶಗಳಲ್ಲಿ ಬಿರುಸಾದ ಮಳೆ ಸುರಿಯಿತು.

ಬೆಟ್ಟದಪುರ ವರದಿ: ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಗ್ರಾಮ ಸೇರಿದಂತೆ ಹೋಬಳಿಯ ವಿವಿಧ ಗ್ರಾಮಗಳಲ್ಲಿ ಶನಿವಾರ ಸಂಜೆ ಗುಡುಗು– ಸಿಡಿಲು ಸಹಿತ ಸಾಧಾರಣ ಮಳೆ ಸುರಿಯಿತು.

ಬೆಟ್ಟದಪುರ–ಪಿರಿಯಾಪಟ್ಟಣ ಮುಖ್ಯರಸ್ತೆಯ ಪೆಟ್ರೋಲ್ ಬಂಕ್ ಸಮೀಪದ ತೆಂಗಿನ ಮರಕ್ಕೆ ಸಿಡಿಲು ಬಡಿದು ಬೆಂಕಿ ಹೊತ್ತಿಕೊಂಡಿತ್ತು.

‘ಸೆಮಿಕಂಡಕ್ಟರ್: ಕೇಂದ್ರದಿಂದ ತಾರತಮ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆ, ನೀರಾವರಿ ಸೌಲಭ್ಯ ಮತ್ತು ಉತ್ಕೃಷ್ಟ ಸಂಸ್ಥೆಗಳ ಸ್ಥಾಪನೆ ವಿಚಾರದಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ತಾರತಮ್ಯ ಮಾಡುತ್ತಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಆರೋಪಿಸಿದ್ದಾರೆ.



ಎಂ.ಬಿ ಪಾಟೀಲ

ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಅವರು ತಮ್ಮ ‘ಎಕ್ಸ್’ ಪೋಸ್ಟ್‌ನಲ್ಲಿ, ‘ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರದಲ್ಲಿ ನಾವು ಅದೇ ಹಳೆಯ ಕತೆಗಳನ್ನು ಕೇಳುತ್ತಿದ್ದೇವೆ. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಿತ್ತು. ಈಗಿನ ಸರ್ಕಾರ ಮಂಡಳಿಯನ್ನು ಸಕ್ರಿಯಗೊಳಿಸಿ, ಅನುದಾನ ನೀಡಬೇಕು. ಈ ಭಾಗದ ಅಭಿವೃದ್ಧಿಗೆ ನೀರಾವರಿ ಸೌಲಭ್ಯ ವಿಸ್ತರಣೆ, ಉನ್ನತ ಮಟ್ಟದ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ ಮತ್ತು ಕೈಗಾರಿಕಾ ಬೆಳವಣಿಗೆ ಅಗತ್ಯ’ ಎಂದಿದ್ದರು.

ಈ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಪಾಟೀಲ, ‘ರಾಜ್ಯದಲ್ಲಿ 59 ಅತೀ ಹಿಂದುಳಿದ ತಾಲ್ಲೂಕುಗಳಿದ್ದು, ಅಷ್ಟೂ ತಾಲ್ಲೂಕುಗಳು ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದಲ್ಲೇ ಇರುವುದು ವಾಸ್ತವ. ಈ ತಾಲ್ಲೂಕುಗಳ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ’ ಎಂದಿದ್ದಾರೆ.

‘ಬೆಲ್ಲದ ಅವರು ತಮ್ಮ ಪಕ್ಷದ ಸಂಸದರ ಮತ್ತು ಹಿರಿಯ ನಾಯಕರ ನಿಯೋಗವನ್ನು ದೆಹಲಿಗೆ ಕೊಂಡೊಯ್ದು, ಉತ್ತರ ಕರ್ನಾಟಕದ ಯಾವುದೇ ಭಾಗದಲ್ಲಾದರೂ ಸೆಮಿಕಂಡಕ್ಟರ್ ಉದ್ಯಮ ಬರಲು ಸಹಕರಿಸಬೇಕು. ಇದಕ್ಕೆ ನಮ್ಮ ಸಹಕಾರವೂ ಇರಲಿದೆ’ ಎಂದು ಅವರು ತಿಳಿಸಿದರು.

ಕರಗ ಶಕ್ತ್ಯುತ್ಸವಕ್ಕೆ ಸಕಲ ಸಿದ್ಧತೆ

ಬೆಂಗಳೂರು: ಏ. 1ರಂದು ನಡೆಯುವ ಕರಗ ಶಕ್ತ್ಯುತ್ಸವ ಮತ್ತು ಮಹಾರಥೋತ್ಸವದಲ್ಲಿ ಲಕ್ಷಾಂತರ ಜನರು ಭಾಗವಹಿಸಲಿದ್ದಾರೆ. ಅದಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ತಿಗಳರಪೇಟೆಯಲ್ಲಿರುವ ಧರ್ಮರಾಯಸ್ವಾಮಿ ದೇವಾಲಯದ ಕರಗ ಮಹೋತ್ಸವದ ಕುರಿತು ಶನಿವಾರ ವಿಶೇಷ ಸಭೆ ನಡೆಸಿ, ಸಿದ್ಧತೆಗಳನ್ನು ಪರಿಶೀಲಿಸಿದ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಶೋಭಾ ಕರಂದ್ಲಾಜೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕ ಉದಯ ಗರುಡಾಚಾರ್, ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಉತ್ಸವವನ್ನು ಅಚ್ಚುಕಟ್ಟಾಗಿ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ದೇವಾಲಯದಲ್ಲಿ ಪೂಜಾ-ಕೈಂಕರ್ಯಗಳನ್ನು ವ್ಯವಸ್ಥಿತವಾಗಿ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಪ್ರತಿ ದಿನ ದೇವಾಲಯದಲ್ಲಿ ಹಿಂದಿನಿಂದಲೂ ನಡೆಸಿಕೊಂಡು ಬಂದಿರುವ ಸಂಪ್ರದಾಯಗಳಿಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ಕರಗ ಮಹೋತ್ಸವ ಆಚರಿಸಲಾಗುತ್ತಿದೆ. ವಿವಿಧ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿರುವ ಕುಟುಂಬಗಳು ಮತ್ತು ಜನಾಂಗದ ಮುಖಂಡರು ಸಹಕಾರ ನೀಡುತ್ತಿದ್ದಾರೆ ಎಂದು ಹೇಳಿದರು.

ಸರ್ಕಾರದ ಇತ್ತೀಚಿನ ಮಾರ್ಗಸೂಚಿ ಅನ್ವಯ ಕರಗ ಉತ್ಸವದ ಪ್ರಾರಂಭದಿಂದ ಮುಕ್ತಾಯದವರೆಗೆ ಪ್ರತಿ ದಿನ ನಡೆಯುವ ಕಾರ್ಯಕ್ರಮಗಳ ವಿವರಗಳನ್ನು ಅಂತಿಮಗೊಳಿಸಿ ಪೊಲೀಸ್ ಇಲಾಖೆಗೆ ಒದಗಿಸಲಾಗಿದೆ ಎಂದರು.

ದೇವಾಲಯದ ಹೊರ ಆವರಣದಲ್ಲಿ ಅಗತ್ಯವಿರುವ ವ್ಯವಸ್ಥೆಗಳನ್ನು ಜಿಬಿಎಗೆ ವಹಿಸಲಾಗಿದೆ. ಪ್ರಮುಖ ರಸ್ತೆಗಳು, ಸರ್ಕಲ್‌ಗಳು, ಜಿಬಿಎ/ಕೇಂದ್ರ ನಗರ ಪಾಲಿಕೆ ಮುಖ್ಯ ಕಚೇರಿ, ದೇವಾಲಯದ ಸುತ್ತ ಮುತ್ತ ಪ್ರದೇಶಗಳು, ಹಳೆ ಸಿಟಿ ಪ್ರದೇಶ, ಸಂಪಂಗಿ ಟ್ಯಾಂಕ್ ಸೇರಿ ಪ್ರಮುಖ ರಸ್ತೆಗಳಲ್ಲಿ ವಿಶೇಷ ದೀಪಾಲಂಕಾರ ಮಾಡಲಾಗುವುದು. ಕರಗ ಹೊರಡುವ ರಸ್ತೆಗಳಲ್ಲಿ ಗುಂಡಿಗಳು ಮುಚ್ಚಲು ಕ್ರಮಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಕಸ ಆಗಿಂದಾಗೆ ವಿಲೇವಾರಿ

ಸುಗಮ ಸಂಚಾರದ ವ್ಯವಸ್ಥೆ, ಕಾನೂನು ಮತ್ತು ಸುವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲು ಹೆಚ್ಚಿನ ಪ್ರಮಾಣದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಕರಗ ಹೊರಡುವ ಮತ್ತು ಹಿಂದಿರುಗುವ ರಸ್ತೆಗಳಲ್ಲಿ ಸಂಗ್ರಹಣೆಯಾಗುವ ಕಸವನ್ನು ಆಗಿಂದಾಗೆ ವಿಲೇವಾರಿ ಮಾಡಲು ಕ್ರಮ ವಹಿಸಲಾಗಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

ಶಾಸಕ ಪ್ರದೀಪ್ ಈಶ್ವರ್‌ಗೆ ಪೊರಕೆ ಪ್ರದರ್ಶನ

ಪರಸ್ಪರ ನಿಂದಿಸಿಕೊಂಡ ಕಾಂಗ್ರೆಸ್ – ಬಿಜೆಪಿ ಕಾರ್ಯಕರ್ತರು

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಗರದಲ್ಲಿ ಶನಿವಾರ ಕಾಂಗ್ರೆಸ್ ಹಮ್ಮಿಕೊಂಡಿದ್ದ ಉಪಚುನಾವಣೆ ಪ್ರಚಾರ ರ‍್ಯಾಲಿಗೆ ಬಿಜೆಪಿ ಕಾರ್ಯಕರ್ತರು ಅಡ್ಡಿಪಡಿಸಿದ್ದಲ್ಲದೆ, ಚಿಕ್ಕಬಳ್ಳಾಪುರದ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಅವರಿಗೆ ಚಪ್ಪಲಿ, ಪೊರಕೆ ಹಾಗೂ ಬಳೆ ಪ್ರದರ್ಶಿಸಿದರು.

ಪಕ್ಷದ ನಾಯಕರನ್ನು ಟೀಕಿಸಿದ್ದ ಪ್ರದೀಪ್ ಈಶ್ವರ್ ಅವರಿಗೆ ಬಿಜೆಪಿ ಮುಖಂಡ ಬಿ.ಜಿ. ಅಜಯ್‌ಕುಮಾರ್ ಅವರು, 'ತಾಕತ್ತಿದ್ದರೆ ದಾವಣಗೆರೆಗೆ ಬಂದು ನೋಡಿ' ಎಂದು ಸವಾಲು ಎಸೆದಿದ್ದರು. ಆ ಸವಾಲು ಸ್ವೀಕರಿಸಿದ ಪ್ರದೀಪ್ ಈಶ್ವರ್, 'ಬಿಜೆಪಿ ಕಚೇರಿಗೇ ಬರುತ್ತೇನೆ' ಎಂದು ತಿರುಗೇಟು ನೀಡಿ, ಕೆ.ಬಿ. ಬಡಾವಣೆಯ ರಾಘವೇಂದ್ರ ಸ್ವಾಮಿ ಮಠದ ಬಳಿ ಇರುವ ಬಿಜೆಪಿ ಕಚೇರಿ ಎದುರೇ ರ‍್ಯಾಲಿ ಮೂಲಕ ಸಾಗಿದ ವೇಳೆಯಲ್ಲಿ ಅವರಿಗೆ ಅಡ್ಡಿಪಡಿಸಲಾಯಿತು.

ರ‍್ಯಾಲಿ ವೇಳೆ ಎರಡೂ ಪಕ್ಷಗಳ ಕಾರ್ಯಕರ್ತರು ಮುಖಾಮುಖಿಯಾದರು. ಆಗ ಬಿಜೆಪಿ ಬೆಂಬಲಿಗರು ಶಾಸಕ ಪ್ರದೀಪ್ ಈಶ್ವರ್ ಅವರಿಗೆ ಚಪ್ಪಲಿ, ಪೊರಕೆ ಪ್ರದರ್ಶಿಸಿದರು. ಅವರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದರು. ಕಾರಿನ ಮೇಲೆ ನಿಂತಿದ್ದ ಪ್ರದೀಪ್ ಈಶ್ವರ್ ಬಿಜೆಪಿ ಕಾರ್ಯಕರ್ತರಿಗೆ ಸವಾಲು ಹಾಕುವ ರೀತಿಯಲ್ಲಿ ತೋಳ್ತಟ್ಟಿದರು. ಇದರಿಂದ ಮತ್ತಷ್ಟು ಕೆರಳಿದ ಬಿಜೆಪಿ ಬೆಂಬಲಿಗರು ನಿಂದಿಸಿದರು. 'ಗೋ ಬ್ಯಾಕ್ ಪ್ರದೀಪ್ ಈಶ್ವರ್' ಎಂದು ಘೋಷಣೆ ಕೂಗಿದರು.

ಈ ವೇಳೆ ವ್ಯಕ್ತಿಯೊಬ್ಬರು ಎಸೆದ ಶೂ ಕಾರಿನ ಬಳಿ ಬಿತ್ತು. ಪೊಲೀಸರು ಎರಡೂ ಪಕ್ಷಗಳ ಬೆಂಬಲಿಗರನ್ನು ನಿಯಂತ್ರಿಸಿದರು. ಬಳಿಕ ಕೆ.ಬಿ. ಬಡಾವಣೆಯ ರಾಘವೇಂದ್ರ ಸ್ವಾಮಿ ಮಠದವರೆಗೆ ರ‍್ಯಾಲಿ ನಡೆಯಿತು. ಬಳಿಕ ಕಾಂಗ್ರೆಸ್ ಕಾರ್ಯಕರ್ತರು ಪ್ರದೀಪ್ ಈಶ್ವರ್‌ಗೆ ಹೂಮಳೆ ಸುರಿಸಿದರು.


ದಾವಣಗೆರೆಯಲ್ಲಿ ಕಾಂಗ್ರೆಸ್ ಪಕ್ಷ ಶನಿವಾರ ಏರ್ಪಡಿಸಿದ್ದ ಪ್ರಚಾರ ರ‍್ಯಾಲಿ ವೇಳೆ ಶಾಸಕ ಪ್ರದೀಪ್ ಈಶ್ವರ್ ಅವರಿಗೆ ಬಿಜೆಪಿ ಕಾರ್ಯಕರ್ತರು ಪೊರಕೆ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ

ಪ್ರಚಾರಕ್ಕಾಗಿ ಕಾಂಗ್ರೆಸ್‌ನವರೇ ಚಪ್ಪಲಿ ತೋರಿಸಿದ್ದಾರೆ. ಪ್ರದೀಪ್ ಈಶ್ವರ್ ಇಡೀ ಬಿಜೆಪಿಗೆ ಅವಮಾನ ಮಾಡಿದರೆ ನೋಡಿಕೊಂಡು ಸುಮ್ಮನೆ ಕೂರಬೇಕಾ? ಇಷ್ಟೆಲ್ಲ ಹೈಡ್ರಾಮಕ್ಕೆ ಅವರೇ ಕಾರಣ
ಬಿ.ಜಿ. ಅಜಯ್‌ಕುಮಾರ್, ಬಿಜೆಪಿ ಮುಖಂಡ



'ಚಪ್ಪಲಿ ತೋರಿಸುವುದು ಬಿಜೆಪಿ ಸಂಪ್ರದಾಯ'

'ಕಾಂಗ್ರೆಸ್‌ನಲ್ಲಿ ಹೊಸ ಪೀಳಿಗೆ ಬಂದಿದೆ. ತೊಡೆ ತಟ್ಟುವಾಗ ತೊಡೆ ಗಟ್ಟಿ ಇದೆಯಾ ಎಂಬ ಎಚ್ಚರಿಕೆ ಇರಬೇಕು. ಬಿಜೆಪಿಯವರು ದಾವಣಗೆರೆಗೆ ಬಾ ಎಂದು ಸವಾಲು ಹಾಕಿದ್ದರು. ಬಿಜೆಪಿ ಕಚೇರಿ ಎದುರೇ ಬಂದಿದ್ದೇನೆ. ಅವರಿಂದ ಏನೂ ಮಾಡಲು ಸಾಧ್ಯವಾಗಲಿಲ್ಲ' ಎಂದು ಶಾಸಕ ಪ್ರದೀಪ್ ಈಶ್ವರ್ ನಂತರ ಸುದ್ದಿಗಾರರಿಗೆ ತಿಳಿಸಿದರು.

'ಹಿಂದುಳಿದ ಸಮುದಾಯಕ್ಕೆ ಸೇರಿರುವ ನನಗೆ ಬಿಜೆಪಿಯವರು ಚಪ್ಪಲಿ, ಪೊರಕೆ ತೋರಿಸಿದ್ದಾರೆ. ಇದೇ ಬಿಜೆಪಿಯ ಸಂಪ್ರದಾಯ' ಎಂದರು.

'10 ವರ್ಷದಿಂದ ಬಿಜೆಪಿ ಶಾಸಕರು ಸಚಿವರು, ಸಂಸದರು ಮುಸ್ಲಿಂ ಮಹಿಳೆಯರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ. ಹಲಾಲ್, ಹಿಜಾಬ್ ಬಗ್ಗೆ ಅಗೌರವದಿಂದ ಮಾತನಾಡಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷ ಮುಸ್ಲಿಮರ ಸಬಲೀಕರಣಕ್ಕೆ ಶ್ರಮಿಸುತ್ತಿದೆ' ಎಂದರು.

'ಉಪ ಚುನಾವಣೆಗೂ, ಸಿಎಂ ಸ್ಥಾನದ ವಿಷಯಕ್ಕೂ ಸಂಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೂ, ಮುಖ್ಯಮಂತ್ರಿ ಸ್ಥಾನದ ವಿಷಯಕ್ಕೂ ಸಂಬಂಧವಿಲ್ಲ. ಹೈಕಮಾಂಡ್ ಅನುಮತಿಸಿದರೆ ಮತ್ತೆರಡು ಬಜೆಟ್ ಮಂಡಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಹೈಕಮಾಂಡ್ ಸೂಚನೆ ಮೇರೆಗೆ ನಾವು ನಡೆಯುತ್ತೇವೆ. ಅನುಮತಿ ಕೊಟ್ಟಾಗ ಬಜೆಟ್ ಮಂಡಿಸುತ್ತೇನೆ' ಎಂದು ಪ್ರತಿಕ್ರಿಯಿಸಿದರು.

'ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ವಿಶ್ವಾಸವಿದೆ. ನಾನು ಸೋಮವಾರದಿಂದ ಪ್ರಚಾರ ಕಾರ್ಯದಲ್ಲಿ ಭಾಗಿಯಾಗುತ್ತೇನೆ. ದಾವಣಗೆರೆಯಲ್ಲಿ ಯಾವುದೇ ಗೊಂದಲವಿಲ್ಲ' ಎಂದರು. 'ಉಪ ಚುನಾವಣೆ ಫಲಿತಾಂಶವು ಜನರು ಸರ್ಕಾರಕ್ಕೆ ಮಾಡುವ ಆಶೀರ್ವಾದ ಆಗಲಿದೆ' ಎಂದರು.

'ಆರ್‌ಎಸ್‌ಎಸ್ ಬೆಂಬಲ ಕೋರಿದ್ದ ಸತೀಶನ್'

ಕೊಚ್ಚಿ (ಪಿಟಿಐ): 'ಯುಡಿಎಫ್ ಅಧ್ಯಕ್ಷರಾದ ವಿ.ಡಿ. ಸತೀಶನ್ ಅವರು 2001 ಮತ್ತು 2006ರ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಆರ್‌ಎಸ್‌ಎಸ್ ಬೆಂಬಲ ಕೋರಿದ್ದರು' ಎಂದು ಸಂಘ ಪರಿವಾರದ ನಾಯಕ ಆರ್.ವಿ. ಬಾಬು ಹೇಳಿದ್ದಾರೆ.

ಆರ್‌ಎಸ್‌ಎಸ್ ಪರ ಸಂಘಟನೆಯಾಗಿರುವ 'ಹಿಂದೂ ಐಕ್ಯ ವೇದಿ' ರಾಜ್ಯ ಘಟಕದ ಅಧ್ಯಕ್ಷ ಬಾಬು ಮಾಧ್ಯಮಗಳಿಗೆ ಈ ಕುರಿತು ಮಾಹಿತಿ ನೀಡಿದ್ದು, 'ಸಿಪಿಐ ನಾಯಕ ರಾಜು ಅವರ ಎದುರು 1996ರಲ್ಲಿ ಸತೀಶನ್ ಸೋತಿದ್ದರು. ಬಳಿಕ ಚುನಾವಣೆಯಲ್ಲಿ ಗೆಲ್ಲಲು ಆರ್‌ಎಸ್‌ಎಸ್ ಬೆಂಬಲ ಕೋರಿದ್ದರು' ಎಂದಿದ್ದಾರೆ. ಜತೆಗೆ '2006ರಲ್ಲಿ ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ತಾನು ಭಾಗಿಯಾಗಿರಲಿಲ್ಲ ಎಂದೇ ಸತೀಶನ್ ಈ ಹಿಂದೆ ವಾದಿಸಿದ್ದರು. ಆದರೆ, ಈಗ ಭಾಗಿಯಾಗಿದ್ದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಹಾಗೆಯೇ ಮುಂದೆ ಒಂದು ದಿನ ತಾನು ಆರ್‌ಎಸ್‌ಎಸ್ ಬೆಂಬಲ ಕೋರಿದ್ದೆ ಎಂಬುದನ್ನೂ ಒಪ್ಪಿಕೊಳ್ಳುತ್ತಾರೆ' ಎಂದಿದ್ದಾರೆ.

ಆದರೆ, ಬಾಬು ಅವರ ಈ ಹೇಳಿಕೆಯನ್ನು ಕಾಂಗ್ರೆಸ್ ನಾಯಕ ವಿ.ಡಿ. ಸತೀಶನ್ ತಳ್ಳಿ ಹಾಕಿದ್ದಾರೆ.

'ದೇಶದ ಭದ್ರತೆಗೆ ಚುನಾವಣೆ ಮುಖ್ಯ'

ಟಿಎಂಸಿ ಸರ್ಕಾರದ ವಿರುದ್ಧ 'ಆರೋಪಪಟ್ಟಿ' ಬಿಡುಗಡೆ ಮಾಡಿದ ಬಿಜೆಪಿ

ಕೋಲ್ಕತ್ತ (ಪಿಟಿಐ): 'ಪಶ್ಚಿಮ ಬಂಗಾಳ ಚುನಾವಣೆಯು ಈ ರಾಜ್ಯಕ್ಕೆ ಮಾತ್ರವೇ ಪ್ರಾಮುಖ್ಯವಾಗಿಲ್ಲ. ಇದು ಇಡೀ ದೇಶದ ಭದ್ರತೆಯೇ ಈ ಚುನಾವಣೆಯೊಂದಿಗೆ ತಳುಕು ಹಾಕಿಕೊಂಡಿದೆ. ಈ ರಾಜ್ಯದ ಗಡಿಗಳಿಂದ ಅಕ್ರಮ ವಲಸಿಗರು ಒಳನುಗ್ಗುವುದು ದೇಶದ ಭದ್ರತೆಗೆ ಬೆದರಿಕೆ ಒಡ್ಡುತ್ತಿದೆ. ಈ ಕಾರಣದಿಂದಲೂ ಈ ಚುನಾವಣೆ ಮುಖ್ಯವಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಶನಿವಾರ ಇಲ್ಲಿ ಮಾಧ್ಯಮಗೋಷ್ಠಿ ನಡೆಸಿದ ಅವರು ಟಿಎಂಸಿ ಸರ್ಕಾರದ ವಿರುದ್ಧ 'ಆರೋಪಪಟ್ಟಿ' ಇರುವ ಪುಸ್ತಕವನ್ನು ಬಿಡುಗಡೆ ಮಾಡಿದರು.

'ಈಶಾನ್ಯ ರಾಜ್ಯಗಳಿಗೆ ಆ ಮೂಲಕ ಇಡೀ ದೇಶಕ್ಕೆ ಸಂಪರ್ಕ ಕಲ್ಪಿಸುವ ಇಲ್ಲಿನ ಸಿರಿಗುಡಿ ಕಾರಿಡಾರ್, ದೇಶದ ಭದ್ರತೆಗೆ ಸಂಬಂಧಿಸಿ ಬಹಳ ಮುಖ್ಯವಾದ ಸ್ಥಳವಾಗಿದೆ. ಟಿಎಂಸಿ ಸರ್ಕಾರದ ಓಲೈಕೆ ಮತ್ತು ಮತ ಬ್ಯಾಂಕ್ ರಾಜಕಾರಣವು ಈ ಕಾರಿಡಾರ್‌ಗೆ ಈಗ ಅಪಾಯಕ್ಕೆ ಒಡ್ಡಿದೆ' ಎಂದು ಗೃಹ ಸಚಿವರು ಆರೋಪಿಸಿದರು.


'ಗಡಿ ಪ್ರದೇಶಗಳಿಗೆ ಬೇಲಿ ಹಾಕುವುದಕ್ಕಾಗಿ ಭೂಮಿ ನೀಡಿ ಎಂದು ಕೇಂದ್ರ ಸರ್ಕಾರವು ಎಷ್ಟು ಬಾರಿ ಕೇಳಿಕೊಂಡರೂ ಟಿಎಂಸಿ ಸರ್ಕಾರ ಜಮೀನು ಮಂಜೂರು ಮಾಡಲಿಲ್ಲ. ಯಾಕೆಂದರೆ, ತಮ್ಮ ಮತ ಬ್ಯಾಂಕ್‌ನವರು ದೇಶಗಳ ಒಳಗೆ ನುಸುಳಬೇಕು ಎನ್ನುವುದು ಟಿಎಂಸಿ ಯೋಜನೆ' ಎಂದು ದೂರಿದರು.

'ಮೇ 6ಕ್ಕೆ ರಾಜ್ಯದಲ್ಲಿ ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬರಲಿದೆ. 45 ದಿನಗಳ ಒಳಗೆ ಗಡಿಗೆ ಬೇಲಿ ಹಾಕಲು ಜಮೀನು ಮಂಜೂರು ಮಾಡಲಾಗುವುದು. ಒಳನುಸುಳುಕೋರರನ್ನು ನಾವು ತಡೆಯುತ್ತೇವೆ' ಎಂದರು.

ಶಾ ಹೇಳಿದ್ದು...

- ಟಿಎಂಸಿ ಸರ್ಕಾರದ ಓಲೈಕೆ ರಾಜಕಾರಣ, ಭ್ರಷ್ಟಾಚಾರ ಮತ್ತು ರಾಜಕೀಯ ಹಿಂಸೆಯ ಕಾರಣದಿಂದ ಒಳನುಸುಳುಕೋರರಿಗೆ ಪಶ್ಚಿಮ ಬಂಗಾಳವು ದೇಶದ ಪ್ರಮುಖ ಕಾರಿಡಾರ್ ಆಗಿದೆ
- ಮಮತಾ ಅವರು ಯಾವಾಗಲೂ ತಾನು ಸಂತ್ರಸ್ತರು ಎಂದೇ ಗುರುತಿಸಿಕೊಳ್ಳುತ್ತಾರೆ. ಒಮ್ಮೆ ಗಾಯವಾಯಿತು ಎನ್ನುತ್ತಾರೆ. ಮತ್ತೊಮ್ಮೆ ಚುನಾವಣಾ ಆಯೋಗವನ್ನು ದೂರುತ್ತಾರೆ
- ಎಸ್‌ಐಆರ್ ಪ್ರಕ್ರಿಯೆಯು ದೇಶದ ಇತರೆ ರಾಜ್ಯಗಳಲ್ಲಿಯೂ ನಡೆದಿದೆ. ಆದರೆ, ಇಲ್ಲಿ ಮಾತ್ರವೇ ದೊಡ್ಡ ವಿವಾದ ಸೃಷ್ಟಿಸಲಾಗಿದೆ. ಯಾಕೆಂದರೆ, ಮಮತಾ ಅವರಿಗೆ ತಮ್ಮ ಮತ ಬ್ಯಾಂಕ್ ಅನ್ನು ಉಳಿಸಿಕೊಳ್ಳಬೇಕಾಗಿದೆ

* ಅಸ್ಸಾಂನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಒಳನುಸುಳುವಿಕೆಯು ಕೊನೆಗಾಣುತ್ತಿದೆ. ಆದ್ದರಿಂದ ಒಳನುಸುಳುಕೋರರಿಗೆ ಭಾರತದ ಪ್ರವೇಶಿಸುವ ಪಶ್ಚಿಮ ಬಂಗಾಳದ ಒಂದೇ ಕೊನೆಯ ಆಸರೆಯಾಗಿ ಉಳಿದುಕೊಂಡಿದೆ


ಟಿಎಂಸಿ ಸರ್ಕಾರದ ವಿರುದ್ಧ ಗೃಹ ಸಚಿವ ಅಮಿತ್ ಶಾ ಅವರು 'ಆರೋಪ ಪಟ್ಟಿ' ಇರುವ ಪುಸ್ತಕವನ್ನು ಶನಿವಾರ ಬಿಡುಗಡೆ ಮಾಡಿದರು —ಪಿಟಿಐ ಚಿತ್ರ

ಹಾಲಿ ಕ್ಷೇತ್ರಗಳಿಂದಲೇ ಸ್ಟಾಲಿನ್, ಉದಯನಿಧಿ ಸ್ಪರ್ಧೆ

ಡಿಎಂಕೆ: 164 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಚೆನ್ನೈ (ಪಿಟಿಐ): ತಮಿಳುನಾಡು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲಿರುವ 164 ಅಭ್ಯರ್ಥಿಗಳ ಪಟ್ಟಿಯನ್ನು ಡಿಎಂಕೆ ಶನಿವಾರ ಬಿಡುಗಡೆ ಮಾಡಿದೆ. ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್, ಉಪಮುಖ್ಯಮಂತ್ರಿ ಉದಯನಿಧಿ ಅವರು ಪ್ರಸ್ತುತ ಆಯ್ಕೆಯಾಗಿರುವ ಕ್ಷೇತ್ರಗಳಿಂದಲೇ ಸ್ಪರ್ಧಿಸಲಿದ್ದಾರೆ.

ಸಚಿವ ಸಂಪುಟದಲ್ಲಿನ ಮೂವರನ್ನ ಹೊರತು ಪಡಿಸಿ ಎಲ್ಲರಿಗೂ ಮತ್ತೆ ಟಿಕೆಟ್ ದೊರೆತಿದೆ. ಬಹುತೇಕ ಸಚಿವರು, ಶಾಸಕರು ಮತ್ತು ಹಿರಿಯ ನಾಯಕರು ಈ ಬಾರಿಯೂ ಟಿಕೆಟ್ ಪಡೆದಿದ್ದಾರೆ. 60 ಹೊಸಮುಖಗಳಿಗೂ ಡಿಎಂಕೆ ಮಣೆ ಹಾಕಿದೆ. ಸ್ಟಾಲಿನ್ ಅವರು ಕೊಲತೂರು ಕ್ಷೇತ್ರದಿಂದ ನಾಲ್ಕನೇ ಬಾರಿಗೆ ಮತ್ತು ಉದಯನಿಧಿ ಅವರು ಚೆಪಾಕ್–ಟ್ರಿಪ್ಲಿಕೇನ್‌ನಿಂದ ಎರಡನೇ ಬಾರಿಗೆ ಸ್ಪರ್ಧಿಸಲಿದ್ದಾರೆ.

ಸಚಿವರಾದ ದುರೈ ಮುರುಗನ್ (ಡಿಎಂಕೆ ಪ್ರಧಾನ ಕಾರ್ಯದರ್ಶಿ), ಕೆ.ಎನ್ ನೆಹ್ರೂ ಅನ್ಬಿಲ್ ಮಹೇಶ್ ಪೊಯ್ಯಮೊಳಿ, ತಂಗಂ ತೆನ್ನರಸು, ಎಂ.ಎ ಸುಬ್ರಮಣಿಯನ್ ಮತ್ತು ಇ.ವಿ ವೇಲು ಸೇರಿದಂತೆ ಬಹುತೇಕರಿಗೆ ಟಿಕೆಟ್ ದೊರೆತಿದೆ.

ಎಐಎಡಿಎಂಕೆಯಿಂದ ಉಚ್ಚಾಟಿತರಾಗಿ ಡಿಎಂಕೆ ಸೇರಿದ್ದ ಒ.ಪನ್ನೀರಸೆಲ್ವಂ ಅವರು ಬೊಡಿನಾಯಕ್ಕನೂರು ಕ್ಷೇತ್ರದಿಂದಲೇ ಸ್ಪರ್ಧಿಸಲಿದ್ದಾರೆ. ಪನ್ನೀರಸೆಲ್ವಂ ಆಪ್ತರಾದ ಪೌಲ್ ಮನೋಜ್ ಪಾಂಡಿಯನ್ ಮತ್ತು ಆರ್. ವೈತಿಲಿಂಗಂ ಅವರಿಗೂ ಟಿಕೆಟ್ ದೊರಕಿದೆ.

ವಿಶೇಷವೆಂದರೆ, ಹಗರಣದ ಆರೋಪದಿಂದ ರಾಜೀನಾಮೆ ನೀಡಿದ್ದ ಮಾಜಿ ಸಚಿವ ವಿ. ಸೆಂಥಿಲ್ ಬಾಲಾಜಿ ಅವರು ಎಐಎಡಿಎಂಕೆ ಭದ್ರಕೋಟೆಯಾಗಿರುವ ಕೊಯಮತ್ತೂರು ದಕ್ಷಿಣ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ. ಅವರು ಈ ಹಿಂದೆ ಕರೂರ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದರು.

ಡಿಎಂಕೆ ಅಭ್ಯರ್ಥಿಗಳಲ್ಲಿ 29 ವಕೀಲರು, 17 ಎಂಜಿನಿಯರ್‌ಗಳು ಮತ್ತು 15 ವೈದ್ಯರು ಇದ್ದಾರೆ. 18 ಮಹಿಳೆಯರಿಗೆ ಅವಕಾಶ ನೀಡಲಾಗಿದೆ.

ಕಾಂಗ್ರೆಸ್, ಎಡಪಕ್ಷಗಳು, ವಿಸಿಕೆ ಮತ್ತು ಡಿಎಂಡಿಕೆ ಮತ್ತಿತರರನ್ನು ಒಳಗೊಂಡ ಜಾತ್ಯತೀತ ಪ್ರಗತಿಪರ ಮೈತ್ರಿಕೂಟವು (ಎಸ್‌ಪಿಎ) ಡಿಎಂಕೆ ನೇತೃತ್ವದಲ್ಲಿ ಚುನಾವಣೆ ಎದುರಿಸಲಿದೆ. ಮಿತ್ರಪಕ್ಷಗಳೊಂದಿಗೆ ಡಿಎಂಕೆ ಸೀಟು ಹಂಚಿಕೆ ಒಪ್ಪಂದ ಮಾಡಿಕೊಂಡಿದೆ. ಕಾಂಗ್ರೆಸ್ 28, ಡಿಎಂಡಿಕೆ 10, ವಿಸಿಕೆ 8, ಎಡಪಕ್ಷಗಳು ತಲಾ 5 ಮತ್ತು ಎಂಡಿಎಂಕೆ 4 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ.

ಡಿಎಂಕೆ 164 ಸ್ಥಾನಗಳಲ್ಲಿ ಸ್ಪರ್ಧಿಸಲಿದ್ದು, ಮಿತ್ರ ಪಕ್ಷಗಳ 11 ಅಭ್ಯರ್ಥಿಗಳು ಕೂಡಾ ಡಿಎಂಕೆ ಚಿಹ್ನೆಯಡಿ ಕಣಕ್ಕಿಳಿಯಲಿದ್ದಾರೆ.



ಮುಖ್ಯಾಂಶಗಳು

- ಎಐಎಡಿಎಂಕೆ ಭದ್ರಕೋಟೆಯಲ್ಲಿ ಮಾಜಿ ಸಚಿವ ಸೆಂಥಿಲ್ ಸ್ಪರ್ಧೆ
- ಬಹುತೇಕ ಸಚಿವರು, ಶಾಸಕರಿಗೆ ಟಿಕೆಟ್
- ಎಐಎಡಿಎಂಕೆಯಿಂದ ಶಾಸಕರಾಗಿದ್ದ ಕ್ಷೇತ್ರದಿಂದಲೇ ಪನ್ನೀರಸೆಲ್ವಂ ಸ್ಪರ್ಧೆ

'ಡಿಎಂಕೆಯಿಂದ ಟಿಕೆಟ್ ಪಡೆದಿರುವವರು ಕೇವಲ ಅಭ್ಯರ್ಥಿಗಳಲ್ಲ. ವಿಜಯಶಾಲಿ ಅಭ್ಯರ್ಥಿಗಳು. ಡಿಎಂಕೆ ಮತ್ತೆ ಅಧಿಕಾರಕ್ಕೆ ಬರಲಿದೆ
ಎಂ.ಕೆ.ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಶಾ ಪ್ರಕಟಿಸಿದ ಆರೋಪ ಪಟ್ಟಿಗೆ ಟಿಎಂಸಿ ತಿರುಗೇಟು; ದಾಖಲೆ ಪ್ರದರ್ಶನ

'ಮಣಿಪುರ ಹಿಂಸಾಚಾರ; ಉತ್ತರ ನೀಡಿ'

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ಚಾರ್ಜ್‌ಶೀಟ್ ಬಿಡುಗಡೆ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ತೃಣಮೂಲ ಕಾಂಗ್ರೆಸ್ ಕಿಡಿಕಾರಿದೆ.

'ರಾಜ್ಯದಲ್ಲಿ ನಡೆಯುತ್ತಿರುವ ಚುನಾವಣೆಯಲ್ಲಿ ಬಿಜೆಪಿಯು ಧ್ರುವೀಕರಣ ಮಾಡಲು ಯತ್ನಿಸುತ್ತಿದ್ದು, ಮಹಿಳೆಯರ ಸುರಕ್ಷತೆ ಸೇರಿದಂತೆ ತನ್ನದೇ ಸರ್ಕಾರದ ಹಲವಾರು ಸಮಸ್ಯೆಗಳ ಕುರಿತಂತೆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದೆ' ಎಂದು ಆರೋಪಿಸಿದೆ.

ಶಾ ಆರೋಪದ ಬೆನ್ನಲ್ಲೇ, ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಟಿಎಂಸಿ ಹಿರಿಯ ನಾಯಕರಾದ ಮಹುವಾ ಮೊಯಿತ್ರಾ, ಬ್ರತ್ಯ ಬಸು ಹಾಗೂ ಕೀರ್ತಿ ಅಜಾದ್ ಅವರು ಸಾಲು ಸಾಲು ಆರೋಪಗಳನ್ನು ಮಾಡಿದರು.

ಮಣಿಪುರದಲ್ಲಿ ದೀರ್ಘಕಾಲದಿಂದ ನಡೆಯುತ್ತಿರುವ ಹಿಂಸಾಚಾರ, ಬಿಜೆಪಿ ರಾಜ್ಯಗಳಲ್ಲಿ ಮಹಿಳೆಯರ ಸುರಕ್ಷತೆ ಹಾಗೂ ಅಕ್ರಮ ವಲಸಿಗರ ಸಮಸ್ಯೆ ಸಂಬಂಧಿಸಿ ಕೇಂದ್ರ ಸರ್ಕಾರದ ಕಾರ್ಯವೈಖರಿ ಕುರಿತು ಈ ವೇಳೆ ಮುಖಂಡರು ಪ್ರಶ್ನಿಸಿದರು.

'ಮಹಿಳೆಯರ ಸುರಕ್ಷತೆ ಕುರಿತಂತೆ ಟಿಎಂಸಿ ಸರ್ಕಾರವನ್ನು ಗೃಹ ಸಚಿವ ಶಾ ಪ್ರಶ್ನಿಸಿದ್ದಾರೆ. ಹಾಗಿದ್ದರೆ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಮಹಿಳೆಯರ ಸುರಕ್ಷತೆ ಹೇಗಿದೆ? ಎಂದು ಪ್ರಶ್ನಿಸಿದ್ದಾರೆ.

'ಮಣಿಪುರದ ಹಿಂಸಾಚಾರ ಕುರಿತಂತೆ ಶಾ ಮೊದಲು ಉತ್ತರಿಸಲಿ. ಕಳೆದ ಮೂರು ವರ್ಷಗಳಿಂದಲೂ ಅಲ್ಲಿ ನಿರಂತರ ರಕ್ತಪಾತವಾಗುತ್ತಿದೆ' ಎಂದು ತಿರುಗೇಟು ನೀಡಿದ್ದಾರೆ.

'ಒಂದೊಮ್ಮೆ ಒಳನುಸುಳುವಿಕೆ ಎಂಬುದು ಸಮಸ್ಯೆಯಾಗಿದ್ದರೆ, ಅದನ್ನು ನಿವಾರಿಸುವ ಪ್ರಾಥಮಿಕ ಕರ್ತವ್ಯ ಕೇಂದ್ರ ಸರ್ಕಾರದ್ದಾಗಿದೆ' ಎಂದು ನೆನಪಿಸಿದ್ದಾರೆ.


ಪಶ್ಚಿಮ ಬಂಗಾಳದ ರಾಯ್‌ಗಂಜ್ ಜಿಲ್ಲೆಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಶನಿವಾರ ಚುನಾವಣಾ ಪ್ರಚಾರ ನಡೆಸಿದರು—ಪಿಟಿಐ ಚಿತ್ರ



ಇತಿಹಾಸದಲ್ಲಿಯೇ ತಮ್ಮ ವಿರುದ್ಧ ಪ್ರಕರಣಗಳನ್ನು ಹೊಂದಿರುವ ಏಕೈಕ ಗೃಹ ಸಚಿವ ಅಮಿತ್ ಶಾ. ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ₹1 ಲಕ್ಷ ಕೋಟಿ ಹಣ ನೀಡದೆ, ತಡೆಹಿಡಿದಿದ್ದು, ಈ ಬಗ್ಗೆ ಅವರು ಮಾತನಾಡಿಲ್ಲ
ಕೀರ್ತಿ ಅಜಾದ್, ಟಿಎಂಸಿ ಸಂಸದ



ವಿದೂಷಕ ಸಿಂಹಾಸನದ ಮೇಲೆ ಕುಳಿತಾಗ ಆತ ರಾಜನಾಗುವುದಿಲ್ಲ. ಅದು ಸರ್ಕಸ್ ಆಗುತ್ತದೆ
ಮಹುವಾ ಮೊಯಿತ್ರಾ,
ಟಿಎಂಸಿ ಸಂಸದೆ (ಅಮಿತ್ ಶಾ ಉಲ್ಲೇಖಿಸಿ ಟೀಕೆ)

'ಬಂಗಾಳ ನಾಶಪಡಿಸಿದರೆ ಬಿಜೆಪಿ ನಾಶ'

ರಾಯ್‌ಗಂಜ್, ಪಶ್ಚಿಮ ಬಂಗಾಳ (ಪಿಟಿಐ): 'ಬಂಗಾಳವನ್ನು ನಾಶಪಡಿಸಲು ಯತ್ನಿಸಿದರೆ, ಬಿಜೆಪಿಯು ಇಡೀ ದೇಶದಲ್ಲಿಯೇ ನಾಶವಾಗಲಿದೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕಿಡಿಕಾರಿದ್ದಾರೆ.

ರಾಜ್ಯದ ವಿವಿಧೆಡೆ ಶನಿವಾರ ಚುನಾವಣಾ ರ‍್ಯಾಲಿಗಳಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಚುನಾವಣಾ ಆಯೋಗವು ಬಿಜೆಪಿಯ ಅಣತಿಯಂತೆ ಕೆಲಸ ಮಾಡುತ್ತಿದ್ದು, ಎಸ್‌ಐಆರ್ ಮೂಲಕ ಮತದಾರರ ಹೆಸರುಗಳನ್ನು ಅಳಿಸಿಹಾಕುತ್ತಿದೆ' ಎಂದು ತಿಳಿಸಿದ್ದಾರೆ.

'ಮುಸ್ಲಿಮರು ಮತ ನೀಡದಿದ್ದರೂ ಬಿಜೆಪಿ ದೇಶ ಆಳುತ್ತಿದೆ'

ಬೆಂಗಳೂರು: ಮುಸ್ಲಿಮರು ಮತ ಹಾಕದಿದ್ದರೂ ಬಿಜೆಪಿ ದೇಶ ಆಳುತ್ತಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.



ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಸಾದಿಕ್ ಪೈಲ್ವಾನ್ ಅವರು ಸ್ಪರ್ಧೆಯಿಂದ ನಿವೃತ್ತರಾಗಿದ್ದಾರೆ. ಸಮುದಾಯಕ್ಕೆ ಕಾಂಗ್ರೆಸ್ ಟಿಕೆಟ್ ನೀಡಲಿಲ್ಲವೆಂದು ಅಲ್ಲಿನ ಮುಸ್ಲಿಂ ಮತದಾರರು ಬೇಸರಗೊಂಡಿದ್ದಾರೆ. ಹಾಗೆಂದು ಬಿಜೆಪಿಗೆ ಮತ ಹಾಕುತ್ತಾರೆಂದು ಹೇಳಲಾಗದು. ಕಾಂಗ್ರೆಸ್ ಅವರ ದಾರಿ ತಪ್ಪಿಸಿ, ತಮ್ಮ ಮತಬ್ಯಾಂಕ್ ಮಾಡಿಕೊಂಡಿದೆ ಎಂದು ದೂರಿದರು.

ಮುಸ್ಲಿಮರ ತಲೆ ಒಳಗೆ ಕಾಂಗ್ರೆಸ್ ಬಿಟ್ಟ ಹುಳುಗಳು ಸತ್ತಿಲ್ಲ. ಅವು ಇನ್ನೂ ಬದುಕಿವೆ. ಅವರ ಮತಗಳು ಸಿಗದಿದ್ದರೂ ಬಿಜೆಪಿ ದೇಶದ ಚುಕ್ಕಾಣಿ ಹಿಡಿದಿದೆ. ಮುಸ್ಲಿಮರು ಸುಭದ್ರವಾಗಿದ್ದಾರೆ. ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಗಾನಿಸ್ತಾನ ಪ್ರಜೆಗಳಿಗಿಂತ ನೆಮ್ಮದಿಯಾಗಿದ್ದಾರೆ. ಅಂಬೇಡ್ಕರ್ ಅವರ ಸಂವಿಧಾನ ಎಲ್ಲ ರೀತಿಯ ರಕ್ಷಣೆ ಕೊಟ್ಟಿದೆ. ಗುಮ್ಮ ತೋರಿಸಿ ಎಷ್ಟು ದಿನ ಮುಸಲ್ಮಾನರನ್ನು ಕಾಂಗ್ರೆಸ್ ಹಿಡಿತದಲ್ಲಿ ಇಟ್ಟುಕೊಳ್ಳಲು ಸಾಧ್ಯ ಎಂದು ಪ್ರಶ್ನಿಸಿದರು.

ಕರ್ನಾಟಕಕ್ಕೆ ಅನ್ಯಾಯವಾದಾಗ ಎಲ್ಲಿತ್ತು 'ಟೀಮ್ ಇಂಡಿಯಾ': ದಿನೇಶ್

ಬೆಂಗಳೂರು: 'ಕೇಂದ್ರ ಸರ್ಕಾರ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕು. ಬೇಕಾದಾಗ ವಿಶ್ವಾಸಕ್ಕೆ ತೆಗೆದುಕೊಳ್ಳುವುದು, ಬೇಡವೆಂದಾಗ ಬಿಟ್ಟುಬಿಡುವುದು ಸರಿಯಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಅಮೆರಿಕ–ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದಿಂದ ಉದ್ಭವಿಸಿರುವ ಪರಿಸ್ಥಿತಿ ಕುರಿತು ಮುಖ್ಯಮಂತ್ರಿಗಳೊಂದಿಗೆ ವರ್ಚುವಲ್ ಆಗಿ ಪ್ರಧಾನಿ ನಡೆಸಿದ್ದ ಸಂವಾದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗೈರಾಗಿದ್ದರು. ಈ ಕುರಿತು ಕೇಳಿದ ಪ್ರಶ್ನೆಗೆ ದಿನೇಶ್ ಈ ರೀತಿ ಪ್ರತಿಕ್ರಿಯಿಸಿದರು.

'ಈಗ ಇದ್ದಕ್ಕಿದ್ದಂತೆ ಪ್ರಧಾನಿ ಮೋದಿ 'ಟೀಮ್ ಇಂಡಿಯಾ' ಎನ್ನುತ್ತಿದ್ದಾರೆ. ಬೇರೆ ಸಂದರ್ಭಗಳಲ್ಲಿ ಟೀಮ್ ಇಂಡಿಯಾ ಎನ್ನುವುದನ್ನು ಮರೆತುಬಿಡುತ್ತಾರೆ. ಕರ್ನಾಟಕಕ್ಕೆ ಎಷ್ಟೊಂದು ಅನ್ಯಾಯವಾಗಿದೆ. ಆಗ ಟೀಮ್ ಇಂಡಿಯಾ ಎಲ್ಲಿ ಹೋಗಿತ್ತು' ಎಂದು ಪ್ರಶ್ನಿಸಿದರು. 'ದೇಶದ ಹಿತದೃಷ್ಟಿಯಿಂದ ನಾವೆಲ್ಲಾ ಒಂದಾಗಿದ್ದೇವೆ. ಆದರೆ, ಯುದ್ಧದ ವಿಚಾರದಲ್ಲಿ ಮೋದಿ ಸ್ಪಷ್ಟ ನಿಲುವು ತೆಗೆದುಕೊಂಡಿಲ್ಲ' ಎಂದರು.

ಅಲ್ಪಸಂಖ್ಯಾತರ ಮನವೊಲಿಕೆ: ಉಪ ಚುನಾವಣೆ ನಡೆಯಲಿರುವ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು ಅಸಮಾಧಾನಗೊಂಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಅಲ್ಪಸಂಖ್ಯಾತ ಸಮುದಾಯದ ನಾಯಕರ ಜೊತೆ ಸಮಾಲೋಚನೆ ಮಾಡಿ ಮನವೊಲಿಸಲಾಗಿದೆ. ಅಲ್ಪಸಂಖ್ಯಾತರು ಯಾವಾಗಲೂ ಕಾಂಗ್ರೆಸ್ ಪರ ನಿಂತಿದ್ದಾರೆ. ನಾವೆಲ್ಲರೂ ಒಂದಾಗಿ ಕೆಲಸ ಮಾಡುತ್ತೇವೆ. ಸಚಿವ ಜಮೀರ್ ಅಹಮದ್ ಕೂಡ ಪ್ರಚಾರ ಮಾಡುತ್ತಾರೆ' ಎಂದರು.



ಮೇಲುಕೋಟೆಯಲ್ಲಿ ಶನಿವಾರ ಚೆಲುವನಾರಾಯಣ ಸ್ವಾಮಿಯ 'ವೈರಮುಡಿ ಕಿರೀಟಧಾರಣಾ ಮಹೋತ್ಸವ' ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನಡೆಯಿತು –ಚಿತ್ರ : ಶ್ರೀಕಾಂತ ಮೇಲುಕೋಟೆ

ಸಂಭ್ರಮದ 'ವೈರಮುಡಿ ಬ್ರಹ್ಮೋತ್ಸವ'

ಪ್ರಜಾವಾಣಿ ವಾರ್ತೆ

ಮೇಲುಕೋಟೆ (ಮಂಡ್ಯ ಜಿಲ್ಲೆ): 'ಭೂಲೋಕದ ವೈಕುಂಠ' ಎಂದು ಕರೆಸಿಕೊಳ್ಳುವ ಮೇಲುಕೋಟೆಯಲ್ಲಿ ಶನಿವಾರ ರಾತ್ರಿ ಸಾವಿರಾರು ಭಕ್ತರ ಜಯಘೋಷಗಳ ನಡುವೆ ಚೆಲುವ ನಾರಾಯಣ ಸ್ವಾಮಿಯ ವಿಶ್ವವಿಖ್ಯಾತ 'ವೈರಮುಡಿ ಕಿರೀಟಧಾರಣಾ ಮಹೋತ್ಸವ' ನಡೆಯಿತು.

ವೈರಮುಡಿ ಮತ್ತು ರಾಜಮುಡಿಯು ಸಂಜೆ 4.30ಕ್ಕೆ ಶ್ರೀಕ್ಷೇತ್ರವನ್ನು ಪ್ರವೇಶಿಸುತ್ತಿದ್ದಂತೆ ವರುಣನ ಸಿಂಚನವಾಯಿತು. 'ಯದುಗಿರಿ' ಕ್ಷೇತ್ರದಲ್ಲಿ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತು. ರಾಜಬೀದಿಯು ವಿದ್ಯುದ್ದೀಪ, ತಳಿರು ತೋರಣಗಳಿಂದ ಕಂಗೊಳಿಸಿತು.

ತಿರುವಾಭರಣ ಪೆಟ್ಟಿಗೆಯ 'ಪರ್ಕಾವಣೆ' (ಆಭರಣಗಳ ಪರಿಶೀಲನೆ) ಬಳಿಕ ಗಂಡಭೇರುಂಡ ಸ್ವರೂಪಿ ಚಂದ್ರಪ್ರಭೆ ಪ್ರಭಾವಳಿ ಮಧ್ಯದಲ್ಲಿ ಶ್ರೀದೇವಿ ಮತ್ತು ಭೂದೇವಿ ನಡುವೆ ಅಲಂಕೃತನಾಗಿದ್ದ ಚೆಲುವನಾರಾಯಣ ಸ್ವಾಮಿಗೆ ಕಿರೀಟ, ಶಂಖ, ಗದಾಂಗಿ, ಚಕ್ರ, ಪದ್ಮಪೀಠ, ಶಿರಚಕ್ರ, ಅಭಯಹಸ್ತ, ಕರ್ಣಾಭರಣ ಸೇರಿದಂತೆ 16 ಪದಕಗಳನ್ನು ತೊಡಿಸಲಾಯಿತು.

ರಾತ್ರಿ 8ಕ್ಕೆ ಆರಂಭವಾಗಬೇಕಿದ್ದ 'ವೈರಮುಡಿ ಬ್ರಹ್ಮೋತ್ಸವ' ಮಳೆಯ ಕಾರಣದಿಂದಾಗಿ ತಡವಾಯಿತು. ರಾಮಾನುಜಾಚಾರ್ಯರ ಸನ್ನಿಧಿಯಲ್ಲಿ ಪ್ರಥಮ ಪೂಜೆ ಸಲ್ಲಿಸಿದ ನಂತರ ರಾತ್ರಿ 8.38ಕ್ಕೆ ಉತ್ಸವಕ್ಕೆ ಚಾಲನೆ ನೀಡಲಾಯಿತು. ಲೋಕಕಲ್ಯಾಣಾರ್ಥವಾಗಿ ನಡೆದ ಉತ್ಸವದಲ್ಲಿ ಅರ್ಧ ಚಂದ್ರಾಕೃತಿಯ ಗರುಡಾರೂಢನಾದ ಸ್ವಾಮಿಯನ್ನು ಕಣ್ತುಂಬಿಕೊಂಡ ಭಕ್ತರು, 'ಗೋವಿಂದಾ, ಗೋವಿಂದಾ' ಎಂದು ಜಯಘೋಷ ಮೊಳಗಿಸಿದರು.

ರಾಜ್ಯದ ವಿವಿಧ ಮೂಲೆಗಳಿಂದ ಹಾಗೂ ನೆರೆಯ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ, ಗುಜರಾತ್‌ನಿಂದಲೂ ಭಕ್ತರು ಬಂದಿದ್ದರು.

ವೈರಮುಡಿ ಬ್ರಹ್ಮೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಮಾಜಿ ಸಚಿವ ಎಚ್.ಡಿ. ರೇವಣ್ಣ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ರಮೇಶ ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ, ಮುಖಂಡ ಅಪ್ಪಾಜಿಗೌಡ, ಜಿಲ್ಲಾಧಿಕಾರಿ ಕುಮಾರ ಪಾಲ್ಗೊಂಡಿದ್ದರು.

₹12 ಕೋಟಿ ಮೌಲ್ಯದ 41 ಕೆ.ಜಿ ಡ್ರಗ್ಸ್ ಪತ್ತೆ

ಡ್ರಗ್ಸ್ ದಾಸ್ತಾನಿಗೆ ಮುಂಬೈ ನಂಟು

ಪ್ರಜಾವಾಣಿ ವಾರ್ತೆ

ಮೈಸೂರು: 'ಜಿಲ್ಲೆಯ ಹುಣಸೂರು ತಾಲ್ಲೂಕಿನ ದಾಸನಪುರ ಗ್ರಾಮದ ತೋಟದ ಮನೆಯೊಂದರಲ್ಲಿ ಬೃಹತ್ ಡ್ರಗ್ಸ್ ದಾಸ್ತಾನು ಕೊಠಡಿ ಪತ್ತೆಯಾಗಿದೆ. ಅಲ್ಲಿ 41 ಕೆ.ಜಿ. ಡ್ರಗ್ಸ್ ವಶಕ್ಕೆ ಪಡೆಯಲಾಗಿದ್ದು, ಅದರ ಮೌಲ್ಯ ₹12 ಕೋಟಿ ಎಂದು ಅಂದಾಜಿಸಲಾಗಿದೆ.

'ಸನ್ಮಿತ್ರ' ಯೋಜನೆಯಡಿ ಡ್ರಗ್ಸ್ ಸೇವನೆ ಮಾಡುತ್ತಿರುವವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಅವರ ಚಲನವಲನ ಗಮನಿಸಿದಾಗ, ದಾಸನಪುರದ ಡ್ರಗ್ಸ್ ದಾಸ್ತಾನು ಬಗ್ಗೆ ಪೊಲೀಸರಿಗೆ ಮಾಹಿತಿ ಸಿಕ್ಕಿದೆ.

ಹುಣಸೂರು ನಗರ ಠಾಣೆ ಇನ್‌ಸ್ಪೆಕ್ಟರ್ ಸಂತೋಷ್ ಕಶ್ಯಪ್ ನೇತೃತ್ವದ ಐವರ ತಂಡ ಶುಕ್ರವಾರ ರಾತ್ರಿ ದಾಳಿ ನಡೆಸಿ, ಮೈಸೂರು ನಗರದ ಸಿದ್ದಿಕಿ ನಗರದ ನಿವಾಸಿ ಮೊಹಮ್ಮದ್ ಇರ್ಫಾನ್(30) ಹಾಗೂ ಜಮೀನಿನ ಮಾಲೀಕ ಹುಣಸೂರು ಪಟ್ಟಣದ ರೆಹಮತ್ ಮೊಹಲ್ಲಾ ನಿವಾಸಿ ಮೊಹಮ್ಮದ್ ಇರ್ಫಾನ್ (42) ಎನ್ನುವವರನ್ನು ವಶಕ್ಕೆ ಪಡೆದಿದ್ದು, ಇನ್ನಿಬ್ಬರು ಆರೋಪಿಗಳು ತಪ್ಪಿಸಿಕೊಂಡಿದ್ದಾರೆ.

ಈ ಬಗ್ಗೆ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, 'ಆರೋಪಿಗಳು ಶುಂಠಿ ಕೃಷಿ ಮಾಡುವುದಾಗಿ ತಿಳಿಸಿ ಫೆಬ್ರುವರಿಯಲ್ಲಿ ತೋಟದ ಮನೆಯನ್ನು ಬಾಡಿಗೆಗೆ ಪಡೆದಿದ್ದರು' ಎಂದು ಮಾಹಿತಿ ನೀಡಿದರು.


ಪತ್ತೆಯಾಗಿರುವ ಡ್ರಗ್ಸ್‌ಗೆ ಬಳಸುವ ರಾಸಾಯನಿಕ ಪದಾರ್ಥ

'ಅವರು ಮಾರ್ಚ್ 22ರಂದು ಬಂದು ಚಟುವಟಿಕೆ ಆರಂಭಿಸಿದ್ದರು. ಗೂಡ್ಸ್ ಹಾಗೂ ಟ್ರ್ಯಾಕ್ಟರ್‌ಗಳಲ್ಲಿ ಕಚ್ಚಾ ಸಾಮಗ್ರಿಗಳನ್ನು ತಂದಿದ್ದರು. 50 ಗ್ರಾಂ.ನಿಂದ ಅರ್ಧ ಕೆ.ಜಿ. ಯವರೆಗೆ ಪ್ಯಾಕ್ ಮಾಡಿದ್ದ 16 ಪ್ಯಾಕೆಟ್‌ಗಳಲ್ಲಿ ಒಟ್ಟು 7.35 ಕೆ.ಜಿ. ಮೆಫೆಡ್ರೋನ್ ತುಂಬಿಟ್ಟಿದ್ದರು. ಅದರೊಂದಿಗೆ 41 ಕೆ.ಜಿ. ತೂಕದ ಮಾದಕ ವಸ್ತು ತಯಾರಿಕೆಗೆ ಬಳಸುವ ರಾಸಾಯನಿಕ ವಸ್ತು ಪತ್ತೆಯಾಗಿವೆ. ಅವನ್ನು ಶುಕ್ರವಾರ ರಾತ್ರಿ ಮುಂಬೈಗೆ ಸಾಗಿಸಲು ಸಿದ್ಧತೆ ಮಾಡಿಕೊಂಡಿದ್ದಾಗ ತಂಡ ದಾಳಿ ನಡೆಸಿದೆ' ಎಂದು ತಿಳಿಸಿದರು.

'ಆರೋಪಿಗಳು ಜನಸಂಪರ್ಕ ಇಲ್ಲದ ಸ್ಥಳ ಆರಿಸಿಕೊಂಡಿದ್ದರು. ಈ ಕಟ್ಟಡಕ್ಕೆ ಕಚ್ಚಾ ರಸ್ತೆ ಇದ್ದು, ಕಟ್ಟಡದ ಸುತ್ತಲೂ 3–4 ಕಿ.ಮೀ. ದೂರದಲ್ಲಿ ಯಾವುದೇ ಮನೆಗಳಿಲ್ಲ. ಮುಂಬೈನಿಂದ ಡ್ರಗ್ಸ್ ತಯಾರಿಸಿ, ಕೊನೆ ಹಂತದಲ್ಲಿ ರಾಸಾಯನಿಕ ಮಿಶ್ರಣ ಮಾಡಿ, ಅವನ್ನು ಒಣಗಿಸಲು ಇಟ್ಟಿದ್ದರು' ಎಂದು ವಿವರಿಸಿದರು.

ಮುಂಬೈ ನಂಟು: 'ಸಿದ್ದಿಕಿ ನಗರದಲ್ಲಿ ಟೀ ಅಂಗಡಿ ಇಟ್ಟುಕೊಂಡಿದ್ದ ಮೊಹಮ್ಮದ್ ಇರ್ಫಾನ್‌ಗೆ ಆರು ತಿಂಗಳಿಂದ ಮುಂಬೈ ವ್ಯಕ್ತಿಯೊಬ್ಬನ ಸಂಪರ್ಕ ಇತ್ತು. ಇದೊಂದು ವ್ಯವಸ್ಥಿತ ಜಾಲವಾಗಿದ್ದು, ಇದರ ನಂಟು ಹೊರ ರಾಜ್ಯಕ್ಕೂ ವಿಸ್ತರಿಸಿದೆ. ಈ ತಂಡದಲ್ಲಿ ಇಬ್ಬರು ಸ್ಥಳೀಯರು ಹಾಗೂ ನಾಲ್ವರು ಹೊರರಾಜ್ಯದವರು ಇರುವುದು ಗೊತ್ತಾಗಿದೆ. ಅವರ ಪತ್ತೆಗಾಗಿ ಹುಣಸೂರು ಉಪ ವಿಭಾಗದ ಡಿವೈಎಸ್‌ಪಿ ರವಿ ನೇತೃತ್ವದಲ್ಲಿ ಮೂರು ತಂಡ ರಚಿಸಿದ್ದೇವೆ' ಎಂದು ಹೇಳಿದರು.

'ತಂಡದಲ್ಲಿ ಒಬ್ಬ ಡ್ರಗ್ಸ್ ತಯಾರಿಸುವ ತಜ್ಞ ಇದ್ದ. ಪ್ಯಾಕಿಂಗ್‌ಗೆ ಬಳಸುವ ಯಂತ್ರಗಳಷ್ಟೆ ಪತ್ತೆಯಾಗಿವೆ. ಆನ್‌ಲೈನ್ ಮೂಲಕ ಕೆಮಿಕಲ್ ತರಿಸಿಕೊಂಡಿದ್ದರು. ಡ್ರಗ್ಸ್ ತಯಾರಿಸುತ್ತಿರುವುದಕ್ಕೆ ಕುರುಹು ಸಿಕ್ಕಿಲ್ಲ. ದಾಸ್ತಾನಿಗಾಗಿ ಆ ಕಟ್ಟಡವನ್ನು ಬಳಸಿಕೊಂಡಿದ್ದರು. ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ, ತನಿಖೆ ನಡೆಸುತ್ತೇವೆ' ಎಂದರು.

'ಹುಣಸೂರು ಹೊರವಲಯದ ರತ್ನಾಪುರ ರಸ್ತೆಯ ಸಲೀಂ ಪ್ಯಾಲೇಸ್ ಬಳಿ ಟೀ ಅಂಗಡಿಯಲ್ಲಿ ಇಬ್ಬರು ಗಾಂಜಾ ಸೇವಿಸುತ್ತಿದ್ದವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಅವರನ್ನು ವಿಚಾರಣೆಗೆ ಒಳಪಡಿಸಿದಾಗ ದಾಸ್ತಾನಪುರದ ಡ್ರಗ್ಸ್ ದಾಸ್ತಾನು ಮಾಹಿತಿ ದೊರೆತಿದೆ' ಎಂದು ಹೇಳಿದರು.

3 ತಿಂಗಳಲ್ಲಿ 77 ಕೇಸ್

ಜಿಲ್ಲಾ ಪೊಲೀಸರು ಕಳೆದ 3 ತಿಂಗಳಲ್ಲಿ ಮಾದಕ ವಸ್ತು ವಿರುದ್ಧ ಕಾರ್ಯಾಚರಣೆ ನಡೆಸಿದ್ದು, 77 ಪ್ರಕರಣ ದಾಖಲಿಸಿದ್ದಾರೆ. ಇದರಲ್ಲಿ, ಡ್ರಗ್ಸ್ ಸೇವಿಸಿದ 63 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. 'ಸನ್ಮಿತ್ರ' ಯೋಜನೆಯಡಿ ಅವರ ಚಲನವಲನಗಳ ಮೇಲೆ ನಿಗಾ ವಹಿಸಲಾಗಿತ್ತು. ಈ ಮೂಲಕವೇ ಜಾಲ ಪತ್ತೆಯಾಗಿದೆ.

ಹೆಚ್ಚುತ್ತಿದೆ ಹೊರರಾಜ್ಯದ ನಂಟು

ಮೈಸೂರಿನಲ್ಲಿ ಪತ್ತೆಯಾಗಿರುವ ಡ್ರಗ್ಸ್ ಪ್ರಕರಣಗಳಲ್ಲಿ ಹೊರ ರಾಜ್ಯದವರಿಗೆ ಕೃತ್ಯಕ್ಕೆ ಮೈಸೂರು ಆಪ್ತವಾಗುತ್ತಿರುವ ಅಂಶ ಬೆಳಕಿಗೆ ಬಂದಿದೆ. ಈಚೆಗೆ ಉನ್ನತಿ ನಗರ ಹಾಗೂ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಪತ್ತೆಯಾದ ಡ್ರಗ್ಸ್ ತಯಾರಿಕ ಘಟಕದಲ್ಲಿ ರಾಜಸ್ಥಾನ ಹಾಗೂ ಮಹಾರಾಷ್ಟ್ರದ ಆರೋಪಿಗಳಿದ್ದರು.

'ಮೈಸೂರಿನಲ್ಲಿ ಡ್ರಗ್ಸ್ ಜಾಲ ಪತ್ತೆ ಹಚ್ಚಿರುವ ಬಗ್ಗೆ ಗೊತ್ತಾಗಿದೆ. ನಂಟು ಎಲ್ಲಿಗಾದರೂ ಇರಲಿ, ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ದ್ವಿಭಾಷಾ ನೀತಿ ಮಾಡಿಲ್ಲ: ಸಿದ್ದರಾಮಯ್ಯ

‘ಹಿಂದಿ ಭಾಷೆಯನ್ನು ಕಲಿಯುವುದಕ್ಕೆ ಸರ್ಕಾರದ ವಿರೋಧವಿಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯದಲ್ಲಿ ದ್ವಿಭಾಷಾ ನೀತಿಯನ್ನು ಇನ್ನೂ ಮಾಡಿಲ್ಲ. ತೃತೀಯ ಭಾಷೆ ಹಿಂದಿಯನ್ನು ಕಡ್ಡಾಯ ಮಾಡಬಾರದು ಎಂದು ಹೇಳಿದ್ದೇವೆ. ಇದು ಈ ವರ್ಷದಿಂದಲೇ ಜಾರಿಯಾಗಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿ, ‘ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ತೃತೀಯ ಭಾಷೆ ಹಿಂದಿಯನ್ನು ಪರಿಗಣಿಸದಿರಲು ತೀರ್ಮಾನಿಸಿದ್ದೇವೆ’ ಎಂದರು.

ಸರ್ಕಾರದ ನಿರ್ಧಾರವನ್ನು ಖಾಸಗಿ ಸಂಸ್ಥೆಗಳವರು ವಿರೋಧಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ‘ಸರ್ಕಾರ ತೀರ್ಮಾನ ಕೈಗೊಂಡಿದೆ. ವಿರೋಧಿಸುವವರೂ ಇರುತ್ತಾರೆ, ಸ್ವಾಗತಿಸುವವರೂ ಇದ್ದಾರೆ. ಶೇ 100ರಷ್ಟು ಒಪ್ಪಿಗೆ ಯಾವುದಕ್ಕೂ ಇರುವುದಿಲ್ಲ’ ಎಂದು ಹೇಳಿದರು.

‘ಹಿಂದಿ ಹೇರಿಕೆ ಎಂದೇನಿಲ್ಲ ಅಥವಾ ಆ ಭಾಷೆ ಕಲಿಯಬಾರದು ಎಂತಲೂ ಅಲ್ಲ. ಪರೀಕ್ಷೆ ಕಡ್ಡಾಯ ಆಗಬಾರದು ಎಂಬ ನಿಟ್ಟಿನಲ್ಲಿ ಈ ಕ್ರಮ ಕೈಗೊಂಡಿದ್ದೇವೆ. ನಾವು ಓದುವಾಗಲೂ ಹಿಂದಿ ಕಡ್ಡಾಯ ಇರಲಿಲ್ಲ. ಕಡ್ಡಾಯ ಇಲ್ಲದಿರುವುದರಿಂದಲೇ ನಾವು ಓದಲು, ಕಲಿಯಲು ಹೋಗಲಿಲ್ಲ’ ಎಂದರು.

‘ಹಿಂದಿ ಭಾಷೆಯನ್ನು ಕಲಿಯುವುದಕ್ಕೆ ಸರ್ಕಾರದ ವಿರೋಧವಿಲ್ಲ. ಆದರೆ ಪರೀಕ್ಷೆಯ ಅಂಕಗಳಿಗೆ ಕಡ್ಡಾಯ ಆಗಬಾರದು’ ಎಂದು ಪ್ರತಿಕ್ರಿಯಿಸಿದರು.

ಐಪಿಎಲ್–2 ಟಿಕೆಟ್ ಕೇಳಿದ್ದಾರಷ್ಟೆ: ‘ಐಪಿಎಲ್ ಕ್ರಿಕೆಟ್ ಬಗ್ಗೆ ಆಸಕ್ತಿ ಇದೆ. ಆದರೆ, ನೋಡುವುದಕ್ಕೆ ಹೋಗುತ್ತಿಲ್ಲ. ಮೊದಲಿನಿಂದಲೂ ಶಾಸಕರು, ಎಂಎಲ್‌ಸಿಗಳಿಗೆ ಪಂದ್ಯಗಳ ಟಿಕೆಟ್ ಕೊಟ್ಟುಕೊಂಡು ಬಂದಿದ್ದಾರೆ. ಹಿಂದೆ ಒಂದು ಕೊಡುತ್ತಿದ್ದರು, ಈಗ 2 ಕೊಡುವಂತೆ ಹೇಳಿದ್ದಾರಷ್ಟೆ’ ಎಂದು ಸಿದ್ದರಾಮಯ್ಯ ಹೇಳಿದರು.

ಟಿಕೆಟ್ ಬಗ್ಗೆ ಅಧಿವೇಶನದಲ್ಲಿ ಚರ್ಚೆ ಆಗಿದ್ದಕ್ಕೆ ಬಿಜೆಪಿಯವರು ಟೀಕಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಟಿಕೆಟ್ ಬೇಕಿಲ್ಲದವರು ಬೇಡ ಎನ್ನಲಿ, ನೋಡಬೇಕು ಎನಿಸಿದರೆ ಹೋಗಲಿ. ಇದರಲ್ಲಿ ತಪ್ಪು–ಸರಿ ಎಂಬ ಪ್ರಶ್ನೆ ಇಲ್ಲ’ ಎಂದರು.

‘ಏ.9ರವರೆಗೆ ಪಂದ್ಯ ನೋಡಲು ಹೋಗುವುದಿಲ್ಲ. ಅಲ್ಲಿವರೆಗೆ ಚುನಾವಣಾ ಕೆಲಸಗಳಿವೆ. ನಾನು ಕೆಲಸ ಇದ್ದರೆ ಹೋಗುವುದಿಲ್ಲ. ಇಲ್ಲದಿದ್ದಾಗ ಮಾತ್ರವೇ ಹೋಗುತ್ತೇನೆ’ ಎಂದರು.

ಮುಖ್ಯಾಂಶಗಳು

- ಶೇ 100ರಷ್ಟು ಒಪ್ಪಿಗೆ ಯಾವುದಕ್ಕೂ ಇರುವುದಿಲ್ಲ: ಸಿ.ಎಂ
- ಹಿಂದಿ ಕಡ್ಡಾಯ ಆಗಬಾರದು ಎಂಬ ನಿಟ್ಟನಲ್ಲಿ ಈ ಕ್ರಮ
- ಐಪಿಎಲ್ ಟಿಕೆಟ್: ತಪ್ಪು ಸರಿ ಎಂಬ ಪ್ರಶ್ನೆ ಇಲ್ಲ

‘ಹಿಂದಿಗೆ ಗ್ರೇಡ್: ದ್ವಿಭಾಷಾ ನೀತಿಯ ಭಾಗ’

ಪ್ರಜಾವಾಣಿ ವಾರ್ತೆ


ಮಧು ಬಂಗಾರಪ್ಪ

ಬೆಂಗಳೂರು: ದ್ವಿಭಾಷಾ ನೀತಿಯ ಭಾಗವಾಗಿಯೇ ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆಯ ಅಂಕಗಳನ್ನು ಫಲಿತಾಂಶಕ್ಕೆ ಪರಿಗಣಿಸದಿರಲು ನಿರ್ಧರಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಂಕಗಳ ಬದಲು ಗ್ರೇಡ್ ನೀಡುವ ಪದ್ಧತಿ ಜಾರಿಗೆ ತಂದಿದ್ದಕ್ಕಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ.ನಾರಾಯಣಗೌಡ, ಕವಿರಾಜ್ ನೇತೃತ್ವದ ‘ನಮ್ಮ ನಾಡು–ನಮ್ಮ ಆಳ್ವಿಕೆ’ ವೇದಿಕೆಯ ಸದಸ್ಯರಿಂದ ಕೃತಜ್ಞತಾ ಸನ್ಮಾನ ಸ್ವೀಕರಿಸಿದ ನಂತರ ಅವರು ಮಾತನಾಡಿದರು.

ತಮ್ಮದಲ್ಲದ ಹಿಂದಿ ಭಾಷೆಯ ಬಲವಂತದ ಕಲಿಕೆಗೆ ಸಿಲುಕಿ ಪ್ರತಿ ವರ್ಷ ಸುಮಾರು 1.50 ಲಕ್ಷ ಮಕ್ಕಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ. ಇದು ಮಕ್ಕಳ ಮೇಲೆ ಬಲವಂತವಾಗಿ ಹಿಂದಿ ಹೇರಿಕೆಯ ಒತ್ತಡವನ್ನು ಸೂಚಿಸುತ್ತದೆ. ನೆರೆಯ ತಮಿಳುನಾಡು ಸೇರಿದಂತೆ ಬಹುತೇಕ ರಾಜ್ಯಗಳಲ್ಲಿ ದ್ವಿಭಾಷಾ ನೀತಿ ಜಾರಿಯಲ್ಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ದ್ವಿಭಾಷಾ ನೀತಿಯ ಬಗ್ಗೆ ಒಲವು ಇಟ್ಟುಕೊಂಡಿದ್ದಾರೆ. ಅವರ ಸಮ್ಮತಿಯಂತೆ ವಿದ್ಯಾರ್ಥಿಗಳ ಭವಿಷ್ಯ, ಇತರೆ ರಾಜ್ಯಗಳ ಜತೆಗಿನ ಭಾಷಾ ಸಂವಹನವನ್ನು ಉತ್ತೇಜಿಸಲು ಹಿಂದಿಯನ್ನು ಕೈಬಿಡುವ ಬದಲು ಐಚ್ಛಿಕವಾಗಿಸಲಾಗುತ್ತಿದೆ. ಅಂಕಗಳ ಒತ್ತಡದಿಂದ ಮುಕ್ತಿ ನೀಡಲು ಫಲಿತಾಂಶದಲ್ಲಿ ಪರಿಗಣಿಸದೇ ಇರುವ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

‘ಸರ್ಕಾರದ ನಿರ್ಧಾರವನ್ನು ಟೀಕೆ ಮಾಡುತ್ತಿರುವ ಬಿ.ವೈ.ವಿಜಯೇಂದ್ರ, ಎಸ್. ಸುರೇಶ್‌ಕುಮಾರ್ ಸೇರಿಂತೆ ಬಿಜೆಪಿ ನಾಯಕರಿಗೆ ರಾಜ್ಯದ ಕನ್ನಡಿಗರೇ ಪಾಠ ಕಲಿಸುತ್ತಾರೆ. ಬಿ.ಎಸ್.ಯಡಿಯೂರಪ್ಪ ಅವರಿಗೆ ಇರುವ ಕನ್ನಡಾಭಿಮಾನವೂ ಅವರ ಪುತ್ರ, ಪಕ್ಷದವರಿಗೆ ಇಲ್ಲದೆ ಇರುವುದು ಅವರ ಕನ್ನಡ ವಿರೋಧಿತನಕ್ಕೆ ಸಾಕ್ಷಿ’ ಎಂದು ಮಧು ಬಂಗಾರಪ್ಪ ಹೇಳಿದರು.

‘ಲವ್ ಜಿಹಾದ್: ಪ್ರಕರಣ ದಾಖಲಾಗಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅನಧಿಕೃತ ಅಥವಾ ಬಲವಂತದ ಮತಾಂತರ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಜಾರಿಗೊಂಡಿರುವ ‘ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು (ಮತಾಂತರ ನಿಷೇಧ) ಕಾಯ್ದೆ’ ಅಡಿ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 17 ಪ್ರಕರಣಗಳು ದಾಖಲಾಗಿವೆ.

ಆದರೆ, ಪ್ರೇಮದ ಮೂಲಕ ಧರ್ಮಾಂತರ (ಲವ್ ಜಿಹಾದ್) ಆರೋಪಗಳ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ ಮಾಹಿತಿ ನೀಡಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಡಿ.ಎಸ್. ಅರುಣ್ ಕೇಳಿದ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದ್ದಾರೆ.

‘2023ರಲ್ಲಿ 10, 2024ರಲ್ಲಿ 3, 2025ರಲ್ಲಿ 4 ಬಲವಂತದ ಮತಾಂತರ ಪ್ರಕರಣಗಳು ದಾಖಲಾಗಿವೆ. 2026ರಲ್ಲಿ ಈವರೆಗೆ ಯಾವುದೇ ಪ್ರಕರಣ ದಾಖಲಾಗಿಲ್ಲ. 17 ಪ್ರಕರಣಗಳ ಪೈಕಿ, ಮೂರು ಪ್ರಕರಣಗಳು ತನಿಖೆಯಲ್ಲಿವೆ. ಏಳು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ. ಮೂರು ಪ್ರಕರಣಗಳಲ್ಲಿ ಪೊಲೀಸರು ‘ಬಿ’ ಅಂತಿಮ ವರದಿ ಸಲ್ಲಿಸಿದ್ದಾರೆ. ಯಾವುದೇ ಪ್ರಕರಣಗಳಲ್ಲಿ ಶಿಕ್ಷೆ ಆಗಿಲ್ಲ’ ಎಂದು ತಿಳಿಸಿದ್ದಾರೆ.

ಮಳೆ: ಪರದಾಟ

– ಪಿಟಿಐ ಚಿತ್ರ


ಗುವಾಹಟಿಯಲ್ಲಿ ಭಾರಿ ಮಳೆಯಿಂದ ರಸ್ತೆಗಳು ಜಲಾವೃತವಾಗಿದ್ದರಿಂದ ಸಾರ್ವಜನಿಕರು ರಸ್ತೆ ದಾಟಲು ಪರದಾಡಿದರು

153 ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಪದಕ

ಬೆಂಗಳೂರು: ಮೂರು ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳೂ ಸೇರಿದಂತೆ ರಾಜ್ಯದ 153 ಪೊಲೀಸ್ ಅಧಿಕಾರಿಗಳಿಗೆ 2025ನೇ ಸಾಲಿನ ಮುಖ್ಯಮಂತ್ರಿ ಪದಕ ಲಭಿಸಿದೆ.

ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ. ಪನ್ನೇಕರ್, ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಅರುಣ್, ಯಾದಗಿರಿ ಜಿಲ್ಲೆಯ ಎಸ್.ಪಿ ಪೃಥ್ವಿಕ್ ಶಂಕರ್, ಬೆಂಗಳೂರು ದಕ್ಷಿಣ ಸಂಚಾರ ವಿಭಾಗದ ಡಿಸಿಪಿ ಗೋಪಾಲ ಎಂ. ಬ್ಯಾಕೋಡ ಅವರಿಗೆ ಮುಖ್ಯಮಂತ್ರಿ ಪದಕ ಘೋಷಿಸಲಾಗಿದೆ.

ಹಾಸನ ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಕೆ. ತಮ್ಮಯ್ಯ, ಶಿವಮೊಗ್ಗದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ರಮೇಶ್ ಕುಮಾರ್, ರಾಜ್ಯ ಗುಪ್ತದಳ ವಿಭಾಗದ ಡಿವೈಎಸ್‌ಪಿ ಆರ್.ವಾಸು, ಬೆಳಗಾವಿ ನಗರ ಮಾರುಕಟ್ಟೆ ಉಪ ವಿಭಾಗದ ಎಸಿಪಿ ಸಂತೋಷ್ ದಯಾನಂದ ಸತ್ಯನಾಯಕ್, ಬೆಂಗಳೂರಿನ ಜಯನಗರ ಉಪ ವಿಭಾಗದ ಎಸಿಪಿ ವಿ.ನಾರಾಯಣಸ್ವಾಮಿ, ವಿಜಯಪುರ ಜಿಲ್ಲೆ ಗ್ರಾಮಾಂತರ ಉಪ ವಿಭಾಗದ ಡಿವೈಎಸ್‌ಪಿ ತುಳಜಪ್ಪ ಸುಲ್ಪಿ, ಕೊಪ್ಪಳ ಸೈಬರ್ ಅಪರಾಧ ಪೊಲೀಸ್ ಠಾಣೆಯ ಡಿವೈಎಸ್‌ಪಿ ಸಿದ್ದಲಿಂಗಪ್ಪ ಗೌಡ ಪಾಟೀಲ್, ಬೆಂಗಳೂರಿನಲ್ಲಿ ಇರುವ ಸಿಐಡಿ ಡಿವೈಎಸ್‌ಪಿ ಎಂ.ಎಚ್. ಉಮೇಶ್, ಬೆಂಗಳೂರು ನಗರ ಸಂಚಾರ ಯೋಜನಾ ವಿಭಾಗದ ಎಸಿಪಿ ಜಿ.ಪ್ರಭಾಕರ್ ಸೇರಿದಂತೆ 153 ಪೊಲೀಸ್ ಅಧಿಕಾರಿಗಳಿಗೆ ಪದಕ ಲಭಿಸಿದೆ.

ಏಪ್ರಿಲ್ 2ರಂದು ಬೆಂಗಳೂರಿನಲ್ಲಿ ಪದಕ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಚಿಟಿಕೆ ಸುದ್ದಿ

ಎಂಜಿನ್ ವೈಫಲ್ಯ: ವಿಮಾನ ತುರ್ತು ಭೂಸ್ಪರ್ಶ

ಮುಂಬೈ (ಪಿಟಿಐ): ವಿಶಾಖಪಟ್ಟಣ ದಿಂದ ಹೊರಟ್ಟಿದ್ದ ಇಂಡಿಗೊ ವಿಮಾನವೊಂದು ಎಂಜಿನ್ ವೈಫಲ್ಯದ ಕಾರಣಕ್ಕೆ ದೆಹಲಿ ವಿಮಾನ ನಿಲ್ದಾಣದಲ್ಲಿ ಶನಿವಾರ ತುರ್ತು ಭೂಸ್ಪರ್ಶ ಮಾಡಿದೆ.

‘160 ಪ್ರಯಾಣಿಕರಿದ್ದ ವಿಮಾನವು ತುರ್ತು ಭೂಸ್ಪರ್ಶ ಮಾಡಲಿದ್ದ ಕಾರಣ ಬೆಳಿಗ್ಗೆ 10.39ಕ್ಕೆ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು’ ಎಂದು ಮೂಲಗಳು ಹೇಳಿವೆ.

‘ತಾಂತ್ರಿಕ ದೋಷ ಪತ್ತೆಯಾದ ತಕ್ಷಣ ತುರ್ತು ಭೂಸ್ಪರ್ಶಕ್ಕೆ ಅವಕಾಶ ನೀಡುವಂತೆ ವಿಮಾನ ನಿಲ್ದಾಣಕ್ಕೆ ಸೂಚನೆ ನೀಡಲಾಗಿತ್ತು’ ಎಂದು ಇಂಡಿಗೊ ವಕ್ತಾರರು ತಿಳಿಸಿದ್ದಾರೆ.

ಅಮರಾವತಿ: ಕಾಯ್ದೆ ತಿದ್ದುಪಡಿ ನಿರ್ಣಯ ಅಂಗೀಕಾರ

ಹೈದರಾಬಾದ್: ರಾಜ್ಯದ ರಾಜಧಾನಿಯಾಗಿ ಅಮರಾವತಿ ನಗರಕ್ಕೆ ಕಾನೂನುಬದ್ಧ ಮಾನ್ಯತೆ ನೀಡುವುದಕ್ಕೆ ಆಂಧ್ರಪ್ರದೇಶ ಪುನರ್‌ರಚನೆ ಕಾಯ್ದೆಗೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಸರ್ವಾನುಮತದ ನಿರ್ಣಯವನ್ನು ಆಂಧ್ರಪ್ರದೇಶ ವಿಧಾನಸಭೆಯಲ್ಲಿ ಶನಿವಾರ ಅಂಗೀಕರಿಸಲಾಯಿತು.

ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಮಂಡಿಸಿದ ನಿರ್ಣಯ ಕುರಿತು ಸುದೀರ್ಘ ಐದೂವರೆ ಗಂಟೆ ಚರ್ಚೆ ನಡೆಸಿ, ಬಳಿಕ ಅಂಗೀಕರಿಸಲಾಯಿತು. ಇದಕ್ಕಾಗಿಯೇ ವಿಶೇಷ ಅಧಿವೇಶನ ಕರೆಯಲಾಗಿತ್ತು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು,‘ಅಮರಾವತಿಯು ಶಾಶ್ವತವಾಗಿ ಆಂಧ್ರಪ್ರದೇಶದ ರಾಜಧಾನಿಯಾಗಿರಲಿದೆ’ ಎಂದು ಘೋಷಿಸಿದರು.

ವೈಎಸ್‌ಆರ್ ಕಾಂಗ್ರೆಸ್ ಮುಖ್ಯಸ್ಥ ಹಾಗೂ ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನಮೋಹನ್ ರೆಡ್ಡಿ ವಿರುದ್ಧ ಇದೇ ವೇಳೆ ವಾಗ್ದಾಳಿ ನಡೆಸಿದ ನಾಯ್ಡು,‘ಅಮರಾವತಿ ಅಭಿವೃದ್ಧಿ ಯೋಜನೆಯನ್ನು ಜಗನ್ ಮೋಹನ್ ರೆಡ್ಡಿ ಸಮರ್ಪಕವಾಗಿ ಅನುಷ್ಠಾನ ಮಾಡಲಿಲ್ಲ. ಯೋಜನೆ ಕುರಿತು ಪದೇಪದೇ ತಮ್ಮ ನಿಲುವು ಬದಲಿಸುವ ಮೂಲಕ ಅಮರಾವತಿಗೆ ದ್ರೋಹ ಬಗೆದರು’ ಎಂದರು.

‘ಅಮರಾವತಿಯನ್ನು ಆಡಳಿತ ಕೇಂದ್ರವಾಗಿ ಮಾತ್ರವಲ್ಲ ಹೈದರಾಬಾದ್,ಬೆಂಗಳೂರು ಹಾಗೂ ಚೆನ್ನೈ ನಗರಗಳಂತೆ ವಿಶ್ವದರ್ಜೆಯ ನಗರವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು’ ಎಂದರು. ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಹುಲಿಗೆ ವಿಷಪ್ರಾಶನ: ಐವರ ಬಂಧನ

ಭೋಪಾಲ (ಪಿಟಿಐ): ಮಧ್ಯ ಪ್ರದೇಶದ ಸತ್ಪುರ ಅಭಯಾರಣ್ಯದಲ್ಲಿ ಹುಲಿಗೆ ವಿಷಪ್ರಾಶನ ಮಾಡಿ ಕೊಂದಿರುವ ಆರೋಪದಲ್ಲಿ ಐವರನ್ನು ಬಂಧಿಸಲಾಗಿದೆ ಎಂದು ಮಧ್ಯಪ್ರದೇಶ ಪೊಲೀಸರು ತಿಳಿಸಿದ್ದಾರೆ.

ಅರಣ್ಯದಲ್ಲಿ ಅಕ್ರಮವಾಗಿ ಅಫೀಮು ಬೆಳೆಯುತ್ತಿದ್ದ ಆರೋಪಿಗಳು, ಹುಲಿಯನ್ನು ಕೊಂದು ಪಶ್ಚಿಮ ಛಿದ್ವಾರ ವಿಭಾಗದ ಅರಣ್ಯದಲ್ಲಿ ಹೂತು ಹಾಕಿದ್ದರು. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಸತ್ಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ರಾಖಿ ನಂದ ತಿಳಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ಈ ವರ್ಷದ ಜನವರಿಯಿಂದ ಇದುವರೆಗೆ 14 ಹುಲಿಗಳು ಮೃತಪಟ್ಟಿವೆ.

ಪ್ರಾಧ್ಯಾಪಕನ ವಿರುದ್ಧ ಬೆಂಗಳೂರಿನ ಗಿರಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲು

ಮುಸ್ಲಿಂ ವಿದ್ಯಾರ್ಥಿಗೆ ‘ಉಗ್ರ’ ಎಂದು ನಿಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತರಗತಿಯಲ್ಲಿ ಮುಸ್ಲಿಂ ವಿದ್ಯಾರ್ಥಿಯನ್ನು ‘ಭಯೋತ್ಪಾದಕ’ ಎಂದು ನಿಂದಿಸಿದ್ದ ಆರೋಪದಡಿ ಬನಶಂಕರಿ ಮೂರನೇ ಹಂತದ ಹೊಸಕೆರೆಹಳ್ಳಿಯ ಪಿಇಎಸ್ ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಮುರುಳೀಧರ್ ದೇಶಪಾಂಡೆ ವಿರುದ್ಧ ಗಿರಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಠಾಣೆಯ ಗುಪ್ತದಳದ ಹೆಡ್‌ಕಾನ್‌ಸ್ಟೆಬಲ್ ಟಿ.ಎನ್.ರವಿಕುಮಾರ್ ಅವರು ಸಾಮಾಜಿಕ ಜಾಲತಾಣ ಪರಿಶೀಲನೆ ನಡೆಸುವ ವೇಳೆ ‘ಎಕ್ಸ್’ ಖಾತೆಯಲ್ಲಿ ವಿಡಿಯೊವನ್ನು ಗಮನಿಸಿದ್ದರು. ಅದರಲ್ಲಿ ನಿಂದನೆ ಮಾಡುತ್ತಿರುವುದು ಕಂಡುಬಂದಿತ್ತು. ರವಿಕುಮಾರ್ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ ಎಂದು ಮೂಲಗಳು ಹೇಳಿವೆ.

‘ಮುರುಳೀಧರ್ ಅವರು ಪಾಠ ಮಾಡುತ್ತಿದ್ದಾಗ ವಿದ್ಯಾರ್ಥಿಗಳು ಗಲಾಟೆ ಮಾಡುತ್ತಿದ್ದರು. ಅದರಿಂದ ಕೋಪಗೊಂಡಿದ್ದ ಪ್ರಾಧ್ಯಾಪಕ, ವಿದ್ಯಾರ್ಥಿಯೊಬ್ಬನನ್ನು ‘ಭಯೋತ್ಪಾದಕ’ ಎಂದು ನಿಂದಿಸಿದ್ದಾರೆ. ಇದೇ ವೇಳೆ ತರಗತಿಯಲ್ಲಿ ಕುಳಿತಿದ್ದ ವಿದ್ಯಾರ್ಥಿಗಳು, ನಿಂದನೆ ಮಾಡುತ್ತಿರುವ ದೃಶ್ಯವನ್ನು ಮೊಬೈಲ್ ನಲ್ಲಿ ಸೆರೆ ಹಿಡಿದಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ’ ಎಂದು ಮೂಲಗಳು ತಿಳಿಸಿವೆ.


‘ತರಗತಿಯಲ್ಲಿ 60 ವಿದ್ಯಾರ್ಥಿಗಳು ಇದ್ದರು. ಆ ಪೈಕಿ ಒಬ್ಬ ವಿದ್ಯಾರ್ಥಿಯನ್ನು ಗುರಿಯಾಗಿಸಿ ನಿಂದನೆ ಮಾಡಿದ್ದಾರೆ. ಮುಸ್ಲಿಂ ಸಮುದಾಯದ ವಿದ್ಯಾರ್ಥಿಯನ್ನು ಅವಹೇಳನ ಮಾಡಲಾಗಿದೆ. 13 ಬಾರಿ ‘ಭಯೋತ್ಪಾದಕ’ ಎಂದು ನಿಂದಿಸಲಾಗಿದೆ. ‘ನಿಮ್ಮಂತಹವರಿಂದಲೇ ಇರಾನ್ ಯುದ್ಧ ನಡೆಯಿತು, ಟ್ರಂಪ್ ನಿನ್ನನ್ನು ಕರೆದೊಯ್ಯುತ್ತಾರೆ, ನೀನು ಮೂರ್ಖ’ ಎಂದೆಲ್ಲಾ ನಿಂದನಾತ್ಮಕ ಮಾತುಗಳನ್ನು ಆಡಿದ್ದಾರೆ ಎಂದು ದೂರು ನೀಡಲಾಗಿದೆ.

‘ನಿಂದನೆಗೆ ಒಳಗಾದ ವಿದ್ಯಾರ್ಥಿಯ ನೆರವಿಗೆ ಕೆಲವು ವಿದ್ಯಾರ್ಥಿಗಳು ಬಂದಿದ್ದರು. ಅಂತಹ ವಿದ್ಯಾರ್ಥಿ ಗಳನ್ನು ಅಮಾನತು ಮಾಡಲಾಗಿತ್ತು. ಪ್ರಶ್ನಿಸಿದರೆ ತರಗತಿಯಲ್ಲಿ ಗಲಾಟೆ ಮಾಡುತ್ತಿದ್ದೀರಿ ಎನ್ನುವ ಕಾರಣ ನೀಡಲಾಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಘಟನೆ ಖಂಡಿಸಿ ವಿದ್ಯಾರ್ಥಿ ಸಂಘಟನೆಗಳು ಕಾಲೇಜು ಆವರಣದಲ್ಲಿ ಪ್ರತಿಭಟನೆ ನಡೆಸಿವೆ. ಪ್ರಾಧ್ಯಾಪಕರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ ಸಹ ಪೊಲೀಸರಿಗೆ ದೂರು ನೀಡಿದೆ.

ಸಮಯ ಕೇಳಿದ ವಿದ್ಯಾರ್ಥಿ: ‘ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ವಿಷಯ ಆಗಿದ್ದರಿಂದ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ವಿಡಿಯೊ ಆಧರಿಸಿ ಪ್ರಾಧ್ಯಾಪಕರ ವಿರುದ್ಧ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲು ಮಾಡಲಾಗಿದೆ. ಸಂತ್ರಸ್ತ ವಿದ್ಯಾರ್ಥಿ ದೂರು ನೀಡಲು ಸಮಯಾವಕಾಶ ಕೇಳಿದ್ದಾರೆ. ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಪ್ರತಿಕ್ರಿಯೆ ಆಧರಿಸಿ, ಮುರುಳೀಧರ್ ದೇಶಪಾಂಡೆ ವಿರುದ್ಧ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

ಪ್ರಾಧ್ಯಾಪಕ ಅಮಾನತು, ತನಿಖೆಗೆ ಆದೇಶ


ಮುರುಳೀಧರ್ ದೇಶಪಾಂಡೆ

ಕಾಲೇಜು ಆಡಳಿತ ಮಂಡಳಿಗೆ ವಿದ್ಯಾರ್ಥಿ ದೂರು ನೀಡಿದ್ದಾರೆ. ಪ್ರಾಧ್ಯಾಪಕ ಮುರುಳೀಧರ್ ದೇಶಪಾಂಡೆ ಅವರನ್ನು ಅಮಾನತು ಮಾಡಿ ತನಿಖೆಗೆ ಆದೇಶಿಸಲಾಗಿದೆ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕಿ ಗುರುತು ಬಹಿರಂಗ: ‘ಸುಪ್ರೀಂ’ ಕಿಡಿ

ಅತ್ಯಾಚಾರ: ಆದೇಶಗಳಲ್ಲಿಯೂ ಹೆಸರು ಉಲ್ಲೇಖ ಸಲ್ಲ

ನವದೆಹಲಿ(ಪಿಟಿಐ): ಅತ್ಯಾಚಾರ ಪ್ರಕರಣವೊಂದರಲ್ಲಿ ಸಂತ್ರಸ್ತ ಬಾಲಕಿಯ ಗುರುತನ್ನು ಬಹಿರಂಗಪಡಿಸಿದ್ದನ್ನು ಕಟುವಾದ ಮಾತುಗಳಿಂದ ಖಂಡಿಸಿರುವ ಸುಪ್ರೀಂ ಕೋರ್ಟ್, ‘ಅತ್ಯಾಚಾರಕ್ಕೆ ಒಳಗಾಗಿರುವವರು ಹಾಗೂ ಅವರ ಕುಟುಂಬ ಸದಸ್ಯರ ಹೆಸರುಗಳನ್ನು ನ್ಯಾಯಾಲಯದ ಆದೇಶಗಳಲ್ಲಿ ಉಲ್ಲೇಖಿಸದೇ ಇರುವುದನ್ನು ಖಾತ್ರಿಪಡಿಸಬೇಕು’ ಎಂದು ಎಲ್ಲ ಹೈಕೋರ್ಟ್‌ಗಳಿಗೆ ನಿರ್ದೇಶನ ನೀಡಿದೆ.

‘ಈ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ಆದೇಶಗಳನ್ನು ಪಾಲನೆ ಮಾಡುವಲ್ಲಿ ನ್ಯಾಯಾಲಯಗಳು ತೋರುತ್ತಿರುವ ಉದಾಸೀನತೆ ಹಾಗೂ ಇಂತಹ ಪ್ರಕರಣಗಳಿಂದ ಕಂಡುಬರುವ ಕಳಂಕ ಕುರಿತಂತೆ ಅರಿವಿನ ಕೊರತೆ ಇಂತಹ ಸಮಸ್ಯೆಗಳಿಗೆ ಕಾರಣ’ ಎಂದೂ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

9 ವರ್ಷದ ಬಾಲಕಿಯ ಅತ್ಯಾಚಾರ ಪ್ರಕರಣದಲ್ಲಿ ವ್ಯಕ್ತಿಯೊಬ್ಬ ತಪ್ಪಿತಸ್ಥ ಎಂದು ಘೋಷಿಸಿ ನೀಡಲಾಗಿದ್ದ ಆದೇಶವನ್ನು ಹಿಮಾಚಲ ಪ್ರದೇಶ ಹೈಕೋರ್ಟ್ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಹೈಕೋರ್ಟ್ ಆದೇಶವನ್ನು ರದ್ದುಪಡಿಸಿದ ವೇಳೆ ಈ ಮಾತು ಹೇಳಿದೆ. ನ್ಯಾಯಮೂರ್ತಿಗಳಾದ ಸಂಜಯ ಕರೋಲ್ ಹಾಗೂ ಎನ್. ಕೋಟಿಶ್ವರ್ ಸಿಂಗ್ ಅವರು ಇದ್ದ ಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆ ಹಾಗೂ ಆಕೆಯ ಕುಟುಂಬದವರ ಹೆಸರುಗಳನ್ನು ಆದೇಶಗಳಲ್ಲಿ ಉಲ್ಲೇಖಿಸಬಾರದು ಎಂಬುದಕ್ಕೆ ಸಂಬಂಧಿಸಿದ ತೀರ್ಪಿನ ಪ್ರತಿಯನ್ನು ಹೈಕೋರ್ಟ್‌ಗಳ ರಜಿಸ್ಟ್ರಾರ್ ಜನರಲ್‌ಗಳಿಗೆ ಕಳುಹಿಸಬೇಕು ಎಂದು ನ್ಯಾಯಪೀಠ ನಿರ್ದೇಶನ ನೀಡಿದೆ.

ನ್ಯಾಯಪೀಠ ಹೇಳಿದ್ದು

- ಅತ್ಯಾಚಾರ ಪ್ರಕರಣಗಳ ಸಂತ್ರಸ್ತೆ ಹೆಸರನ್ನು ಅಥವಾ ಸಂತ್ರಸ್ತೆಯನ್ನು ಗುರುತಿಸುವುದಕ್ಕೆ ನೆರವಾಗಬಲ್ಲ ವಿವರಗಳನ್ನು ಯಾವುದೇ ವ್ಯಕ್ತಿ ಮುದ್ರಿಸಬಾರದು ಅಥವಾ ಮುದ್ರಣ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸಬಾರದು ಎಂದು 2018ರಲ್ಲಿ(ನಿಪುಣ್ ಸಕ್ಸೇನಾ ಪ್ರಕರಣ) ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ
- ಅತ್ಯಾಚಾರ ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸುವುದು ಅಪರಾಧ ಎಂಬ ಅವಕಾಶವನ್ನು 1983ರಲ್ಲಿ ತಂದ ತಿದ್ದುಪಡಿ ಮೂಲಕ ಐಪಿಸಿ ಸೆಕ್ಷನ್ 376ರಲ್ಲಿ ಸೇರಿಸಲಾಗಿದೆ. ಈ ತಿದ್ದುಪಡಿಗೂ ಮುನ್ನ, ಅತ್ಯಾಚಾರ ಸಂತ್ರಸ್ತೆಯ ಹೆಸರು ಅಥವಾ ವಿವರಗಳನ್ನು ಮಾಧ್ಯಮಗಳಲ್ಲಿ ಪ್ರಕಟಿಸುವುದಕ್ಕೆ ಯಾವುದೇ ನಿರ್ಬಂಧ ಇರಲಿಲ್ಲ
- ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆಯನ್ನು ಇತರ ಸಾಕ್ಷಿದಾರರಂತೆಯೇ ಪರಿಗಣಿಸಲಾಗುತ್ತಿದೆ. ಇದೇ ಕಾರಣದಿಂದಾಗಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳಲ್ಲಿ ಆಕೆಯ ಹೆಸರನ್ನು ಮುಕ್ತವಾಗಿ ಉಲ್ಲೇಖಿಸಲಾಗುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ



ಸ್ಕಾಚ್ ರಾಷ್ಟ್ರೀಯ ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಸ್ವೀಕರಿಸಿದರು.

ಕೆಎಸ್‌ಆರ್‌ಟಿಸಿಗೆ ‘ಸ್ಕಾಚ್’ ರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು: ಪಾರದರ್ಶಕ ನೇಮಕಾತಿ ಮತ್ತು ಪರಿಣಾಮಕಾರಿ ತರಬೇತಿ ಕಾರ್ಯಕ್ರಮಕ್ಕಾಗಿ ಕೆಎಸ್‌ಆರ್‌ಟಿಸಿಗೆ ಸ್ಕಾಚ್ ರಾಷ್ಟ್ರೀಯ ಪ್ರಶಸ್ತಿ ಸಂದಿದೆ.

ತಂತ್ರಜ್ಞಾನ ಆಧಾರಿತ ನೇಮಕಾತಿ ವ್ಯವಸ್ಥೆ, ಸ್ವಯಂ ಚಾಲಿತ ಚಾಲನಾ ಪರೀಕ್ಷೆ, ಆನ್‌ಲೈನ್ ಪರೀಕ್ಷೆಗಳು, ದಾಖಲೆಗಳ ಡಿಜಿಟಲ್ ಪರಿಶೀಲನೆ, ವೆಬ್ ಕ್ಯಾಸ್ಟಿಂಗ್, ಅಟೋ ಜನರೇಟಡ್ ಅಂಕಪಟ್ಟಿ ನೀಡುವ ಮೂಲಕ 2,000 ಚಾಲಕ/ ನಿರ್ವಾಹಕರು, 300 ತಾಂತ್ರಿಕ ಸಿಬ್ಬಂದಿ, 441 ಅನುಕಂಪ ಆಧಾರದಲ್ಲಿ ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ.

ಜೊತೆಗೆ ಆರು ತಿಂಗಳಲ್ಲಿ 12,000ಕ್ಕೂ ಹೆಚ್ಚು ಸಿಬ್ಬಂದಿಗೆ ಪರಿಣಾಮಕಾರಿ ತರಬೇತಿ ನೀಡಲಾಗಿದ್ದು, ನಿಗಮದ ಸಮಗ್ರ ವಿಷಯ ನಿರೂಪಣೆಯಲ್ಲಿನ ಬದಲಾವಣೆಗೆ ಸಹಕಾರಿಯಾಗಿತ್ತು. ಇದನ್ನು ಪರಿಗಣಿಸಿ ದೆಹಲಿ ಮೂಲದ ಸ್ಕಾಚ್ ಸಂಸ್ಥೆಯು ಪ್ರಶಸ್ತಿಗೆ ಆಯ್ಕೆ ಮಾಡಿದೆ. ದೆಹಲಿಯಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಪ್ರಶಸ್ತಿ ಸ್ವೀಕರಿಸಿದರು.

ಗುಜರಾತ್: ಹೆಬ್ಬಕ ಮರಿ ಜನನ

ನವದೆಹಲಿ: ಗುಜರಾತ್‌ನ ಕಛ್‌ನ ಹುಲ್ಲಗಾವಲು ಪ್ರದೇಶದಲ್ಲಿ ದಶಕದ ಬಳಿಕ ಹೆಬ್ಬಕ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಮರಿಯೊಂದು ಜನಿಸಿದೆ. ಇದು, ಈ ಪ್ರಭೇದದ ಪಕ್ಷಿಗಳ ಸಂತತಿ ಹೆಚ್ಚಳದ ಭರವಸೆ ಮೂಡಿಸಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಕಛ್‌ನಲ್ಲಿ ಕೇವಲ ಮೂರು ಹೆಣ್ಣು ಹೆಬ್ಬಕಗಳು ಉಳಿದಿವೆ. ಹೆಣ್ಣು ಹೆಬ್ಬಕವೊಂದು ಕಳೆದ ವರ್ಷ ಆಗಸ್ಟ್‌ನಲ್ಲಿ ಫಲವತ್ತಲ್ಲದ ಮೊಟ್ಟೆ ಹಾಕಿತ್ತು. ಇದನ್ನು ರಾಜಸ್ಥಾನದಲ್ಲಿರುವ ಸಂತಾನೋತ್ಪತ್ತಿ ಕೇಂದ್ರಕ್ಕೆ ಕಳುಹಿಸಿ, ಕೃತಕವಾಗಿ ಕಾವು ಕೊಡುವ ವ್ಯವಸ್ಥೆ ಮಾಡಲಾಗಿತ್ತು. ಭಾರತೀಯ ವನ್ಯಜೀವಿ ಸಂಸ್ಥೆ(ಡಬ್ಲುಐಐ) ವಿಜ್ಞಾನಿಗಳು ಈ ಮೊಟ್ಟೆಯನ್ನು 770 ಕಿ.ಮೀ. ದೂರ ಕ್ರಮಿಸಿ, ಕಛ್‌ನಲ್ಲಿರುವ ಹೆಬ್ಬಕಗಳ ಆವಾಸ ಸ್ಥಾನಕ್ಕೆ ಯಶಸ್ವಿಯಾಗಿ ತಂದಿದ್ದರು ಎಂದು ಕೇಂದ್ರ ಪರಿಸರ ಸಚಿವಾಲಯ ಶನಿವಾರ ತಿಳಿಸಿದೆ.

ಇನ್‌ಕ್ಯುಬೇಟರ್‌ನಲ್ಲಿದ್ದ ಈ ಮೊಟ್ಟೆಯನ್ನು ಮಾರ್ಚ್ 22ರಂದು ಹೆಬ್ಬಕದ ಗೂಡಿನೊಳಗೆ ಇರಿಸಲಾಗಿತ್ತು. ಹೆಬ್ಬಕವು ಕಾವು ಕೊಟ್ಟು, ಮಾರ್ಚ್ 26ರಂದು ಮರಿ ಜನಿಸುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ತಜ್ಞರ ತಂಡವೊಂದು ಮರಿಯ ಬೆಳವಣಿಗೆ ಮೇಲೆ ನಿಗಾ ವಹಿಸಿದ್ದಾರೆ ಎಂದು ಸಚಿವಾಲಯ ತಿಳಿಸಿದೆ. ‘ಅಳಿವಿನಂಚಿನಲ್ಲಿರುವ ಹೆಬ್ಬಕಗಳ ಸಂರಕ್ಷಣೆಯಲ್ಲಿ ಈ ಸಾಧನೆ ಮಹತ್ವದ್ದಾಗಿದೆ’ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಹೇಳಿದ್ದಾರೆ.


ಹೆಬ್ಬಕದ ಮರಿಯೊಂದು ಗುಜರಾತ್‌ನ ಕಛ್‌ನಲ್ಲಿ ಓಡಾಡುತ್ತಿರುವುದು –ಪಿಟಿಐ ಚಿತ್ರ

ದೇಶದಲ್ಲೇ ಮೊದಲು – ಆರೋಗ್ಯ ಸೇವೆಯಲ್ಲಿ ರಾಜ್ಯ ಮುಂದು: ಶರಣ ಪ್ರಕಾಶ ಪಾಟೀಲ

‘ಮಕ್ಕಳಿಗಾಗಿ 450 ಹಾಸಿಗೆ ಆಸ್ಪತ್ರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರೋಗ್ಯ ಸೇವೆಯಲ್ಲಿ ಕರ್ನಾಟಕವು ದೇಶದಲ್ಲೇ ಮುಂಚೂಣಿಯಲ್ಲಿದೆ. ನಮ್ಮ ಸರ್ಕಾರವು ದೇಶದಲ್ಲಿ ಮೊದಲ ಬಾರಿಗೆ ಮಕ್ಕಳಿಗಾಗಿ 450 ಹಾಸಿಗೆಯುಳ್ಳ ಅತ್ಯಾಧುನಿಕ ಹಾಗೂ ಸುಸಜ್ಜಿತ ಆಸ್ಪತ್ರೆ ಆರಂಭಿಸಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

ನಗರದ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಆವರಣದಲ್ಲಿ ನಿರ್ಮಿಸಲಾಗಿರುವ ನೂತನ ಮಕ್ಕಳ ಆಸ್ಪತ್ರೆಯನ್ನು ಜನಾರ್ಪಣೆ ಮಾಡಿ ಅವರು ಮಾತನಾಡಿದರು. ‘ಮಕ್ಕಳಿಗೆ ಉತ್ತಮ ಆರೈಕೆ ಮತ್ತು ಚಿಕಿತ್ಸೆ ದೊರೆಯುವಂತೆ ಮಾಡಲು ಈ ಆಸ್ಪತ್ರೆ ನಿರ್ಮಿಸಲಾಗಿದೆ. ರಾಜ್ಯದ ಮತ್ತು ಬೇರೆ ರಾಜ್ಯಗಳಿಂದ ಬರುವ ರೋಗಿಗಳಿಗೂ ಒಂದೇ ತೆರನಾದ ಚಿಕಿತ್ಸೆ ನೀಡಲಾಗುತ್ತದೆ’ ಎಂದರು.

‘ಸಂಸ್ಥೆಯು ವಾರ್ಷಿಕವಾಗಿ 1.78 ಲಕ್ಷ ಹೊರರೋಗಿಗಳು, 21,000 ಒಳರೋಗಿಗಳಿಗೆ ಚಿಕಿತ್ಸೆ ನೀಡುತ್ತಿದೆ. ಅಲ್ಲದೆ, ವಾರ್ಷಿಕ ಸುಮಾರು 5,000 ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ಲಭ್ಯವಿದ್ದು, ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು’ ಎಂದರು.

‘ನಮ್ಮ ಸರ್ಕಾರವು ಎಲ್ಲ ಜಿಲ್ಲೆಗಳಲ್ಲೂ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡುತ್ತಿದ್ದು, ಶೇ 90ರಷ್ಟು ಗುರಿ ಸಾಧಿಸಿದ್ದೇವೆ. ನಾಲ್ಕೈದು ಜಿಲ್ಲೆಗಳಲ್ಲಿ ಮಾತ್ರ ಕಾಮಗಾರಿ ಹಂತದಲ್ಲಿದ್ದು, ಶೀಘ್ರವೇ ಪೂರ್ಣಗೊಳ್ಳಲಿವೆ. ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆಯ ಮಾದರಿಯಲ್ಲಿ ಮೈಸೂರಿನಲ್ಲಿ, ನಿಮ್ಹಾನ್ಸ್ ಮಾದರಿಯಲ್ಲಿ ಕಲಬುರಗಿಯಲ್ಲಿ ಅತ್ಯಾಧುನಿಕ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ. ಕಲಬುರಗಿಯಲ್ಲಿ ₹100 ಕೋಟಿ ವೆಚ್ಚದ ಮಕ್ಕಳ ಆರೋಗ್ಯ ಸಂಸ್ಥೆ ಸ್ಥಾಪಿಸಲಾಗುತ್ತಿದೆ’ ಎಂದರು.


ನೂತನ ಆಸ್ಪತ್ರೆಯಲ್ಲಿ ಇರುವ ಸವಲತ್ತುಗಳ ಬಗ್ಗೆ ವೈದ್ಯಾಧಿಕಾರಿಗಳಿಂದ ಶರಣ ಪ್ರಕಾಶ ಪಾಟೀಲ ಮಾಹಿತಿ ಪಡೆದರು. ಉದಯ್ ಗರುಡಾಚಾರ್, ಟಿ.ಎ.ಶರವಣ ಮತ್ತು ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ



ಚನ್ನಪಟ್ಟಣ ತಾಲ್ಲೂಕಿನ ಬೈರಶೆಟ್ಟಿಹಳ್ಳಿ ಬಳಿಯ ದಂಡಿನಮಾರಮ್ಮ ದೇವಸ್ಥಾನದ ಬಳಿ ಕಾಣಿಸಿಕೊಂಡ ಕರಡಿ

ಬೈಕ್ ಸವಾರನ ಮೇಲೆ ಕರಡಿ ದಾಳಿ

ಚನ್ನಪಟ್ಟಣ: ತಾಲ್ಲೂಕಿನ ಬೈರಶೆಟ್ಟಿಹಳ್ಳಿಯ ದಂಡಿನಮಾರಮ್ಮ ದೇವಸ್ಥಾನದ ಬಳಿ ಶನಿವಾರ ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ರೈತನ ಮೇಲೆ ಕರಡಿಯೊಂದು ದಾಳಿ ನಡೆಸಿದೆ. ಬೈರಶೆಟ್ಟಿಹಳ್ಳಿ ಗ್ರಾಮದ ರೈತ ದೊಡ್ಡಯ್ಯ (65) ಕರಡಿ ದಾಳಿಯಿಂದ ಗಾಯಗೊಂಡಿದ್ದಾರೆ.

ಸಿಂಗರಾಜಿಪುರ-ಕೋಡಂಬಹಳ್ಳಿ ಸಂಪರ್ಕ ರಸ್ತೆಯಲ್ಲಿ ಬೈಕ್ ಮೇಲೆ ಕರಡಿ ಎಗರಿದೆ. ಹಠಾತ್ ದಾಳಿಯಿಂದ ಕೆಳಗೆ ಬಿದ್ದ ರೈತ ಕರಡಿಯಿಂದ ತಪ್ಪಿಸಿಕೊಂಡು ಓಡಿದ್ದಾರೆ. ಬಳಿಕ ಕರಡಿ ಬೈಕ್ ಎಳೆದಾಡಿ ಹಾನಿಗೊಳಿಸಿದೆ. ರೈತ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಏ.1ರಿಂದ ಸ್ವಯಂ ಗಣತಿಗೆ ಅವಕಾಶ

2027ರ ಜನಗಣತಿಯ ಮೊದಲ ಹಂತದ ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಕ್ಷಿತ ವೆಬ್‌ಪೋರ್ಟಲ್ ಮೂಲಕ ಏಪ್ರಿಲ್ 1ರಿಂದ 15 ದಿನಗಳ ಕಾಲ ಸ್ವಯಂ ಗಣತಿಯಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಮನೆಪಟ್ಟಿ ಮತ್ತು ಮನೆಗಣತಿ ಕಾರ್ಯ ಏಪ್ರಿಲ್ 16ರಿಂದ ಆರಂಭವಾಗಲಿದೆ. ಇದಕ್ಕೂ ಮೊದಲು ಅಂದರೆ ಏಪ್ರಿಲ್ 1ರಿಂದ 15ರವರೆಗೆ ಸ್ವಯಂ ಗಣತಿ ನಡೆಯಲಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಸ್ವಯಂ ಗಣತಿ ವೆಬ್ ಪೋರ್ಟಲ್ https://se.census.gov.in ಬಳಸಿಕೊಂಡು ತಮ್ಮ ಕುಟುಂಬದ ಸಾಮಾನ್ಯ ಮಾಹಿತಿಯನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಏಪ್ರಿಲ್ 1ರಿಂದ 15ರವರೆಗೆ ವೆಬ್ ಪೋರ್ಟಲ್ ಲಭ್ಯವಿದ್ದು ಮೊಬೈಲ್, ಡೆಸ್ಕ್ ಟಾಪ್, ಲ್ಯಾಪ್‌ಟಾಪ್ ಮೂಲಕ ಮಾಹಿತಿ ನಮೂದಿಸಬಹುದು. ಇದರಿಂದ ಸಮಯ ಉಳಿತಾಯದ ಜೊತೆಗೆ ನಿಖರ ಹಾಗೂ ಸಮಗ್ರ ಮಾಹಿತಿ ಸಂಗ್ರಹಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.



ಮಾಹಿತಿ ಭರ್ತಿ ವೇಳೆ, ಕುಟುಂಬದ ವಿವರಗಳನ್ನು (ರಾಜ್ಯ, ಜಿಲ್ಲೆ, ತಾಲ್ಲೂಕು, ಗ್ರಾಮ, ಪಟ್ಟಣ, ನಗರ ಇತ್ಯಾದಿ) ಕಡ್ಡಾಯವಾಗಿ ನಮೂದಿಸಬೇಕು. ಸ್ಥಳವನ್ನು ನಿಖರವಾಗಿ ಗುರುತಿಸಲು ಪಿನ್ ಕೋಡ್ ಮತ್ತು ಡಿಜಿಟಲ್ ಮ್ಯಾಪ್ ಮೂಲಕ ಮನೆಯ ಸ್ಥಳವನ್ನು ಗುರುತಿಸುವ ವ್ಯವಸ್ಥೆ ಮಾಡಲಾಗಿದೆ.

ಸ್ವಯಂ ಗಣತಿ ಪೋರ್ಟಲ್‌ನಲ್ಲಿ ಕೇಳಿರುವ ಪ್ರಶ್ನೆಗಳನ್ನು ಮನೆಪಟ್ಟಿ ಕಾರ್ಯಾಚರಣೆ ಮೊಬೈಲ್ ಆ್ಯಪ್‌ನಲ್ಲಿರುವಂತೆಯೇ ರೂಪಿಸಲಾಗಿದೆ. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪದೇ ಪದೇ ಕೇಳುವ ಪ್ರಶ್ನೆಗಳು ಮತ್ತು ಮಾರ್ಗಸೂಚಿಗಳನ್ನು ಒದಗಿಸಲಾಗುತ್ತದೆ.

ಕುಟುಂಬದ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ, ಅವರಿಗೆ ಒಂದು ವಿಶಿಷ್ಟ ಸ್ವಯಂ ಗಣತಿ ಐಡಿ ನೀಡಲಾಗುತ್ತದೆ. ಈ ಐಡಿಯನ್ನು ಎಸ್‌ಎಂಎಸ್ ಮತ್ತು ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ. ಇದನ್ನು ಮನೆಗೆ ಭೇಟಿ ನೀಡುವ ಗಣತಿದಾರರೊಂದಿಗೆ ಹಂಚಿಕೊಳ್ಳಬಹುದು. ಒಂದು ವೇಳೆ ಸ್ವಯಂ ಗಣತಿ ಪೂರ್ಣಗೊಳಿಸದೆ ಇದ್ದರೆ ಗಣತಿದಾರರು ಕುಟುಂಬದವರಿಂದಲೇ ಮಾಹಿತಿ ಸಂಗ್ರಹಿಸುತ್ತಾರೆ ಎಂದು ತಿಳಿಸಿದ್ದಾರೆ.

4,300 ಗಣತಿದಾರರ ನೇಮಕ

200 ಮನೆಗಳಿಗೆ ಒಬ್ಬರಂತೆ 4,300 ಗಣತಿದಾರರನ್ನು ನಗರ ಜಿಲ್ಲೆಯಲ್ಲಿ ನೇಮಕ ಮಾಡಲಾಗಿದೆ. ಇವರು ಏಪ್ರಿಲ್ 16ರಿಂದ ಮೇ 15ರವರೆಗೆ ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಲಿದ್ದಾರೆ. ಸಾರ್ವಜನಿಕರು ಸ್ವಯಂ ಗಣತಿಯಲ್ಲಿ ಭಾಗವಹಿಸಿದರೆ, ಗಣತಿದಾರರ ಮೇಲಿನ ಒತ್ತಡ ಕಡಿಮೆಯಾಗಲಿದೆ ಎಂದು ಜಿಲ್ಲಾಧಿಕಾರಿ ಜಿ. ಜಗದೀಶ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಗಣತಿಗಾಗಿ ಪ್ರತ್ಯೇಕ ಆ್ಯಪ್ ಸಿದ್ಧಪಡಿಸಲಾಗಿದೆ. ಎಲ್ಲ ಮಾಹಿತಿಯನ್ನು ಗಣತಿದಾರರು ಅದರಲ್ಲೇ ನಮೂದಿಸಲಿದ್ದಾರೆ. ಇದರಿಂದ ಗಣತಿದಾರರ ಕೆಲಸ ಸುಲಭವಾಗಲಿದೆ, ಅಲ್ಲದೆ ಜನಗಣತಿಯ ಮಾಹಿತಿಯೂ ಬೇಗ ಸಿಗಲಿದೆ ಎಂದು ಅಂದಾಜಿಸಲಾಗಿದೆ.



ಜಿ.ಜಗದೀಶ್

ಸ್ವಯಂ ಗಣತಿ ಹೇಗೆ?

- ಮೊಬೈಲ್ ಸಂಖ್ಯೆ ಮತ್ತು ಒಟಿಪಿ ಬಳಸಿ ಲಾಗಿನ್ ಆಗಬೇಕು
- ನಿಮ್ಮ ಭಾಷೆಯನ್ನು ಆಯ್ಕೆಮಾಡಬೇಕು
- ನಕ್ಷೆಯಲ್ಲಿ ನಿಮ್ಮ ಮನೆ ಗುರುತಿಸಬೇಕು
- ಮನೆಯ/ಕುಟುಂಬದ ವಿವರಗಳನ್ನು ಭರ್ತಿ ಮಾಡಬೇಕು
- ಎಲ್ಲ ಮಾಹಿತಿ ಸಲ್ಲಿಸಿದ ಬಳಿಕ ವಿಶಿಷ್ಟ ಸ್ವಯಂ ಗಣತಿ ಐಡಿ ಪಡೆಯಬೇಕು
- ಐಡಿಯನ್ನು ಸುರಕ್ಷಿತವಾಗಿ ಇಟ್ಟುಕೊಂಡು ಗಣತಿದಾರರಿಗೆ ನೀಡಬೇಕು

ಸುದ್ದಿ 2 ನಿಮಿಷ

ಕೃತಕ ಬುದ್ಧಿಮತ್ತೆ ಸರ್ವರ್

ಬೆಂಗಳೂರು: ಏಸರ್ ಇಂಕ್ ಸಮೂಹ ಸಂಸ್ಥೆಯು ಮೇಕ್ ಇನ್ ಇಂಡಿಯಾದ ಎಐ ಸರ್ವರ್ ಅನ್ನು ಬಿಡುಗಡೆ ಮಾಡಿದೆ. ಇದು ದೇಶದಲ್ಲಿ ಅತ್ಯುತ್ತಮವಾದ ಎಐ ಮತ್ತು ಡೇಟಾ ಸೆಂಟರ್ ಪರಿಸರ ವ್ಯವಸ್ಥೆಯನ್ನು ಬಲಪಡಿಸುವತ್ತ ಮಹತ್ವದ ಹೆಜ್ಜೆಯಾಗಿದೆ ಎಂದು ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಏಸರ್ ಇಂಡಿಯಾದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಹರೀಶ್ ಕೊಹ್ಲಿ, 'ದೇಶವು ಈಗ ಪರಿವರ್ತನೀಯ ಎಐ ಯುಗದ ಹೊಸ್ತಿಲಲ್ಲಿ ನಿಂತಿದೆ. ಶಕ್ತಿಯುತವಾದ ಡಿಜಿಟಲ್ ಮೂಲಸೌಲಭ್ಯ ಉದ್ಯಮಗಳಿಗೆ ಬೆನ್ನೆಲುಬಾಗಿದೆ. ಭಾರತದ ಮಾರುಕಟ್ಟೆಗೆ ಕೃತಕ ಬುದ್ಧಿಮತ್ತೆಯನ್ನು ಪರಿಚಯಿಸಲು ಹೆಮ್ಮೆ ಪಡುತ್ತೇವೆ' ಎಂದು ನುಡಿದರು.

ಕೃತಕ ಬುದ್ಧಿಮತ್ತೆಯ ನಾವೀನ್ಯತೆ ಮತ್ತು ಡಿಜಿಟಲ್ ಕ್ಷೇತ್ರಕ್ಕೆ ಅಗತ್ಯವಾಗಿರುವ ಮೂಲಸೌಕರ್ಯಗಳನ್ನು ಸೃಷ್ಟಿಸಲು ಸ್ಥಳೀಯವಾಗಿ ಸರ್ವರ್‌ಗಳನ್ನು ತಯಾರಿಸಲಾಗುತ್ತಿದೆ. ಸಂಶೋಧನೆ, ಉತ್ಪಾದನೆ, ಆರೋಗ್ಯ, ರಕ್ಷಣೆ ಇತ್ಯಾದಿ ಕ್ಷೇತ್ರಗಳಿಗೆ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.

ರೈತ ಸಂತೆ: ಗಮನ ಸೆಳೆದ ಜೇನುತುಪ್ಪದ ಚಾಕೋಲೆಟ್



ಬೆಂಗಳೂರು: ಸಾಮೆ ಐಸ್‌ಕ್ರೀಂ, ಜೇನು ತುಪ್ಪದ ಚಾಕೋಲೆಟ್, ಗಿರ್ ತಳಿಯ ಗಿಣ್ಣು, ಸ್ವರ್ಣದಾರ ತಳಿಯ ಕೋಳಿಗಳು, ಬಾಳೆ ನಾರಿನಿಂದ ಸಿದ್ಧಪಡಿಸಿದ ಉಡುಪುಗಳು ಸಾರ್ವಜನಿಕರನ್ನು ಆಕರ್ಷಿಸಿದವು.

ಜಿಕೆವಿಕೆ ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಶನಿವಾರ ಆಯೋಜಿಸಿದ್ದ ರೈತ ಸಂತೆಯಲ್ಲಿ ಪೌಷ್ಟಿಕಾಂಶದಲ್ಲಿ ಸಮೃದ್ಧವಾಗಿರುವ ಅಣಬೆಯ ಸೂಪ್ ಪೌಡರ್, ಹಪ್ಪಳ, ಉಪ್ಪಿನಕಾಯಿ, ಜೇನು ತುಪ್ಪದ ಚಾಕೋಲೆಟ್ ಖರೀದಿ ಜೋರಾಗಿತ್ತು.

ಬಹು ಉಪಯೋಗಿ ಬಾಳೆ ಗಿಡದ ನಾರಿನಿಂದ ತಯಾರಿಸಿದ ಸೀರೆ, ಬ್ಯಾಗ್, ಬ್ಯಾಂಗಲ್ ಡಬ್ಬ ಹೆಣ್ಣುಮಕ್ಕಳ ಗಮನ ಸೆಳೆದವು. ಗ್ರಾಹಕರು ರೈತರಿಂದ ನೇರವಾಗಿ ಸಪೋಟ, ಹಲಸಿನ ಹಣ್ಣುಗಳನ್ನು ಖರೀದಿ ಮಾಡಿದರು. ಅಲಂಕಾರಿಕ ಮೀನಿನ ಮರಿಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಗ್ರಾಹಕರು ಬಣ್ಣ-ಬಣ್ಣದ ಮೀನುಗಳನ್ನು ಖರೀದಿಸಿದರು.

ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ತೋಟಗಾರಿಕೆ, ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆ, ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಜೋರಾಗಿತ್ತು.

ವಿಜೃಂಭಣೆಯ ಕೋದಂಡರಾಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಬಳ್ಳಾರಿ ರಸ್ತೆಯ ಬ್ಯಾಟರಾಯನಪುರದಲ್ಲಿ ಕೋದಂಡರಾಮ ಸ್ವಾಮಿಯ 77ನೇ ಬ್ರಹ್ಮರಥೋತ್ಸವ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆಯಿಂದಲೇ ದೇವರಿಗೆ ಅಭಿಷೇಕ, ಅರ್ಚನೆ, ಹೋಮ ಮತ್ತು ಮಹಾಮಂಗಳಾರತಿ ಸೇರಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಬಳಿಕ ಭಕ್ತರ ಘೋಷಣೆಗಳ ನಡುವೆ ಮಧ್ಯಾಹ್ನ 3.15ಕ್ಕೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ನಗರ ಸೇರಿ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ದೇವರ ದರ್ಶನ ಪಡೆದರು. ಬಾಳೆಹಣ್ಣು ಮತ್ತು ದವನವನ್ನು ರಥದ ಮೇಲೆ ಎಸೆದು ಹರಕೆ ತೀರಿಸಿದರು.



ಬಳ್ಳಾರಿ ರಸ್ತೆಯ ಬ್ಯಾಟರಾಯನಪುರದಲ್ಲಿ ಕೋದಂಡರಾಮ ಸ್ವಾಮಿಯಬ್ರಹ್ಮರಥೋತ್ಸವ ಶನಿವಾರ ವಿಜೃಂಭಣೆಯಿಂದ ನಡೆಯಿತು

ಇದೇ ವೇಳೆ ಗ್ರಾಮ ದೇವತೆಗಳಾದ ದೊಡ್ಡಮ್ಮ ಮತ್ತು ಮಹೇಶ್ವರಮ್ಮ ದೇವಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಕೋಸಂಬರಿ, ಪಾನಕ ಮತ್ತು ಮಜ್ಜಿಗೆ ವಿತರಣೆಯ ಜೊತೆಗೆ ಅನ್ನಸಂತರ್ಪಣೆಯನ್ನೂ ಏರ್ಪಡಿಸಲಾಗಿತ್ತು.

ಮುತ್ಯಾಲಮ್ಮ ದೇವಿ ರಥೋತ್ಸವ 31ರಿಂದ

ಬೆಂಗಳೂರು: ಶಿವಾಜಿನಗರದ ಸೆಪಿಂಗ್ಸ್ ರಸ್ತೆಯಲ್ಲಿರುವ ಮುತ್ಯಾಲಮ್ಮ ದೇವಾಲಯದ ರಥೋತ್ಸವ ಹಾಗೂ ದೀಪೋತ್ಸವ ಕಾರ್ಯಕ್ರಮವು ಮಾ.31 ಹಾಗೂ ಏಪ್ರಿಲ್ 1ರಂದು ನಡೆಯಲಿದೆ.

ರಥೋತ್ಸವ ಕಾರ್ಯಕ್ರಮಗಳಿಗೆ ಮಾ. 24ರಂದು ವನ ಭೋಜನದೊಂದಿಗೆ ಚಾಲನೆ ದೊರೆತಿದ್ದು, ಏ. 8ರಂದು ಶಯನೋತ್ಸವ ದೊಂದಿಗೆ ಮುಗಿಯಲಿದೆ. ಈ ರಥೋತ್ಸವದಲ್ಲಿ ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ ತುಮಕೂರು, ಮೈಸೂರು, ಬೆಂಗಳೂರು ಗ್ರಾಮಾಂತರ ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳಿಂದ ಭಕ್ತರು ಬರಲಿದ್ದಾರೆ ಎಂದು ಧರ್ಮಕರ್ತ ಜೆ.ಆರ್. ನಾಗರಾಜ್, ಪಟೇಲ್ ಎನ್., ರವಿಕುಮಾರ್, ಪ್ರಧಾನ ಅರ್ಚಕ ಆರ್.ಸುಬ್ರಮಣಿ ತಿಳಿಸಿದ್ದಾರೆ.

ಹೂಡಿ: ಅದ್ದೂರಿ ಶೋಭಾಯಾತ್ರೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಜನ ಸಹಯೋಗ ಸಂಘಟನೆ ವತಿಯಿಂದ ಹೂಡಿಯಲ್ಲಿ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ರಾಮಚಂದ್ರರ ಆದರ್ಶಗಳು ಸಮಾಜಕ್ಕೆ ದಾರಿ ತೋರಿಸುವಂತಿವೆ ಎಂದು ಹೇಳಿದರು.

ಶೋಭಾಯಾತ್ರೆಯು ಮಹದೇವಪುರ ಕ್ಷೇತ್ರದ ಹೂಡಿಯಿಂದ ಪ್ರಾರಂಭವಾಗಿ ತಿಗಳರಪಾಳ್ಯ, ರಾಜಪಾಳ್ಯ, ಟಿಪಿಎಲ್, ವೈಟ್‌ಫೀಲ್ಡ್, ವರ್ತೂರು ಕೊಡಿ, ಕುಂದಲಹಳ್ಳಿ ಗೇಟ್, ಮಾರತ್ ಹಳ್ಳಿ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಸಂಚರಿಸಿತು.



ಕೆಂಗೇರಿಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಗಾಯಕಿ ಸುಧಾ ರಘುನಾಥನ್ ಅವರಿಗೆ ಎಸ್‌ವಿ.ಎನ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ರವೀಂದ್ರ, ಸೋಮನಾಥ್, ಎಂ.ಆರ್.ಜೈಶಂಕರ್ ಇದ್ದಾರೆ

ಗಾಯಕಿ ಸುಧಾಗೆ ಎಸ್‌ವಿಎನ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಯಾವುದೇ ಕಾರ್ಯವನ್ನು ಶ್ರದ್ಧೆ ಹಾಗೂ ನಿಷ್ಠೆಯಿಂದ ನಿರ್ವಹಿಸಿದರೆ ಯಶಸ್ಸು ಹಾಗೂ ಪುರಸ್ಕಾರಗಳು ತಾವಾಗಿಯೇ ಬರುತ್ತವೆ. ಅವಕಾಶಗಳಿಗಾಗಿ ಎದುರು ನೋಡುವ ಪ್ರಮೇಯ ಸೃಷ್ಟಿಯಾಗುವುದಿಲ್ಲ ಎಂದು ಗಾಯಕಿ ಸುಧಾ ರಘುನಾಥನ್ ಹೇಳಿದರು.

ನೆಟ್ಟಿಗೆರೆಯ ಶ್ರೀರಾಮ ಮಂಡಲಿ ಟ್ರಸ್ಟ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಎಸ್.ವಿ.ನಾರಾಯಣ ಸ್ವಾಮಿ ರಾವ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಸಾಧನೆಯ ಹಾದಿಯಲ್ಲಿ ಅಡಚಣೆಗಳು ಸಹಜ. ದೃಢ ಆತ್ಮವಿಶ್ವಾಸದಿಂದ ಮುಂದೆ ಸಾಗಬೇಕು. ಸಂಗೀತ ಕ್ಷೇತ್ರದ ಸಾಧಕರನ್ನು ಗುರುತಿಸಿ ಪುರಸ್ಕಾರ ನೀಡುತ್ತಿರುವ ಮಂಡಲಿಯ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಮ್ಮ ಸಾಧನೆಗೆ ಕಾರಣರಾದ ಗುರು ವಸಂತಕುಮಾರಿ ಅವರನ್ನು ಸ್ಮರಿಸಿದರು.

ಬ್ರಿಗೇಡ್ ಗ್ರೂಪ್ ಚೇರ್ಮನ್ ಎಂ.ಆರ್. ಜೈಶಂಕರ್ ಮಾತನಾಡಿ, 'ಕರ್ನಾಟಕ ಶಾಸ್ತ್ರೀಯ ಸಂಗೀತ ವಿಭಾಗದಲ್ಲಿ ಅಪ್ರತಿಮ ಸೇವೆ ಸಲ್ಲಿಸಿರುವ ಸುಧಾ ರಘುನಾಥನ್, ಸಂಗೀತದ ವಿಶ್ವ ವಿದ್ಯಾಲಯವಿದ್ದಂತೆ . ಅವರ ಸಾಧನೆ ಯುವ ಸಂಗೀತಗಾರರಿಗೆ ದಾರಿದೀಪವಿದ್ದಂತೆ' ಎಂದು ತಿಳಿಸಿದರು.

ಶ್ರೀ ರಾಮ ಸೇವಾ ಮಂಡಲಿ ಟ್ರಸ್ಟ್ ಅಧ್ಯಕ್ಷ ರವೀಂದ್ರ ಮಾತನಾಡಿ, 'ಗ್ರಾಮೀಣ ಭಾಗದ ಬಡ ಹಾಗೂ ಆಸಕ್ತ ವಿದ್ಯಾರ್ಥಿಗಳಿಗೆ ಸಂಗೀತ ಕಲಿಸುವ ಉದ್ದೇಶದಿಂದ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ' ಎಂದರು.

ವಿಜ್ಞಾನಿ ಸೋಮನಾಥ್ ಮಾತನಾಡಿದರು. ಸಾಹಿತಿ ರಾಧಾಕೃಷ್ಣನ್, ವೆಂಕಟೇಶ್ ಪ್ರಸಾದ್, ರಾಮ್ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಆಗ್ರಹ...

ಪ್ರಜಾವಾಣಿ ಚಿತ್ರ



ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿರುವ ಲಿಂಗತ್ವ ಅಲ್ಪಸಂಖ್ಯಾತರ (ಟ್ರಾನ್ಸ್‌ಜೆಂಡರ್) ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಯನ್ನು ಹಿಂಪಡೆಯುವಂತೆ ಆಗ್ರಹಿಸಿ ಲಿಂಗತ್ವ ಅಲ್ಪಸಂಖ್ಯಾತರ ವಿವಿಧ ಸಂಘಟನೆಗಳ ಸದಸ್ಯರು ಶನಿವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ನಗರದಲ್ಲಿ ಇಂದು

ಮೆಡಿಕಲ್ ಲ್ಯಾಬ್ ಟೆಕ್ನಾಲಜಿಸ್ಟ್ ಸಮ್ಮೇಳನ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ದಿನೇಶ್ ಗುಂಡೂರಾವ್, ಡಾ.ಸಿ.ಎನ್. ಮಂಜುನಾಥ್, ಉದಯ್ ಬಿ. ಗರುಡಾಚಾರ್, ಡಾ.ಬಿ.ಸಿ. ಭಗವಾನ್, ಕೆ. ವಸಂತ್ ಕುಮಾರ್, ವಿವೇಕ್ ಡಿ., ರವೀಂದ್ರನಾಥ್ ಎಂ. ಮೇಟಿ, ಆಯೋಜನೆ: ಕರ್ನಾಟಕ ರಾಜ್ಯ ಮೆಡಿಕಲ್ ಲ್ಯಾಬ್ ಟೆಕ್ನಾಲಜಿಸ್ಟ್ ಅಸೋಸಿಯೇಷನ್, ಸ್ಥಳ: ಕುವೆಂಪು ಕಲಾಕ್ಷೇತ್ರ, ಕೆ.ಆರ್. ರಸ್ತೆ, ವಿ.ವಿ. ಪುರ, ಬೆಳಿಗ್ಗೆ 9ರಿಂದ

'ಸುವರ್ಣ ತಾರೆ' ಸಮರ್ಪಣಾ ಸಮಾರಂಭ: ಅತಿಥಿಗಳು: ಗಿರಿಜಾ ಲೋಕೇಶ್, ಮಾಲತಿ ಶರ್ಮಾ, ಎಂ. ಪುಷ್ಪವತಿ, ಎಂ.ಎಸ್. ವಿದ್ಯಾ, ಶರಾವತಿ ಗಜಾನನ ಭಟ್, ಇಂದುಮತಿ ಸಾಲಿಮಠ, ರೂಪಾ ಗುರುರಾಜ್, ಆಯೋಜನೆ: ಪ್ರೇರಣಾ ರಿಸೋರ್ಸ್ ಸೆಂಟರ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9ರಿಂದ



ಗಿರಿಜಾ ಲೋಕೇಶ್

'ಕಲಾದರ್ಪಣ ಕೆಂಪೇಗೌಡ ಸೇವಾರತ್ನ' ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ: ಬಸವರಾಜ ಹೊರಟ್ಟಿ, ಅತಿಥಿಗಳು: ಜಿ.ಕೆ. ಅಶ್ವಥ್ ಹರಿತಸ್, ಡಿ.ಎಸ್. ವಿಶ್ವನಾಥ್, ಎಂ. ಶಿವರಾಜು, ಆರ್. ಚಂದ್ರಶೇಖರ, ರಮ್ಯಾ ಎಂ.ಕೆ., ಪ್ರಶಸ್ತಿ ಸ್ವೀಕರಿಸುವವರು: ಅಜಿತ್ ಬಂಗೇರ್, ಟಿ.ವಿ. ಬಾಬು, ರಾಜಶೇಖರ್, ಎಚ್.ಯು. ನಿಖಿಲ್‌ಗೌಡ, ಜರಗನಹಳ್ಳಿ ಕಾಂತರಾಜು, ಆಯೋಜನೆ: ಕಲಾದರ್ಪಣ ಆರ್ಟ್‌ರಿಫ್ಲೆಕ್ಟ್ಸ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

'ತಾಂಬೂಲ ರಾಗ', 'ಕಥಾ ಷೋಡಶಿ', 'ಗಾಂಧಾರಿ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಶತಾವಧಾನಿ ಆರ್. ಗಣೇಶ್, ಸೂರ್ಯ ಹೆಬ್ಬಾರ್, ಗಣೇಶ ಶೆಂಡ್ಯೆ, ಜಯಶ್ರೀ ದೇಶಪಾಂಡೆ, ಗಣಪತಿ ಜೋಶಿ, ದಿವಾಕರ ಡೋಂಗ್ರೆ, ಆಯೋಜನೆ: ಚಿತ್ರಭಾ ಸಂಸ್ಕೃತಿ ಪ್ರತಿಷ್ಠಾನ, ಶುಭೋದಯ ಪ್ರಕಾಶನ, ಸ್ಥಳ: ವಿವೇಕ ಸಭಾಂಗಣ, ಯುವಪಥ, ನಾಲ್ಕನೇ ಟಿ ಬ್ಲಾಕ್, ಜಯನಗರ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಜಿಲ್ಲಾ ಮಹಿಳಾ ಕವಿಗೋಷ್ಠಿ-ಸನ್ಮಾನ: ಎಸ್.ಟಿ. ಸೋಮಶೇಖರ್, ಗೀತಾ ರಾಮಾನುಜಂ, ಅತಿಥಿಗಳು: ಪಲ್ಲವಿ ಹೊನ್ನಾಪುರ, ಅಧ್ಯಕ್ಷತೆ: ಎಚ್.ಎಸ್. ಸುಧೀಂದ್ರ ಕುಮಾರ್, ಬಿ.ಎಸ್. ಪಾರಿಜಾತ, ಎಂ. ಪ್ರಕಾಶಮೂರ್ತಿ, ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶ್ರೀಕಾಳಿಕಾಂಬ ದೇವಸ್ಥಾನ ಸಭಾಂಗಣ, ಆರನೇ ಮುಖ್ಯರಸ್ತೆ, ಕೆಂಗೇರಿ ಉಪನಗರ, ಬೆಳಿಗ್ಗೆ 9.30

ವಿಕ್ರಮ್ ಬಿ.ಕೆ. ಅವರ 'ಬೆಲ್‌ವೆಲ್' ಪುಸ್ತಕ ಬಿಡುಗಡೆ: ಬಿ. ಮಂಜಮ್ಮ ಜೋಗತಿ, ವಿ. ಗೋಪಾಲ್, ಗಿರೀಶ್ ರಾವ್ ಹತ್ವಾರ್, ಸುಂದರ್ ವೀಣಾ, ಸ್ಥಳ: ನಾಣಿ ಅಂಗಳ, ಸುಚಿತ್ರಸಿನಿಮಾ ಅಕಾಡೆಮಿ, ಬನಶಂಕರಿ, ಬೆಳಿಗ್ಗೆ 10



ಬಿ.ಮಂಜಮ್ಮ ಜೋಗತಿ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ 'ಭಗಿನಿ ಸಾಧನೆಗೆ ಸನ್ಮಾನ': ಉದ್ಘಾಟನೆ: ಆರ್. ಪೂರ್ಣಿಮಾ, ಅತಿಥಿ: ಸಂಧ್ಯಾ ಕೃಷ್ಣಮೂರ್ತಿ, ಮಹಿಳಾ ಸಾಧಕಿಯರು: ಎಸ್.ಸಿ. ಶಾರದ, ವೈ.ಕೆ. ಸಂಧ್ಯಾ ಶರ್ಮ, ನೀಲಮ್ಮ, ಆಯೋಜನೆ: ಆರೋಹಣ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಕುಂ. ವೀರಭದ್ರಪ್ಪ ಅವರ 'ಸೂರ್ಯನ ಚೂರುಗಳು', ಎಂ.ವಿ. ನಾಗರಾಜರಾವ್ ಅವರ 'ಗ್ರಾಮಾಫೋನ್ ಪಿನ್ ರಹಸ್ಯ', ರವಿರಾಜ ಬೈಕಂಪಾಡಿ ಅವರ 'ಅನಾಮದೇಯ ಕರೆ' ಪುಸ್ತಕಗಳ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿಗಳು: ಎಚ್.ಎಸ್. ಸತ್ಯನಾರಾಯಣ, ಅರ್ಜುನ್ ದೇವಾಲದಕೆರೆ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಸುಚಿತ್ರ ಸಭಾಂಗಣ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 10.30



ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್

ಯೋಗದಾ ಸತ್ಸಂಗ ಕ್ರಿಯಾ ಯೋಗ ಪಾಠಗಳ ಕನ್ನಡ ಆವೃತ್ತಿಯ ಬಿಡುಗಡೆ: ಆಯೋಜನೆ: ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ, ಸ್ಥಳ: ಯೋಗದಾ ಸತ್ಸಂಗ ಧ್ಯಾನ ಕೇಂದ್ರ, ಎರಡನೇ ಹಂತ, ದೊಮ್ಮಲೂರು, ಬೆಳಿಗ್ಗೆ 11ರಿಂದ

ಕರಗ ಶಕ್ತ್ಯೋತ್ಸವ: ಬೆಳಿಗ್ಗೆ 10ಕ್ಕೆ ಧರ್ಮರಾಯ ಸ್ವಾಮಿಗೆ ಆರತಿ ದೀಪಗಳು, ಮಧ್ಯಾಹ್ನ 12.30ಕ್ಕೆ ಅಣ್ಣಮ್ಮ ದೇವಸ್ಥಾನ (ಕೆಂಪೇಗೌಡ ವೃತ್ತ), ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ಆವರಣ, ತಿಗಳರಪೇಟೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಉದ್ಘಾಟನೆ: ಎ.ವಿ. ಶ್ಯಾಮರಾವ್, ಅತಿಥಿ: ಶಾಂತ ಕೃಷ್ಣಮೂರ್ತಿ, ಆಯೋಜನೆ: ರಾಮಮೂರ್ತಿನಗರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಎಸ್.ಕೆ.ಎಫ್. ಫೌಂಡೇಷನ್, ಹೃದಯಾಲಯ, ಎನ್‌ಆರ್‌ಐ ಕಾಲೊನಿ, ಸಂಜೆ 4

33ನೇ ಶ್ರೀರಾಮನವಮಿ ಸಂಗೀತೋತ್ಸವ: ಕೀ-ಬೋರ್ಡ್: ಅರ್ಜುನ್ ಸಾಂಬಶಿವನ್ ಆರ್., ನಾರಾಯಣನ್ ಆರ್., ಮೃದಂಗ: ಫಣೀಂದ್ರ ಭಾಸ್ಕರ್, ಘಟ: ಬಿ.ಎಸ್. ರಘುನಂದನ್, ಗಾಯನ: ಸಿಕ್ಕಿಲ್ ಗುರುಚರಣ್, ಪಿಟೀಲು: ಚಾರುಲತಾ ರಾಮಾನುಜಮ್, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ಗಿರಿಧರ ಉಡುಪ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.15ರಿಂದ

'ಮರೆಯಲಾಗದ ಮಹನೀಯರು ಸರಣಿ-3': ಜಿ.ಎಸ್. ಶಿವರುದ್ರಪ್ಪ, ಕೆ.ಎಸ್. ನಿಸಾರ್ ಅಹಮದ್, ಎಂ. ಗೋಪಾಲಕೃಷ್ಣ ಅಡಿಗ ಅವರಿಗೆ ನುಡಿ ಗೌರವ, ಗೀತ ಗೌರವ: ಉದ್ಘಾಟನೆ: ಚಂದ್ರಶೇಖರಯ್ಯ, ಅತಿಥಿ: ಡಿ.ಎನ್. ಮುನಿಕೃಷ್ಣ, ಉಪಸ್ಥಿತಿ: ರವಿ ಸುಬ್ರಮಣ್ಯ, ಸವಿತಾ, ರುಮಾನ್ ನವೀದ್, ನುಡಿ ಗೌರವ: ವೈ.ಕೆ. ಮುದ್ದಕೃಷ್ಣ, ಬಿ.ಆರ್. ಲಕ್ಷ್ಮಣರಾವ್, ನಾ. ದಾಮೋದರ ಶೆಟ್ಟಿ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ಕಹಳೆ ಬಂಡೆ, ಬ್ಯೂಗಲ್ ರಾಕ್ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

'ಅಂತರ್ಜಾಲ ಸುರಕ್ಷೆ-ಶ್ರೀಸಾಮಾನ್ಯರಿಗಾಗಿ': ಗಿರೀಶ್ ಶಂಕರ್, ಆಯೋಜನೆ: ಮಂಥನ ಹಬ್ಬಾಳ, ಸ್ಥಳ: ನೆಲೆ-ಆಶಾ ಕಿರಣ ಕೇಂದ್ರ, ರವೀಂದ್ರನಾಥ ಟ್ಯಾಗೋರ್‌ನಗರ, ಸಂಜೆ 4.30


88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಚಂದ್ರಮೌಳಿ ರಾವ್ ಮತ್ತು ತಂಡ, ಕರ್ನಾಟಕ ಸಂಗೀತ ಕಛೇರಿ: ಸುಧಾ ರಘುನಾಥನ್, ಎಂಬಾರ್ ಎಸ್. ಕಣ್ಣನ್, ಸುಮೇಶ್ ನಾರಾಯಣನ್, ಆರ್. ರಾಮನ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮ ನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

'ಸೀತಾ ಸ್ವಯಂವರಂ' ಭರತನಾಟ್ಯ ನೃತ್ಯರೂಪಕ ಪ್ರದರ್ಶನ: ಪ್ರಸ್ತುತಿ: ಚೆನ್ನೈನ ಕಲಾಕ್ಷೇತ್ರ ಫೌಂಡೇಷನ್, ಆಯೋಜನೆ: ಸ್ಪಿಕ್‌ಮೆಕೆ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಐಐಎಸ್‌ಸಿ, ಸಂಜೆ 5.30

ವರ್ಲ್ಡ್ ಫ್ಯೂಷನ್ ಮ್ಯೂಸಿಕ್ 'ಸರ್ವ': ಪ್ರಸ್ತುತಿ: ಚಿರಂತನ್ ಬೇಗೂರು, ಮಾರ್ಟಿನ್ ಡಿ., ಅಶ್ವಿನಿ ಹೆಗಡೆ, ಆಯೋಜನೆ: ಕೃಷ್ಣ ಸೆಟ್ಟಿ ಫೌಂಡೇಷನ್, ಸ್ಥಳ: ನೃತ್ಯಗ್ರಾಮ, ಹೆಸರಘಟ್ಟ, ಸಂಜೆ 6


ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ರಂಗ ಸಂದೇಶ ವಾಚನ, ರಂಗ ನಮನ, ರಂಗ ಸಂಗೀತ, ರಂಗ ಗೌರವ ಮತ್ತು ನಾಟಕ ಪ್ರದರ್ಶನ: ಅತಿಥಿಗಳು: ರಾಜೇಶ್ವರಿ, ಶಶಿಕಾಂತ ಯಡಹಳ್ಳಿ, ಬೈರಪ್ಪ, ರಂಗ ಗೌರವ ಸ್ವೀಕರಿಸುವವರು: ಉಮಾ ವೈ.ಜಿ., 'ಕಿ ಸಾ ಕಿ' ನಾಟಕ ಪ್ರದರ್ಶನ: ರಚನೆ: ಎಂ.ಎಸ್. ನರಸಿಂಹಮೂರ್ತಿ, ನಿರ್ದೇಶನ: ಎಚ್. ವಿ. ನಾಗರಾಜ್, ಆಯೋಜನೆ: ಆಯಾಮ, ಸ್ಥಳ: ಗ್ರಂಥಾಲಯ, ಹಂಪಿನಗರ, ವಿಜಯನಗರ, ಸಂಜೆ 6.30

ನವೀನ್ ಸೂರಿಂಜೆ ಅವರ 'ಕರಾವಳಿಯ ಚರಿತ್ರೆಯಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್' ಪುಸ್ತಕ ಬಿಡುಗಡೆ: ಪ್ರಿಯಾಂಕ್ ಖರ್ಗೆ, ಅತಿಥಿಗಳು: ರುಚಿಕಾ ಶರ್ಮ, ಬಂಜಗೆರೆ ಜಯಪ್ರಕಾಶ್, ಮುನೀರ್ ಕಾಟಿಪಳ್ಳ, ಸಿದ್ದನಗೌಡ ಪಾಟೀಲ್, ಸುದೀಪ್ತೊ ಮೊಂಡಲ್, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಕರ್ನಾಟಕ ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30



ಬಂಜಗೆರೆ ಜಯಪ್ರಕಾಶ್

ಹಸಿರು ಸಿರಿ ಸಾಂಸ್ಕೃತಿಕ ಉತ್ಸವ, ಗೀತ ಗಾಯನ, ನೃತ್ಯ ಪ್ರದರ್ಶನ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ನಿಶ್ಚಲಾನಂದನಾಥ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ಎಸ್. ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಎ.ಎನ್. ಪ್ರಕಾಶ್ ಗೌಡ, ಅತಿಥಿ: ಕೆ. ಅನ್ನದಾನಿ, 'ಹಸಿರು ಸಿರಿ' ಪ್ರಶಸ್ತಿ ಸ್ವೀಕರಿಸುವವರು: ಎಸ್. ದಿವಾಕರ್, ಜೀವನ್ಮುಖಿ ಸುರೇಶ್, ಶಿವರಾಜ್ ಕೆ.ಆರ್. ಪೇಟೆ, ಆಯೋಜನೆ: ಹಸಿರುಭೂಮಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30



ನಿಶ್ಚಲಾನಂದನಾಥ ಸ್ವಾಮೀಜಿ

'ರಂಗಜನಪದೋತ್ಸವ' ರಂಗಗೀತೆಗಳ ಹಬ್ಬ: ಆಯೋಜನೆ: ಆದಿಮೂಲ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 6.30

'ಈ ಕೆಳಗಿನವರು' ನಾಟಕ ಪ್ರದರ್ಶನ: ನಿರ್ದೇಶನ: ವೀಣಾ ಶರ್ಮಾ ಭೂಸನೂರಮಠ, ಆಯೋಜನೆ ಮತ್ತು ಸ್ಥಳ: ರಾಷ್ಟ್ರೀಯ ನಾಟಕ ಶಾಲೆ, ಬೆಂಗಳೂರು ಕೇಂದ್ರದ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಮುತ್ಯಾಲಮ್ಮ ದೇವಿ ರಥೋತ್ಸವ: ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಲಾರಿ ಚಾಲಕ ಪೊಲೀಸ್ ವಶಕ್ಕೆ, ವಿಚಾರಣೆ

ಅಪಘಾತದಿಂದಾಗಿ ಕ್ಯಾಬ್ ಚಾಲಕ ಸಜೀವ ದಹನಗೊಂಡಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುರುಬರಹಳ್ಳಿಯ ರಸ್ತೆಬದಿಯಲ್ಲಿ ನಿಂತಿದ್ದ ಕಾರಿಗೆ ಲಾರಿಯೊಂದು ಡಿಕ್ಕಿ ಹೊಡೆದು ಸಂಭವಿಸಿದ್ದ ಅಗ್ನಿ ದುರಂತದಲ್ಲಿ ಕ್ಯಾಬ್ ಚಾಲಕ ಸಜೀವ ದಹನಗೊಂಡಿದ್ದ ಪ್ರಕರಣದಲ್ಲಿ ಲಾರಿ ಚಾಲಕನನ್ನು ಸಂಚಾರ ಪೊಲೀಸರು ಶನಿವಾರ ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ಶುಕ್ರವಾರ ನಸುಕಿನ ವೇಳೆ ಸಂಭವಿಸಿದ್ದ ದುರಂತದಲ್ಲಿ ಕ್ಯಾಬ್ ಚಾಲಕ ಅಂಬದಾಸ್ (23) ಮೃತಪಟ್ಟಿದ್ದರು. ಲಾರಿ ಚಾಲಕ ಶರ್ಮಾ ಗಾಯಗೊಂಡಿದ್ದರು. ಶರ್ಮಾ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಶನಿವಾರ ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.


ಶುಕ್ರವಾರ ಬೆಳಗಿನ ಜಾವ ಕುರುಬರಹಳ್ಳಿ ಜೆ.ಸಿ ನಗರದ ಬಳಿ ನಿಂತಿದ್ದ ಕಾರಿಗೆ ಲಾರಿ ಡಿಕ್ಕಿ ಹೊಡೆದಿತ್ತು. ಅಪಘಾತದ ರಭಸಕ್ಕೆ 100 ಮೀಟರ್ ವರೆಗೂ ಕಾರನ್ನು ಎಳೆದೊಯ್ದು ರಾಜಕಾಲುವೆ ತಡೆಗೋಡೆಗೆ ಡಿಕ್ಕಿ ಆಗಿತ್ತು. ಅದಾದ ಮೇಲೆ ಲಾರಿಯು ಅಂಗಡಿಯೊಂದಕ್ಕೆ ನುಗ್ಗಿತ್ತು. ಅಪಘಾತದಲ್ಲಿ ಕಾರು ನಜ್ಜುಗೊಂಡಿತ್ತು. ಬಳಿಕ ಸಂಭವಿಸಿದ್ದ ಅಗ್ನಿ ಅವಘಡದಲ್ಲಿ ಅಂಬುದಾಸ್ ಪ್ರಕಾಶ್ ಸಜೀವ ದಹನವಾಗಿದ್ದರು.

ದಿಲೀಪ್ ಅವರ ದೂರು ಆಧರಿಸಿ ಲಾರಿ ಚಾಲಕ ಶರ್ಮಾ ವಿರುದ್ಧ ಬಿಎನ್‌ಎಸ್ ಕಾಯ್ದೆ ಅಡಿ ಅಜಾಗರೂಕತೆಯಿಂದ ವಾಹನ ಚಾಲನೆ, ಸಾರ್ವಜನಿಕ ಆಸ್ತಿಗೆ ಧಕ್ಕೆ ಹಾಗೂ ನಿರ್ಲಕ್ಷ್ಯದಿಂದ ಸಾವಿಗೆ ಕಾರಣ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

'ಹೈದರಾಬಾದ್‌ನಿಂದ ಲಾರಿಯಲ್ಲಿ ಕಬ್ಬಿಣ ತುಂಬಿಕೊಂಡು ನಗರಕ್ಕೆ ಬಂದಿದ್ದೆ. ಕೊಟ್ಟಿಗೆಪಾಳ್ಯದ ಅಂಗಡಿಯೊಂದಕ್ಕೆ ಕಬ್ಬಿಣ ನೀಡಬೇಕಿತ್ತು. ತಡರಾತ್ರಿಯಾಗಿದ್ದರಿಂದ ನಿಗದಿತ ಸ್ಥಳಕ್ಕೆ ಹೋಗಲು ವಿಳಾಸ ಅರಿಯದೆ ಗೂಗಲ್ ಮ್ಯಾಪ್ ಮೊರೆ ಹೋಗಿದ್ದೆ. ವಾಹನಗಳ ಸಂಖ್ಯೆ ವಿರಳ ಆಗಿದ್ದರಿಂದ ಮ್ಯಾಪ್ ತೋರಿಸಿದಂತೆ ಲಾರಿ ಚಾಲನೆ ಮಾಡಿದ್ದೆ. ಕುರುಬರಹಳ್ಳಿ ಪೈಪ್‌ರಸ್ತೆಯ ಬಳಿ ಬರುತ್ತಿದ್ದಂತೆ ಲಾರಿ ನಿಯಂತ್ರಣ ತಪ್ಪಿತ್ತು. ಬ್ರೇಕ್ ಹಾಕಿದರೂ ನಿಲ್ಲಿಸಲು ಸಾಧ್ಯ ಆಗಲಿಲ್ಲ. ಆಗ ಕಾರಿಗೆ ಲಾರಿ ಡಿಕ್ಕಿ ಆಯಿತೆಂದು ವಿಚಾರಣೆ ವೇಳೆ ಶರ್ಮಾ ತಿಳಿಸಿದ್ದಾರೆ. ಪ್ರಕರಣ ಸಂಬಂಧ ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

'ಮದ್ಯಪಾನ ಮಾಡಿ ವಾಹನ ಚಾಲನೆ, ಉದ್ದೇಶಪೂರ್ವಕವಾಗಿ ಅಪಘಾತ ಎಸಗಿರುವುದು ತನಿಖೆಯಲ್ಲಿ ಕಂಡು ಬಂದರೆ ಲಾರಿ ಚಾಲಕನನ್ನು ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಮೃತ ಅಂಬದಾಸ್ ಅವರು ಕುಟುಂಬದವರ ಜತೆಗೆ ಕುರುಬರಹಳ್ಳಿಯಲ್ಲಿ ವಾಸಿಸುತ್ತಿದ್ದರು. ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಗುರುವಾರ ರಾತ್ರಿ ಪ್ರಯಾಣಿಕರನ್ನು ಬಿಟ್ಟು ಕುರುಬರಹಳ್ಳಿಯ ರಸ್ತೆಬದಿಯಲ್ಲಿ ಕಾರು ನಿಲ್ಲಿಸಿಕೊಂಡು ನಿದ್ರೆ ಮಾಡುತ್ತಿದ್ದರು. ಶುಕ್ರವಾರ ಮುಂಜಾನೆ ಸಂಭವಿಸಿದ್ದ ಅಪಘಾತದಲ್ಲಿ ಅವರು ಸಜೀವದಹನ ಆಗಿದ್ದಾರೆ' ಎಂದು ಸಂಚಾರ ಪೊಲೀಸರು ಹೇಳಿದರು.



ಅಪಘಾತದ ದೃಶ್ಯ

ಲಾರಿ ಚಾಲಕನಿಗೆ ಗಾಯ

ನಂದಿನಿಲೇಔಟ್‌ನಲ್ಲಿ ಗೃಹಬಳಕೆಯ ಗ್ಯಾಸ್ ಸಿಲಿಂಡರ್‌ಗಳನ್ನು ಹೊತ್ತು ಸಾಗುತ್ತಿದ್ದ ಲಾರಿಯು ಚಾಲಕನ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗಿ ಕಾರಿಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಲಾರಿ ಚಾಲಕ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಲಾರಿಯಲ್ಲಿದ್ದ ಇತರೆ ಇಬ್ಬರು ಅಪಾಯದಿಂದ ಪಾರಾಗಿದ್ದಾರೆ. ಘಟನೆಯ ಬಳಿಕ ಗ್ಯಾಸ್ ಸಿಲಿಂಡರ್‌ಗಳಿಂದ ಅನಿಲ ಸೋರಿಕೆ ಆಗುವ ಆತಂಕ ನಿರ್ಮಾಣ ಆಗಿತ್ತು. ಸಿಲಿಂಡರ್‌ಗಳಿಂದ ಅನಿಲ ಸೋರಿಕೆ ಆಗದಂತೆ ಸಿಬ್ಬಂದಿ ತುರ್ತು ಕ್ರಮ ಕೈಗೊಂಡಿದ್ದರಿಂದ ಆತಂಕ ದೂರವಾಯಿತು. ಘಟನೆ ಸಂಬಂಧ ರಾಜಾಜಿನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಥೋಲಿಕ ಕನ್ನಡ ಸಂಘ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾದೇಶಿಕ ಗುರುಮಠ ಸ್ಥಾಪನೆ, ಸಂತ ಪೇತ್ರರ ಗುರುಮಂದಿರದ ಸಂಪೂರ್ಣ ಅಡಳಿತವನ್ನು ಕರ್ನಾಟಕ ಧರ್ಮಾಧ್ಯಕ್ಷರಿಗೆ ಮೀಸಲಿಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು.

ಕರ್ನಾಟಕ ಧರ್ಮಸಭೆಗೆ ಕನ್ನಡ ಗುರುಗಳನ್ನೇ ಧರ್ಮಾಧ್ಯಕ್ಷರನ್ನಾಗಿ ನೇಮಿಸುವಂತೆ ಪ್ರತಿಭಟನಕಾರರು ಒತ್ತಾಯಿಸಿದರು.

ಸಾಹಿತಿ ಎಲ್.ಹನುಮಂತಯ್ಯ ಮಾತನಾಡಿ, ಇತರೆ ರಾಜ್ಯಗಳಿಂದ ಕರ್ನಾಟಕದ ಚರ್ಚ್‌ಗಳಲ್ಲಿ ಧರ್ಮಾಧ್ಯಕ್ಷರಾಗಲು ಬರುವವರು ಕಡ್ಡಾಯವಾಗಿ ಕನಿಷ್ಠ ಆರು ತಿಂಗಳು ವ್ಯವಹಾರಿಕ ಕನ್ನಡವನ್ನು ಕಲಿತು ಬರಬೇಕು. ಇಲ್ಲದಿದ್ದರೆ ಇಲ್ಲಿನ ಧರ್ಮಾಧ್ಯಕ್ಷರ ಸ್ಥಾನಕ್ಕೆ ಗೌರವ ಉಳಿಯುವುದಿಲ್ಲ ಎಂದು ಹೇಳಿದರು.

'ನಾವು ವ್ಯಾಟಿಕನ್ ಸಿಟಿಯಲ್ಲಿ ಕನ್ನಡದವರನ್ನು ಧರ್ಮಾಧ್ಯಕ್ಷರನ್ನಾಗಿ ನೇಮಕ ಮಾಡಿ ಎಂದು ಕೇಳುತ್ತಿಲ್ಲ. ಬೆಂಗಳೂರು ಮತ್ತು ರಾಜ್ಯದಾದ್ಯಂತ ಇರುವ ಚರ್ಚ್‌ಗಳಲ್ಲಿ ಕನ್ನಡದವರನ್ನು ಧರ್ಮಾಧ್ಯಕ್ಷರನ್ನಾಗಿ ನೇಮಕ ಮಾಡಿ ಎಂದು ಕೇಳುತ್ತಿದ್ದೇವೆ. ಇದಕ್ಕೆ ಸುಪ್ರೀಂ ಕೋರ್ಟ್ ಕೂಡ ವಿರೋಧಿಸಲು ಸಾಧ್ಯವಿಲ್ಲ. ಕನ್ನಡಕ್ಕೆ ಕ್ರೈಸ್ತರ ಕೊಡುಗೆ ದೊಡ್ಡದು' ಎಂದು ಹೇಳಿದರು.

'ಕ್ರೈಸ್ತರು ತಮ್ಮ ಮಿಷನರಿಗಳ ಮೂಲಕ ಶಿಕ್ಷಣ ಕೊಡಿಸುವ ಕೆಲಸ ಮಾಡಿದ್ದಾರೆ. ಸ್ಥಳೀಯ ಭಾಷೆಯಲ್ಲಿಯೇ ಶಿಕ್ಷಣ ಕೊಡಬೇಕೆನ್ನುವುದನ್ನು ಹೇಳಿಕೊಟ್ಟಿದ್ದಾರೆ. ಇದು ಯಾಕೆ ಈಗಿನ ಧರ್ಮದ ಅತ್ಯುನ್ನತ ಸ್ಥಾನದಲ್ಲಿ ಇರುವ ಧರ್ಮಾಧ್ಯಕ್ಷರಿಗೆ ಅರ್ಥ ಮಾಡಿಕೊಳ್ಳಲು ಆಗುತ್ತಿಲ್ಲ. ಇದರಿಂದ ನಿಮಗಾಗುವ ಸಮಸ್ಯೆ ಏನು? ಕನ್ನಡ ಭಾಷೆಯಲ್ಲಿ ತೊಡಕುಗಳಿದ್ದರೆ ನಿವಾರಿಸುವ ಕೆಲಸ ಮಾಡೋಣ. ಅದಕ್ಕೆ ಸಾಹಿತ್ಯ ಪರಿಷತ್ತು ಒಳಗೊಂಡಂತೆ ಅನೇಕ ಸಂಸ್ಥೆಗಳು, ಸರಕಾರಿ ಇಲಾಖೆಗಳು ತಯಾರಾಗಿವೆ' ಎಂದು ತಿಳಿಸಿದರು.

ಅನ್ಯ ಭಾಷಿಕರು ಬೆಂಗಳೂರಿನಲ್ಲಿ ನಮ್ಮ ಜಾಗವನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹಿಂದಿ ವಲಸಿಗರು ಅತಿಹೆಚ್ಚು ಕೆಲಸಕ್ಕಾಗಿ, ಅನ್ನಕ್ಕಾಗಿ ನಗರಕ್ಕೆ ಬರುತ್ತಿದ್ದಾರೆ. ಇಲ್ಲಿಗೆ ಬಂದಿರುವ ಹಲವರು ಕನ್ನಡವನ್ನು ಕಲಿತು ಮಾತನಾಡುವವರು ಇದ್ದಾರೆ. ಆದರೆ, ಇನ್ನು ಕೆಲವರು ಕನ್ನಡವನ್ನು ಕಲಿಯದೇ ಹಿಂದಿಯಲ್ಲಿಯೇ ವ್ಯವಹರಿಸುತ್ತಿದ್ದಾರೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಎ.ಐಸಾಕ್, ಡಾ.ರಾಜ್ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ.ಗೋವಿಂದ್, ಸಾಹಿತಿಗಳಾದ ಮನು ಬಳಿಗಾರ್, ರೀಟಾ, ಹೋರಾಟಗಾರರಾದ ರಾ.ನಂ. ಚಂದ್ರಶೇಖರ್, ಆರ್.ಎ.ಪ್ರಸಾದ್, ವ.ಚ.ಚನ್ನೇಗೌಡ, ಪದ್ಮಿನಿ ನಾಗರಾಜ್, ಸಂಘದ ಪದಾಧಿಕಾರಿಗಳಾದ ಅಂಥೋಣಿರಾಜ್ ಭಾಗವಹಿಸಿದ್ದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಖಿಲ ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘದಿಂದ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಕರ್ನಾಟಕ ಧರ್ಮಸಭೆಗೆ ಕನ್ನಡ ಗುರುಗಳನ್ನೇ ನೇಮಿಸಿ: ಆಗ್ರಹ
- ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ

ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ ಏಪ್ರಿಲ್ 10ಕ್ಕೆ ಶಿಕ್ಷೆ ಪ್ರಮಾಣ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಾಲ್ಕು ವರ್ಷಗಳ ಹಿಂದೆ ಸಂಭವಿಸಿದ್ದ ಸ್ಫೋಟ ಪ್ರಕರಣದ ಆರೋಪಿ ಮೊಹಮ್ಮದ್ ಶಾರೀಕ್, ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯಕ್ಕೆ ಮೂರು ತಿಂಗಳ ಹಿಂದೆ ಸಲ್ಲಿಸಿದ್ದ ತಪ್ಪೊಪ್ಪಿಗೆ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿದ್ದು ಏಪ್ರಿಲ್ 10ರಂದು ಶಿಕ್ಷೆಯ ಪ್ರಮಾಣ ಪ್ರಕಟವಾಗಲಿದೆ.

'ತಾನು ಕೃತ್ಯ ಎಸಗಿರುವುದಾಗಿ ನ್ಯಾಯಾಲಯದ ಮುಂದೆ ಶಾರೀಕ್ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದ' ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಬಾಂಬ್ ಸ್ಫೋಟ ಪ್ರಕರಣ ಸಂಬಂಧ 2024ರಲ್ಲಿ ಶಾರೀಕ್, ಸೈಯದ್ ಯಾಸೀನ್ ವಿರುದ್ಧ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

'ಶಂಕಿತರನ್ನು ವಿಚಾರಣೆ ನಡೆಸಲಾಗಿತ್ತು. ಆಗ, ಶಾರೀಕ್ ತಾನು ನಿರಾಪರಾಧಿ. ಯಾವುದೇ ಸ್ಫೋಟ ಪ್ರಕರಣದಲ್ಲಿ ಭಾಗಿ ಆಗಿಲ್ಲ ಎಂಬುದಾಗಿ ಹೇಳಿಕೆ ನೀಡಿದ್ದ. ಈ ನಡುವೆ ತಮ್ಮ ವಕೀಲರ ಮೂಲಕ 2025ರ ಡಿಸೆಂಬರ್‌ನಲ್ಲಿ ನ್ಯಾಯಾಲಯಕ್ಕೆ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದ. ದೋಷಾರೋಪಪಟ್ಟಿಯಲ್ಲಿ ತನಿಖಾಧಿಕಾರಿಗಳು ನಮೂದಿಸಿರುವ ಆರೋಪಗಳು ಸತ್ಯವಾಗಿದೆಯೆಂದು ಅರ್ಜಿ ಸಲ್ಲಿಸಿದ್ದ' ಎಂದು ಮೂಲಗಳು ಹೇಳಿವೆ.

'ಕುಕ್ಕರ್‌ನಲ್ಲಿ ಸುಧಾರಿತ ಸ್ಫೋಟಕ ಸಾಧನಗಳನ್ನು ಇಟ್ಟು ಸ್ಫೋಟ ನಡೆಸಿದ್ದೆ' ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದ. ಈ ಅರ್ಜಿಯ ಸಂಬಂಧ ಮೂರು ತಿಂಗಳ ವಿಚಾರಣೆ ನಡೆಸಿದ ನ್ಯಾಯಾಲಯವು ಶಂಕಿತನ ಅರ್ಜಿಯನ್ನು ಪುರಸ್ಕರಿಸಿದೆ.

2022ರ ನ.19ರಂದು ಸಂಜೆ 4.40 ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಟೊದಲ್ಲಿ ಶಾರೀಖ್ ತೆರಳುವಾಗ (ಐಇಡಿ) ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು. ಸ್ಫೋಟದ ರಭಸಕ್ಕೆ ಶಂಕಿತನ ಜತೆಗೆ ಆಟೊ ಚಾಲಕ ಸಹ ಗಂಭೀರ ಗಾಯಗೊಂಡಿದ್ದರು. ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ, ಪ್ರಕರಣವನ್ನು ಎನ್‌ಐಎಗೆ ಹಸ್ತಾಂತರ ಮಾಡಲಾಗಿತ್ತು. ಎನ್‌ಐಎ ಅಧಿಕಾರಿಗಳು ಮಂಗಳೂರಿಗೆ ಭೇಟಿ ನೀಡಿ ಸ್ಫೋಟ ಪ್ರಕರಣದ ತನಿಖೆ ನಡೆಸಿದ್ದರು.

'ಮಹಿಳೆಯರಿಗೆ ನೈತಿಕ ಬೆಂಬಲ ನೀಡಿದ್ದ ವಚನ ಚಳವಳಿ'



ಸಮಾರಂಭದಲ್ಲಿ ಎಚ್.ಎಸ್. ಶ್ರೀಮತಿ ಮತ್ತು ಬಿ.ಟಿ. ಲಲಿತಾ ನಾಯಕ್ ಅವರನ್ನು ಗೌರವಿಸಲಾಯಿತು. ಎಂ.ಎಸ್. ಆಶಾದೇವಿ, ಹಂ.ಪ. ನಾಗರಾಜಯ್ಯ, ಸಿ. ಸೋಮಶೇಖರ್ ಮತ್ತು ಎಂ. ತಿಮ್ಮಯ್ಯ, ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: '12ನೇ ಶತಮಾನದ ವಚನ ಚಳವಳಿಯು ಮಹಿಳೆಯರಿಗೆ ನೈತಿಕ ಬೆಂಬಲ ನೀಡಿತ್ತು' ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಹೇಳಿದರು.

ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ಶನಿವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'12ನೇ ಶತಮಾನದ ಹೆಚ್ಚುಗಾರಿಕೆ ಎಂದರೆ ಹೆಣ್ಣುಮಕ್ಕಳ ಮಾತುಗಳನ್ನು ಕೇಳುವ ತಾಳ್ಮೆ, ವಿವೇಕ ಹಾಗೂ ಎಚ್ಚರ ಉಳಿಸಿಕೊಂಡಿದ್ದು' ಎಂದು ತಿಳಿಸಿದರು.

'ಹೆಣ್ಣಿನ ಭಾಷೆಯನ್ನು ಲೋಕ ಇನ್ನೂ ಕಲಿತಿಲ್ಲ. ಮೌನವು ಸಹ ಹೆಣ್ಣಿನ ಒಂದು ಭಾಷೆ, ಅದನ್ನು ಈ ಲೋಕ ಕಲಿಯಬೇಕಾಗಿದೆ. ಮಹಿಳೆಯರು ಎರಡು ಹೆಜ್ಜೆಗಳನ್ನು ಮುಂದೆ ಇಟ್ಟರೆ, ಗಂಡಾಳ್ವಿಕೆ ಸಮಾಜ ನಮ್ಮನ್ನು ನಾಲ್ಕು ಹೆಜ್ಜೆ ಹಿಂದೆ ಕರೆದುಕೊಂಡು ಬರುತ್ತದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಮೌಲ್ಯ, ಪ್ರೀತಿ, ಕುಟುಂಬದ ವಿಘಟನೆಯ ಹೆಸರಿನಲ್ಲಿ ಗಂಡಾಳ್ವಿಕೆಯನ್ನು ವೈಭವೀಕರಿಸಲಾಗುತ್ತಿದೆ. ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳು ಹೆಚ್ಚುತ್ತಿವೆ. ಹೆಣ್ಣಿನ ಪರವಾಗಿ ನೂರಾರು ಕಾಯ್ದೆ ಕಾನೂನುಗಳಿವೆ. ಅವುಗಳಿಗೆ ಬಹಳ ಸೀಮಿತವಾದ ಶಕ್ತಿ ಇದೆ' ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ್ ಮಾತನಾಡಿ, 'ಮಹಿಳೆಯರ ಬಗ್ಗೆ ಅನುಕಂಪ, ಸಹಾನುಭೂತಿ ಬೇಡ. ಅವರ ಬಗ್ಗೆ ಪ್ರೀತಿ, ಗೌರವವನ್ನು ತೋರಿಸಬೇಕು. ಅವರ ಅಸ್ಮಿತೆಯನ್ನು ಉಳಿಸುವ ಕೆಲಸ ಮಾಡಬೇಕು' ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಸಾಹಿತಿಗಳಾದ ಎಚ್.ಎಸ್. ಶ್ರೀಮತಿ ಹಾಗೂ ಬಿ.ಟಿ. ಲಲಿತಾ ನಾಯಕ್ ಅವರನ್ನು ಸನ್ಮಾನಿಸಲಾಯಿತು.


ಸಾಹಿತಿ ಹಂ.ಪ. ನಾಗರಾಜಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ ಉಪಸ್ಥಿತರಿದ್ದರು.

ಮೂವರ ಸಾವು

ಕುದೂರು(ಮಾಗಡಿ): ಮರೂರು ಹ್ಯಾಂಡ್ ಪೋಸ್ಟ್ ಬಳಿ ಶನಿವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್‌ನಲ್ಲಿ ಹೊರಟಿದ್ದ ಬೆಂಗಳೂರಿನ ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಬೆಂಗಳೂರಿನ ಸಪ್ತಗಿರಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ, ದಾವಣಗೆರೆಯ ಮನೋಜ್ (21), ಬೇಲೂರಿನ ಅಭಿಲಾಷ್ (21), ಆಚಾರ್ಯ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ, ರಾಯಚೂರಿನ ನವೀನ್ (21) ಮೃತಪಟ್ಟಿದ್ದಾರೆ.

ನಿಧನ




ಶ್ರೀ ವಿ.ಎಮ್. ಚಿಕ್ಕತಿಮ್ಮಾರೆಡ್ಡಿ

ಇವರು ದಿನಾಂಕ 28-03-2026 ರಂದು ಶನಿವಾರ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ 29-03-2026 ಭಾನುವಾರದಂದು ಮಧ್ಯಾಹ್ನ 2:00 ಗಂಟೆಗೆ ಅದ್ದೆ ವಿಶ್ವನಾಥಪುರ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು: ಕುಟುಂಬವರ್ಗದವರು



ಕ್ರಿಕೆಟ್ ಪಿಚ್ ಎಂದರೆ ಕೇವಲ ಮಣ್ಣು ಅಲ್ಲ—ಅದು ಕಥೆ, ವಿಜ್ಞಾನ ಮತ್ತು ಭಾವನೆಗಳ ಸಂಗಮ. ಮಂಡ್ಯದ ಮಣ್ಣು ಹೇಗೆ ಕ್ರಿಕೆಟ್ ಲೋಕದಲ್ಲಿ ತನ್ನ ಗುರುತು ಮೂಡಿಸಿತು ಎಂಬ ಸ್ವಾರಸ್ಯಕರ ಬರಹ...



ಚಿನ್ನಸ್ವಾಮಿ ಮೈದಾನದಲ್ಲಿ ಪಿಚ್ ಹೀಗೆ ಮಾಡುತ್ತಾರೆ ನೋಡಿ... (ಸಂಗ್ರಹ ಚಿತ್ರ)



ಮಂಡ್ಯದ ಮಣ್ಣು ರನ್ನುಗಳ ಕೊಯ್ಲು

• ಗಿರೀಶ ದೊಡ್ಡಮನಿ

‘ಈ ಐಪಿಎಲ್‌ನಲ್ಲಿ ಯಾವ್ದಾರೂ ಟೀಮು 300 ರನ್ ಹೊಡಿಬೌದಾ ಮಂಜಣ್ಣ..’ ಹೆಗಲ ಮೇಲಿದ್ದ ಟವಲ್ ಅನ್ನು ಸರಿ ಮಾಡ್ಕೊಂಡು ಕುತೂಹಲದಿಂದ ಕೇಳಿದರು ರಾಜೇಗೌಡರು.

‘ರಾಜಣ್ಣ, ಈ ಸಲ ಮುನ್ನೂರ್ ವಡೀತಾರೋ ಇಲ್ವೋ ಗೊತ್ತಿಲ್ಲ. ಆದ್ರೆ ಈ ಸಲಾನೂ ಕಪ್ ನಮ್ದೇ. ನಮ್ ಕೊಯ್ಲಿ ಸಂಚುರಿ ಮ್ಯಾಲ್ ಸಂಚುರಿ ಮಾಡ್ತಾನ್ ನೋಡ್ತೀರು..’ ಮಂಜಣ್ಣ ಕ್ರಿಕೆಟ್ ಪರಿಣತನಂತೆ ಮಾತನಾಡುತ್ತಿದ್ದಾಗ ಮಧ್ಯ ಬಾಯಾಕಿದ ರಾಜೇಗೌಡರು, ‘ಅದ್ಹೇಂಗ್ ಯೇಳ್ತಿಯಪಾ. ಕೊಯ್ಲಿ ಏನು ನಮ್ಮೂರ್ ಹುಡುಗನೇ..’ ಅಂದರು.

‘ಮಂಡ್ಯಕ್ಕೂ ಕೊಯ್ಲಿಗೂ ಭಾಳ ನೆಂಟಸ್ತಿಕೆ ಅದೆ. ಅದು ಮಣ್ಣಿನ ಸಂಬಂಧ ಕಣಣ್ಣೋ. ರನ್‌ಗಳು ನಮ್ಮೂರಿನ ಮಣ್ಣು ಹಾಕಿರೋ ಪಿಚ್‌ನಲ್ಲಿಯೇ ಬಂದಿದ್ದು’ ಎಂದು ಮಂಜಣ್ಣ ನಕ್ಕರು.

ರಾಜೇಗೌಡರು ‘ಎಲ್ಲಿಯ ಕೊಯ್ಲಿ, ಎತ್ತಣ ಮಂಡ್ಯ’ ಎಂದು ಅಚ್ಚರಿಗೊಂಡರು.

ಇದು ಐಪಿಎಲ್ (ಇಂಡಿಯನ್ ಪ್ರೀಮಿಯರ್ ಲೀಗ್) ಕುರಿತ ಲೋಕಾರೂಢಿಯ ಮಾತುಕತೆ ಅನಿಸಬಹುದು. ಆದರೆ ಕ್ರಿಕೆಟ್ ತಾರೆ ವಿರಾಟ್ ಕೊಹ್ಲಿ ಮತ್ತು ಮಂಡ್ಯಕ್ಕೆ ಸಂಬಂಧ ಬೆಸೆದಿದ್ದು ಕ್ರಿಕೆಟ್ ಪಿಚ್!

ಭಾರತದ ಹಳ್ಳಿ, ನಗರಗಳಲ್ಲಿ ಕ್ರಿಕೆಟ್ ಆಡುವವರು, ನೋಡುವವರ ಮಧ್ಯೆ ಮಣ್ಣಿನ ನಂಟು ಬೆಸೆಯುವ ಪಿಚ್ ಬಗೆಗಿನ ಮಾತುಕತೆಗಳೇ ಸ್ವಾರಸ್ಯಕರ. ಆದರೆ ಮಂಡ್ಯ ಜಿಲ್ಲೆಗೆ ಮಾತ್ರ ಇಂತಹ ಮಾತುಕತೆಗಳು ಮೊದಲ ಮಳೆಯ ಹನಿಗಳಿಗೆ ನೆಂದ ಮಣ್ಣಿನ ಘಮಲಿನಷ್ಟೇ ಅಪ್ಯಾಯಮಾನ. ಆ ಮೂಲಕ ಕರ್ನಾಟಕಕ್ಕೂ ಹೆಮ್ಮೆ.

ಇದು ಹೇಗೆ ಶುರುವಾಯ್ತು...

ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಮಾಡಲು ಮಂಡ್ಯ ಜಿಲ್ಲೆಯ ಕೆರೆಯೊಂದರಲ್ಲಿ ಸಿಗುವ ಮಣ್ಣನ್ನು ಬಳಸಲಾಗಿದೆ. ಕ್ರಿಕೆಟ್ ಚೆಂಡಿನ ಪುಟಿತ, ಲಯಬದ್ಧ ಚಲನೆ ಮತ್ತು ಜಿಗುಟುತನಕ್ಕೆ ಈ ಮಣ್ಣು ಪೂರಕವಾಗಿದೆ. ಅದಕ್ಕಾಗಿಯೇ ಈಗ ಬಹಳಷ್ಟು ಊರುಗಳ ಕ್ರಿಕೆಟ್ ಪಿಚ್‌ಗಳಲ್ಲಿ ಮಂಡ್ಯದ ಮಣ್ಣಿನ ಘಮಲು ಕಾಣಸಿಗುತ್ತಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಎಲ್ಲಿಯೇ ಪಿಚ್ ಮಾಡಬೇಕೆಂದರೂ ಮೊದಲು ಗಮನ ಸೆಳೆಯುವುದು ಮಂಡ್ಯದ ಮಣ್ಣಿನ ಗುಣಮಟ್ಟವೇ.


ಬೆಂಗಳೂರಿನ ಹೊರವಲಯದ ದೇವನಹಳ್ಳಿ ಬಳಿ ನಿರ್ಮಾಣವಾಗಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ 32 ಪಿಚ್‌ಗಳಿವೆ. ಎಲ್ಲಕ್ಕೂ ಮಂಡ್ಯದ ಮಣ್ಣು ಬಳಸಲಾಗಿದೆ. ಈಚೆಗೆ ಇಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯಗಳಲ್ಲಿ ದೆಹಲಿ ತಂಡದಲ್ಲಿ ಆಡಿದ್ದ ವಿರಾಟ್ ಶತಕ ಬಾರಿಸಿದ್ದರು. ದೇಶದ ವಿವಿಧ ಮೈದಾನಗಳಲ್ಲಿ ಅವರು ಸಾಧನೆ ಮಾಡಿದ ಸಂದರ್ಭಗಳಲ್ಲಿ ಕೆಲವರು, ಮಂಡ್ಯ ಮಣ್ಣಿನ ಪಿಚ್‌ಗಳ ಜೊತೆ ಅವರ ಯಶಸ್ಸನ್ನು ಹೋಲಿಕೆ ಮಾಡುತ್ತ, ತಾತ್ಕಾಲಿಕ ಸಂಬಂಧವನ್ನು ಕಲ್ಪಿಸುತ್ತಾರೆ. ಅದರಲ್ಲಿ ಕೊಹ್ಲಿಯನ್ನು ಕನ್ನಡಿಗರು ಹೆಚ್ಚು ಪ್ರೀತಿಸುವುದು ಸಹ ಕಾರಣವಾಗಿದೆ.

‘ವಿರಾಟ್ ಮತ್ತು ಮಂಡ್ಯದ ಮಣ್ಣಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. ಮಂಡ್ಯದ ಮಣ್ಣು ಬಳಕೆ ಮಾಡಲಾದ ಪಿಚ್‌ಗಳ ಮೇಲೆ ವಿರಾಟ್ ಯಶಸ್ವಿಯಾಗಿದ್ದಾರೆ. ಆ ಮಣ್ಣಿನಲ್ಲಿ ಜಿಗುಟುತನ ಹೆಚ್ಚಾಗಿದೆ. ಮರಳಿಗಿಂತ ಮಣ್ಣಿನ ಅಂಶವೂ ಹೆಚ್ಚು. ಅದರ ಪರಿಣಾಮವಾಗಿ ಚೆಂಡಿನ ವೇಗ, ಪುಟಿತ, ಚಲನೆಯ ಲಯ ಹಾಗೂ ಹುಲ್ಲಿನ ಬೆಳವಣಿಗೆ ಅದ್ಭುತವಾಗಿದೆ. ಇದು ಕಂದುಬಣ್ಣದ ಮಣ್ಣು’ ಎಂದು ಪಿಚ್ ಪರಿಣತರೊಬ್ಬರು (ಹೆಸರು ಗೋಪ್ಯವಾಗಿಡುವ ಕರಾರು) ಹೇಳುತ್ತಾರೆ.

ಈ ಮಣ್ಣನ್ನು ಕ್ರಿಕೆಟ್ ಲೋಕಕ್ಕೆ ಪರಿಚಯಿಸಿದ ಕೀರ್ತಿ ಮಂಡ್ಯದ ಜನತಾ ಶಿಕ್ಷಣ ಸಮಿತಿಯ (ಪಿಇಟಿ) ಮಾಜಿ ಅಧ್ಯಕ್ಷರಾದ ದಿವಂಗತ ಎಚ್.ಡಿ. ಚೌಡಯ್ಯನವರಿಗೆ ಸಲ್ಲುತ್ತದೆ. 2003ರಲ್ಲಿ ಪಿಇಟಿ ಕಾಲೇಜು ಮೈದಾನದಲ್ಲಿ ಕರ್ನಾಟಕ ಮತ್ತು ಬಂಗಾಳ ನಡುವಣ ರಣಜಿ ಪಂದ್ಯ ನಡೆದಿತ್ತು. ಆ ಪಂದ್ಯಕ್ಕಾಗಿ ಮೈದಾನದಲ್ಲಿ ಪಿಚ್ ಸಿದ್ಧಪಡಿಸಲು ರಾಜ್ಯದೆಲ್ಲೆಡೆ ಮಣ್ಣು ಹುಡುಕಿದ್ದರು. ಆದರೆ ತಮ್ಮ ಜಿಲ್ಲೆಯಲ್ಲಿಯೇ ಇದ್ದ ಕೆರೆಯೊಂದರ ಮಣ್ಣನ್ನು ಪರೀಕ್ಷೆಗೆ ಕಳಿಸಿ ಅದನ್ನೇ ಪಿಚ್ ಮಾಡಲು ಬಳಸಿ ಯಶಸ್ವಿಯಾದರು. ಅದರೊಂದಿಗೆ ‘ಸಕ್ಕರೆ ಜಿಲ್ಲೆ’ಯ ಮಣ್ಣಿನ ಕಂಪು, ಇಂಗ್ಲಿಷರ ನಾಡಿನಲ್ಲಿ ಜನಿಸಿದ ಕ್ರಿಕೆಟ್ ಲೋಕವನ್ನು ಆವರಿಸಲು ಶುರುವಾಯಿತು.

ಇವತ್ತು ಕ್ರಿಕೆಟ್‌ನಲ್ಲಿ ಆಧುನಿಕ ತಂತ್ರಜ್ಞಾನಗಳು ಬಂದಿವೆ. ಟೆಸ್ಟ್, ಏಕದಿನ, ಟಿ20, ದಿ ಹಂಡ್ರೆಡ್ ಇತ್ಯಾದಿ ಮಾದರಿಗಳು ಜನಪ್ರಿಯವಾಗಿವೆ. ಅದರಲ್ಲೂ ಭಾರತವು ಕ್ರಿಕೆಟ್ ಜಗತ್ತಿನ ‘ದೊಡ್ಡಣ್ಣ’ನಾಗಿ ಬೆಳೆದಿದೆ. ಏನೆಲ್ಲ ಆದರೂ ಕ್ರಿಕೆಟ್ ಆಟದ ಗ್ರಾಮೀಣ ನಂಟು ಮಾತ್ರ ಉಳಿದುಕೊಂಡಿದೆ. ಅದು ಪಿಚ್ ಮೂಲಕ ಎಂಬುದು ವಿಶೇಷ.

ಚಿನ್ನಸ್ವಾಮಿ ಮತ್ತು ಕಸ್ತೂರಿರಂಗನ್



ಕಸ್ತೂರಿರಂಗನ್

ಕ್ರಿಕೆಟ್ ಪಿಚ್ ಗುಣಮಟ್ಟ ಅರಿಯಲು ಈಗ ತಂತ್ರಜ್ಞಾನವಿದೆ. ಆದರೆ ದಶಕಗಳ ಹಿಂದೆ ಪಿಚ್ ಸಿದ್ಧತೆಯ ಬಗ್ಗೆ ಹೆಚ್ಚಿನ ಅರಿವು ಇರಲಿಲ್ಲ. ಆದರೆ 70ರ ದಶಕದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಸಿದ್ಧಗೊಳಿಸುವ ಹೊಣೆ ಹೊತ್ತ ಎಸ್. ಕಸ್ತೂರಿರಂಗನ್ ಅವರು ತಮ್ಮದೇ ಆದ ತಂತ್ರ ಕಂಡುಕೊಂಡಿದ್ದರು.

ಕಲ್ಲು ಬಂಡೆಗಳ ತಾಣವಾಗಿದ್ದ ಜಾಗವನ್ನು ಸುಂದರ ಪಿಚ್ ಆಗಿ ನಿರ್ಮಿಸಿದರು. ಗುಲಾಬಿ ಬೆಳೆಗಾರರಾಗಿದ್ದ ಕಸ್ತೂರಿರಂಗನ್ ಅವರು ಕ್ರಿಕೆಟಿಗರೂ ಹೌದು. ಮಣ್ಣಿನ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದರು. ಭಾರತದ ಮೊದಲ ಪಿಚ್ ಕ್ಯೂರೇಟರ್ ಎಂಬ ಹೆಗ್ಗಳಿಕೆಯೂ ಅವರದ್ದು. ಪಂದ್ಯಕ್ಕೆ ಪಿಚ್ ಸಿದ್ಧವಾಗಿರುವುದನ್ನು ಗುರುತಿಸಲು ಅವರು ನಾಣ್ಯವನ್ನು ಮೇಲಿನಿಂದ ಒಗೆಯುತ್ತಿದ್ದರು. ನಾಣ್ಯದ ‘ಟಣ್ ಟಣ್’ ಸದ್ದಿನ ಮೂಲಕ ಪಿಚ್ ಮರ್ಮ ಅರಿಯುತ್ತಿದ್ದರು. ಹಲವು ವರ್ಷಗಳ ಕಾಲ ಅವರು ಇಲ್ಲಿಯ ಪಿಚ್ ಕ್ಯೂರೇಟರ್ ಆಗಿದ್ದರು. ಅವರಿಗೆ ದೊಡ್ಡ ಶಿಷ್ಯಬಳಗವೇ ಇದೆ. ಅವರ ಮಗ ಶ್ರೀರಾಮ್ ಕೂಡ ಕ್ಯೂರೇಟರ್ ಆಗಿದ್ದಾರೆ.

ಈಗ ಪಿಚ್ ಕಾಠಿಣ್ಯ ಮತ್ತು ಮಣ್ಣಿನ ಹದ ಅರಿಯಲು ಕ್ಲಿಂಗ್ ಯಂತ್ರವನ್ನು ಬಳಸಲಾಗುತ್ತದೆ.

ಪಿಚ್ ಹುಟ್ಟಿದ ಕತೆ

ಈ ಪಿಚ್ ಎಂಬ ಪರಿಕಲ್ಪನೆ ಹುಟ್ಟಿದ ಕತೆಯೇ ಸ್ವಾರಸ್ಯಕರ. 16ನೇ ಶತಮಾನದಲ್ಲಿ ಇಂಗ್ಲೆಂಡ್‌ನ ಹಳ್ಳಿಗಳಲ್ಲಿ ಕ್ರಿಕೆಟ್ ಆಡುವವರು ನಿರ್ದಿಷ್ಟ ಅಳತೆಯ ಪಿಚ್ ಸಿದ್ಧಪಡಿಸುತ್ತಿರಲಿಲ್ಲ. ಖಾಲಿ ಹೊಲ–ಗದ್ದೆಗಳು, ದೂಳು ಹಾರುವ ನೆಲದ ಮೇಲೆ ಕ್ರಿಕೆಟ್ ಆಡುತ್ತಿದ್ದರು. ಆದರೆ ನಿರ್ದಿಷ್ಟ ಅಳತೆ ಇರದ ಪಿಚ್‌ಗಳಲ್ಲಿ ಬ್ಯಾಟರ್ ಮತ್ತು ಬೌಲರ್‌ಗಳಿಗೆ ಸಮಾನ ಅವಕಾಶ ಸಿಗುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಹೊಲಗಳನ್ನು ಸರ್ವೆ ಮಾಡಲು ಎಡ್ಮಂಡ್ ಗುಂಟರ್ಸ್ ಎಂಬ ವ್ಯಕ್ತಿ 66 ಅಡಿ (22 ಯಾರ್ಡ್ಸ್) ಉದ್ದದ ಸರಪಳಿಯನ್ನು (ಗುಂಟರ್ಸ್ ಚೈನ್) ನಿಗದಿ ಮಾಡಿದರು. ಭೂಮಿ, ನಿವೇಶನಗಳ ಅಳತೆ ಮಾಡಲು ಅದನ್ನು ಬಳಸುತ್ತಿದ್ದರು. ಕ್ರಿಕೆಟ್ ಆಡುವವರೂ ಅದೇ ಸರಪಳಿಯನ್ನು ಮಾನದಂಡವಾಗಿಟ್ಟುಕೊಂಡು ಪಿಚ್ ಗುರುತಿಸಿದರು. ಅಲ್ಲಿಂದ ಇಲ್ಲಿಯವರೆಗೂ ಅದೇ ಅಳತೆ ಮುಂದುವರಿದಿದೆ.

‘ಪಿಚ್ ಎಂಬ ವಿಷಯವೇ ಬೃಹತ್ ಗ್ರಂಥಕ್ಕೆ ಸಮಾನ. ಕ್ರಿಕೆಟ್ ಬೆಳೆದಂತೆ ಪಿಚ್ ಕುರಿತ ಸಂಶೋಧನೆ, ತಂತ್ರಜ್ಞಾನಗಳೂ ವಿಸ್ತಾರವಾಗುತ್ತಿವೆ. ಪಿಚ್ ಸಿದ್ಧತೆ, ನಿರ್ವಹಣೆ, ಗುಣಮಟ್ಟ ಸುಧಾರಣೆಗಳ ಇತ್ಯಾದಿ ಪ್ರಾವೀಣ್ಯತೆಯ ಕ್ಷೇತ್ರವಾಗಿದೆ. ಅದಕ್ಕಾಗಿ ವಿಶ್ವದಾದ್ಯಂತ ತಜ್ಞರೇ ಇದ್ದಾರೆ’ ಎಂದು ಬಿಸಿಸಿಐ ಅಂಪೈರ್ ಅಭಿಜಿತ್ ಬೆಂಗೇರಿ ಹೇಳುತ್ತಾರೆ.

ಪ್ರಮುಖವಾಗಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಲ್ಲಿ 18ನೇ ಶತಮಾನದಿಂದಲೇ ವಿಶೇಷ ರೀತಿಯ ಪಿಚ್‌ಗಳನ್ನು ಸಿದ್ಧಪಡಿಸುವ ಕಾರ್ಯ ಆರಂಭವಾದವು. ಆದರೆ ಅಲ್ಲಿಯ ಪಿಚ್‌ಗಳಿಗೂ ಭಾರತದ ಕ್ರೀಡಾಂಗಣಗಳಲ್ಲಿರುವ ಅಂಕಣಗಳಿಗೂ ಅಜಗಜಾಂತರ ವ್ಯತ್ಯಾಸವಿದೆ.

‘ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್‌ಗಳಲ್ಲಿರುವ ಹವಾಗುಣ ಮತ್ತು ಮಣ್ಣಿನ ಗುಣಕ್ಕೆ ತಕ್ಕಂತೆ ಅಲ್ಲಿಯ ಪಿಚ್‌ಗಳು ಸಿದ್ಧವಾಗಿರುತ್ತವೆ. ಆ ದೇಶಗಳ ಬಹುತೇಕ ಎಲ್ಲ ನಗರಗಳಲ್ಲಿಯೂ ಇರುವ ಪಿಚ್‌ಗಳ ಗುಣಸ್ವಭಾವ ಶೇಕಡ 90ರಷ್ಟು ಒಂದೇ ರೀತಿ ಇರುತ್ತದೆ. ಹೆಚ್ಚಾಗಿ ಚಳಿಯ ವಾತಾವರಣ ಅಲ್ಲಿರುತ್ತದೆ. ಆದರೆ ಭಾರತದಲ್ಲಿ ಹಾಗಲ್ಲ. ಒಂದೊಂದು ಊರಿಗೂ ಹವಾಮಾನ, ಮಣ್ಣಿನ ಗುಣ ಬದಲಾಗುತ್ತೆ. ಒಂದು ದೇಶ, ಒಂದು ಚುನಾವಣೆ, ಒಂದು ದೇಶ, ಒಂದು ಕರೆನ್ಸಿ ಇತ್ಯಾದಿ ಸ್ಲೋಗನ್ ಹೇಳಬಹುದು. 13ನೇ ಪುಟಕ್ಕೆ...



ಅಹಾ! ಪಿಚ್ ಚೆನ್ನಾಗಿದೆ...ಬೆಂಗಳೂರಿನ ಚಿನ್ನಸ್ವಾಮಿ ಮೈದಾನದಲ್ಲಿ ವಿರಾಟ್ ಕೊಹ್ಲಿ

ತೀರ್ಥ ಮಹಿಳೆಯರ ಬೀಜ ಕ್ರಾಂತಿ



ಬೀಬಿ ಜಾನ್ ಹಳೇಮನಿ

• ಸುಷ್ಮಾ ಸವಸುದ್ದಿ

ಈ ಯಶೋಗಾಥೆ ಆರಂಭವಾದದ್ದು ಕೋವಿಡ್ ಮಹಾಮಾರಿ ಸಮಯದಲ್ಲಿ. ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಅನೇಕ ಗ್ರಾಮೀಣ ಮಹಿಳೆಯರು ಕೆಲಸ ಕಳೆದುಕೊಂಡು, ಭವಿಷ್ಯದ ಬಗ್ಗೆ ಅನಿಶ್ಚಿತತೆಯಲ್ಲಿ ಮುಳುಗಿದ್ದರು. ದಿನಗೂಲಿ ಕೆಲಸದಿಂದ ಬದುಕು ಸಾಗಿಸುತ್ತಿದ್ದ ಕುಟುಂಬಗಳಿಗೆ ಅಚಾನಕ್ ಆಗಿ ಬಂದ ಈ ಆಘಾತ, ಜೀವನದ ದಿಕ್ಕೇ ಬದಲಿಸಿದಂತಾಯಿತು.

ಆ ಸಂಕಷ್ಟದ ನಡುವೆಯೇ ಒಂದು ಪ್ರಶ್ನೆ ಅವರ ಮನಸ್ಸನ್ನು ಕಾಡುತ್ತಿತ್ತು–‘ಇನ್ನು ಮುಂದೆ ಹೇಗೆ ಬದುಕು ಕಟ್ಟಿಕೊಳ್ಳಬೇಕು?’

ಅದಕ್ಕೆ ಉತ್ತರ ಹುಡುಕಲು ಮುಂದಾದದ್ದು ‘ಸಹಜ ಸಮೃದ್ಧ’ ಸಂಸ್ಥೆ. ಮಹಿಳೆಯರ ಸಾಮರ್ಥ್ಯವನ್ನು ಗುರುತಿಸಿ, ಅವರ ಪರಿಸ್ಥಿತಿಯೊಳಗೇ ಆರ್ಥಿಕ ಸ್ವಾವಲಂಬನೆ ಸಾಧಿಸಲು ದಾರಿ ಮಾಡಿಕೊಡಬೇಕು ಎಂಬ ಆಲೋಚನೆಯಿಂದ ಒಂದು ಹೊಸ ಪ್ರಯತ್ನ ಆರಂಭವಾಯಿತು. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಕೃಷಿ ಆಧಾರಿತ ‘ತೀರ್ಥ’ ಎಂಬ ಹಳ್ಳಿಯಲ್ಲಿ ಮಹಿಳೆಯರ ಕೈ ಹಿಡಿದು ಬದುಕಿನ ಹೊಸ ಪಾಠ ಕಲಿಸಲು ಸಂಸ್ಥೆ ಮುಂದಾಯಿತು.

> ಕೆಲಸ ಕಳೆದುಕೊಂಡ ನಿರಾಶೆಯಿಂದ ಆರಂಭವಾದ ಈ ಪಯಣ, ಇಂದು ವಿಶ್ವದ ವೇದಿಕೆಯಲ್ಲಿ ಗೌರವಕ್ಕೆ ಪಾತ್ರವಾಗಿದೆ. ತೀರ್ಥ ಎಂಬ ಹಳ್ಳಿಯ ಮಹಿಳೆಯರು ಮಣ್ಣಿನ ಜೊತೆಗೂಡಿ ತಮ್ಮ ಬದುಕನ್ನೇ ಮರುಸೃಷ್ಟಿಸಿ, ಹೋರಾಟವನ್ನು ಸಾಧನೆಯಾಗಿ ಹೇಗೆ ರೂಪಿಸಬಹುದು ಎಂಬುದನ್ನು ತೋರಿಸಿದ್ದಾರೆ

ಆದರೆ ಈ ಗ್ರಾಮದ ಕೃಷಿಯು ತನ್ನ ಮೂಲ ಸ್ವರೂಪ ಕಳೆದುಕೊಂಡಿತ್ತು. ಮೆಕ್ಕೆಜೋಳ ಮತ್ತು ಹತ್ತಿಯ ಏಕಬೆಳೆ ಪದ್ಧತಿಗೆ ಮಾರು ಹೋಗಿದ್ದ ರೈತರು, ತಮ್ಮ ಪೂರ್ವಜರು ಬೆಳೆದಿದ್ದ ದೇಸಿ ಧಾನ್ಯಗಳನ್ನು ಮರೆತಿದ್ದರು. ಮಣ್ಣಿನ ಸಹಜ ಶಕ್ತಿ ಕುಂದುತ್ತಿತ್ತು. ಇದೇ ಸಂದರ್ಭದಲ್ಲಿ ಸಾವಯವ ಕೃಷಿ, ಮಿಶ್ರ ಬೇಸಾಯ, ತರಕಾರಿ ಬೆಳೆಯುವಿಕೆ ಮತ್ತು ಸಿರಿಧಾನ್ಯಗಳ ಪುನರುಜ್ಜೀವನದ ಬಗ್ಗೆ ಮಹಿಳೆಯರಿಗೆ ತರಬೇತಿ ನೀಡಲಾಯಿತು.

ಈ ತರಬೇತಿಯೇ 2019ರಲ್ಲಿ ಬೀಬಿ ಜಾನ್ ಹಳೇಮನಿ ಅವರ ನೇತೃತ್ವದಲ್ಲಿ ‘ಬೀಬಿ ಫಾತಿಮಾ ಮಹಿಳಾ ಸಂಘ’ ಹುಟ್ಟಿಗೆ ಕಾರಣವಾಯಿತು.

‘ಏನನ್ನಾದರೂ ಮಾಡಬೇಕು ಅನ್ನೋ ಧ್ಯೇಯ ಹೊತ್ತು ಹೊರಬಂದಾಗ ದಾರಿ ಅಷ್ಟು ಸುಲಭವಾಗಿರಲಿಲ್ಲ’ ಎಂದು ಬೀಬಿ ಜಾನ್ ನೆನಪಿಸಿಕೊಳ್ಳುತ್ತಾರೆ. ‘ಮೊದಲ ನಾವು ರೈತರ ಬಳಿ ಹೋಗಿ ತರಬೇತಿ ಕೊಡ್ತೀವಿ ಅಂದಾಗ, ನಮಗೇನ್ ಗೊತ್ತು ಅಂತಾ ಅಪಹಾಸ್ಯ ಮಾಡ್ತಿದ್ರು. ಹೆಣ್ಣಿಗೇ ಹೆಣ್ಣು ಅಡ್ಡಗಟ್ಟಿದ ಸಂದರ್ಭಗಳೂ ಇದ್ದವು.’

ಆದರೂ ಈ ಮಹಿಳೆಯರು ಹಿಂದೆ ಸರಿಯಲಿಲ್ಲ. ಮನೆಮನೆಗೆ ತೆರಳಿ ಹಿತ್ತಲ ತೋಟದ ಕುರಿತು ತಿಳಿಸುವುದು, ಸಾವಯವ ಕೃಷಿಯ ಬಗ್ಗೆ ಅರಿವು ಮೂಡಿಸುವುದು, ತರಕಾರಿ ಬೆಳೆ ಕುರಿತು ಪ್ರಾಯೋಗಿಕ ತರಬೇತಿ ನೀಡುವುದರ ಮೂಲಕ ಅವರು ನಿಧಾನವಾಗಿ ವಿಶ್ವಾಸ ಗಳಿಸಿಕೊಂಡರು.

ಒಮ್ಮೆ ಮನೆಯೊಳಗೇ ಸೀಮಿತವಾಗಿದ್ದವರು, ಇಂದು ಗ್ರಾಮದಿಂದ ಹೊರಬಂದು ವಿಶ್ವದತ್ತ ಹೆಜ್ಜೆ ಹಾಕಿದ್ದಾರೆ. ‘ಮನಿಂದ ಹೊರಗ ಕಾಲಿಡೋಕೆ ಹೆದರ್ತಿದ್ದ ನಾನು, ಇಂದು ಒಬ್ಬಳೇ ವಿಮಾನ ಹತ್ತಿ ದೆಹಲಿಗೆ ಹೋಗಿ ಬಂದೇನಿ’ ಎಂದು ಬಿಬೀ ಜಾನ್ ಹೆಮ್ಮೆಯಿಂದ ಹೇಳುತ್ತಾರೆ.



ಈ ಸಂಘದ ಪ್ರಮುಖ ಸಾಧನೆಗಳಲ್ಲಿ ಒಂದು; ಸಮುದಾಯ ಬೀಜ ಬ್ಯಾಂಕ್.

ಬೀಬಿ ಜಾನ್ ಅವರ ಮನೆಯ ಹಳೆಯ ದನದ ಕೊಟ್ಟಿಗೆಯನ್ನು ಪರಿವರ್ತಿಸಿ, ಅದನ್ನು ಒಂದು ಚೈತನ್ಯಮಯ ಜ್ಞಾನಕೇಂದ್ರವನ್ನಾಗಿ ರೂಪಿಸಲಾಗಿದೆ. ಇಲ್ಲಿ 350ಕ್ಕೂ ಹೆಚ್ಚು ದೇಸಿ ಬೀಜಗಳನ್ನು ಸಂರಕ್ಷಿಸಲಾಗಿದೆ. ಇದು ಕೇವಲ ಸಂಗ್ರಹಣೆಯಲ್ಲ; ಇದು ಸಂರಕ್ಷಣೆ ಮತ್ತು ಹಂಚಿಕೆಯ ವ್ಯವಸ್ಥೆ.

ರೈತರಿಗೆ ಬೀಜಗಳನ್ನು ನೀಡಲಾಗುತ್ತದೆ. ಬೆಳೆ ಬಂದ ನಂತರ ಅವರು ಅದೇ ಬೀಜವನ್ನು ದುಪ್ಪಟ್ಟು ಪ್ರಮಾಣದಲ್ಲಿ ಹಿಂತಿರುಗಿಸುತ್ತಾರೆ. ಈ ಪರಸ್ಪರ ಸಹಕಾರದ ಮಾದರಿ, ಜೀವವೈವಿಧ್ಯ ಸಂರಕ್ಷಣೆಗೆ ಬಲವಾದ ಆಧಾರವಾಗಿದೆ.

ಇದರ ಜೊತೆಗೆ, ‘ನವಧಾನ್ಯ’ ಕಿಟ್‌ಗಳು ಮತ್ತು ತರಕಾರಿ ಬೀಜಗಳ ಕಿಟ್‌ಗಳನ್ನು ರೈತರಿಗೆ ಒದಗಿಸಲಾಗುತ್ತಿದೆ. ಅಳಿವಿನಂಚಿನಲ್ಲಿದ್ದ ಸಿರಿಧಾನ್ಯಗಳು ಮತ್ತೆ ಹಳ್ಳಿಗಳಲ್ಲಿ ಬೆಳೆಯಲು ಆರಂಭವಾಗಿವೆ. ಕೃಷಿ ಉತ್ಪಾದನೆಗೆ ಮಾತ್ರ ಸೀಮಿತವಾಗದೆ, ಈ ಮಹಿಳೆಯರು ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯಲ್ಲಿ ಕೂಡ ಮುನ್ನಡೆದಿದ್ದಾರೆ.

11ನೇ ಪುಟಕ್ಕೆ...



ರೈತರಿಗೆ ತರಬೇತಿ ನೀಡುತ್ತಿರುವ ಬೀಬಿ

ಯಕ್ಷಕೌಶಿಕನ ಅಜರಾಮರ ಪಯಣ



ಸೂರಿಕುಮೇರು ಗೋವಿಂದ ಭಟ್ಟ


• ಎಂ. ಪ್ರಭಾಕರ ಜೋಶಿ

ಯಕ್ಷಗಾನದಲ್ಲಿ ‘ಯಕ್ಷ ಗೋವಿಂದ’, ‘ಯಕ್ಷಕೌಶಿಕ’, ‘ಸಮಗ್ರ ಕಲಾವಿದ’ ಮೊದಲಾದ ಹತ್ತಾರು ಹೆಸರುಗಳನ್ನು ಹೊತ್ತು ಜಾಜ್ವಲ್ಯಮಾನವಾಗಿ ಬೆಳಗಿದ ದಶಾವತಾರಿ ಸೂರಿಕುಮೇರು ಗೋವಿಂದ ಭಟ್ಟರು (1938–2026) ಎಂದರೆ ಅದು ಒಂದು ವ್ಯಕ್ತಿಯ ಪರಿಚಯವಷ್ಟೇ ಅಲ್ಲ, ತೆಂಕುತಿಟ್ಟು ಯಕ್ಷಗಾನದ ರಂಗಸೌಂದರ್ಯ, ರಂಗವೈಭವ ಮತ್ತು ನಿರ್ವಹಣಾ ಶೈಲಿಯ ಗರಿಷ್ಠ ಸ್ವರೂಪವೇ ಅವರ ರೂಪದಲ್ಲಿ ಅವತರಿಸಿದಂತಿತ್ತು ಎನ್ನಿಸುವ ವ್ಯಕ್ತಿತ್ವ. ನಟಶೇಖರ ಗೋವಿಂದಣ್ಣ ಈಗ ನಮ್ಮೊಂದಿಗೆ ಇಲ್ಲದೇ ಇರುವುದರಿಂದ ಯಕ್ಷಗಾನ ಕ್ಷೇತ್ರಕ್ಕೆ ಅಪಾರ ನಷ್ಟ. ಆದರೆ ಅವರು ರೂಪಿಸಿಕೊಂಡ ಕಲಾಜೀವನ, ಕಲೆಯ ಮೇಲಿನ ಶಿಸ್ತಿನ ನಿಲುವು ಮತ್ತು ಬದುಕಿನ ಮೂಲಕ ಕಲೆಗೆ ತಂದ ಗೌರವಗಳು ಮುಂದಿನ ಪೀಳಿಗೆಗಳಿಗೆ ದಾರಿದೀಪಗಳಾಗಿ ಉಳಿಯುತ್ತವೆ.

ಬಂಟ್ವಾಳ ತಾಲ್ಲೂಕಿನ ಕೋಡಪದವು ಬಳಿಯ ಕುಕ್ಕೆಮನೆ ಕಿನಿಲದಲ್ಲಿ ಶಂಕರನಾರಾಯಣ ಭಟ್ಟರು ಮತ್ತು ಲಕ್ಷ್ಮಿಯಮ್ಮ ದಂಪತಿಯ ಮಗನಾಗಿ ಜನಿಸಿದ ಗೋವಿಂದ ಭಟ್ಟರಿಗೆ ಬಡತನವೇ ಬಂಡವಾಳವಾಗಿತ್ತು. ಆದರೆ ಆ ಬಡತನದ ಮಧ್ಯೆಯೇ ಹಿರಿಯರ ಸಂಸ್ಕಾರ, ಸುತ್ತಲಿನ ಬದುಕಿನ ಅನುಭವಗಳು ಮತ್ತು ಕಲೆಯ ಮೇಲಿನ ಆಕರ್ಷಣೆಗಳು ಅವರ ನಿಜವಾದ ಸಂಪತ್ತು. ಔಪಚಾರಿಕ ಶಿಕ್ಷಣವಾಗಿ ಒಂದೆರಡು ತರಗತಿಗಳನ್ನು ಮಾತ್ರ ಪೂರೈಸಿದ ಅವರು, ನಿಜವಾದ ವಿದ್ಯೆಯನ್ನು ‘ಬಯಲು ವಿಶ್ವವಿದ್ಯಾಲಯ’ದಲ್ಲೇ ಕಲಿತವರು. ಮನೆಕೆಲಸದ ಸಹಾಯಕ, ಹೋಟೆಲ್ ಮಾಣಿ, ತೋಟದ ಕಾರ್ಮಿಕ–ಹೀಗೆ ಮಾಡಿದ ಕೆಲಸಗಳೆಲ್ಲ ಅವರ ಪಾಲಿಗೆ ದೌರ್ಭಾಗ್ಯವಾಗಲಿಲ್ಲ; ಅದನ್ನೇ ಭಾಗ್ಯವೆಂದು ಸ್ವೀಕರಿಸಿದ ಧೈರ್ಯ ಮತ್ತು ಮನೋಭಾವವೇ ಅವರ ವ್ಯಕ್ತಿತ್ವದ ಬಲ.

ಒಂದಾಣೆ, ಎರಡಾಣೆಯ ದಿನಸಂಬಳದಿಂದ ಜೀವನ ಆರಂಭಿಸಿದ ಈ ಕಲಾವಿದ, ನಂತರ ರಾಷ್ಟ್ರ ಪ್ರಶಸ್ತಿ ಗಳಿಸುವ ಮಟ್ಟಕ್ಕೆ ಏರಿದ ಸಾಧನೆ ಒಂದು ಕಾದಂಬರಿಯ ಕಥೆಯಂತೆಯೇ ತೋರುತ್ತದೆ. ಆದರೆ ಅದು ನಿಜ ಜೀವನ. ಬದುಕಿನ ಕಠಿಣ ಹೋರಾಟವನ್ನು ಛಲದಿಂದ ಎದುರಿಸಿ, ಅದನ್ನೇ ಸಾಧನೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಏರಿದ ಅವರ ಪಯಣ ಅಭ್ಯಾಸಯೋಗ್ಯವೂ, ಪ್ರೇರಣಾದಾಯಕವೂ ಆಗಿದೆ.

ನಾನು 1968ರಿಂದ ಇತ್ತೀಚಿನವರೆಗೂ ಅವರೊಂದಿಗೆ ರಂಗದ ಒಡನಾಡಿಯಾಗಿ, ಸಹಕಲಾವಿದನಾಗಿ ಇದ್ದವನಾಗಿ ಹೇಳಬಲ್ಲೆ; ಅವರ ಕಲಾ ರೂಪುಗೊಳಿಸುವಿಕೆಯಲ್ಲಿ ಗುರುಕುಲ ಜೀವನದ ಪಾತ್ರ ಅಸಾಧಾರಣ. ಬಾಲ್ಯದಲ್ಲಿಯೇ ನಾಟ್ಯಾಚಾರ್ಯ ಕುರಿಯ ವಿಠಲ ಶಾಸ್ತ್ರಿಗಳ ಮನೆ ಅವರಿಗೆ ಆಶ್ರಯವಾಗಿದ್ದು, ಅದು ಅವರ ಕಲಾ ಬದುಕಿನ ಪ್ರಮುಖ ತಿರುವು. ಕೊಚ್ಚಿ ಪರಮಶಿವಂ ಅವರ ಮಾರ್ಗದರ್ಶನವೂ ದೊರಕಿತು. ಯಕ್ಷಗಾನ ರಂಗದ ಶೈಕ್ಷಣಿಕ ಇತಿಹಾಸದಲ್ಲೇ ದಾಖಲಾಗಿರುವ ಆ ಗುರುಕುಲದಲ್ಲಿ ಬಣ್ಣದ ಮಹಾಲಿಂಗ, ಕೋಳ್ಯೂರು ರಾಮಚಂದ್ರ ರಾಯರು ಮೊದಲಾದವರು ಅವರ ಸಹಪಾಠಿಗಳಾಗಿ ಬೆಳೆದರು.



ಸೂರಿಕುಮೇರು ಗೋವಿಂದ ಭಟ್ಟ

ಕುರಿಯ ವಿಠಲ ಶಾಸ್ತ್ರಿಗಳು ಭರತನಾಟ್ಯವನ್ನು ಯಕ್ಷಗಾನಕ್ಕೆ ಸಂಯೋಜಿಸುವ ಪ್ರಯತ್ನ ಮಾಡಿದರೆ, ಅದನ್ನು ತರ್ಕಬದ್ಧವಾಗಿ ಮುಂದುವರೆಸಿ ರೂಪುಗೊಳಿಸಿದವರು ಗೋವಿಂದ ಭಟ್ಟರು. ಯಕ್ಷಗಾನವನ್ನು ಇನ್ನಷ್ಟು ಚಂದಗಾಣಿಸಲು ಇತರ ಕಲಾಪ್ರಕಾರಗಳ ಶಕ್ತಿಯನ್ನು ಅರಿತು ಅವುಗಳನ್ನು ಒಳಗೊಳ್ಳುವಲ್ಲಿ ಅವರು ತೋರಿದ ಆಸಕ್ತಿ ವಿಶಿಷ್ಟ. ನಂತರ ಗುರುವಾಗಿಯೂ ಅನೇಕ ವಿದ್ಯಾರ್ಥಿಗಳಿಗೆ ಈ ದೃಷ್ಟಿಕೋನವನ್ನು ಹಂಚಿಕೊಂಡು ಕಲೆಯ ವಿಸ್ತಾರಕ್ಕೆ ಕಾರಣರಾದರು.

ವೃತ್ತಿಜೀವನದಲ್ಲಿ ‘ಮೂಲ್ಕಿ ಮೇಳ’ ಮತ್ತು ‘ಇರಾ ಸೋಮನಾಥೇಶ್ವರ ಮೇಳ’ಗಳಲ್ಲಿ ಮೊದಲ ಹೆಜ್ಜೆ ಇಟ್ಟ ಅವರು, ನಂತರ ಸುರತ್ಕಲ್ ಮೇಳ, ಧರ್ಮಸ್ಥಳ ಮೇಳಗಳಲ್ಲಿ ತಮ್ಮ ಸಾಧನೆಯನ್ನು ವಿಸ್ತರಿಸಿದರು. ಕೋಡಂಗಿ ವೇಷದಲ್ಲಿ ಆರಂಭವಾದ ಅವರ ರಂಗಪ್ರವೇಶ, ನಂತರ ಎಲ್ಲಾ ವಿಧದ ಪಾತ್ರಗಳನ್ನು ಆವರಿಸಿತು. ಧರ್ಮಸ್ಥಳ ಮೇಳದಲ್ಲಿ 55 ವರ್ಷಗಳ ನಿರಂತರ ಸೇವೆ ಸಲ್ಲಿಸಿದ ಅವರು, ನಿವೃತ್ತಿಯ ನಂತರವೂ ಅತಿಥಿ ಕಲಾವಿದರಾಗಿ ರಂಗದಲ್ಲಿ ಮೆರೆದರು. ಸುಮಾರು 71 ವರ್ಷಗಳು ನಿರಂತರವಾಗಿ ರಂಗಸೇವೆಯಲ್ಲಿ ತೊಡಗಿದ ಅಪರೂಪದ ಸಾಧನೆ ಅವರದ್ದು. ಇದು ಭಾರತೀಯ ರಂಗಭೂಮಿಯಲ್ಲೇ ವಿರಳ.

ಆಂಗಿಕ, ಆಹಾರ್ಯ, ವಾಚಿಕ, ಸಾತ್ವಿಕ–ಈ ನಾಲ್ಕು ಅಭಿನಯಾಂಗಗಳಲ್ಲೂ ಸಮಪ್ರಭುತ್ವ ಹೊಂದಿದ್ದ ಅವರು, ಯಕ್ಷಗಾನದ ಸಂಪೂರ್ಣತೆಯನ್ನು ಜೀವಂತಗೊಳಿಸಿದವರು. ತಾಳಮದ್ದಳೆ ಅರ್ಥಗಾರಿಕೆ, ಪ್ರಸಂಗ ರಚನೆ ಎಲ್ಲದರಲ್ಲೂ ಅವರು ಮಾದರಿಯಾದರು. ಗೋಪಾಲಕೃಷ್ಣ ಶೇಣಿ, ಮಲ್ಪೆ ರಾಮದಾಸ ಸಾಮಗರಂತಹ ದಿಗ್ಗಜರ ಜೊತೆ ಕೆಲಸ ಮಾಡಿದರೂ, ಅವರ ಶೈಲಿಯಿಂದ ಪ್ರಭಾವಕ್ಕೊಳಗಾಗದೆ ಸ್ವಂತಿಕೆಯ ದಾರಿಯನ್ನು ರೂಪಿಸಿಕೊಂಡದ್ದು ಅವರ ವೈಶಿಷ್ಟ್ಯ.

ಚೊಕ್ಕದಾದ, ತುಂಬಾ ನಿರಾಯಾಸ ಎಂದು ಕಾಣಿಸುವ ಹಾಸುಬೀಸಿನ ಕುಣಿತ, ರಂಗಸ್ಥಳವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಚಾತುರ್ಯ ಅವರದು. ಅಳಕೆ ರಾಮಯ್ಯ ರೈಗಳ ಶೈಲಿಯ ಪ್ರಭಾವ ಕಂಡರೂ, ಅದನ್ನು ತಮ್ಮದೇ ಶೈಲಿಯಲ್ಲಿ ರೂಪಿಸಿಕೊಂಡಿದ್ದರು. ಅವರು ರಾಜವೇಷ ಮಾಡಿ ಧೀಂಗಿಣದಲ್ಲಿ ರಂಗ ಪ್ರವೇಶ ಮಾಡಿದರೆ ರಾಜವೈಭವ, ಗಾಂಭೀರ್ಯ ಸಾಕಾರಗೊಳ್ಳುತ್ತಿತ್ತು.

ರಂಗದಲ್ಲಿಯೂ, ಬದುಕಿನಲ್ಲಿಯೂ ಆಯಾಸ, ಉದಾಸೀನ, ಗಡಿಬಿಡಿ, ಬೇಸರ ಈ ಪದಗಳು ಅವರ ಹತ್ತಿರ ಸುಳಿಯಲಿಲ್ಲ. ನಿತ್ಯೋತ್ಸಾಹವೇ ಅವರ ಸ್ವಭಾವ. ವೈಯಕ್ತಿಕ ಬದುಕಿನಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಿದರು. ಬೆಂಕಿ ಅವಘಡದಲ್ಲಿ ಮನೆಯೇ ಸುಟ್ಟುಹೋದರೂ, ಮತ್ತೆ ಮೊದಲಿನಿಂದ ಬದುಕನ್ನು ಕಟ್ಟಿಕೊಂಡರು. ಹಲುಬುವಿಕೆ ಎಂಬುದು ಅವರ ನಿಘಂಟಿನಲ್ಲಿ ಇಲ್ಲದ ಪದ.

12ನೇ ಪುಟಕ್ಕೆ...

ವ್ಯಂಗ್ಯಚಿತ್ರಕಾರರ ಸಂಸ್ಥೆ @25

• ರೂಪಾ ಕೆ.ಎಂ.

ದೇಶದ ಪ್ರಥಮ ವ್ಯಂಗ್ಯಚಿತ್ರ ಗ್ಯಾಲರಿ ಎಂಬ ಹೆಗ್ಗಳಿಕೆ ಗಳಿಸಿರುವ ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ಸ್' ಸಂಸ್ಥೆಗೆ ಈಗ ಇಪ್ಪತ್ತೈದರ ಸಂಭ್ರಮ. ನಾಡಿನ ಹೆಸರಾಂತ ವ್ಯಂಗ್ಯಚಿತ್ರಕಾರರ ವ್ಯಂಗ್ಯಚಿತ್ರ ಪ್ರದರ್ಶನ, ದೇಶದ ಪ್ರಮುಖ ವ್ಯಂಗ್ಯಚಿತ್ರಕಾರರಿಗೆ ಸನ್ಮಾನ, ಯುವ ಸಮೂಹಕ್ಕೆ ಕಾರ್ಯಾಗಾರ ಮೊದಲಾದ ವಿಭಿನ್ನ ಕಾರ್ಯಕ್ರಮಗಳ ಮೂಲಕ ಸಂಸ್ಥೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ...

ಉದ್ದನೆಯ ಮೂಗು, ಓರೆನೋಟ, ಕಂಡು ಕಾಣದಂತಿರುವ ಎಲೆಮರೆಯ ಮೀಸೆ ಅಥವಾ ಹುರಿ ಮೀಸೆ, ಹುಬ್ಬುಗಂಟಿಕ್ಕಿದ, ಸಾರಣಿಗೆಯಂಥ ವದನ ಹೀಗೆ.. ಅಂಕು–ಡೊಂಕಿನ ಗೆರೆಗಳ ಮೂಲಕ ಘನ ಗಂಭೀರವಾದದ್ದನ್ನು ಹೇಳುವ ಚೆಲುವು ವ್ಯಂಗ್ಯಚಿತ್ರಗಳಿಗೆ ಅಲ್ಲದೇ ಮತ್ತೆ ಯಾವುದಕ್ಕಿರಬಹುದು?

ರಾಜಕೀಯ ಕ್ಷೇತ್ರದ ಉಡಿಯಲ್ಲಿ ಸದಾ ಇರುವ ಕೆಂಡದಂಥ ಪಲ್ಲಟಗಳ ತಲ್ಲಣವನ್ನು ಒಂದು ಓರೆಕೋರೆಯ ಗೆರೆ ಅನಾವರಣಗೊಳಿಸುವಷ್ಟು ಸಲೀಸಾಗಿ ಯಾವುದು ತೆರೆದಿಡಬಹುದು. ಇಂಥ ಓರೆಕೋರೆಗಳ ಪಟ್ಟು ಕಲಿಯಲೆಂದೇ ದೂರದ ಕೋಲ್ಕತ್ತ, ಮುಂಬೈ, ಪುಣೆಯಿಂದ ಯುವ ಸಮೂಹ ಉದ್ಯಾನಗರಿಗೆ ಬೆಂಗಳೂರಿಗೆ ಬರುತ್ತದೆ. ಯಾವುದಕ್ಕೆಲ್ಲ ಬೆಂಗಳೂರು ಓಂಕಾರ ಹಾಡಿದೆ ಎಂದು ಪಟ್ಟಿ ಮಾಡುತ್ತಾ ಹೋದರೆ, ಮೊದಲ ಬೀದಿದೀಪ ಅಳವಡಿಕೆಯಿಂದ ಹಿಡಿದು ಹತ್ತಾರು ಕೌತುಕ ಎನಿಸುವ ವಿಷಯಗಳು ಅನಾಯಾಸವಾಗಿ ದೊರಕುತ್ತವೆ. ಆದರೆ, ರಾಷ್ಟ್ರೀಯ ಮಟ್ಟದಲ್ಲಿ ವ್ಯಂಗ್ಯಚಿತ್ರಕಾರರಿಗೆಂದೇ ಸಂಸ್ಥೆಯೊಂದು ಇದ್ದು, ಅದು ತನ್ನ ಅಸ್ತಿತ್ವ ಉಳಿಸಿಕೊಂಡಿರುವುದು ಬೆಂಗಳೂರಿನಲ್ಲಿಯೇ!

ಇಂಥ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ಸ್ ರೂಪುಗೊಂಡು ಜೂನ್ 8ಕ್ಕೆ ಇಪ್ಪತ್ತೈದು ವರ್ಷಗಳು ಆಗುತ್ತದೆ. ಈ ವರ್ಷ ಬೆಳ್ಳಿ ಮಹೋತ್ಸವವನ್ನು ಹಲವು ವಿಶೇಷ ಕಾರ್ಯಕ್ರಮಗಳ ಮೂಲಕ ಸಂಸ್ಥೆ ಆಚರಿಸುತ್ತಿದೆ. ಇದರ ಪ್ರಯುಕ್ತ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮಾಯಾ ಕಾಮತ್ ಸ್ಮರಣಾರ್ಥ ವ್ಯಂಗ್ಯಚಿತ್ರ ಸ್ಪರ್ಧೆಯನ್ನು ಆಯೋಜಿಸಲಾಗಿದೆ. 'ಲಿಂಗ ಸಮಾನತೆ ಮತ್ತು ಮಹಿಳಾ ಹಕ್ಕುಗಳು' ಎಂಬ ಪರಿಕಲ್ಪನೆಯಡಿ ಸ್ಪರ್ಧೆ ಆಯೋಜಿಸಲಾಗಿದೆ. ಮೊದಲ ಬಹುಮಾನ ₹ 1 ಲಕ್ಷ, ದ್ವಿತೀಯ ಬಹುಮಾನ ₹ 50 ಸಾವಿರ, ತೃತೀಯ ಬಹುಮಾನ ₹ 45 ಸಾವಿರ ನೀಡಲಾಗುತ್ತದೆ. ಹತ್ತು ಮಂದಿಗೆ ಐದು ಸಾವಿರದ ಸಮಾಧಾನಕರ ಬಹುಮಾನ ನೀಡಲಾಗುತ್ತದೆ.

ಗೆರೆಗಳ ಮೂಲಕ ವಿಡಂಬನೆ ಮಾಡಿ, ಇರುವ ಐಬುಗಳನ್ನು ಸೂಚ್ಯವಾಗಿ ತೋರಿಸುವ ವಿಶಿಷ್ಟ ಕಲೆಯೇ ವ್ಯಂಗ್ಯಚಿತ್ರ.

ಇಪ್ಪತ್ತೈದು ವರ್ಷಗಳ ಹಿಂದೆ ವ್ಯಂಗ್ಯಚಿತ್ರಕಾರರಿಗಾಗಿ ರಾಷ್ಟ್ರೀಯ ಮಟ್ಟದಲ್ಲಿ ವೇದಿಕೆಯನ್ನು ಆರಂಭಿಸಬೇಕು ಎಂದುಕೊಂಡು ಹಲವು ಖ್ಯಾತನಾಮ ವ್ಯಂಗ್ಯಚಿತ್ರಕಾರರಿಗೆ ಪತ್ರ ಬರೆಯಲಾಯಿತು. ಅದಕ್ಕೆ ಒಳ್ಳೆಯ ಪ್ರತಿಕ್ರಿಯೆಯೂ ಸಿಕ್ಕಿತ್ತು. ಆದರೆ, ಇಪ್ಪತ್ತೈದು ವರ್ಷಗಳಲ್ಲಿ ಸಂಸ್ಥೆ ಇಷ್ಟು ದೊಡ್ಡ ಮಟ್ಟದಲ್ಲಿ ಹೆಸರು ಪಡೆಯುತ್ತದೆ ಎಂಬ ಊಹೆಯೂ ಇರಲಿಲ್ಲ ಎನ್ನುತ್ತಾರೆ ವ್ಯವಸ್ಥಾಪಕ ಟ್ರಸ್ಟಿ ವಿ.ಜಿ. ನರೇಂದ್ರ ಅವರು.

ಆರ್.ಕೆ.ಲಕ್ಷ್ಮಣ್, ಮಾರಿಯೋ ಮಿರಾಂಡಾ ಅವರಂಥ ದಿಗ್ಗಜರು ನಾನು ಬರೆದ ಪತ್ರಕ್ಕೆ ಸ್ಪಂದಿಸಿ, 'ಇದೊಂದು ಒಳ್ಳೆಯ ಮತ್ತು ಆಗಲೇಬೇಕಾದ ಕೆಲಸ' ಎಂದು ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದರು. ಅವರೆಲ್ಲರ ಬೆಂಬಲದಿಂದ ಈ ಸಂಸ್ಥೆಯನ್ನು ಹುಟ್ಟುಹಾಕಲು ಸಾಧ್ಯವಾಯಿತು. ಅಲ್ಲದೇ ಆಗ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್'ನಲ್ಲಿ ವ್ಯಂಗ್ಯಚಿತ್ರಕಾರರಾಗಿ ಪ್ರಸಿದ್ಧಿ ಪಡೆದಿದ್ದ ಬಿ.ವಿ.ರಾಮಮೂರ್ತಿ ಅವರನ್ನು ಈ ಸಂಸ್ಥೆಗೆ ಅಧ್ಯಕ್ಷರನ್ನಾಗಿ ಮಾಡಲಾಯಿತು. ಗುಜ್ಜಾರಪ್ಪ, ನಾಗನಾಥ್ ಅವರನ್ನು ಒಳಗೊಂಡ ಟ್ರಸ್ಟ್ ರೂಪುಗೊಂಡಿತು ಎನ್ನುತ್ತ ಸಂಸ್ಥೆಯನ್ನು ಹುಟ್ಟುಹಾಕಿದ ದಿನಗಳನ್ನು ಸ್ಮರಿಸುತ್ತಾರೆ ನರೇಂದ್ರ ಅವರು.



ಗ್ಯಾಲರಿಗೆ ಆರ್.ಕೆ.ಲಕ್ಷ್ಮಣ್ ಭೇಟಿ ಕೊಟ್ಟ ಕ್ಷಣ

ಕರ್ನಾಟಕದಲ್ಲಿ ಕಾರ್ಟೂನ್ ಅಸೋಸಿಯೇಷನ್ 1977ರಲ್ಲಿ ಸ್ಥಾಪನೆಗೊಂಡಿತು. 1979ರಲ್ಲಿ ಇದರ ಅಧ್ಯಕ್ಷನಾಗಿದ್ದೆ. ವ್ಯಂಗ್ಯಚಿತ್ರಕಾರರನ್ನೆಲ್ಲ ಸೇರಿಸಿ ಒಂದು ಸಮ್ಮೇಳನ ಮಾಡಲಾಯಿತು. ಆರ್.ಕೆ.ಲಕ್ಷ್ಮಣ್ ಅವರೂ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಹಿರಿಯ ವ್ಯಂಗ್ಯಚಿತ್ರಕಾರರಾದ ಎಸ್.ಕೆ.ನಾಡಿಗ್ ಅವರನ್ನು ಸನ್ಮಾನ ಮಾಡಲಾಯಿತು. ಈ ಸಮ್ಮೇಳನ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿತ್ತು. ಮತ್ತು ಹಲವು ಸಂಪರ್ಕಗಳನ್ನು ರಾಷ್ಟ್ರಮಟ್ಟದಲ್ಲಿ ಬೆಳೆಸಿತ್ತು. ಹಾಗಾಗಿ ರಾಷ್ಟ್ರಮಟ್ಟದಲ್ಲಿ ವ್ಯಂಗ್ಯಚಿತ್ರಕಾರರಿಗೆಂದೇ ಒಂದು ಸಂಸ್ಥೆ ಮಾಡಬೇಕು, ಅದರ ಮೂಲಕವೂ ಒಂದಷ್ಟು ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎನ್ನುವುದಕ್ಕೆ ಈ ಸಮ್ಮೇಳನವೇ ಸ್ಫೂರ್ತಿಯಾಯಿತು ಎಂದು ಹರ್ಷ ವ್ಯಕ್ತಪಡಿಸುತ್ತಾರೆ ಅವರು.

ಹೀಗೆ ರಾಷ್ಟ್ರೀಯ ಮಟ್ಟದ ವ್ಯಂಗ್ಯಚಿತ್ರಕಾರರ ಸಂಘ ಸ್ಥಾಪನೆಯ ಕನಸಿನ ಮೊಳಕೆಯೇನೋ ಒಡೆಯಿತು. ಆದರೆ, ಅದಕ್ಕೆ ಬೇಕಾದ ಪೋಷಣೆಗೆ ಹಲವು ರೂಪುರೇಷೆಗಳನ್ನು ಸಿದ್ಧಮಾಡಲಾಯಿತು. 2001ರಲ್ಲಿ ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಈ ಬಗ್ಗೆ ತಿಳಿಸಲಾಯಿತು. ಅವರು ಎಲ್ಲ ರೀತಿಯಿಂದಲೂ ಬೆಂಬಲ ಒದಗಿಸಿದರು. ಜೂನ್ 8 ಮತ್ತು 9ರಂದು ಎರಡು ದಿನಗಳು ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಆಗಿನ ರಾಜ್ಯಪಾಲರಾಗಿದ್ದ ವಿ.ಎಸ್. ರಮಾದೇವಿ ಅವರು ಉದ್ಘಾಟನೆ ಮಾಡಿ, ಉದ್ಘಾಟನೆಯಾದ ದಿನವೇ ಐದು ಸಾವಿರ ಹಣ ಕೊಟ್ಟು ಸಂಘಕ್ಕೆ ಸದಸ್ಯರೂ ಆದರು. ಈವರೆಗೆ ದೇಶದಾದ್ಯಂತ 250ಕ್ಕೂ ಹೆಚ್ಚಿನ ಸದಸ್ಯರಿದ್ದಾರೆ. ಸಂಘದ ಸದಸ್ಯರಲ್ಲಿ ವ್ಯಂಗ್ಯಚಿತ್ರಕಾರರಷ್ಟೆ ಅಲ್ಲದೇ ಕಲಾಪೋಷಕರು ಇರುವುದು ಹೆಮ್ಮೆ ಎನಿಸಿದೆ.

ವ್ಯಂಗ್ಯಚಿತ್ರ ಕಲೆಯಲ್ಲಿ ಅತಿ ದೊಡ್ಡ ಹೆಸರು ಎನಿಸಿದ್ದ ಎಸ್.ಕೆ.ನಾಡಿಗ್, ಮಹಾರಾಷ್ಟ್ರದ ಎಸ್.ಡಿ.ಫಡ್ನವೀಸ್, ದೆಹಲಿಯ ಪ್ರಾಣ್‌ಕುಮಾರ್ ಶರ್ಮಾ ಹೀಗೆ ಬೇರೆ ಬೇರೆ ಭಾಷೆಯ ಏಳು ದಿಗ್ಗಜರಿಗೆ ಜೀವಮಾನ ಸಾಧನೆಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಆರ್.ಕೆ.ಲಕ್ಷ್ಮಣ್ ಅವರಿಗೂ ಆಹ್ವಾನ ನೀಡಲಾಗಿತ್ತು. ಆದರೆ, ಅವರು ಕಾರಣಾಂತರಗಳಿಂದ ಬರಲಾಗಲಿಲ್ಲ. ಮರು ವರ್ಷ ಅವರಿಗಾಗಿ ಪ್ರತ್ಯೇಕ ಸಮಾರಂಭ ಏರ್ಪಡಿಸಿ, ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಯಿತು.

ಆರು ವರ್ಷಗಳ ನಂತರ ಮೊದಲ ವ್ಯಂಗ್ಯಚಿತ್ರ ಗ್ಯಾಲರಿ

ಇನ್‌ಸ್ಟಿಟ್ಯೂಟ್ ಹುಟ್ಟುಹಾಕಿ ಆರು ವರ್ಷಗಳ ನಂತರ ಉದ್ಯಮಿ ಅಶೋಕ ಖೇಣಿ ಅವರ ಸಹಕಾರದಿಂದ 2007ರಲ್ಲಿ ವ್ಯಂಗ್ಯಚಿತ್ರಗಳಿಗಾಗಿಯೇ ಎಂ.ಜಿ.ರಸ್ತೆಯಲ್ಲಿ ಅಚ್ಚುಕಟ್ಟಾದ ಗ್ಯಾಲರಿ ಅನಾವರಣಗೊಂಡಿತು. ದೇಶದ ಪ್ರಥಮ ವ್ಯಂಗ್ಯಚಿತ್ರ ಗ್ಯಾಲರಿಯನ್ನು ಆಗಿನ ರಾಜ್ಯಪಾಲ ಟಿ.ಎನ್.ಚತುರ್ವೇದಿ ಅವರು ಉದ್ಘಾಟನೆ ಮಾಡಿದ್ದರು. ಬಿ.ವಿ.ರಾಮಮೂರ್ತಿ, ಗುಜ್ಜಾರಪ್ಪ ಹಾಗೂ ನಾನು ರಚಿಸಿದ ಹಲವು ವ್ಯಂಗ್ಯಚಿತ್ರಗಳನ್ನು ಮೊದಲ ಪ್ರದರ್ಶನದಲ್ಲಿ ಇಡಲಾಯಿತು. ಈ ಪ್ರದರ್ಶನವೂ ಮೂರು ತಿಂಗಳು ನಡೆದು, ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಯಿತು. ಇದಾದ ಮೇಲೆ ತಿರುಗಿ ನೋಡಿದ್ದೇ ಇಲ್ಲ. ತಿಂಗಳಿಗೊಮ್ಮೆ ಪ್ರದರ್ಶನ ನಡೆಯುತ್ತಲೇ ಇದೆ. ಈವರೆಗೆ 210ಕ್ಕೂ ಹೆಚ್ಚು ವ್ಯಂಗ್ಯಚಿತ್ರ ಪ್ರದರ್ಶನಗಳು ಆಗಿವೆ ಎನ್ನುತ್ತಾರೆ ವಿ.ಜೆ.ನರೇಂದ್ರ.



ವ್ಯಂಗ್ಯಚಿತ್ರಗಳನ್ನು ವೀಕ್ಷಿಸುತ್ತಿರುವ ಮಾರಿಯೋ ಮಿರಾಂಡಾ

ಯುವಸಮೂಹಕ್ಕೆ ಕಾರ್ಯಾಗಾರ

ವ್ಯಂಗ್ಯಚಿತ್ರದಲ್ಲಿರುವ ಗೆರೆಗಳನ್ನು ಗ್ರಹಿಸುವುದು, ರಾಜಕೀಯಕ್ಕೆ ಸಂಬಂಧಿಸಿದ ವ್ಯಂಗ್ಯಚಿತ್ರಗಳ ರಚನೆ– ಹೀಗೆ ಹಲವು ವಿಷಯಗಳನ್ನು ಇಟ್ಟುಕೊಂಡು ಯುವ ಸಮೂಹಕ್ಕೆ ತರಬೇತಿ ನೀಡಲಾಗಿದೆ. ಮುಂಬೈ, ಪುಣೆ, ಕೋಲ್ಕತ್ತಗಳ ಆಸಕ್ತರು ತರಬೇತಿ ಪಡೆದಿದ್ದಾರೆ. ಇನ್‌ಸ್ಟಿಟ್ಯೂಟ್‌ನಲ್ಲಿ ವ್ಯಂಗ್ಯಚಿತ್ರಕ್ಕೆ ಸಂಬಂಧಿಸಿದಂತೆ ಅಪರೂಪ ಎನಿಸುವ ನಾಲ್ಕು ಸಾವಿರ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ವ್ಯಂಗ್ಯಚಿತ್ರ ಕ್ಷೇತ್ರದಲ್ಲಿ ಸಂಶೋಧನೆ ಮಾಡಲು ಇಚ್ಛಿಸುವವರು ಇದರ ಸದುಪಯೋಗ ಪಡೆದುಕೊಂಡಿದ್ದಾರೆ.

ಶೇ 40ರಷ್ಟು ಮಹಿಳೆಯರು

ವ್ಯಂಗ್ಯಚಿತ್ರ ರಚನೆಯ ಕಾರ್ಯಾಗಾರದಲ್ಲಿ ಶೇಕಡ 40ರಷ್ಟು ಮಹಿಳೆಯರೇ ಇರುತ್ತಾರೆ. ಜಾಗತಿಕವಾಗಿಯೂ ವ್ಯಂಗ್ಯಚಿತ್ರ ರಚನೆಯಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇದೆ. ಈ ಸಂಖ್ಯೆಯನ್ನು ಹೆಚ್ಚು ಮಾಡುವುದು ಇನ್‌ಸ್ಟಿಟ್ಯೂಟ್‌ನ ಉದ್ದೇಶ ಎಂದು ಹೇಳುವುದನ್ನು ನರೇಂದ್ರ ಅವರು ಮರೆಯಲಿಲ್ಲ. ❖

ಬಂಜಾರರ ಬದುಕಿನ ಅನಾವರಣ



ಸಾಂಪ್ರದಾಯಿಕ ಬಂಜಾರ ಮಹಿಳೆಯರನ್ನು ಪ್ರತಿನಿಧಿಸುವ ಕಲಾಕೃತಿಗಳು

• ಗೌರಿ ಚಂದ್ರಕೇಸರಿ

ಗುಹೆಯಂತಿರುವ ಕಮಾನು ದ್ವಾರವನ್ನು ದಾಟಿದ ಕ್ಷಣ, ಬೇರೊಂದು ಲೋಕಕ್ಕೆ ಕಾಲಿಟ್ಟ ಅನುಭವ. ಕಲ್ಲುಗುಡ್ಡೆಗಳ ನಡುವೆ ಮೌನವಾಗಿ ಮಲಗಿದ್ದ ಭೂಮಿ, ಇಂದು ಬಣ್ಣ, ರೂಪ, ಸ್ಮೃತಿ ಮತ್ತು ಸಂಸ್ಕೃತಿಗಳ ಸಂಗಮವಾಗಿ ನಿಂತಿದೆ. ಶಿವಮೊಗ್ಗದ ಸವಳಂಗ ಸಮೀಪದ ಸೂರಗೊಂಡನಕೊಪ್ಪ ಸಂತ ಸೇವಾಲಾಲ್ ಅವರ ಜನ್ಮಭೂಮಿ. ಇಲ್ಲಿ ಸುಮಾರು ನಲವತ್ತು ಎಕರೆ ವ್ಯಾಪ್ತಿಯಲ್ಲಿ ತಲೆ ಎತ್ತಿ ನಿಂತಿರುವ 'ಭಾಯಾಗಡ್' ಕೇವಲ ಕಲಾಗ್ರಾಮವಲ್ಲ; ಅದು ಒಂದು ಸಮುದಾಯದ ಆತ್ಮಕಥೆ.

ಬೆಟ್ಟ-ಗುಡ್ಡಗಳಿಂದ ಕೂಡಿದ ಪಾಳು ಭೂಮಿಯನ್ನು ಮನಮೋಹಕ ಉದ್ಯಾನವನವನ್ನಾಗಿ ರೂಪಿಸಿರುವ ಕಲ್ಪನೆ ಮೊದಲ ನೋಟದಲ್ಲೇ ಆಕರ್ಷಿಸುತ್ತದೆ. ಪ್ರವೇಶ ದ್ವಾರವೇ ಗುಹೆಯ ಪ್ರತಿರೂಪದಂತೆ ವಿನ್ಯಾಸಗೊಳಿಸಿದ್ದು, ಒಳನುಗ್ಗುತ್ತಿದ್ದಂತೆ ಮಾನವ ನಿರ್ಮಿತ ಗುಹಾಂತರಗಳು ತಣ್ಣನೆಯ ಸ್ಪರ್ಶ ನೀಡುತ್ತವೆ. ಪ್ರಕೃತಿಯ ಮಡಿಲಲ್ಲಿರುವ ಕಲಾತ್ಮಕ ವಾಸ್ತು–ಈ ಎರಡು ಅನುಭವಗಳು ಒಂದೇ ಹೊತ್ತಿನಲ್ಲಿ ಮನಸ್ಸನ್ನು ತಂಪಾಗಿಸುತ್ತವೆ.

ಭಾಯಾಗಡ್‌ನ ಹೃದಯದಲ್ಲಿ ಬಂಜಾರರ ಜೀವನ ಶೈಲಿಯ ಜೀವಂತ ಚಿತ್ರಣಗಳಿವೆ. ಲಂಬಾಣಿ ವೇಷಭೂಷಣದಲ್ಲಿ ನಿಂತಿರುವ ಪ್ರತಿಮೆಗಳು ಕೇವಲ ಶಿಲ್ಪಗಳಲ್ಲ; ಅವು ಕಥೆಗಳನ್ನೇ ಹೇಳುವಂತಿವೆ. ನ್ಯಾಯ ಬಗೆಹರಿಸುವ ಪಂಚಾಯತಿ ಕಟ್ಟೆ, ನಾಮಕರಣದ ಸಂಭ್ರಮ, ಕಟ್ಟಿಗೆ ಹೊತ್ತು ಸಾಗುವ ಮಹಿಳೆ, ಕ್ಷೌರ ಮಾಡುತ್ತಿರುವ ಕ್ಷೌರಿಕ, ಕೌದಿ ಹೊಲಿಯುವ ಕೈಗಳು, ಮೇಯುತ್ತಿರುವ ದನಗಾಹಿಗಳು...ಈ ಎಲ್ಲ ಸನ್ನಿವೇಶಗಳು ನೈಜತೆಯ ಮಟ್ಟಕ್ಕೆ ತಲುಪಿವೆ. ಒಮ್ಮೆ ಈ ಕಲಾಕೃತಿಗಳ ಮಧ್ಯೆ ನಿಂತರೆ, ಬಂಜಾರರ ಹಳ್ಳಿಯೊಂದರಲ್ಲಿ ಹೆಜ್ಜೆ ಇಟ್ಟ ಭಾವ ಮೂಡುತ್ತದೆ.

ಒಂದು ಎಕರೆಯಷ್ಟು ಪ್ರದೇಶವನ್ನು ಉದ್ಯಾನವನಕ್ಕೆ ಮೀಸಲಿಟ್ಟಿದ್ದು, ಲತಾ ಮಂಟಪಗಳು ವಿಶಿಷ್ಟ ಸೊಬಗನ್ನು ನೀಡುತ್ತವೆ. ಉದ್ಯಾನವನದ ಒಂದು ಪಾರ್ಶ್ವದಲ್ಲಿ ಮಾರಿಕಾಂಬಾ ದೇವಸ್ಥಾನ, ಇನ್ನೊಂದು ಬದಿಯಲ್ಲಿ ಸಂತ ಸೇವಾಲಾಲರ ಪಾದುಕೆಯನ್ನು ಪ್ರತಿಷ್ಠಿಸಿದ ಗದ್ದುಗೆ ಇವು ಭಕ್ತಿಭಾವಕ್ಕೆ ಮೆರಗು ಕೊಡುತ್ತವೆ. 1739ರ ಫೆಬ್ರುವರಿ 15ರಂದು ಜನಿಸಿದ ಸೇವಾಲಾಲರು ಆಜನ್ಮಬ್ರಹ್ಮಚಾರಿಯಾಗಿ, ಸಮುದಾಯದ ಸುಖದುಃಖಗಳಿಗೆ ಸ್ಪಂದಿಸಿದ ಮಹನೀಯರೆಂದು ಜನಪದ ಕತೆಗಳು ಹೇಳುತ್ತವೆ. ಅವರ ಸ್ಮರಣೆಗಾಗಿ ಪ್ರತಿವರ್ಷ ಸಂಕ್ರಾಂತಿ ಸಂದರ್ಭದಲ್ಲಿ ಲಕ್ಷಾಂತರ ಭಕ್ತರು ಇಲ್ಲಿ ಸೇರುತ್ತಾರೆ. ಫೆಬ್ರುವರಿ 12 ರಿಂದ 15ರ ವರೆಗೆ ನಡೆಯುವ ಮೂರು ದಿನಗಳ ಉತ್ಸವದಲ್ಲಿ ನಾಡಿನ ನಾನಾ ಭಾಗಗಳಿಂದ ಜನರು ಆಗಮಿಸಿ ಭಾಗವಹಿಸುತ್ತಾರೆ. ನಿತ್ಯ ಅನ್ನ-ಸಂತರ್ಪಣೆ ವ್ಯವಸ್ಥೆಯೂ ಭಕ್ತರಿಗೆ ಆತ್ಮೀಯತೆ ತುಂಬುತ್ತದೆ.

ಮಕ್ಕಳಿಗಾಗಿ ಜಾರುಬಂಡೆ, ತಿರುಗುಣಿ ಮುಂತಾದ ಆಟೋಪಕರಣಗಳಿವೆ. ಆದರೆ ನಿರ್ವಹಣೆಯ ಕೊರತೆ ಕೆಲವೆಡೆ ಕಣ್ಣಿಗೆ ಬೀಳುತ್ತದೆ. ಕಸಕಡ್ಡಿಗಳು, ಅಪೂರ್ಣ ಕಟ್ಟಡಗಳು, ನಿಧಾನಗತಿಯ ಕಾಮಗಾರಿ ಭಾಯಾಗಡ್‌ನ ಕನಸಿಗೆ ಇನ್ನೂ ಪೂರ್ಣರೂಪ ಬಂದಿಲ್ಲವೆನ್ನಿಸುವ ಸೂಚನೆಗಳು. ಸಮುದಾಯ ಭವನ, ಯಾತ್ರಿ ನಿವಾಸ, ಬಸ್ ತಂಗುದಾಣ, ಆರೋಗ್ಯ ಕೇಂದ್ರ, ಉಪಾಹಾರ ಗೃಹ, ಕಲಾತ್ಮಕ ಕಲ್ಯಾಣಿ ಈ ಎಲ್ಲ ಯೋಜನೆಗಳು ಇನ್ನೂ ಪೂರ್ಣತೆಯನ್ನು ಕಾದಿವೆ. ಸುಮಾರು ಏಳು ವರ್ಷಗಳಿಂದ ಕಾಮಗಾರಿ ಸಾಗುತ್ತಿರುವುದಾದರೂ, ನಿರೀಕ್ಷಿತ ವೇಗ ಕಾಣುತ್ತಿಲ್ಲ.

ಆದರೂ, ಈ ಅಪೂರ್ಣತೆಯ ಮಧ್ಯೆಯೇ ಒಂದು ಸ್ಪಷ್ಟ ಕನಸು ಗೋಚರಿಸುತ್ತದೆ. ಭಾಯಾಗಡ್ ಒಂದು ಸುಂದರ ಪರಿಕಲ್ಪನೆ. ಅದು ಬಂಜಾರರ ಸಂಸ್ಕೃತಿಯನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ಒಪ್ಪಿಸುವ ಸಂಕಲ್ಪ. ಇಲ್ಲಿನ ಕಲಾಕೃತಿಗಳನ್ನು ಮನಸಾರೆ ನೋಡುವುದಕ್ಕೆ ಕನಿಷ್ಠ ಎರಡು-ಮೂರು ಗಂಟೆಗಳಾದರೂ ಬೇಕಾಗುತ್ತದೆ. ಇದು ಕೇವಲ ಪ್ರವಾಸಿ ತಾಣವಲ್ಲ; ಸಂಸ್ಕೃತಿಯ ಅಧ್ಯಯನಕ್ಕೆ, ಸಮುದಾಯದ ಬದುಕಿನ ಅರಿವಿಗೆ ಒಂದು ಮುಕ್ತ ವೇದಿಕೆ.


ಯೋಗ್ಯ ಪ್ರಚಾರ ಮತ್ತು ಸಮರ್ಪಕ ನಿರ್ವಹಣೆ ಸಿಕ್ಕಲ್ಲಿ, ಭಾಯಾಗಡ್ ನಾಡಿನ ಪ್ರಮುಖ ಜನಪದ-ಸಂಸ್ಕೃತಿ ಕೇಂದ್ರವಾಗಿ ಬೆಳೆಯಬಹುದು. ಒಂದು ಸಮುದಾಯದ ಇತಿಹಾಸ, ಆಚಾರ-ವಿಚಾರ, ಭಾವನೆಗಳನ್ನು ಶಿಲ್ಪಗಳಲ್ಲಿ, ದೃಶ್ಯಗಳಲ್ಲಿ, ಸ್ಥಳ ವಿನ್ಯಾಸದಲ್ಲಿ ಕಟ್ಟಿಕೊಡುವ ಈ ಪ್ರಯತ್ನ ಸಂಪೂರ್ಣ ರೂಪ ಪಡೆದ ದಿನ, ಅದು ಕೇವಲ ಕಲಾಗ್ರಾಮವಲ್ಲ–ಬಂಜಾರರ ಬದುಕಿನ ಜೀವಂತ ಸಂಗ್ರಹಾಲಯವಾಗಲಿದೆ. ❖

ಹೋಗುವುದು ಹೇಗೆ?

ಭಾಯಾಗಡ್ ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿದೆ. ಶಿವಮೊಗ್ಗದಿಂದ ಸವಳಂಗ ಮಾರ್ಗವಾಗಿ ಸುಮಾರು 30 ಕಿ.ಮೀ ಪ್ರಯಾಣಿಸಿದರೆ ಸೂರಗೊಂಡನಕೊಪ್ಪ ತಲುಪಬಹುದು. ಅಲ್ಲಿಂದ ಇನ್ನೂ 5 ಕಿ.ಮೀ ದೂರದಲ್ಲಿ ಭಾಯಾಗಡ್ ಇದೆ. ಬೆಂಗಳೂರಿನಿಂದ ದಾವಣಗೆರೆ–ಹರಿಹರ–ನ್ಯಾಮತಿ ಮಾರ್ಗವಾಗಿ ತಲುಪಬಹುದಾಗಿದೆ.



ರೈತನ ಕಲಾಕೃತಿ



ಕಟ್ಟೆ ಮೇಲೆ ಕ್ಷೌರ

ತೀರ್ಥ ಮಹಿಳೆಯರ...

10ನೇ ಪುಟದಿಂದ..

ರಾಗಿ, ಹುರಳಿ, ಸಿರಿಧಾನ್ಯಗಳಿಂದ 30ಕ್ಕೂ ಹೆಚ್ಚು ಉತ್ಪನ್ನಗಳನ್ನು ತಯಾರಿಸುತ್ತಿದ್ದಾರೆ. ವಿವಿಧ ಬಗೆಯ ಶಾವಿಗೆ, ರೊಟ್ಟಿ, ಪ್ರೋಟೀನ್ ಶೇಕ್, ಮಲ್ಟಿಗ್ರೇನ್ ಅಟ್ಟಾ, ರಾಗಿ ಮಾಲ್ಟ್–ಇವುಗಳಿಗೆ ಉತ್ತಮ ಮಾರುಕಟ್ಟೆ ಸಿಕ್ಕಿದೆ.

ಕೃಷಿ ಮೇಳಗಳು ಎಲ್ಲೇ ನಡೆದರೂ, ಈ ತಂಡ ಅಲ್ಲಿಗೆ ತೆರಳಿ ಉತ್ತರ ಕರ್ನಾಟಕದ ಸಾಂಪ್ರದಾಯಿಕ ಆಹಾರಗಳನ್ನು ತಯಾರಿಸಿ ಜನರಿಗೆ ಪರಿಚಯಿಸುತ್ತದೆ. ಜೋಳದ ರೊಟ್ಟಿ, ಸಜ್ಜೆ ರೊಟ್ಟಿ, ಎಣ್ಣೆಗಾಯಿ ಪಲ್ಯಗಳ ರುಚಿ ಈಗ ರಾಜ್ಯದ ಗಡಿಗಳನ್ನು ದಾಟಿದೆ.

ಈ ಒಗ್ಗಟ್ಟಿನ ಪ್ರಯತ್ನಕ್ಕೆ 2025ರಲ್ಲಿ ಅಂತರರಾಷ್ಟ್ರೀಯ ಮಾನ್ಯತೆ ದೊರಕಿತು. ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುಎನ್‌ಡಿಪಿ ನೀಡುವ 'ಇಕ್ವೇಟರ್ ಇನಿಶಿಯೇಟಿವ್' ಪ್ರಶಸ್ತಿಯನ್ನು ಈ ಸಂಘ ಮುಡಿಗೇರಿಸಿಕೊಂಡಿತು. 103 ದೇಶಗಳ ನಡುವೆ ಸ್ಪರ್ಧಿಸಿ ಈ ಪ್ರಶಸ್ತಿ 'ತೀರ್ಥ' ಗ್ರಾಮದ ಮಹಿಳೆಯರನ್ನು ಅರಸಿಕೊಂಡದ್ದು, ಅವರ ಪರಿಶ್ರಮಕ್ಕೆ ದೊರೆತ ಅತ್ಯಂತ ದೊಡ್ಡ ಗೌರವ.

'ಈ ಮಹಿಳೆಯರ ಛಲ, ಧೈರ್ಯ, ಬದ್ಧತೆ ಕೇವಲ ಅವರ ಬದುಕನ್ನಷ್ಟೇ ಅಲ್ಲ, ಜತೆಗೆ ರೈತರ ಬದುಕು, ದೇಶದ ಹೆಸರನ್ನೂ ಬೆಳಗಿದೆ' ಎಂದು ಸಹಜ ಸಮೃದ್ಧ ಸಂಘದ ಕಾರ್ಯದರ್ಶಿ ಆನಂದತೀರ್ಥ ಪ್ಯಾಟಿ ಹೆಮ್ಮೆಯಿಂದ ಹೇಳುತ್ತಾರೆ.

ಇಂದು ಧಾರವಾಡದಾಚೆಗೆ, ಬಳ್ಳಾರಿ, ಬೆಳಗಾವಿ, ಸಿಂಧನೂರು, ಗಂಗಾವತಿ, ವಿಜಯಪುರ, ಕಲಬುರಗಿ ಸೇರಿದಂತೆ ಹಲವೆಡೆಗಳಿಂದ ರೈತರು ಇಲ್ಲಿಗೆ ಬಂದು ಬೀಜಗಳನ್ನು ಪಡೆಯುತ್ತಿದ್ದಾರೆ. ವಿದೇಶಗಳಿಂದಲೂ ಸಂಶೋಧಕರು ಈ ಕೇಂದ್ರಕ್ಕೆ ಭೇಟಿ ನೀಡುತ್ತಿದ್ದಾರೆ.

ಈ ಸಂಘದಲ್ಲಿ ಹದಿನಾಲ್ಕು ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಕೆಲವರು ಅಲ್ಪಸ್ವಲ್ಪ ಜಮೀನು ಹೊಂದಿದ್ದಾರೆ. ಕೆಲವರು ಟೇಲರಿಂಗ್ ಮಾಡುತ್ತಾರೆ. ಮನೆಯ ಕೆಲಸ ನಿರ್ವಹಿಸುತ್ತಲೇ ಸಂಘದ ಮೂಲಕ ಜೀವವೈವಿಧ್ಯ ಸಂರಕ್ಷಣೆಗೆ ಮುಂದಾಗಿದ್ದಾರೆ. ಧರ್ಮ, ಜಾತಿ, ವರ್ಗಗಳ ಗಡಿ ಮೀರಿ ಒಗ್ಗಟ್ಟಿನ ಶಕ್ತಿಯನ್ನು ತೋರಿಸಿದ್ದಾರೆ. ಬಹುತೇಕರು ಅನಕ್ಷರಸ್ಥರಾಗಿದ್ದರೂ, ಅವರ ಕಾರ್ಯದಕ್ಷತೆ ಮತ್ತು ಬದ್ಧತೆ ಅಸಾಧಾರಣ.

'ಇನ್ನೂ ಹೆಚ್ಚು ಓದಿದ ಮಹಿಳೆಯರು ನಮ್ಮ ಜೊತೆ ಸೇರಿದರೆ, ನಮ್ಮ ಕೆಲಸ ಇನ್ನಷ್ಟು ವಿಸ್ತರಿಸಬಹುದು' ಎಂದು ಬೀಬಿ ಜಾನ್ ಆಶಿಸುತ್ತಾರೆ.

ಮುಂದಿನ ದಿನಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಬೀಜ ಬ್ಯಾಂಕ್‌ಗಳನ್ನು ಸ್ಥಾಪಿಸುವ ಕನಸು ಇವರದ್ದು. ಈ ದಿಸೆಯಲ್ಲಿ ರಾಜ್ಯ ಸರ್ಕಾರವೂ ಗಮನ ಹರಿಸಿರುವುದು, ಈ ಪ್ರಯತ್ನದ ಮಹತ್ವವನ್ನು ಮತ್ತೊಮ್ಮೆ ದೃಢಪಡಿಸುತ್ತದೆ.

'ತೀರ್ಥ' ಗ್ರಾಮದ ಈ ಕಥೆ, ಕೇವಲ ಒಂದು ಹಳ್ಳಿಯ ಕಥೆಯಲ್ಲ. ಇದು ಸಂಕಷ್ಟವನ್ನು ಅವಕಾಶವನ್ನಾಗಿ ಪರಿವರ್ತಿಸಿದ ಮಹಿಳೆಯರ ಕಥೆ. ಒಗ್ಗಟ್ಟಿನ ಬಲ, ಧೈರ್ಯ ಮತ್ತು ನಂಬಿಕೆ ಇದ್ದರೆ, ಯಾವುದೇ ಅಡಚಣೆಗಳನ್ನು ಮೀರಿ ಸಾಧನೆ ಸಾಧ್ಯ ಎಂಬುದಕ್ಕೆ ಇದು ಜೀವಂತ ಸಾಕ್ಷಿ. ಮಣ್ಣಿನ ಮಡಿಲಿನಲ್ಲಿ ಮೊಳೆತ ಈ ಸಣ್ಣ ಬೀಜ, ಇಂದು ವಿಶ್ವ ವೇದಿಕೆಯಲ್ಲಿ ಅರಳಿದೆ. ❖



ಬೀಬಿ ಫಾತಿಮಾ ಮಹಿಳಾ ಸಂಘದ ಸದಸ್ಯೆಯರು

ಮುನ್ನೋಟ 29-03-2026 ರಿಂದ 04-04-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವೇಷಭೂಷಣಗಳ ಕಡೆಗೆ ಹೆಚ್ಚು ಆಸಕ್ತಿ ತೋರುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಇಷ್ಟಪಟ್ಟ ಆಸ್ತಿಯನ್ನು ಖರೀದಿಸುವ ಅವಕಾಶಗಳಿವೆ. ಭೂಮಿ ಮಾರಾಟ ಮಾಡುವ ಮಧ್ಯವರ್ತಿಗಳಿಗೆ ಲಾಭ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ವೈದ್ಯಕೀಯ ಖರ್ಚುಗಳು ಸ್ವಲ್ಪ ಹೆಚ್ಚಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ಆಲೋಚನೆಗಳ ಬಗ್ಗೆ ನಿಮಗೆ ದೃಢತೆ ಇರುವುದಿಲ್ಲ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಆಸ್ತಿ ಮಾಡುವ ವಿಚಾರದಲ್ಲಿ ಸ್ವಲ್ಪ ಎಚ್ಚರಿಕೆವಹಿಸುವುದು ಒಳ್ಳೆಯದು. ಈಗ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಬರಬಹುದು. ವೃತ್ತಿಗೆ ಸಂಬಂಧಪಟ್ಟ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಅನುಕೂಲವಿದೆ. ಸಂಗಾತಿಗೆ ವೃತ್ತಿಯಲ್ಲಿದ್ದ ತೊಡಕುಗಳು ದೂರವಾಗುತ್ತವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಮಾಜದಲ್ಲಿ ಗೌರವಯುತವಾಗಿ ಕಾಣಿಸಿಕೊಳ್ಳಲು ಸಾಕಷ್ಟು ಪ್ರಯತ್ನಪಡುವಿರಿ. ಆದಾಯವು ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ನೀವು ಮಾಡುವ ಒಳಿತಿನ ಕೆಲಸಗಳಿಗೆ ಸಮಾಜದಿಂದ ನೆರವು ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಮೂಳೆ ನೋವು ಕಾಡಬಹುದು. ಸಂಗಾತಿಯು ನಿಮ್ಮೆಲ್ಲ ಕೆಲಸಗಳಿಗೂ ಬೆನ್ನೆಲುಬಾಗಿ ನಿಲ್ಲುವರು. ಸರ್ಕಾರಿ ಸಿಬ್ಬಂದಿಗಳಿಗೆ ಸ್ವಲ್ಪ ಒತ್ತಡ ಹೆಚ್ಚಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಾರದ ಆರಂಭದಲ್ಲಿ ಬಹಳ ಆನಂದವಿರುತ್ತದೆ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ಆಸ್ತಿ ಕೊಳ್ಳಲು ಬೇಕಾದ ಹಣಕಾಸಿನ ನೆರವು ಒದಗಿ ಬರುತ್ತದೆ. ಕರುಳಿನ ಸಮಸ್ಯೆ ಕಾಣಿಸಬಹುದು. ಪ್ರೇಮಿಗಳಿಗೆ ಬಹಳ ಕಷ್ಟದಿಂದ ಹಿರಿಯರ ಒಪ್ಪಿಗೆ ದೊರೆಯುತ್ತದೆ. ವಿದೇಶಿ ವ್ಯವಹಾರ ಮಾಡುವವರ ಆದಾಯದಲ್ಲಿ ಸ್ವಲ್ಪ ಹೆಚ್ಚಳವಾಗುತ್ತದೆ. ತಂದೆ ಮಕ್ಕಳ ಸಂಬಂಧ ಸ್ವಲ್ಪ ಹದಗೆಡುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಧಾರ್ಮಿಕ ಆಚರಣೆಗಳ ಬಗ್ಗೆ ಹೆಚ್ಚು ನಂಬಿಕೆ ಉಂಟಾಗುತ್ತದೆ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಹಿರಿಯರ ಒಡವೆ ಅಥವಾ ವಾಹನ ನಿಮಗೆ ದೊರೆಯಬಹುದು. ಸಂಗಾತಿಗೆ ತವರಿನಿಂದ ಆಸ್ತಿ ಸಿಗುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ದೊರೆಯುತ್ತದೆ. ಕಣ್ಣಿನ ಸಂಬಂಧಿ ದೋಷಗಳಿದ್ದಲ್ಲಿ ಎಚ್ಚರ ವಹಿಸಿ. ನಿಮ್ಮ ಸಂಗಾತಿಗೆ ವಿದೇಶಕ್ಕೆ ಹೋಗುವ ಅವಕಾಶ ಸಿಗುವ ಸಾಧ್ಯತೆಯಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ಮನಸ್ಸು ಸರಿಯಾದ ನಿರ್ಧಾರಗಳಿಲ್ಲದೆ ಡೋಲಾಯಮಾನವಾಗಿರುತ್ತದೆ. ಈಗ ಆದಾಯವು ಕಡಿಮೆ ಇದ್ದು, ಬರಬೇಕಾಗಿದ್ದ ಹಣಕ್ಕೆ ಕೂಡ ತೊಂದರೆಯಾಗುತ್ತದೆ. ಆಸ್ತಿ ಮಾಡಬೇಕೆಂಬ ವಿಚಾರಕ್ಕೆ ಸಾಕಷ್ಟು ತಲೆಕೆಡಿಸಿಕೊಳ್ಳುವಿರಿ. ಕಾನೂನು ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲವಿರುತ್ತದೆ. ಶಸ್ತ್ರಚಿಕಿತ್ಸಕರಿಗೆ ಬೇಡಿಕೆ ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಹಿರಿಯರ ಸಹಾಯ ಪಡೆಯಲು ಸಾಕಷ್ಟು ಅಲೆದಾಡುವಿರಿ. ಸರ್ಕಾರಿ ಆಸ್ತಿಯನ್ನು ಪಡೆಯಲು ಹೆಚ್ಚು ಶ್ರಮ ಹಾಕುವಿರಿ. ವೈಮಾನಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ದೃಷ್ಟಿ ದೋಷದ ಸಮಸ್ಯೆ ಕೆಲವರನ್ನು ಕಾಡಬಹುದು. ಬೆಳ್ಳಿ ವ್ಯಾಪಾರಿಗಳಿಗೆ ಅನಿರೀಕ್ಷಿತ ಲಾಭವಿರುತ್ತದೆ. ವೃತ್ತಿಯಲ್ಲಿದ್ದ ಗೊಂದಲಗಳು ನಿವಾರಣೆಯಾಗುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಮನಸ್ಸಿನಲ್ಲಿ ಉತ್ಸಾಹ ಇಮ್ಮಡಿಯಾಗುತ್ತದೆ. ಆದಾಯವು ನಿಮ್ಮ ಅವಶ್ಯವನ್ನು ಪೂರೈಸುವಷ್ಟಿರುತ್ತದೆ. ನಿಮ್ಮ ಬಂಧುಗಳಲ್ಲಿ ಕೆಲವರು ನಿಮಗೆ ಸಹಕರಿಸಿದರೆ, ಕೆಲವರು ವಿರೋಧಿಸುತ್ತಾರೆ. ವಿದೇಶದಲ್ಲಿರುವವರು ಸ್ವದೇಶ ಮತ್ತು ವಿದೇಶದಲ್ಲಿ ಆಸ್ತಿ ಮಾಡಿಕೊಳ್ಳಬಹುದು. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಅನುಕೂಲವಿದೆ. ಸ್ತ್ರೀಯರ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸಂಗಾತಿಯಿಂದ ಅತಿಯಾದ ಗೌರವ ದೊರೆಯುತ್ತದೆ. ಆದಾಯವು ಕಡಿಮೆ ಇದ್ದು, ಖರ್ಚಿಗೆ ಕಡಿವಾಣ ಹಾಕಿ. ಬಂಧುಗಳ ಜಗಳ ಬಿಡಿಸಲು ಹೋಗಬೇಡಿ. ಸರ್ಕಾರಿ ಆಸ್ತಿ ದೊರೆಯುವುದು ಬಹಳ ನಿಧಾನವಾಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಿರುತ್ತದೆ. ಪ್ರಸೂತಿ ತಜ್ಞರಿಗೆ ಆದಾಯವು ಹೆಚ್ಚುತ್ತದೆ. ಸಂಗಾತಿಯಿಂದ ನಿರೀಕ್ಷಿತ ಆರ್ಥಿಕ ಸಹಕಾರ ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ಶ್ರಮವನ್ನು ಹಿರಿಯರು ಈಗ ಗುರುತಿಸುತ್ತಾರೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ಪ್ರಯತ್ನದಿಂದ ಆದಾಯ ಹೆಚ್ಚಿಸಿಕೊಳ್ಳುವ ದಾರಿಗಳಿರುತ್ತವೆ. ಹಿರಿಯರ ವಿರೋಧದ ನಡುವೆಯೂ ನೀವು ಕಾರ್ಯಸಾಧನೆ ಮಾಡುವಿರಿ. ಕೃಷಿ ಸಂಬಂಧಿತ ಉಪಕರಣಗಳನ್ನು ಮಾರುವವರಿಗೆ ಆದಾಯ ಹೆಚ್ಚುತ್ತದೆ. ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಯುವಕರ ಮನಸ್ಸಿನಲ್ಲಿ ದ್ವಂದ್ವ ನಿರ್ಧಾರಗಳು ಇರುತ್ತವೆ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಸಹೋದರಿಯರ ಸಹಕಾರ ನಿಮ್ಮ ಕೆಲಸ ಕಾರ್ಯಗಳಿಗೆ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ಶೀತಬಾಧೆ ಕೆಲವರನ್ನು ಕಾಡಬಹುದು. ಸಂಗಾತಿ ನಿಮ್ಮ ಬಗ್ಗೆ ಸ್ವಲ್ಪ ಉದಾಸೀನ ತೋರಬಹುದು. ಪಾಲುದಾರಿಕೆ ವ್ಯವಹಾರಗಳಲ್ಲಿ ಎಚ್ಚರವಾಗಿರಿ. ಉದ್ಯೋಗದಲ್ಲಿ ಕಸಿವಿಸಿಗಳು ಹೆಚ್ಚುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮಗೆ ಹಿರಿಯರ ಬಗ್ಗೆ ಅಸಡ್ಡೆ ಹೆಚ್ಚುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಸಹೋದರಿಯರ ಸಹಕಾರದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಆದಾಯ ಹೆಚ್ಚುತ್ತದೆ. ಈಗ ವಿದ್ಯಾರ್ಥಿಗಳು ನಿರೀಕ್ಷಿತ ಫಲಿತಾಂಶ ಪಡೆಯುವಲ್ಲಿ ಯಶಸ್ವಿಯಾಗುವರು.


ಪದಬಂಧ 2937

ಮೇಲಿಂದ ಕೆಳಕ್ಕೆ

1. ಸರಿಸಾಟಿಯಿಲ್ಲದ ಇವಳನ್ನು ಹೋಲಿಸಲು ಅಸಾಧ್ಯ 4
2. ಹಸುಗಳನ್ನು ಕಾಯುವ ಗೋಪಾಲ 4
3. ನೀತಿಯ ಅನುಷ್ಠಾನಕ್ಕೆ ಮೇಲ್ತನದ ಪ್ರಾಧಿಕಾರ 4
4. ಕೃಷ್ಣನನ್ನು ಅಪವಾದಕ್ಕೆ ಗುರಿಮಾಡಿದ ಮಣಿ 4
7. ಬುಡಬುಡಿಕೆ ಭವಿಷ್ಯ ಹೇಳುವ ಬಿಳಿ ಹಕ್ಕಿ ಮಂದಿ 5
8. ಪ್ರಜಾಪ್ರಭುತ್ವದಲ್ಲಿ ಈ ಮಂದಿ ಸಾಮಾನ್ಯರಲ್ಲ 5
9. ಅಂತರ್ಗತವಾಗಿರುವ ಬಯಕೆ ಹೀಗಿರುತ್ತೆ 5
10. ನಮ್ಮ ಇಂದಿನ ನುಡಿಗೆ ಮೂಲವಾದ ಪಂಪ, ರನ್ನ, ಕುಮಾರವ್ಯಾಸರ ಭಾಷೆ 5
12. ಕಠಿಣ, ಹೊಳಪಿನ ಕಾಯ 4
13. ಹಣದೊಡೆಯ ಕುಬೇರ 4
15. ತಾರೆಗಳು ಹೊಳೆಯುವ ರಕಮು 4
16. ಕೊಟ್ಟು ತೆಗೆದುಕೊಳ್ಳುವುದನ್ನು ಕೂಡಿಕಳೆಯುವ ಆಚಾರ ವಿಚಾರ 4

ಎಡದಿಂದ ಬಲಕ್ಕೆ

1. ಪ್ರತಿದಿನವೂ ಸಂತೋಷದಿಂದಿರುವ ಸಂನ್ಯಾಸಿ 4
3. ಪರಿಶುದ್ಧ ಪದ ಪಲುಕು ಹೊಂದುವ ವಿಕೃತ ರೂಪ 4
5. ನರಸರಾಜನ ಹೆಸರಿನ ಹಿಂದಿನ ಕಾಲದ ಕೆರೆ 5
6. ದೊಡ್ಡ ಪವಾಡಗಳನ್ನು ಸೃಷ್ಟಿಸಬಲ್ಲವ ದಾಸವಾಣಿಯ ಕೈವಲ್ಯಪತಿ 5
9. ಕಣ್ಮನಗಳನ್ನು ಸೆಳೆದು ಆಕರ್ಷಿಸಿ ಅಪಹರಿಸುವಂತದ್ದು 5
11. ಕುದುರೆ ಎಳೆಯುವ ಟಾಂಗಾ 3
12. ಪ್ರದೇಶದಲ್ಲಿ ಹರಡಿರುವ ಕಾಡಿನ ದಟ್ಟಣೆ 5
14. ಭೂಮಿಯೊಳಗೆ ಬೆಳೆದ ಕಾಳು ಗುಗ್ಗರಿಗೆ ಬರುತ್ತೆ 5
17. ಪುಣ್ಯಪ್ರದವಾದ ಶ್ರೇಷ್ಠಭೂಮಿ 5
18. ಕೈಗೆ ಬರುವ ಮೂಲ ಬರಹ 4
19. ಕೈ ತೂಕ ಹೆಚ್ಚಿಸುವ ತೆರಿಗೆ 4



ಪದಬಂಧ ಉತ್ತರ -2936

ಮೇಲಿಂದ ಕೆಳಕ್ಕೆ

1. ವಸುಮತಿ 3.ಅವಕಾಶವಾದ 4.ತಿಮಿರ 5.ಪ್ರಚಾರಕ 6.ರಾಷ್ಟ್ರಕವಿ 7.ರಾಜಕೀಯ 9.ಮತದಾನ 13.ನಾದಮಯ 14.ಕನಸುನನಸು 16. ವಾತಾತ್ಮಜ 17.ಲವಕುಶ 19.ಜಪಮಾಲೆ 21.ಮಾರಾಮಾರಿ 22.ಜಾನುನಿ

ಎಡದಿಂದ ಬಲಕ್ಕೆ

1. ಪರಾಭವ 3.ಅರುಂಧತಿ 5.ಪ್ರಣವ 6.ರಾಮರಾಮ 8.ಕಾಡುಮರ 10.ಜತಿಸ್ವರ 11.ಕಡವಾ 12.ವಿನಾಯಕ 15.ದವಾನಲ 18.ನಗಜ 20.ಪರಮಾತ್ಮ 22.ಜಾಯಮಾನ 23.ರಾಜಕೋಶ 24.ನವಿಲೆ 25.ನಿವಾಳಿಸು 26.ರಿಪುಧ್ವಜ

‘ಪ್ರಾದೇಶಿಕ ಭಾಷೆ ನನ್ನ ಎಚ್ಚರದ ಆಯ್ಕೆ’

ಅಮರೇಶ ನುಗಡೋಣಿ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಶೈಲಿ, ಗ್ರಾಮೀಣ ಬದುಕಿನ ಸೂಕ್ಷ್ಮ ನುಡಿಗಳು ಮತ್ತು ವಾಸ್ತವ–ಕಲ್ಪನೆಯ ಸಂಯೋಜನೆಯ ಮೂಲಕ ತಮ್ಮದೇ ಆದ ಧ್ವನಿಯನ್ನು ನಿರ್ಮಿಸಿಕೊಂಡ ಕತೆಗಾರರು. ಇತ್ತೀಚೆಗೆ ಅವರ ‘ದಡ ಸೇರಿಸು ತಂದೆ’ ಕಥಾಸಂಕಲನಕ್ಕೆ 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇದು ಅವರ ಸಾಹಿತ್ಯಯಾನದ ಮಹತ್ವದ ಮೈಲುಗಲ್ಲಾಗಿದೆ.

• ಸಂದರ್ಶನ: ರಾಮಲಿಂಗಪ್ಪ ಟಿ.ಬೇಗೂರು

• ನೀವು ಕತೆಗಾರರಾಗಿ ರೂಪುಗೊಂಡದ್ದು ಹೇಗೆ?

ಸಾಹಿತ್ಯ ರಚನೆ ಸಾಮಾನ್ಯವಾಗಿ ಎಲ್ಲರಿಗೂ ಹುಟ್ಟುಗುಣ ಆಗಿರಲ್ಲರಿ. ಯಾವಾಗೋ ಬೆಳಿತಾ ಆ ಆಸಕ್ತಿ ಮೂಡಿ ಅದಕ್ಕೆ ಅವಕಾಶ ಸಿಗುತ್ತೆ. ನಾನು ಬಾಲ್ಯದಲ್ಲಿ ರೈತಾಪಿ ಕೂಡುಕುಟುಂಬದಲ್ಲಿ ಬೆಳೆದವನು. ಹಾಗೆ ಹೊಲ, ಮನೆ ಕೆಲಸ ಮಾಡಿಕೊಂಡು ಚೂರುಪಾರು ಓದ್ತಾ ಇದ್ದವನು. ಆ ಸಂದರ್ಭದಲ್ಲಿ ನನಗೆ ಕುವೆಂಪು ಅವರ ಕಾದಂಬರಿಗಳು ಸಿಕ್ಕವು. ಮನುಷ್ಯನ ಬಾಳ್ವೆಯನ್ನು ಕತೆ ಮಾಡೊ ವಿಚಾರದಲ್ಲಿ ನಾನೂ ಬರೀಬಹುದಲ್ಲ ಅನ್ನೊ ಪ್ರೇರಣೆ ಅವುಗಳಿಂದ ಆಯಿತು. ಆಗ ನನಗೆ ಸಾಹಿತ್ಯದ ಗಂಧಗಾಳಿ ಅಷ್ಟಾಗಿ ಇರಲಿಲ್ಲ. ಮುಂದೆ ಹತ್ತು ಹದಿನೈದು ವರ್ಷಗಳಲ್ಲಿ ನಾನು ನಿಧಾನವಾಗಿ ಸಣ್ಣಕತೆಗಳನ್ನ ಬರೆಯುವುದಕ್ಕೆ ತೊಡಗಿದೆ.

• ನಿಮ್ಮ ಆರಂಭದ ಕತೆಗಳಲ್ಲಿ ಸಾಮಾಜಿಕ ವಾಸ್ತವ ಹೆಚ್ಚು ನಿರೂಪಣೆಯಾಗಿದೆ. ನಂತರದ ಕತೆಗಳಲ್ಲಿ ಕಲ್ಪಿತ ವಾಸ್ತವನು ಸೇರಿಕೊಂಡಿದೆ. ಕಲ್ಪನೆನ ಬೆಸೆದು ಆಶಯಕ್ಕೆ ತಕ್ಕ ಹಾಗೆ ಕತೆ ಕಟ್ಟುವ ಕೌಶಲ ನಿಮ್ಮಲ್ಲಿ ಹೇಗೆ ಸಂಭವಿಸ್ತು?

ಅದು ನನಗೂ ಸ್ವಲ್ಪ ವಿಸ್ಮಯದ್ದೆ. ನಮ್ಮ ಊರಲ್ಲಿರುವ ಪಾತ್ರ, ಅವಕ್ಕೆ ಸಂಬಂಧಿಸಿದ ಸನ್ನಿವೇಶಗಳು ಮತ್ತವರ ಪರಿಸರ ಎಲ್ಲವನ್ನು ವಾಸ್ತವದ ರೀತಿಯಲ್ಲಿಯೇ ನಾನು ಗ್ರಹಿಸಿದ್ದೀನಿ ಮತ್ತು ಬರೆದಿದ್ದೀನಿ. ಹಾಗೆ ಮೊದಮೊದಲ ಕತೆಗಳನ್ನ ನಾನು ಯಥಾವತ್ತಾಗಿ ಯಾವ ಕಲ್ಪನೆ ಇಲ್ಲದೆ ಬರೆದಿದಿನಿ. ಆದರೆ ಆಕಸ್ಮಿಕವಾಗಿ ಅದನ್ನು ಓದಿದ ನಮ್ಮೂರ ಜನ ಅದನ್ನು ಸಹಿಸಲಿಲ್ಲ. ಅವುಗಳಲ್ಲಿನ ವಿಷಯಕ್ಕೆ ಅವರಿಗೆ ಆಕ್ರೋಶ ಬಂತು. ಅವಾಗ ನನ್ನ ಗುರುಗಳಾದ ಶಾಂತರಸರು ಸಮುದಾಯಗಳು ವಾಸ್ತವ ತಡ್ಕೊಳ್ಳಲ್ಲ; ಅದಕ್ಕಾಗಿ ನೀನು ತಂತ್ರಗಳನ್ನು ಹುಡುಕಬೇಕು ಅಂದರು. ಆವಾಗ ನಾನು ಕಲ್ಪನೆ ಸೇರಿಸಿಕೊಳ್ಳಲಿಕ್ಕೆ ತೊಡಗಿದೆ. ಅಲ್ಲಿಂದ ನಾನು ವಾಸ್ತವ ಮತ್ತು ಕಲ್ಪನೆಯ ಸಮ್ಮೇಳನ ಮಾಡುವುದಕ್ಕೆ



ಅಮರೇಶ ನುಗಡೋಣಿ

ಪ್ರಯತ್ನ ಪಟ್ಟು ಮುಂದಿನ ಕತೆಗಳಲ್ಲಿ ಅದನ್ನ ಮಾಡಿಕೊಂಡು ಹೋಗಿದ್ದೇನೆ.

• ಕಾದಂಬರಿ, ಕವಿತೆ ಪ್ರಕಾರಗಳಿಗೆ ನೀವು ತುಂಬಾ ತಡವಾಗಿ ಪ್ರವೇಶ ಮಾಡೋದಕ್ಕೆ ಏನಾದರೂ ಕಾರಣ ಇದಾವ?

ನಾನು ಆರಂಭದಿಂದಲೂ ಬರೆದರೆ ಕಾದಂಬರಿನೆ ಬರಿಬೇಕು ಅನ್ನೊ ಒತ್ತಡದಲ್ಲಿ ಇದ್ದೆ. ಆದರೆ ನನ್ನ ಕೆಲಸದ ಸ್ವರೂಪದಿಂದಾಗಿ ತುಂಬಾ ಹೊತ್ತು ಕುಳಿತು ಬರೆಯೊ ಅವಕಾಶವಾಗಲಿ, ಸಮಯವಾಗಲಿ ಸಿಗದೆ ಹೋದ್ದರಿಂದ ಸಣ್ಣ ಕತೆಗಳನ್ನು ಬರಿತಾ ಹೋದೆ. ನಿವೃತ್ತಿ ಹೊಂದುವ ಸಮಯದಲ್ಲಿ ನನಗೆ ಒಂದಿಷ್ಟು ದೀರ್ಘ ರಜೆ ಸಿಕ್ಕಿದಾಗ ಎರಡು ಕಾದಂಬರಿಗಳನ್ನ ಬರೆದೆ.

ವಿದ್ವಾಂಸರು ನನ್ನ ಕತೆಗಳನ್ನು ಕಾದಂಬರಿಯ ಲಕ್ಷಣ ಇರೊ ಕತೆಗಳು ಅಂತ ಕರೀತಾರೆ. ಎಂತಾ ದೊಡ್ಡ ಕತೆನೇ ಇರಲಿ, ಅದನ್ನ ಸಣ್ಣ ಕತೆಯನ್ನಾಗಿ ಪರಿವರ್ತಿಸುವ ಒಂದು ಜಾಣ್ಮೆ ನನಗೆ ಮೊದಲೆ ಕರಗತ ಆಯ್ತು. ನಾನು ಬಹಳ ದೀರ್ಘಕಾಲ ಆಲೋಚನೆ ಮಾಡಿ ಅದನ್ನ ನನ್ನ ಮನಸ್ಸಿನಲ್ಲಿಯೇ ಬರೆದುಕೊಂಡು ಆನಂತರ ಅಕ್ಷರಗಳಿಗೆ ಇಳಿಸುತ್ತಿದ್ದೆ. ಹೀಗಾಗಿ ನಾನು ಕಾದಂಬರಿಯ ಒಳಗೆ ಸಣ್ಣ ಕತೆಯ ಸ್ವರೂಪನು ಕತೆಯ ಒಳಗೆ ಕಾದಂಬರಿಯ ಸ್ವರೂಪನು ಇಟ್ಟುಕೊಂಡಿದ್ದೀನಿ.

• ಹಂಪಿ ಕನ್ನಡ ವಿವಿಗೆ ಸೇರಿದ ನಂತರ ಅಲ್ಲಿನ ಕರ್ತವ್ಯದ ಭಾಗವಾಗಿ ನೀವು ವಿಮರ್ಶೆ, ಸಂಶೋಧನೆ, ಸಂಪಾದನೆ ಹೀಗೆ ತೊಡಗಿಕೊಂಡ್ರಿ. ಇವುಗಳ ನಡುವೆ ಸಂಘರ್ಷ ಉಂಟಾಯ್ತಾ? ಅಥವಾ ನಿಮ್ಮೊಳಗಿನ ಕತೆಗಾರನಿಗೆ ಇದೆಲ್ಲ ಹೇಗೆ ಬಳಕೆ ಆಯ್ತು?

ಕನ್ನಡ ವಿಶ್ವವಿದ್ಯಾಲಯಕ್ಕೆ ಆರಂಭದಲ್ಲಿ ಬಂದ ಪ್ರಖರ ವೈಚಾರಿಕತೆ, ಬೌದ್ಧಿಕತೆ ಉಳ್ಳ ವಿದ್ವಾಂಸರ ಜೊತೆ ನಿತ್ಯವೂ ಒಡನಾಡ್ತಾ ಇದ್ದೆ. ನನ್ನನ್ನು ಆ ವಿದ್ವಾಂಸರು ಒಬ್ಬ ಕತೆಗಾರನನ್ನಾಗಿ ನೋಡಿದರೆ ಹೊರತು ಒಬ್ಬ ಸಂಶೋಧಕ ಮತ್ತು ವಿದ್ವಾಂಸನನ್ನಾಗಿ ನೋಡಲಿಲ್ಲ. ಆ ದಿಕ್ಕಿಗೆ ನನ್ನನ್ನು ಕರೆದೊಯ್ಯಲೂ ಇಲ್ಲ. ಆದರೆ; ನನ್ನ ಗ್ರಾಮೀಣ ಭಾಷೆ ಇತ್ತಲ್ಲ, ಅದು ಉದ್ಯೋಗ ನಿಮಿತ್ತ ತನ್ನ ಮೂಲ ಶೈಲಿಯನ್ನೆ ಕಳಕೋತು. ನೀವು ಆನಂತರದ ಸಂಕಲನಗಳ್ನ ನೋಡ್ರಿ, ಅಲ್ಲಿ ಡೈಲಾಗ್ ಮಾತ್ರ ಉಳಿಸಿಕೊಂಡಿದ್ದೀನಿ. ನಿರೂಪಣಾ ಭಾಷೆ ಬದಲಾಗಿದೆ. ಅಂದ್ರೆ ವಿಮರ್ಶೆಗೆ, ಸಂಶೋಧನೆಗೆ ಒಂದು ಭಾಷೆ ಇರುತ್ತಲ್ಲ, ಅದು ಕತೆಗೂ ಬರುತ್ತೆ. ಆದರೆ; ನಾನು ಕತೆಗೆ ಆಯ್ಕೆ ಮಾಡಿಕೊಂಡ ವಸ್ತು, ಪಾತ್ರಗಳು ಮತ್ತು ಸನ್ನಿವೇಶಗಳು ಪ್ರಾದೇಶಿಕವಾಗಿಯೇ ಇರಬೇಕು ಅನ್ನುವುದನ್ನ ಬಹಳ ಶ್ರಮದಿಂದ, ಶ್ರದ್ಧೆಯಿಂದ ರೂಢಿಸಿಕೊಳ್ಳೋಕೆ, ಉಳಿಸಿಕೊಳ್ಳೋಕೆ ನಾನು ಪ್ರಯತ್ನಪಟ್ಟಿದ್ದೀನಿ. ಹಾಗೆ ಭಾಷೆನು ಪ್ರಾದೇಶಿಕವಾಗಿ ಎಚ್ಚರದಿಂದ ರೂಢಿಸಿಕೊಂಡು ಬಂದಿದ್ದೀನಿ.

• ನಮ್ಮ ಸುತ್ತ ದೊಡ್ಡ ದೊಡ್ಡ ಸಾಮಾಜಿಕ ಸಮಸ್ಯೆಗಳಿದಾವೆ. ಇವನ್ನೆಲ್ಲ ನಾನು ಬರಿಬೇಕಾಗಿತ್ತು; ಆತರ ಉಳಿದುಕೊಂಡಂತಹ ಸಂಗತಿ ಯಾವಾದರೂ ಇದಾವಾ?

ಒಂದಲ್ಲ ಎರಡಲ್ಲ ಬಹಳನೆ ಅದಾವರಿ. ನಾವು ವರ್ತಮಾನದಲ್ಲಿ ಎಷ್ಟು ಇದ್ದೀವೊ ಅದಕ್ಕಿಂತ ಭೂತದಲ್ಲಿ ಹೆಚ್ಚಿದ್ದವರು. ಹಂಗಾಗಿ ಭೂತದಿಂದ ಕಳಚಿಕೊಂಡು ಅತ್ಯಂತ ಪ್ರಖರವಾದ ವರ್ತಮಾನದ ಬದುಕನ್ನು ಹಿಡಿಯುವ ಕತೆಗಾರರು ಕನ್ನಡದಲ್ಲಿ ಬಹಳ ಕಡಿಮೆ. ನಾವು ವರ್ತಮಾನ ಬರ್ದಿಲ್ಲ. ಇದು ಬರೀಲಿಲ್ಲ ಅನ್ನುವ ಹಲವು ಉಳಿಕೆಗಳು ನನ್ನಲ್ಲಿ ಇವೆ.

• ಇವತ್ತಿನ ಈ ವರ್ತಮಾನದ ಬರ್ನಿಂಗ್ ಇಶ್ಯೂಸ್‌ಗಳನ್ನ ಕತೆ ಕಟ್ಟೋದಕ್ಕೆ ಬರೊ ಹೊಸಬರಿಗೆ ನಿಮ್ಮ ಸಲಹೆ...

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಲವರು ಹಿಂದೆ ಏನು ಒಂದು ದನಿಯನ್ನ ರೂಪಿಸಿಕೊಂಡು, ವಿಸ್ತರಿಸಿಕೊಂಡು ಒಂದು ಚಳವಳಿಯಾಗಿ ಬೆಳೀತಿದ್ರು; ಒಂದು ಯುಗಧರ್ಮದ ತಾತ್ವಿಕತೆಯಲ್ಲಿ

• ನಿಮ್ಮ ಕತೆಗಳು ಚಲನಚಿತ್ರಗಳೂ ನಾಟಕಗಳೂ ಆಗಿದ್ದಾವೆ. ಒಂದು ಕಥನ ಚಿತ್ರಕತೆ, ರಂಗರೂಪ ಆಗಿ ಬದಲಾಗುವಾಗ ಕಥನದ ಆಶಯಗಳು ಬದಲಾಗಬಹುದು. ಆ ರೀತಿಯ ಮಾರ್ಪಾಡಿನ ಬಗ್ಗೆ ನಿಮ್ಮ ಅಭಿಪ್ರಾಯ...

ಆರಂಭದಲ್ಲಿಯೇ ನನ್ನ ಸವಾರಿ ಕತೆಯನ್ನು ಗಿರೀಶ ಕಾಸರವಳ್ಳಿ ‘ಕನಸೆಂಬೊ ಕುದುರೆ’ ಅಂತ ಸಿನಿಮಾ ಮಾಡಿದರು. ಕತೆಗಾರ ಹೇಳಿದ್ದನ್ನೆ ಯಥಾವತ್ ನಿರ್ದೇಶಕರು ನಿರೂಪಿಸೋದಾದರೆ ಅವರೆ ಯಾಕೆ ಬೇಕು? ಅವರದೆ ಆಶಯಗಳು ಮತ್ತು ದೃಷ್ಟಿಕೋನಗಳು ಇರ್ತಾವೆ. ಅದಕ್ಕಾಗಿ ಅವರು ಸಿನಿಮಾ, ನಾಟಕ ಮಾಡ್ತಾರೆ. ಕಥೆಗಾರನ ಕತೆಯಿಂದನೆ ಅವು ಸೃಷ್ಟಿ ಆಗ್ತವೆ ಅಲ್ಲವಾ? ಒಂದು ಕತೆ ಇನ್ನೊಂದು ಮಾಧ್ಯಮಕ್ಕೆ ಹೋದಾಗ ಅದು ಅಲ್ಲಿ ಬೇರೇನೊ ಆಗ್ತದೆ. ಅದು ಆಗಬೇಕು.

ಬರೀತಾ, ಕಟ್ತಾ ಅವರವರ ಅನನ್ಯತೆನು ಉಳಿಸಿಕೊತಿ ದ್‌ರು; ಅಂತಾ ನೂರಾರು ದನಿಗಳಲ್ಲಿ ಒಂದು ಏನೋ ಕಾಜ್ ಇರ್ತಿತ್ತು. ಆದರೆ ಈಗ ಕೂಡುದನಿಲಿ ಮಾತಾಡೊ ಕಾಲ ಮುಗಿದು ಹೋಗಿದೆ ಅನ್ನಿಸ್ತಿದೆ. ಈಗಿನವರು ತಮ್ಮ ಸೀಮಿತವಾದ ಅನುಭವಗಳನ್ನ ಒಂದೊಂದು ಕತೆ ಒಂದೊಂದು ಕವಿತೆ ಮಾಡ್ತಾ ಹೋಗ್ತಾ ಇದ್ದಾರೆ.

• ಅಂದರೆ ಕಾಮನ್ ಪರ್ಪಸ್ ಹಿನ್ನೆಲೆನಲ್ಲಿ ಒಂದು ಇಡೀ ಸಮುದಾಯ ದನಿಯೆತ್ತಿ ಮಾತಾಡೊ ತರಹದ ಸಂಘಟಿತವಾದ ಪ್ರಯತ್ನಗಳು ನಡಿತಾ ಇಲ್ಲ ಅಂತೀರ?

ಹೌದು, ನಡೀತಾ ಇಲ್ಲ. ಮತ್ತೆ ಆ ಕಾಮನ್ ಕಾಜ್ ಅನ್ನೋದು ಇವತ್ತಿನ ತಲೆಮಾರಿನಲ್ಲಿಯೇ ಹುಟ್ಟಬೇಕೆ ಹೊರತು; ಅದು ಯಾರೋ ಹಿಂದಿನವರು ನೀವು ಹಿಂಗೆ ಆಗಿ ಅಂತ ಹೇಳಕಾಗದು. ಹಾಗೆನೆ ಹಳೆಯ ಚಳವಳಿಗಳನ್ನ ಮರು ಸ್ಥಾಪಿಸುವುದಕ್ಕು ಸಾಧ್ಯವಿಲ್ಲ. ಇಲ್ಲಿ ಫೀಲ್ಡಿನಲ್ಲಿ ನಿಂತ್ಕೊಬೇಕು. ಇವರ ವಯಸ್ಸಿನವರು ಎಲ್ಲ ಏನ್‌ಏನ್ ಅನುಭವಿಸುತ್ತಾ ಇದ್ದಾರೆ ಅದಕ್ಕೆ ಇವರೇ ಒಂದು ರೂಪ ಕೊಡಬೇಕು. ಪ್ರಕಾರ ಯಾವುದೇ ಇರಲಿ, ಸರಿಯಾದ ಒಂದು ತಾತ್ವಿಕತೆ ಹೊಂದಿರಬೇಕು ಅಂತ. ❖

ಮಾತಿಲ್ಲದ ಭಾವಗಳ ಮೇಳ ಕುಚೇಲ ವೃತ್ತ

• ಕೋಡಿಬೆಟ್ಟು ರಾಜಲಕ್ಷ್ಮಿ



ಕೃಷ್ಣ-ಸುದಾಮರ ಭೇಟಿಯ ಕ್ಷಣವನ್ನು ಆನಂದಿಸುತ್ತಿರುವ ರುಕ್ಮಿಣಿ

ಚಿತ್ರಗಳು: ಪ್ರಸನ್ನ ಅಡ್ಯನಡ್ಕ

ಸಭಾಂಗಣ ಕಿಕ್ಕಿರಿದು ತುಂಬಿತ್ತು. ಕೃಷ್ಣ ಮತ್ತು ಸುದಾಮರ ಭೇಟಿಯನ್ನು ನೋಡುವ ಕಾತರದಿಂದ. ‘ಕುಚೇಲ ವೃತ್ತ’ ಕಥಕಳಿ ಪ್ರಸಂಗದ ನಿರೀಕ್ಷೆಯಲ್ಲಿದ್ದ ಸಭಿಕರ ಮುಂದೆ, ವೇದಿಕೆಯಲ್ಲಿ ವಿನೀತ ಭಾವದೊಂದಿಗೆ ಒಡ್ಡೋಲಗವಾದುದು ಕುಚೇಲ ಅಥವಾ ಸುದಾಮ. ಪತ್ನಿಯಿಂದ ಬೀಳ್ಕೊಂಡು ಬಂದಿರುವ ಆತ, ತಾನು ಸಾಗಿಬಂದ ದಾರಿಯನ್ನು ನೆನಪಿಸಿಕೊಳ್ಳುತ್ತ, ತನ್ನ ಬಾಲ್ಯದ ಸಹಪಾಠಿ ಶ್ರೀಕೃಷ್ಣನು ದ್ವಾರಕೆಯ ಅರಮನೆಯಲ್ಲಿ ತನ್ನನ್ನು ಹೇಗೆ ಬರಮಾಡಿಕೊಳ್ಳಬಹುದು ಎಂಬ ಅಳುಕಿನೊಂದಿಗೆ ಪ್ರೇಕ್ಷಕರ ಮುಂದೆ ತೆರೆದುಕೊಳ್ಳುತ್ತಾನೆ. ಪ್ರಸಂಗಕ್ಕೆ ಸುದಾಮನದ್ದೇ ಒಡ್ಡೋಲಗ.

ಸುಮಾರು ಒಂದೂವರೆ ಗಂಟೆಯ ಪುಟ್ಟ ಪ್ರಸಂಗವಾಗಿರುವುದರಿಂದ, ಶ್ರೀಕೃಷ್ಣನನ್ನು ಭೇಟಿಯಾಗುವಂತೆ ಪ್ರೋತ್ಸಾಹಿಸುವ ಸುದಾಮನ ಪತ್ನಿಯ ಉಲ್ಲೇಖ ಇಲ್ಲ. ದ್ವಾರಕೆಯಲ್ಲಿ ರುಕ್ಮಿಣಿಯೊಂದಿಗೆ ಸಲ್ಲಾಪದಲ್ಲಿ ತೊಡಗಿದ್ದ ಕೃಷ್ಣನಿಗೆ, ತನ್ನ ಗೆಳೆಯ ಸುದಾಮನ ಆಗಮನದ ಅರಿವು ಆಗುತ್ತಿದ್ದಂತೆಯೇ, ಇಡೀ ರಂಗವೇ ಸಂಚಲನಗೊಳ್ಳುವಂತೆ ಸಂಭ್ರಮಿಸುತ್ತಾನೆ. ತನ್ನ ಬಾಲ್ಯ ಸ್ನೇಹಿತನ ಸ್ವಾಗತಕ್ಕೆ ಧಿಗ್ಗನೆದ್ದು ಸಿದ್ಧನಾಗುವ ಕೃಷ್ಣ, ‘ಅರೆ ನನ್ನ ಸ್ನೇಹಿತ ಬರುತ್ತಾನೆ... ಬೇಗ ಬಾರೇ ರುಕ್ಮಿಣೀ... ಸ್ವಾಗತಕ್ಕೆ ಎಲ್ಲ ಸಜ್ಜುಮಾಡಿಕೊ’ ಎಂಬ ಅವನ ಗಡಿಬಿಡಿಯೇ ಪ್ರೇಕ್ಷಕರಲ್ಲೂ ಸಂಭ್ರಮವನ್ನು ಹುಟ್ಟಿಸುತ್ತದೆ. ಕೋಟ್ಟಕ್ಕಲ್ ಉಣ್ಣಿಕೃಷ್ಣನ್ ಕೃಷ್ಣನಾಗಿ, ಸಭಿಕರೆಲ್ಲರೂ ಪಾಲ್ಗೊಳ್ಳುವಂತಹ ವಾತಾವರಣವನ್ನು ಸೃಷ್ಟಿಸಿ ಸಶಕ್ತವಾಗಿ ಅಭಿನಯಿಸಿದ್ದಾರೆ. ನಿಧಾನಗತಿಯನ್ನು ಪ್ರಧಾನವಾಗಿ ಹೊತ್ತ ಈ ಪ್ರದರ್ಶನ, ಕಥಾ ಸಂದರ್ಭ ಮತ್ತು ಭಾವಗಳನ್ನು ಪ್ರೇಕ್ಷಕರನ್ನು ಆವರಿಸುವಂತೆ ಮಾಡುವ ಕಥಕಳಿಯ ವಿಶಿಷ್ಟ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ.

ಆನಂದತುಂದಿಲನಾದ ಕೃಷ್ಣನು ವೇದಿಕೆಯಿಂದ ಇಳಿದು ಬಂದು ಸುದಾಮನಿಗೆ ನಮಿಸಿ ಆಲಿಂಗಿಸುವ ಕ್ಷಣವು, ಪ್ರದರ್ಶನದ ಜೀವಂತತೆಯನ್ನು ಹೆಚ್ಚಿಸುತ್ತದೆ. ‘ನೀವೆಲ್ಲ ಯಾಕೆ ಕುಳಿತೇ ಇದ್ದೀರಿ... ನನ್ನ ಸ್ನೇಹಿತ ಬಂದಿರುವ, ಅವನನ್ನು ಬರಮಾಡಿಕೊಳ್ಳಿ’ ಎಂದು ಅಭಿನಯಿಸುತ್ತ, ಸಭಿಕರ ಕೈಗೆ ಹೂದಳಗಳನ್ನು ಹಂಚಿ ಸುದಾಮನ ಮೇಲೆ ಹೂವಿನ ಮಳೆಗರೆಯಿಸುವುದು, ಪ್ರೇಕ್ಷಕರನ್ನು ಕಥೆಯೊಳಗೆ ಸೆಳೆಯುವ ಪರಿಣಾಮಕಾರಿ ಪ್ರಯತ್ನ. ವಾದ್ಯವಾಲಗದೊಂದಿಗೆ ಸುದಾಮನನ್ನು ಬರಮಾಡಿಕೊಂಡು, ಅರ್ಘ್ಯಪಾದ್ಯಗಳೊಂದಿಗೆ ಪಾದಪೂಜೆ ಮಾಡುವ ದೃಶ್ಯ, ಸ್ನೇಹದ ಆತಿಥ್ಯದ ಶ್ರೇಷ್ಠತೆಯನ್ನು ದೃಢಪಡಿಸುತ್ತದೆ.

ವಿನೀತ ಭಾವಕ್ಕೆ ರೂಪಕವಾಗಿರುವ ಸುದಾಮನ ಪಾತ್ರಧಾರಿಯ ಅಭಿನಯ ಗಮನ ಸೆಳೆಯುತ್ತದೆ. ಅರಮನೆಯ ವೈಭೋಗವನ್ನು ಕಂಡು ಮತ್ತಷ್ಟು ಮುದುಡಿಕೊಳ್ಳುವ ಅವನ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಹಿಡಿದಿಡಲಾಗಿದೆ. ಅದನ್ನು ತಿಳಿಗೊಳಿಸಲು ಕೃಷ್ಣ ಮತ್ತು ರುಕ್ಮಿಣಿಯರು ಉಲ್ಲಾಸಭರಿತವಾಗಿ ಮಾಡುವ ಪ್ರಯತ್ನಗಳು ಸನ್ನಿವೇಶಕ್ಕೆ ಜೀವ ತುಂಬುತ್ತವೆ. ಕೃಷ್ಣನ ಆತಿಥ್ಯದಿಂದ ಮುದುರಿಕೊಳ್ಳುವ ಸುದಾಮ, ತಾನು ತಂದಿದ್ದ ಅವಲಕ್ಕಿಯನ್ನು ಕಂಕುಳಲ್ಲಿ ಮರೆಯಾಗಿ ಇಟ್ಟುಕೊಳ್ಳುವ ಕ್ಷಣ, ಪಾತ್ರದ ಸಂಕೋಚವನ್ನು ಸ್ಪಷ್ಟಪಡಿಸುತ್ತದೆ. ಆದರೆ, ಕೃಷ್ಣನು ಬಾಲ್ಯದ ನೆನಪುಗಳನ್ನು ಒಂದೊಂದಾಗಿ ಮೆಲುಕು ಹಾಕುವಾಗ, ಸುದಾಮನೂ ಆ ಭಿಡೆಯನ್ನು ಬಿಟ್ಟು ಬಾಲ್ಯದ ಗುಂಗಿಗೆ ಜಾರಿಬಿಡುತ್ತಾನೆ.



ಕೃಷ್ಣ-ರುಕ್ಮಿಣಿ ಸಲ್ಲಾಪ

ಗುರುಕುಲದ ದಿನಗಳು, ಕಣ್ಣಾಮುಚ್ಚೆ ಆಟ, ಕಟ್ಟಿಗೆಗೆಂದು ಕಾಡಿಗೆ ತೆರಳಿದ ಕ್ಷಣಗಳು, ಮರವೇರಿ ಮಂಗಾಟವಾಡಿದ ನೆನಪುಗಳು, ಪಾಠದಲ್ಲಿ ಉದಾಸೀನತೆ ತೋರಿದ ಕಾರಣ ಗುರುಗಳಿಂದ ಬೈಸಿಕೊಂಡ ಸಂದರ್ಭಗಳು ಜೀವಂತವಾಗುತ್ತವೆ. ವಾಚಿಕವಿಲ್ಲದೆ, ಹಿಮ್ಮೇಳ ಮತ್ತು ‘ಹಸ್ತದೀಪಿಕಾ’ ಲಕ್ಷಣಾಧಾರಿತ ಮುದ್ರೆಗಳ ಮೂಲಕ ಕಥೆಯನ್ನು ಕಟ್ಟಿಕೊಡುವ ಕಥಕಳಿಯ ಅಂತರಂಗ, ಇಂತಹ ಸನ್ನಿವೇಶಗಳಲ್ಲಿ ಸ್ಪಷ್ಟವಾಗಿ ಅನಾವರಣಗೊಳ್ಳುತ್ತದೆ. ಕೃಷ್ಣ ಮತ್ತು ಸುದಾಮರಿಬ್ಬರ ಅಭಿನಯವೂ ಸಭಿಕರನ್ನು ತಮ್ಮದೇ ಬಾಲ್ಯದ ನೆನಪುಗಳಿಗೆ ಕರೆದೊಯ್ಯುವಷ್ಟು ಸಮರ್ಥವಾಗಿದೆ.

ಸಂಸ್ಕೃತ ಮತ್ತು ಮಲಯಾಳಂ ಮಿಶ್ರಿತ ಮಣಿಪ್ರವಾಳ ಭಾಷೆಯ ಹಿಮ್ಮೇಳದ ಹಾಡುಗಳು, ಈ ಭಾವಗುಂಗನ್ನು ಭದ್ರವಾಗಿ ಹಿಡಿದಿಡುವಲ್ಲಿ ಯಶಸ್ವಿಯಾಗಿವೆ. ‘ಮದುವೆಯಾಯಿತೇ ನಿನಗೆ, ನನ್ನ ಕರೆಯಲಿಲ್ಲವೇಕೆ?’ ಎಂದು ಛೇಡಿಸುವ ಕೃಷ್ಣ, ಸ್ನೇಹಿತನನ್ನು ಹಾಸ್ಯಭರಿತವಾಗಿ ಪೀಡಿಸುತ್ತಾನೆ. ಕೊನೆಗೆ, ಮರೆಮಾಡಿ ಇಟ್ಟಿದ್ದ ಅವಲಕ್ಕಿಯ ಪೊಟ್ಟಣವನ್ನು ತೆಗೆದುಕೊಂಡು ಗಡಿಬಿಡಿಯಿಂದ ಒಂದು ತುತ್ತು ತಿನ್ನುವ ಕ್ಷಣ, ಸ್ನೇಹದ ನಿಜಸ್ವರೂಪವನ್ನು ತೋರಿಸುತ್ತದೆ. ಮಾಸಲು ಬಟ್ಟೆಯಲ್ಲಿ ಕಟ್ಟಿದ, ಕಲ್ಲುಮಣ್ಣಿನ ಹಂಗಿಲ್ಲದ ಅವಲಕ್ಕಿಯ ಮಹಿಮೆ ಪ್ರೀತಿಯಲ್ಲದೆ ಮತ್ತೇನು?

ಆದರೆ ಎರಡನೇ ತುತ್ತನ್ನು ಬಾಯಿಗಿಡುವಷ್ಟರಲ್ಲಿ ಧಾವಿಸಿ ಬರುವ ರುಕ್ಮಿಣಿ, ತನ್ನ ಪತಿಯನ್ನು ತಡೆಯುವ ಕ್ಷಣವು ಸನ್ನಿವೇಶಕ್ಕೆ ಅಚ್ಚರಿಯ ತಿರುವು ನೀಡುತ್ತದೆ. ‘ಒಂದು ತುತ್ತು ಸೇವಿಸಿದ ಕೂಡಲೇ ಸುದಾಮನು ಶ್ರೀಮಂತನಾಗಿದ್ದಾನೆ ಸ್ವಾಮೀ; ಇನ್ನೊಂದು ತುತ್ತು ಸೇವಿಸಿದರೆ ಅವನು ಇನ್ನಷ್ಟು ಸಿರಿವಂತನಾಗಬಹುದು... ನಾನು ಅವನ ಪತ್ನಿಯ ದಾಸಿಯಾಗಿಬಿಡುವೆನೇನೋ’ ಎನ್ನುವ ಆಕೆಯ ಆತಂಕ, ದೃಶ್ಯಕ್ಕೆ ಹೊಸ ಆಯಾಮ ನೀಡುತ್ತದೆ. ಕಲಾಮಂಡಲಂ ಸ್ವರಚಾಂದ್ ರುಕ್ಮಿಣಿಯಾಗಿ ಮುದ್ದಾದ ಮುಖಭಾವದೊಂದಿಗೆ ಅಭಿನಯಿಸಿದರೂ, ಈ ಸನ್ನಿವೇಶದ ಭಾವಪ್ರಸರಣ ಸಭಿಕರಿಗೆ ತಲುಪಲು ಕೊಂಚ ಸಮಯ ತೆಗೆದುಕೊಂಡಂತಾಯಿತು.

ರುಕ್ಮಿಣಿಯ ಆತಂಕದ ನಡುವೆ ಕೃಷ್ಣನ ಮುಖದಲ್ಲಿ ಮೂಡುವ ಕಿಂಚಿತ್ ನಗು, ಮತ್ತೊಂದೆಡೆ ಮೌನವಾಗಿರುವ ಸುದಾಮನ ಮನಸ್ಸಿನ ಕುಗ್ಗುವಿಕೆ ಇವೆಲ್ಲವೂ ಕಣ್ಣುಗಳ ಚಲನೆ ಮತ್ತು ಮುಖಭಾವಗಳಲ್ಲಿ ಸ್ಪಷ್ಟವಾಗುತ್ತವೆ. ಈ ವಿಲಂಬಿತ, ಮೃದುವಾದ ಸನ್ನಿವೇಶವು ಪ್ರೇಕ್ಷಕರ ಕಣ್ಣಂಚು ಒದ್ದೆಯಾಗುವಂತೆ ಮಾಡುತ್ತದೆ. ಪತ್ನಿಯನ್ನು ಸಮಾಧಾನಪಡಿಸುವ ಕೃಷ್ಣ, ಮಡದಿಗೂ ಅವಲಕ್ಕಿ ನೀಡುವ ಮೂಲಕ ವಾತಾವರಣವನ್ನು ತಿಳಿಗೊಳಿಸುತ್ತಾನೆ. ಅಷ್ಟರಲ್ಲಿ ಹೊರಟು ನಿಲ್ಲುವ ಸುದಾಮನನ್ನು, ‘ದ್ರೌಪದಿಯು ಕೊಟ್ಟ ಒಂದಗುಳು ಅನ್ನ ನನ್ನ ಸಂಪ್ರೀತಿಗೊಳಿಸಿತು; ನಂತರ ನೀನು ತಂದಿರುವ ಅವಲಕ್ಕಿಯೇ ನನ್ನ ತಣಿಸಿದೆ ಸುದಾಮ’ ಎಂದು ಹೇಳಿ ಆಲಂಗಿಸುವ ಕೃಷ್ಣ, ದೀರ್ಘಕಾಲದ ಬಳಿಕ ಭೇಟಿಯಾದ ಗೆಳೆಯನನ್ನು ಮನಸ್ಸಿಲ್ಲದ ಮನಸ್ಸಿನಿಂದ ಬೀಳ್ಕೊಡುವ ದೃಶ್ಯ, ಸ್ನೇಹದ ತೀವ್ರತೆಯನ್ನು ಮಿಡಿಯಿಸುತ್ತದೆ.

ದ್ವಾರಕೆಯಲ್ಲಿ ಕೃಷ್ಣ-ಸುದಾಮರ ಭೇಟಿಯ ಕಥೆಯನ್ನು ಮನಮುಟ್ಟುವಂತೆ ಪ್ರಸ್ತುತಪಡಿಸಿದ ಈ ತಂಡ, ಪ್ರೇಕ್ಷಕರ ಗಮನವನ್ನು ಕೊನೆಯವರೆಗೂ ಹಿಡಿದಿಟ್ಟುಕೊಳ್ಳುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಯಿತು. ಕೋಟ್ಟಕಲ್ ಸುನೀಲ್ ಸುದಾಮನಾಗಿ, ಬಡತನದ ದೈನ್ಯ ಮತ್ತು ಕೃಷ್ಣನ ಮೇಲಿನ ಭಕ್ತಿಯನ್ನು ಸಮರ್ಥವಾಗಿ ಅಭಿವ್ಯಕ್ತಿಸಿದರು. ನಾಟ್ಯರತ್ನಂ ಕಣ್ಣನ್ ಪಾಟಾಳಿ ಸ್ಮಾರಕ ಕಥಕಳಿ ಟ್ರಸ್ಟ್ ಈ ‘ಕುಚೇಲ ವೃತ್ತಂ’ ಅನ್ನು ಕಾಸರಗೋಡಿನ ಯಡನೀರುಮಠದ ಭಾರತೀಕಲಾಸದನದಲ್ಲಿ, ಕರ್ನಾಟಕ ಕರಾವಳಿ ನೃತ್ಯಕಲಾ ಪರಿಷತ್ ವತಿಯಿಂದ ನಡೆದ ಭರತಮುನಿ ಜಯಂತಿಯ ಅಂಗವಾಗಿ ಪ್ರಸ್ತುತಪಡಿಸಿತು. ❖

ಯಕ್ಷಕೌಶಿಕನ...

10ನೇ ಪುಟದಿಂದ..

ಅವರು ನಿರ್ವಹಿಸಿದ ಕೌರವ ಪಾತ್ರ ವಿಶೇಷ ಖ್ಯಾತಿ ಪಡೆದಿತ್ತು. ಪಾತ್ರದ ಆಳವನ್ನು ಅರಿಯಲು ರನ್ನನ ‘ಗದಾಯುದ್ಧ’ವನ್ನು ಓದುತ್ತಿದ್ದರು. ಅಭಿನಯ ದರ್ಪಣ, ನಾಟ್ಯಶಾಸ್ತ್ರಗಳನ್ನು ಅಧ್ಯಯನ ಮಾಡಿ ತಮ್ಮ ಕಲೆಯನ್ನು ಗಾಢಗೊಳಿಸಿದರು. ಕಾವ್ಯಾಭ್ಯಾಸ, ಪುರಾಣಜ್ಞಾನದಿಂದ ಅವರ ಭಾಷಾ ಅಭಿವ್ಯಕ್ತಿ ಪ್ರೌಢವಾಗಿತ್ತು.


ಋಷಿವೇಷದಿಂದ ಬಣ್ಣದ ವೇಷದವರೆಗೆ ಎಲ್ಲ ರೀತಿಯ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದ ಅವರು, ಪ್ರಧಾನ ಪಾತ್ರಗಳಷ್ಟೇ ಅಲ್ಲದೆ, ಸಣ್ಣ ಪಾತ್ರಗಳನ್ನೂ ನಿರ್ವಹಿಸಿ ಪ್ರಸಂಗದ ಒಟ್ಟಂದವನ್ನು ಹೆಚ್ಚಿಸಲು ಆಸರೆಯಾಗುತ್ತಿದ್ದರುಇ. ಮೇಳದ ನಿರ್ವಹಣೆಯಲ್ಲೂ, ಪ್ರಸಂಗದ ಸಂಕಷ್ಟ ಕ್ಷಣಗಳಲ್ಲೂ ಆಪತ್ತನ್ನು ನಿಭಾಯಿಸುವ ವಿಶ್ವಾಸಾರ್ಹ ವ್ಯಕ್ತಿ.

ಹಣಕಾಸಿನ ಕೊರತೆ ಇದ್ದರೂ, ಪತ್ನಿ ಸಾವಿತ್ರಿ ಮತ್ತು ಮೂವರು ಮಕ್ಕಳೊಂದಿಗೆ ಅವರ ಕುಟುಂಬ ಜೀವನ ಪ್ರೀತಿಯಿಂದ ಕೂಡಿತ್ತು. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಸಂಪಾಜೆ ಯಕ್ಷೋತ್ಸವ ಪ್ರಶಸ್ತಿ, ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ ಸೇರಿದಂತೆ ಅನೇಕ ಗೌರವಗಳು ಅವರನ್ನು ಅಲಂಕರಿಸಿವೆ.

ನಾಲ್ಕು ತಲೆಮಾರುಗಳ ವೃತ್ತಿಪರ ಮತ್ತು ಹವ್ಯಾಸಿ ಕಲಾವಿದರೊಂದಿಗೆ ಬೆರೆತು ಕುಣಿದ ಅವರು, ಕಲಾರಸಿಕರನ್ನು ರೂಪಿಸಿ, ರಸಾನುಭವದಲ್ಲಿ ಮೀಯಿಸಿದ ಅದ್ಭುತ ಕಲಾವಿದ. ಅವರ ವೇಷದಂತೆ ಯಕ್ಷಗಾನದ ಗಾಂಭೀರ್ಯ ಮತ್ತು ಔನ್ನತ್ಯದ ಸಂಕೇತವಾಗಿ ಭಾರತೀಯ ಪಾರಂಪರಿಕ ರಂಗಭೂಮಿಯಲ್ಲಿ ಶ್ರೇಷ್ಠ ಕಲಾವಿದರ ಸಾಲಿನಲ್ಲಿ ಗೋವಿಂದ ಭಟ್ಟರು ನಿತ್ಯಸ್ಮರಣೀಯರಾಗಿಯೇ ಉಳಿಯುವವರು. ❖

ಮೊದಲ ಓದು

ಭೂ ಸುಧಾರಣೆಯ ಪಲ್ಲಟಗಳ ದಾಖಲೆ



ಭೂಮಿಗೀತ
ಲೇ: ನಾ.ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ
ಸಂ: 9448110034

ಸ್ವಾತಂತ್ರ್ಯಪೂರ್ವದ ಗ್ರಾಮೀಣ ಭಾರತದ ಚಿತ್ರಣವನ್ನು ಸರಳಗನ್ನಡದಲ್ಲಿ ಕಟ್ಟಿಕೊಡಲಾಗಿದೆ. ಭೂ ಸುಧಾರಣೆ ಕಾಯ್ದೆ ಬರುವ ಮೊದಲು ಗೇಣಿದಾರರು, ಜಮೀನ್ದಾರರ ನಡುವಿನ ಸಂಬಂಧ, ಬಾಂಧವ್ಯ, ಶೋಷಣೆಯೂ ಸ್ವೀಕಾರ್ಹವಾಗಿದ್ದ ಆ ಕಾಲದ ಧೋರಣೆ ಎಲ್ಲವನ್ನೂ ಎರಡು ಮೂರು ಬಂಟರ ಮನೆತನ ಮತ್ತು ಅವರೊಂದಿಗೆ ಶ್ರಮಿಸುವ ಒಕ್ಕಲಿನವರ ಕಥೆಯಲ್ಲಿ ನಿರೂಪಿಸಲಾಗಿದೆ.


ಗೇಣಿದಾರರ ಭಾಷೆ, ಜಮೀನ್ದಾರರ ಆದೇಶಗಳು ಆ ಕಾಲದ ಕತೆಗಳನ್ನು ಹೇಳುವಂತೆಯೇ ಸಾಂಸ್ಕೃತಿಕ ಚರಿತ್ರೆಯ ದಾಖಲೀಕರಣವೂ ಆಗಿದೆ. ಭೂ ಸುಧಾರಣೆ ಯುಗದಲ್ಲಿ ಆಗುವ ಬದಲಾವಣೆಗಳು, ಒಕ್ಕಲುತನದಲ್ಲಿ ಹುಟ್ಟಿಸುವ ಗೊಂದಲ ಮತ್ತು ಸ್ವಾತಂತ್ರ್ಯ ಎರಡರ ಸಂಘರ್ಷಗಳು ಮಾನವೀಯ ನೆಲೆಯಲ್ಲಿ ನಿರೂಪಣೆಯಾಗುತ್ತ ಬರುತ್ತದೆ.

ಈ ಕಾಲದಲ್ಲಿ ಇಂಥ ಉಚ್ಚನೀಚಗಳೆಂಬ ತರತಮಗಳಿಲ್ಲದಿದ್ದರೂ, ಅವು ಅದ್ಹೇಗೆ ನಮ್ಮಲ್ಲಿ ಬೇರೂರಿವೆ ಎಂಬ ಸೂಕ್ಷ್ಮಗಳು ಇಲ್ಲಿಯ ಕಥನದಿಂದ ಅರಿವಾಗುತ್ತ ಬರುತ್ತದೆ. ಕೆಲವೊಮ್ಮೆ ಓದುಗನೂ ತನ್ನಲ್ಲಿರುವ ಸಣ್ಣತನಗಳೊಂದಿಗೆ ಗುರುತಿಸಬಹುದು. ನಮ್ಮ ಸುತ್ತಲೂ ಇರುವ ಜನರಲ್ಲಿ ಈಗಲೂ ಮರೆಯಾಗದ ಪಾಳೇಗಾರಿಕೆಯ ಮನೋಭಾವದ ಮೂಲ ಯಾವುದು ಎಂಬುದೂ ಅರಿವಿಗೆ ಬರುತ್ತದೆ.

ಸುದೀರ್ಘ ಕಾದಂಬರಿ ಎನಿಸಿದರೂ ಓದಿಸಿಕೊಳ್ಳುವ ಶೈಲಿ ಇರುವುದರಿಂದ ಮುಗಿಸಿಕೊಳ್ಳುತ್ತದೆ. ಕಾದಂಬರಿಯಲ್ಲಿ ಬರುವ ಒಂದೊಂದು ಪಾತ್ರಗಳೂ ಒಂದೊಂದು ಗುಣವನ್ನೇ ಪ್ರತಿನಿಧಿಸುವುದರಿಂದ, ಓದುತ್ತ ಹೋದಂತೆ ಕೃತಿಯೊಂದು ಓದುಗರಲ್ಲಿಯೂ ಬದಲಾವಣೆ ತರುವತ್ತ, ಸುಧಾರಿಸುವಲ್ಲಿ ವಹಿಸುವ ಪಾತ್ರದ ಅರಿವಾಗುತ್ತದೆ. ಭೂ ಸುಧಾರಣೆಯ ಹಿಂದೆ ಮತ್ತು ನಂತರದ ಯುಗದ ದಾಖಲೆಯಂತಿದೆ ಈ ಕೃತಿ.

ಪುಟ: 328 ₹450

ದೇಶಕ್ಕಾಗಿ ಹುತಾತ್ಮರಾದ ಮುಸ್ಲಿಂ ಯೋಧರ ಪರಿಚಯ



ಭಾರತೀಯ ಮುಸ್ಲಿಂ ವೀರಯೋಧರ ವೀರಗಾಥೆಗಳು
ಲೇ: ಎಸ್. ಗುರುಮೂರ್ತಿ
ಪ್ರ: ಶ್ರೀ ಭವತಾರಿಣಿ
ಸಂ: 9972032475


ನಮ್ಮದು ಸರ್ವಧರ್ಮ ಸಮನ್ವಯ ಹೊಂದಿರುವ ರಾಷ್ಟ್ರ. ಹೀಗಾಗಿ ದೇಶ ಸೇವೆಯಲ್ಲಿ, ರಾಷ್ಟ್ರ ರಕ್ಷಣೆಯಲ್ಲಿ ಎಲ್ಲ ಧರ್ಮದವರ ಕೊಡುಗೆಯೂ ಇದೆ ಎಂಬುದನ್ನು ನೆನಪಿಸಿಕೊಳ್ಳಲೇಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ. ಅದಕ್ಕೆ ಪೂರಕ ಎಂಬಂತಿದೆ ‘ಭಾರತೀಯ ಮುಸ್ಲಿಂ ವೀರಯೋಧರ ವೀರಗಾಥೆಗಳು’ ಕೃತಿ. ಶೀರ್ಷಿಕೆಯೇ ಹೇಳುವಂತೆ ಸೇನೆಯಲ್ಲಿ ಮುಸ್ಲಿಂ ಯೋಧರ ಕೊಡುಗೆಗಳನ್ನು ಸ್ಮರಿಸುತ್ತದೆ. ಸ್ವತಂತ್ರಪೂರ್ವದಿಂದ ಹಿಡಿದು ಇತ್ತೀಚಿನ ಆಪರೇಷನ್ ಸಿಂಧೂರದವರೆಗಿನ ರಾಷ್ಟ್ರ ರಕ್ಷಣೆಯ ಹೋರಾಟ, ಯುದ್ಧಗಳಲ್ಲಿ ಹುತಾತ್ಮರಾದ ಅನೇಕ ಮುಸ್ಲಿಂ ಯೋಧರ ಕಿರು ಪರಿಚಯ ಇಲ್ಲಿದೆ.

ಕೃತಿಯಲ್ಲಿ ಒಟ್ಟು ಎಂಟು ಅಧ್ಯಾಯಗಳಿವೆ. ಈಸ್ಟ್ ಇಂಡಿಯಾ ಕಂಪನಿ ಉದಯ, ಪ್ಲಾಸಿ ಕದನದಲ್ಲಿ ದೇಶಕ್ಕಾಗಿ ಹೋರಾಡಿದ ಮೀರ್ ಮದನ್ ಖಾನ್, ಮೀರ್ ಜಾಫರ್‌ನ ರಾಜದ್ರೋಹ ಮುಂತಾದ ವಿಷಯಗಳು ಮೊದಲ ಅಧ್ಯಾಯದಲ್ಲಿವೆ. ಹೈದರ್ ಅಲಿ ಖಾನ್, ಟಿಪ್ಪು ಸುಲ್ತಾನ್ ಕುರಿತಾದ ವಿವರಗಳು, ಅವರ ಆಳ್ವಿಕೆಯಲ್ಲಿ ನಡೆದ ಬ್ರಿಟಿಷರ ವಿರುದ್ಧದ ಯುದ್ಧಗಳ ಮಾಹಿತಿ ದ್ವಿತೀಯ ಅಧ್ಯಾಯದಲ್ಲಿದೆ. 1857ರ ಸಿಪಾಯಿ ದಂಗೆ ಮತ್ತು ಅದರಲ್ಲಿ ಹೋರಾಡಿದ ಮುಸ್ಲಿಂ ದೊರೆಗಳ ಚಿತ್ರಣ ಮೂರನೆ ಅಧ್ಯಾಯದಲ್ಲಿ ಸಿಗುತ್ತದೆ.

ಬಹದ್ದೂರ್ ಕ್ರಾಂತಿಕಾರಿ ಮೌಲ್ವಿ ಅಹಮದುಲ್ಲಾ ಷಾ, ಭಕ್ತ ಖಾನ್ ರೋಹಿಲ್ಲಾರಿಂದ ಹಿಡಿದು ಕಳೆದ ವರ್ಷ ಕಾಶ್ಮೀರದಲ್ಲಿ ಹುತಾತ್ಮನಾದ ಬಿಎಸ್‌ಎಫ್ ಯೋಧ ಮೊಹಮ್ಮದ್ ಇಮ್ತಿಯಾಜ್ ಅವರವರೆಗೆ ಸಾಕಷ್ಟು ಮುಸ್ಲಿಂ ಯೋಧರ ಪರಿಚಯ ಮುಂದಿನ ಅಧ್ಯಾಯಗಳಲ್ಲಿ ಆಗುತ್ತದೆ. ‘ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಸ್ಲಿಂ ಮಹಿಳೆಯರ ಸಾಹಸಗಾಥೆಗಳು’ ಅಧ್ಯಾಯ ಝಾನ್ಸಿಯ ಮಂದರ್‌ನಿಂದ ಹಿಡಿದು ಅನೇಕ ವೀರ ಮಹಿಳೆಯರ ಕುರಿತು ಮಾಹಿತಿ ನೀಡುತ್ತದೆ. ಸರಳ ಭಾಷೆ, ಸಂಕ್ಷಿಪ್ತ ಮಾಹಿತಿಯಿಂದಾಗಿ ಕೃತಿಯು ಓದಿಗೆ ಸುಲಭವಾಗಿದೆ. ಅಪರೂಪದ ಛಾಯಾಚಿತ್ರಗಳು ಕೃತಿಯ ಅಂದವನ್ನು ಹೆಚ್ಚಿಸಿವೆ.

ಪುಟ: 236 ₹799

ನಿರ್ಭಿಡೆಯ, ದಿಟ್ಟ ಆತ್ಮಕಥನ



ಬದುಕೆಂಬ ಮಾಯೆ– ಚದುರಿದ ನೆನಪುಗಳು
ಲೇ: ಪ್ರೊ. ಸುಕನ್ಯಾ ಮಾರುತಿ
ಪ್ರ: ಸಪ್ನ ಬುಕ್ ಹೌಸ್
ಸಂ: 080–40114455

ಈ ಕೃತಿ ಪ್ರೊ.ಸುಕನ್ಯಾ ಮಾರುತಿ ಅವರ ಆತ್ಮಕಥನ. ಇಲ್ಲಿ ಅವರ ಬದುಕಿನ ಚದುರಿದ ನೆನಪುಗಳ ಚಿತ್ರಣವಿದೆ. ತಮ್ಮ ಆತ್ಮಕಥನದಲ್ಲಿ ಕ್ರಮಬದ್ಧತೆಯ ಸಿದ್ಧಚೌಕಟ್ಟನ್ನು ಮುರಿದಿರುವ ಲೇಖಕಿ, ನೆನಪಿನ ಲಹರಿ ಹರಿದ ದಿಕ್ಕಿಗೆ ತಕ್ಕಂತೆ ತಮ್ಮ ಬದುಕು, ಹೋರಾಟದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ದೇವದಾಸಿಯ ಮಗಳು ಎಂಬ ಹಣೆಪಟ್ಟಿಯನ್ನು ಬದುಕಿನುದ್ದಕ್ಕೂ ಹೊತ್ತುಕೊಂಡೇ ಸಾಗುವ ಲೇಖಕಿ, ಅದನ್ನು ತಮ್ಮ ಉನ್ನತ ಶಿಕ್ಷಣ, ನೌಕರಿ ಪಡೆಯುವ ಮೂಲಕ ಮೀರುವ ಬಗೆ ಕೃತಿಯಲ್ಲಿ ನಿರೂಪಿತವಾಗಿದೆ. ಇವಳೇ ತನ್ನ ಮಗಳು ಎಂದು, ಇವರೇ ತನ್ನ ಹೆತ್ತಪ್ಪ ಎಂದು ಸಮಾಜದ ಎದುರಿಗೆ ಹೇಳಿಕೊಳ್ಳಲಾಗದ ಅಪ್ಪ–ಮಗಳ ಬಾಂಧವ್ಯದ ಚಿತ್ರಣ ಮನ ಕರಗುವಂಥದ್ದು. ಒಂದೆಡೆ ಹೆತ್ತಪ್ಪನ ಮದುವೆಗೆ ಸಾಕ್ಷಿಯಾಗುವ, ಮತ್ತೊಂದೆಡೆ ಮುಗ್ಧತೆಯೇ ಮೈವೆತ್ತ ಹೆತ್ತವ್ವನ ಸಂಕಟಕ್ಕೂ ಮಿಡಿಯುವ ಮಗಳಾಗುವ ಲೇಖಕಿ ಬದುಕಿನುದ್ದಕ್ಕೂ ನಡೆಸುವ ಹೋರಾಟ ಇಲ್ಲಿದೆ.

ತಮ್ಮ ವೈವಾಹಿಕ ಬದುಕು ಹಳಿ ತಪ್ಪಿದಾಗ ಲೇಖಕಿ ಅದನ್ನು ಏಕಾಂಗಿಯಾಗಿ, ದಿಟ್ಟತನದಿಂದ ಎದುರಿಸುವ ರೀತಿ ಬೆರಗುಗೊಳಿಸುವಂಥದ್ದು. ಶಾಲೆಯಲ್ಲಿ ಮೇಷ್ಟ್ರುಗಳ ‘ಬೆರಕಿ ಸಂತಾನ’ ಎಂಬ ಹೀಯಾಳಿಕೆಯನ್ನೂ ಮೀರಿ ಪ್ರಾಧ್ಯಾಪಕಿಯಾದರೂ, ಉದ್ಯೋಗದ ಸ್ಥಳದಲ್ಲಿ ಸಹೋದ್ಯೋಗಿಗಳ ಕಾಟವನ್ನು ಲೇಖಕಿ ಎದುರಿಸಬೇಕಾಗುತ್ತದೆ. ಆಗಲೂ ಎದೆಗುಂದದೇ ಧೈರ್ಯವಾಗಿ ಎದುರಿಸಿ, ಸತ್ಯದ ಹಾದಿಯಲ್ಲಿ ಸಾಗಿ, ಸಮಾಜದಲ್ಲಿ ತಮ್ಮ ಹೆಗ್ಗುರುತನ್ನು ಮೂಡಿಸುವ ಸುಕನ್ಯಾ ಅವರ ಬದುಕು ಇತರರಿಗೆ ಮಾದರಿಯಾಗುವಂಥದ್ದು.

ಬಂಡಾಯ ಸಾಹಿತ್ಯ ಘಟ್ಟದ ಮುಂಚೂಣಿ ಹೋರಾಟಗಾರ್ತಿ, ಕವಯತ್ರಿಯಾಗಿರುವ ಸುಕನ್ಯಾ ಅವರ ಬದುಕಿನ ಮುಚ್ಚಿಟ್ಟ ಪುಟಗಳು ಈ ಆತ್ಮಕಥನದಲ್ಲಿವೆ. ವೈಯಕ್ತಿಕ ಬದುಕಿನ ಜತೆಗೆ ಆಯಾ ಕಾಲಘಟ್ಟದ ಹೋರಾಟ, ಚಳವಳಿ, ಅಪರೂಪದ ಸ್ನೇಹವಲಯವೂ ಇಲ್ಲಿದೆ. ವೈಯಕ್ತಿಕ ಬದುಕಿನ ಹೋರಾಟ ಇನ್ನೇನು ಮುಗಿಯಿತು ಅನ್ನುವಷ್ಟರಲ್ಲಿ ಧುತ್ತನೆ ಎದುರಾಗುವ ಕ್ಯಾನ್ಸರ್ ಅನ್ನೂ ಜಯಿಸಿ ಮತ್ತೆ ಜೀವನ್ಮುಖಿಯಾಗುವ ಲೇಖಕಿ, ಹೆಣ್ಣಿನ ಜೀವನಪ್ರೀತಿಯ ದ್ಯೋತಕವಾಗಿದ್ದಾರೆ. ದೇವದಾಸಿಯರ ಮಕ್ಕಳಿಗೆ ಈ ಆತ್ಮಕಥನ ಕೈದೀವಿಗೆಯಂತಿದೆ. ಕನ್ನಡ ಸಾಹಿತ್ಯದಲ್ಲಿ ಇದುವರೆಗೆ ಬಂದಿರುವ ಮಹಿಳಾ ಆತ್ಮಕಥನದ ಸಿದ್ಧ ಮಾದರಿಯನ್ನು ಮೀರುವ ವಿಶಿಷ್ಟ ಕೃತಿ ಇದಾಗಿದೆ.

ಪುಟ: 164 ₹180

ಹಿಮದ ಯಾನ ತಾಳ್ಮೆಯ ಗಾನ



ಝುಂಡೀ ಟಾಪ್‌ನಿಂದ ಕಾಣುವ ಪರ್ವತಗಳು

ಪ್ರವಾಸ

• ಚಿತ್ರ–ಬರಹ: ಜಿ.ನಾಗೇಂದ್ರ ಕಾವೂರು

ಹಿಮದ ಮೇಲೆ ಮೊದಲ ಹೆಜ್ಜೆ ಇಡುವಾಗ, ಅದು ಕೇವಲ ಹೆಜ್ಜೆಯಲ್ಲ; ಅದು ಪ್ರಕೃತಿಯ ಶ್ವೇತ ಲೋಕದೊಳಗೆ ಪ್ರವೇಶಿಸುವ ಮೌನ ಆಹ್ವಾನ. ಉತ್ತರಾಖಂಡದ ಚಮೋಲಿ ಜಿಲ್ಲೆಯ ಗರ್ವಾಲ್ ಹಿಮಾಲಯ ಮಡಿಲಿನಲ್ಲಿ ಮಲಗಿರುವ ಬ್ರಹ್ಮತಾಲ್ ಚಳಿಗಾಲದಲ್ಲಿ ಒಂದು ಮಂತ್ರಮುಗ್ಧ ಲೋಕವಾಗಿ ರೂಪಾಂತರಗೊಳ್ಳುತ್ತದೆ. ಹಿಮದ ಹೊದಿಕೆಯಡಿ ಮೌನವಾಗಿರುವ ಸರೋವರ, ಕಂಗೊಳಿಸುವ ಶಿಖರಗಳು, ಉಸಿರನ್ನೇ ಗಟ್ಟಿಗೊಳಿಸುವ ಚಳಿ... ಇವೆಲ್ಲವೂ ಒಂದೇ ವೇದಿಕೆಯಲ್ಲಿ ನಿಂತು ಸಾಹಸಿಗರನ್ನು ಕರೆಯುತ್ತವೆ.

ರೂಪ್‌ಕುಂಡ್, ಆಲಿ ಬುಗ್ಯಾಲ್, ಬೇದಿನಿ ಬುಗ್ಯಾಲ್ ಮೊದಲಾದ ಚಾರಣಗಳ ಬೇಸ್‌ಕ್ಯಾಂಪ್ ಎಂದು ಪರಿಚಿತವಾದ ಲೋಹಾಜಂಗ್– ಸಮುದ್ರಮಟ್ಟದಿಂದ 7,650 ಅಡಿ ಎತ್ತರದಲ್ಲಿದೆ. ಈ ಪುಟ್ಟಹಳ್ಳಿಯು ನಮ್ಮ ಯಾನಕ್ಕೆ ಚಾಲನೆ ನೀಡಿತು. ಹಿಮ ಶಿಖರಗಳ ನೆರಳಿನಲ್ಲಿ ನೆಲೆಸಿರುವ ಈ ಹಳ್ಳಿ, ಸಾಹಸಕ್ಕೆ ಮುನ್ನುಡಿಯಂತೆ ತೋರುತ್ತದೆ.

ಮೊದಲ ದಿನ: ಹಿಮದ ಹಾಸಿಗೆಯ ದಾರಿ

ಲೋಹಾಜಂಗ್‌ನಿಂದ ಬೇಕಲ್ತಾಲ್ ಕಡೆಗಿನ ಆರು ಕಿಲೋಮೀಟರ್ ಏರುಹಾದಿ ದಟ್ಟ ಓಕ್, ಫರ್, ಸಿಡಾರ್ ಮರಗಳ ನಡುವೆ ಸಾಗುತ್ತದೆ. ಮೊದಲ ಎರಡು ಕಿಲೋಮೀಟರ್ ಕಚ್ಚಾ ದಾರಿಯು ನಿಧಾನವಾಗಿ ಹಿಮದ ಹಾಸಿಗೆಯಾಗಿ ಮಾರ್ಪಡುತ್ತದೆ. ಹಿಮದಲ್ಲಿ ಮೊದಲ ಬಾರಿಗೆ ಹೆಜ್ಜೆ ಇಡುವವರ ಮುಖದಲ್ಲಿ ಮಗುವಿನಂಥ ಆನಂದ. ಹೆಜ್ಜೆ ಗುರುತುಗಳ ಮೇಲೆ ಹೆಜ್ಜೆ ಇಡುವ ಹೊಸ ಅನುಭವ.

ಐದು ಗಂಟೆಗಳ ಬಳಿಕ ಬೇಕಲ್ತಾಲ್ ಸರೋವರದ ತೀರದಲ್ಲಿದ್ದ ಶಿಬಿರ ತಲುಪುವಷ್ಟರಲ್ಲಿ ಸಂಜೆಯ ಮಸುಕಿನ ಬೆಳಕು ಆವರಿಸಿತ್ತು. ಹಿಮವನ್ನು ಅಗೆದು ಮಣ್ಣಿನ ಮೇಲೆ ಟೆಂಟ್‌ಗಳನ್ನು ಸ್ಥಾಪಿಸಿರುವ ದೃಶ್ಯ–ಪ್ರಕೃತಿಯೊಂದಿಗೆ ಸಂಧಾನ ಮಾಡಿಕೊಂಡ ಮನುಷ್ಯನ ಸಂಕೇತದಂತೆ ಕಂಡಿತು. ಹೆಪ್ಪುಗಟ್ಟಿದ ಸರೋವರ, ಸುತ್ತಲೂ ನಿಂತ ಓಕ್ ಮರಗಳು, ಮತ್ತು ದೂರದಲ್ಲಿ ಕರಗುತ್ತಿದ್ದ ಸೂರ್ಯ, ಆ ರಾತ್ರಿ ಸ್ಲೀಪಿಂಗ್ ಬ್ಯಾಗ್‌ನ ಉಷ್ಣತೆಗೂ ಮೀರಿದ ನೆನಪುಗಳನ್ನು ಕೊಟ್ಟವು.

2ನೇ ದಿನ: ಝುಂಡೀ ಟಾಪ್ ದಾಟಿ

ಬೆಳಿಗ್ಗೆ ಚಳಿ ಇನ್ನಷ್ಟು ತೀವ್ರವಾಗಿತ್ತು. ಝುಂಡೀ ಟಾಪ್ ಮೂಲಕ ಬ್ರಹ್ಮತಾಲ್‌ನತ್ತ ಐದು ಕಿಲೋಮೀಟರ್ ಸಂಪೂರ್ಣ ಏರುಹಾದಿ. ಗಟ್ಟಿಯಾದ ಹಿಮದ ಮೇಲೆ ಎಚ್ಚರ ತಪ್ಪಿದರೆ ಜಾರುವ ಸಾಧ್ಯತೆ. ಮುಂದೆ ಸಾಗುವವರ ಹೆಜ್ಜೆ ಗುರುತುಗಳಲ್ಲಿ ನಮ್ಮ ಹೆಜ್ಜೆಗಳು–ಅದು ಕೇವಲ ಸುರಕ್ಷತೆಗಾಗಿ ಅಲ್ಲ, ತಂಡದ ಆತ್ಮೀಯತೆಯ ಸಂಕೇತವೂ ಆಗಿತ್ತು.

ಎರಡು ಕಿಲೋಮೀಟರ್ ಬಳಿಕ ವಿಶಾಲ ಹಿಮ



ಚಾರಣದ ಹಾದಿಯಲ್ಲಿ...

ಮೈದಾನ ತೆರೆದುಕೊಂಡಿತು. ಅಲ್ಲಿ ನಿಂತ ಪುಟ್ಟ ಗುಡಿ ಮತ್ತು ಎತ್ತರದ ತ್ರಿಶೂಲದ ನೆರಳಿನಲ್ಲಿ, ದೂರದಲ್ಲಿ ಮಿನುಗುತ್ತಿದ್ದ ತ್ರಿಶೂಲ್ ಮತ್ತು ನಂದಾಘುಂಟಿ ಶಿಖರಗಳು ಮನಸ್ಸನ್ನು ಸೆಳೆದವು. ಸ್ವಲ್ಪ ಹೊತ್ತು ಹಿಮದಲ್ಲಿ ಆಟವಾಡಿದ ನಂತರ, ಹಾದಿ ನಿಧಾನವಾಗಿ ಇಳಿಜಾರಾಗಿ, ಹೊಂಡದಂತೆ ಕಾಣುತ್ತಿದ್ದ ಬ್ರಹ್ಮಸರೋವರ ಹತ್ತಿರವಾಗತೊಡಗಿತು.

ಹಿಮ ಕರಗಿ ಗಟ್ಟಿಯಾದ ಕಲ್ಲಿನಂತೆ ಜಾರುತ್ತಿದ್ದ ನೆಲದ ಮೇಲೆ ಜಾಗ್ರತೆಯಿಂದ ನಡೆದು ಸರೋವರ ತಲುಪಿದೆವು. ಪರ್ವತಗಳಿಂದ ಹರಿದು ಬಂದ ನೀರು ಹಿಮದ ಪ್ರತಿಮೆಯಾಗಿ ಹೆಪ್ಪುಗಟ್ಟಿತ್ತು. ಕೆಲವರು ಅದರ ಮೇಲೆಯೇ ನಡೆದು ಆ ಕ್ಷಣವನ್ನು ತಮ್ಮದಾಗಿಸಿಕೊಂಡರು. ಸರೋವರದ ಸಮೀಪದ ಬ್ರಹ್ಮದೇವರ ಗುಡಿಯಲ್ಲಿ ನಮಸ್ಕರಿಸಿ, ಶಿಬಿರಕ್ಕೆ ಮರಳಿದೆವು. ಮರುದಿನ ಬೆಳಿಗ್ಗೆ ಮೂರು ಗಂಟೆಗೆ ಸಮಿಟ್ ಯಾನವಿತ್ತು–ಅದಕ್ಕಾಗಿ ಬೇಗನೆ ನಿದ್ರೆಗೆ ಜಾರಿದೆವು.

ಮೂರನೇ ದಿನ: ಹಿಮಯಾನ

ಡಿಸೆಂಬರ್ ಚಳಿಯಲ್ಲಿ ರಾತ್ರಿ ಉಷ್ಣಾಂಶ ಮೈನಸ್ 8 ಡಿಗ್ರಿಯವರೆಗೂ ಇಳಿಯುತ್ತದೆ. ಬೆಳಿಗ್ಗೆ ಮೂರು ಗಂಟೆಗೆ ಎದ್ದು, ಹೆಡ್‌ಲೈಟ್ ಬೆಳಕಿನಲ್ಲಿ ಮೈಕ್ರೋಸ್ಪೈಕ್ಸ್ ಧರಿಸಿ, ಸಮಿಟ್ ಕಡೆಗೆ ಹೆಜ್ಜೆ ಇಟ್ಟೆವು. ನಾಲ್ಕು ಕಿಲೋಮೀಟರ್ ಕಡಿದಾದ ಏರುಹಾದಿ–ಮೌನ, ಕತ್ತಲೆ, ಉಸಿರಿನ ಶಬ್ದ ಮತ್ತು ಹಿಮದ ಮೇಲೆ ಒರೆಯುವ ಶೂಗಳ ಸದ್ದು ಮಾತ್ರ.

ಎತ್ತರದ ಕಾರಣದಿಂದ ಕೆಲವರಿಗೆ ತಲೆನೋವು. ಆದರೂ ಹೆಜ್ಜೆಗಳು ನಿಲ್ಲಲಿಲ್ಲ. ಬೆಳಕು ನಿಧಾನವಾಗಿ ಹರಿಯತೊಡಗಿದಾಗ, ನಾವು 12,250 ಅಡಿ ಎತ್ತರದ ಸಮತಟ್ಟಾದ ಶಿಖರ ತಲುಪಿದ್ದೆವು.

ಎದುರಿಗೆ 180 ಡಿಗ್ರಿ ವೀಕ್ಷಣೆಯಲ್ಲಿ ಮಿನುಗುತ್ತಿದ್ದ ಶಿಖರಗಳು–ನೀಲಕಂಠ, ಚೌಖಂಬಾ, ಕಾಮೆಟ್, ಹಥಿ-ಘೋಡಾ, ಬೆಥಾರ್ಟೋಳಿ–ಹಿಮದ ಹೊದಿಕೆಯಲ್ಲೇ ನಿಂತಿದ್ದವು. ಕೆಳಭಾಗದಲ್ಲಿ ಶಿವಾಲಿಕ್ ಶ್ರೇಣಿಗಳು ಮಸುಕಾಗಿ ಗೋಚರಿಸುತ್ತಿದ್ದವು.

ಬೆಳಿಗ್ಗೆ 7.15ಕ್ಕೆ ಹೊಸ ವರ್ಷದ ಮೊದಲ ಸೂರ್ಯೋದಯ. ಸೂರ್ಯನ ಕಿರಣಗಳು ಹಿಮದ ಮೇಲೆ ಬೀಳುತ್ತಿದ್ದಂತೆ, ಪರ್ವತಗಳು ಗುಲಾಬಿ, ಕಿತ್ತಳೆ, ಬಂಗಾರದ ಬಣ್ಣಗಳಲ್ಲಿ ಕಂಗೊಳಿಸಿದವು. ‘ಅಲ್ಪೆನ್‌ಗ್ಲೋ’ ಎಂದು ಕರೆಯುವ ಆ ಅಪರೂಪದ ಕ್ಷಣ ಕೇವಲ ಐದು–ಹತ್ತು ನಿಮಿಷ ಮಾತ್ರ. ಆದರೆ ಆ ಐದು ನಿಮಿಷಗಳು ಕಾಲದ ಮಿತಿಯನ್ನು ಮೀರಿ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತವೆ.

ಆ ಕ್ಷಣದಲ್ಲಿ ಪರ್ವತಗಳು ದೂರದಲ್ಲಿರಲಿಲ್ಲ; ಅವು ನಮ್ಮ ಕೈಗೆ ಸಿಗುವಷ್ಟು ಹತ್ತಿರವಿದ್ದಂತೆ ಅನಿಸಿತು. ಹೊಸ ವರ್ಷದ ಶುಭಾಶಯಗಳು ಹಿಮದ ಗಾಳಿಯಲ್ಲಿ ತೇಲುತ್ತಿದ್ದವು.

ಹಿಮದ ಪಾಠ

ಬ್ರಹ್ಮತಾಲ್ ಕೇವಲ ಚಾರಣವಲ್ಲ. ಅದು ತಾಳ್ಮೆಯ ಪಾಠ. ತಂಡದ ಮೇಲೆ ನಂಬಿಕೆಯ ಪಾಠ. ಪ್ರಕೃತಿಯ ಮಹತ್ವದ ಎದುರು ನಮ್ಮ ಅಲ್ಪತೆಯನ್ನು ಅರಿಯುವ ಪಾಠ. ಹಿಮದ ಮೌನದಲ್ಲಿ ನಮ್ಮೊಳಗಿನ ಶಬ್ದಗಳು ಸ್ಪಷ್ಟವಾಗುತ್ತವೆ.

ಝುಂಡೀ ಟಾಪ್ ಮೂಲಕ ಬೇಗಮ್ ಟೋಕ್ ಶಿಬಿರ ತಲುಪಿ, ನಂತರ ಲೋಹಾಜಂಗ್‌ಗೆ ಮರಳುವಷ್ಟರಲ್ಲಿ ಮನಸ್ಸಿನಲ್ಲಿ ಉಳಿದದ್ದು–ಹಿಮದ ಮೇಲೆ ಮೂಡಿದ ಹೆಜ್ಜೆ ಗುರುತುಗಳಲ್ಲ, ಹೃದಯದಲ್ಲಿ ಮೂಡಿದ ಅನುಭವಗಳ ಗುರುತುಗಳು.

ಋಷಿಕೇಶ್, ಡೆಹ್ರಾಡೂನ್ ಮೂಲಕ ಲೋಹಾಜಂಗ್ ತಲುಪಬಹುದು. ಡಿಸೆಂಬರ್‌ನಿಂದ ಫೆಬ್ರುವರಿವರೆಗೆ ಚಳಿಗಾಲದ ಚಾರಣಕ್ಕೆ ಸೂಕ್ತ ಸಮಯ. ಆದರೆ ಯಾವ ತಿಂಗಳಲ್ಲಿ ಹೋದರೂ, ಬ್ರಹ್ಮತಾಲ್ ತನ್ನ ಶ್ವೇತ ಮೌನದಿಂದ ನಿಮಗೆ ಹೊಸದೊಂದು ಒಳಯಾನವನ್ನು ಉಡುಗೊರೆಯಾಗಿ ನೀಡುತ್ತದೆ.

ಹಿಮ ಕರಗಬಹುದು. ಆದರೆ ಆ ಪ್ರಭಾತ–ಆ ಹೊಸ ವರ್ಷದ ಮೊದಲ ಬೆಳಕು–ಎಂದಿಗೂ ಕರಗದು. ❖



ಬ್ರಹ್ಮತಾಲ್ ಸರೋವರ

ಮಂಡ್ಯದ ಮಣ್ಣು...

10ನೇ ಪುಟದಿಂದ...

ಆದರೆ ಭಾರತದಲ್ಲಿ ಒಂದು ದೇಶ, ಒಂದೇ ರೀತಿಯ ಪಿಚ್ ಎಂಬುದು ಯಾವ ಕಾಲಕ್ಕೂ ಸಾಧ್ಯವಿಲ್ಲದ ಮಾತು. ಅದಕ್ಕಾಗಿಯೇ ಇಲ್ಲಿಯ ಕ್ರಿಕೆಟ್ ಮತ್ತು ಕ್ರಿಕೆಟಿಗರ ಶೈಲಿ ಮತ್ತು ಆಟದ ಗಮ್ಮತ್ತು ಬೇರೆಯೇ ಆಗಿದೆ’ ಎಂದು ಉತ್ತರ ಪ್ರದೇಶ ಕ್ರಿಕೆಟ್ ಸಂಸ್ಥೆಯ ಪಿಚ್ ಕ್ಯೂರೇಟರ್ ಶಿವಕುಮಾರ್ ಈ ಹಿಂದೆ ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದರು.

ಕರ್ನಾಟಕದಲ್ಲಿಯೂ ಅಷ್ಟೇ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಮತ್ತು ಹುಬ್ಬಳ್ಳಿಯ ರಾಜನಗರ ಕ್ರೀಡಾಂಗಣದ ಪಿಚ್ ಮಧ್ಯೆ ವ್ಯತ್ಯಾಸವಿದೆ. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಕರ್ನಾಟಕ ಮತ್ತು ಜಮ್ಮು–ಕಾಶ್ಮೀರ ನಡುವಣ ರಣಜಿ ಟ್ರೋಫಿ ಫೈನಲ್ ನಡೆದಿತ್ತು. ಆ ಪಂದ್ಯದಲ್ಲಿ ವೇಗದ ಬೌಲರ್‌ಗಳು ಮಿಂಚಿದ್ದರು. ಕೆಂಪು ಮಣ್ಣಿನ ಪಿಚ್‌ನಲ್ಲಿ ಕಾಶ್ಮೀರದ ಬ್ಯಾಟರ್‌ಗಳೂ ರನ್‌ಗಳ ಹೊಳೆ ಹರಿಸಿದ್ದರು. ಅಂದಹಾಗೆ, ಹುಬ್ಬಳ್ಳಿಯ ಪಿಚ್ ಮಾಡಲು ಕಲಘಟಗಿ ತಾಲ್ಲೂಕಿನ ಕೆರೆಯೊಂದರಲ್ಲಿ ಸಿಕ್ಕ ಮಣ್ಣನ್ನು ಬಳಸಲಾಗಿತ್ತು. ಉತ್ತರ ಕರ್ನಾಟಕದಲ್ಲಿ ಕೆಲವು ಊರುಗಳಲ್ಲಿ ಕ್ರಿಕೆಟ್ ಪಿಚ್‌ಗೆ ಯೋಗ್ಯವಾದ ಮಣ್ಣು ಸಿಗುತ್ತಿದೆ.

‘ಮಣ್ಣಿನ ಗುಣಮಟ್ಟ ನಿರ್ಧರಿಸಲು ಪಿಎನ್‌ಜಿ ಪ್ರಯೋಗಾಲಯಕ್ಕೆ ಕಳಿಸಬೇಕು. ಆದರೆ ಯಾವುದೇ ಗ್ರಾಮದಿಂದ ಮಣ್ಣು ತೆಗೆದುಕೊಳ್ಳುವುದು ತುಂಬಾ ಸವಾಲಿನ ಕೆಲಸ. ಗ್ರಾಮ ಪಂಚಾಯಿತಿ ಮತ್ತು ಗ್ರಾಮಸ್ಥರ ಅನುಮತಿ ಬೇಕೇಬೇಕು. ಈ ಪ್ರಕ್ರಿಯೆಯು ತುಂಬಾ ಸಮಯ ತೆಗೆದುಕೊಳ್ಳುತ್ತದೆ’ ಎಂದು ಪಿಚ್ ನಿರ್ಮಾಣದಲ್ಲಿ ಅನುಭವ ಇರುವ ಅಧಿಕಾರಿಯೊಬ್ಬರು ಹೇಳುತ್ತಾರೆ.

ಎಲ್ಲ ಸವಾಲುಗಳನ್ನು ದಾಟಿ ಬಂದ ನಂತರ ಪಿಚ್ ರೂಪ ಪಡೆಯುವ ಮಣ್ಣಿನಲ್ಲಿ ದಿಗ್ಗಜ ಆಟಗಾರರು ಬೆಳೆದಿದ್ದಾರೆ. ಅವರಲ್ಲಿ ಬಹಳಷ್ಟು ಜನರು ತಾವು ಆಡಿದ ಪಿಚ್‌ನೊಂದಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದ್ದಾರೆ. ಸಚಿನ್ ತೆಂಡೂಲ್ಕರ್ 2013ರಲ್ಲಿ ವಾಂಖೆಡೆ ಕ್ರೀಡಾಂಗಣದಲ್ಲಿ ತಮ್ಮ ವೃತ್ತಿಜೀವನದ ಕೊನೆ ಟೆಸ್ಟ್ ಆಡಿದಾಗ ಪಿಚ್‌ಗೆ ನಮಸ್ಕರಿಸಿ ಭಾವುಕರಾಗಿದ್ದರು. 22 ಯಾರ್ಡ್ಸ್‌ನಲ್ಲಿ ತಾವು ಕಳೆದ 24 ವರ್ಷಗಳನ್ನು ಮೆಲುಕು ಹಾಕಿದ್ದರು. ಎರಡು ವರ್ಷದ ಹಿಂದೆ ವೆಸ್ಟ್ ಇಂಡೀಸ್‌ನ ಬಾರ್ಬಡೋಸ್‌ನಲ್ಲಿ ಟಿ20 ವಿಶ್ವಕಪ್ ಗೆದ್ದ ಖುಷಿಯಲ್ಲಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಪಿಚ್‌ನ ಮಣ್ಣನ್ನು ಸವಿದಿದ್ದರು. ಇತ್ತೀಚೆಗೆ ಅಹಮದಾಬಾದಿನಲ್ಲಿ ಟಿ20 ವಿಶ್ವಕಪ್ ಜಯಿಸಿದಾಗ ನಾಯಕರಾಗಿದ್ದ ಸೂರ್ಯಕುಮಾರ್ ಯಾದವ್ ಪಿಚ್ ಮಣ್ಣನ್ನು ಹಣೆಗೆ ಹಚ್ಚಿಕೊಂಡು ಕೈಮುಗಿದಿದ್ದರು. ಇಂತಹ ಹಲವು ಭಾವುಕ ಕ್ಷಣಗಳು ಕ್ರಿಕೆಟ್ ಇತಿಹಾಸದ ಪುಸ್ತಕದಲ್ಲಿ ದಾಖಲಾಗಿವೆ.

ಕ್ರಿಕೆಟ್ ಆಟ ಬದಲಾಗುತ್ತಿದೆ. ಹೊಸ ಮಾದರಿಗಳು ಬರುತ್ತಿವೆ. ಆದರೆ ಒಂದು ಸಂಗತಿ ಮಾತ್ರ ಬದಲಾಗುವುದಿಲ್ಲ; ಅದು ಮಣ್ಣಿನ ನಂಟು.

ಒಂದು ಹಳ್ಳಿಯಲ್ಲಿ ನಾಲ್ವರು ಚಹಾ ಕುಡಿಯುತ್ತಾ ಕ್ರಿಕೆಟ್ ಬಗ್ಗೆ ಮಾತನಾಡಿದರೂ ಮಾತು ಕೊನೆಗೆ ಪಿಚ್ ಮೇಲೇ ಬಂದು ನಿಂತೇ ಬಿಡುತ್ತದೆ:

‘ಪಿಚ್ ಕೈ ಕೊಟ್ಟಿತ್ತಪ್ಪಾ...’
‘ಸ್ಪಿನ್‌ಗೆ ಸೂಕ್ತವಾಗಿತ್ತು...’
‘ಪಿಚ್ಚೇ ಸರಿಯಿರ್ಲಿಲ್ಲ...’

ಈ ಮಾತುಗಳಲ್ಲೇ ಪಿಚ್‌ನ ಮಹತ್ವ ಅಡಗಿದೆ. ಹಾಗೆಯೇ ಅದೇ ಮಣ್ಣಿನಲ್ಲಿ ಕನಸುಗಳ ಬೀಜ ಬಿತ್ತಿದ ಆಟಗಾರರು ಕ್ರಿಕೆಟ್ ಇತಿಹಾಸ ಬರೆಯುತ್ತಿದ್ದಾರೆ. ❖



ಕೋಲ್ಕತ್ತದ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ರಣಜಿ ಟ್ರೋಫಿ ಗೆದ್ದ ಬಳಿಕ ಪಿಚ್‌ಗೆ ಮುತ್ತಿಟ್ಟ ಪಶ್ಚಿಮ ಬಂಗಾಳ ಕ್ರಿಕೆಟ್ ತಂಡದ ನಾಯಕ ಮನೋಜ್ ತಿವಾರಿ –ಸಂಗ್ರಹ ಚಿತ್ರ

ಪಿಚ್‌ಗಳ ವೈವಿಧ್ಯಗಳು

100ರಿಂದ 150 ಕಿ.ಮೀ ವೇಗದಲ್ಲಿ ಸಾಗಿಬರುವ ಗಟ್ಟಿ ಚೆಂಡಿಗೆ ಮೈಯೊಡ್ಡಿ ನಿಂತು ಆಡುವ ಜಗತ್ತಿನ ಏಕೈಕ ಆಟವೆಂದರೆ ಕ್ರಿಕೆಟ್. ಬ್ಯಾಟರ್‌ಗಳ ರಕ್ಷಣೆಯ ಜೊತೆಗೆ ಬೌಲರ್‌ಗಳಿಗೂ ತಕ್ಕ ಯಶಸ್ಸು ಸಿಗುವಂತಾಗಬೇಕು.

ಅದಕ್ಕಾಗಿ ಆಯಾ ಊರಿನ ಹವಾಗುಣ ಮತ್ತು ನೆಲದ ಗುಣಕ್ಕೆ ತಕ್ಕಂತೆ ಪಿಚ್‌ಗಳು ಸಿದ್ಧವಾಗುತ್ತವೆ. ಮೊದಲಿನಿಂದಲೂ ನಾಲ್ಕು ಬಗೆಯ ಪಿಚ್‌ಗಳು ಬಳಕೆಯಲ್ಲಿವೆ.

ಹಸಿರು ಪಿಚ್‌ಗಳ ಮೇಲ್ಮೈನಲ್ಲಿ ಹುಲ್ಲಿನ ಪುಟ್ಟ ಗರಿಕೆಗಳು ಇರುತ್ತವೆ. ತೇವಾಂಶವು ಹೆಚ್ಚಿರುತ್ತದೆ. ಆದ್ದರಿಂದ ವೇಗದ ಬೌಲರ್‌ಗಳಿಗೆ ನೆರವು ಸಿಗುತ್ತದೆ. ಚೆಂಡಿನ ಚಲನೆ, ಸ್ವಿಂಗ್‌ಗೆ ಅನುಕೂಲ. ಏಕಾಗ್ರತೆ ಮತ್ತು ಉತ್ತಮ ಕೌಶಲ ಹೊಂದಿರುವ ಬ್ಯಾಟರ್‌ಗಳು ಇಂತಹ ಪಿಚ್‌ನಲ್ಲಿ ಹೆಚ್ಚು ಯಶಸ್ಸು ಸಾಧಿಸಬಲ್ಲರು.

ಶುಷ್ಕ ಮೇಲ್ಮೈನ ಗಟ್ಟಿಯಾದ ಪಿಚ್‌ಗಳು ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಕಾಣಸಿಗುತ್ತವೆ. ಚೆಂಡು ಹೆಚ್ಚು ಬೌನ್ಸ್ ಮತ್ತು ವೇಗವಾಗಿ ಚಲಿಸುತ್ತದೆ. ಬ್ಯಾಟರ್‌ಗಳಿಗೆ ಇಂತಹ ಪಿಚ್‌ನಲ್ಲಿ ಆಡುವುದು ಕಠಿಣ ಸವಾಲು. ಗಾಯಗೊಳ್ಳುವ ಪ್ರಮಾಣವೂ ಹೆಚ್ಚು.

ದೂಳು ಹಾರುವ ಪಿಚ್‌ಗಳು ಭಾರತದಲ್ಲಿ ಹೆಚ್ಚು. ಇವು ಸ್ಪಿನ್ ಬೌಲರ್‌ಗಳ ಸ್ನೇಹಿಯಾಗಿರುತ್ತವೆ. ಟೆಸ್ಟ್ ಕ್ರಿಕೆಟ್ ಪಂದ್ಯದ ಎರಡು ಅಥವಾ ಮೂರನೇ ದಿನದಿಂದಲೇ ಸ್ಪಿನ್ನರ್‌ಗಳು ವಿಜೃಂಭಿಸಲು ಆರಂಭಿಸುವ ಪಿಚ್‌ಗಳು ಇವು. ತಿರುಗುವ ಚೆಂಡನ್ನು ಎದುರಿಸುವ ಕೌಶಲವಿರುವ ಬ್ಯಾಟರ್‌ಗಳು ಇಲ್ಲಿ ಯಶಸ್ವಿಯಾಗುತ್ತಾರೆ.


ಹೈಬ್ರಿಡ್ ಮತ್ತು ಕೃತಕ ಪಿಚ್‌ಗಳು ಇತ್ತೀಚೆಗೆ ಪ್ರಚಲಿತವಾಗಿವೆ. ಟರ್ಫ್ ಮತ್ತು ಸಿಂಥೆಟಿಕ್ ಫೈಬರ್ ಮ್ಯಾಟ್‌ಗಳನ್ನು ಬಳಸಿ ಸಿದ್ಧಪಡಿಸುವ ಪಿಚ್ ಇದಾಗಿದೆ.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ನಾಯಿ ಗೂಡಿನಲ್ಲಿ ಹುಲಿ!

majakoora@prajavani.co.in



ಮನೆಯೊಂದರ ಮಾಲೀಕ ನಾಯಿಯೊಂದನ್ನು ಸಾಕಿದ್ದ. ಅದು ಬಹಳ ಜೋರಿತ್ತು. ಹಾಗಾಗಿ ಆ ಮಾಲೀಕ ಮನೆಯ ಕಂಪೌಂಡ್‌ಗೆ ‘ನಾಯಿ ಇದೆ ಎಚ್ಚರ’ ಎಂಬ ಫಲಕ ಹಾಕಿದ್ದ. ಒಂದು ರಾತ್ರಿ ಪಕ್ಕದ ಕಾಡಿನಿಂದ ಹುಲಿಯೊಂದು ಆ ಮನೆಗೆ ಬಂತು. ಅಲ್ಲಿ ಹಾಕಿದ್ದ ಫಲಕ ಓದಿ ಅದಕ್ಕೆ ಸಿಟ್ಟು ಬಂತು. ನನಗಿಂತ ಈ ನಾಯಿಗೆ ಹೆದರುತ್ತಾರೆಯೇ ಎಂದು ಯೋಚಿಸಿ ಫಲಕದಲ್ಲಿದ್ದ ನಾಯಿ ಪದ ಅಳಿಸಿ ‘ಹುಲಿ’ ಎಂದು ಬರೆಯಿತು. ಬಳಿಕ ಗೂಡಿನೊಳಗಿದ್ದ ನಾಯಿಯನ್ನು ಹೊರಹಾಕಿ ತಾನು ಗೂಡು ಸೇರಿಕೊಂಡಿತು.

ದಡ್ಡ ಚಕ್ಕು ಕ್ಷೀರ ಸ್ಪ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಪರ	+	ತಡೆ	+	ಭಾ	=	
2	ಕಳಿ	+	ಬಳಿ	+	ದಾ	=	
3	ದಾರ	+	ಕಳಿ	+	ಭೀ	=	
4	ನಗೆ	+	ನತ್ತು	+	ಗೊ	=	
5	ನದಿ	+	ತಳಿ	+	ವಾ	=	

ಶಬ್ದಾಟ

ಇಲ್ಲಿ ಕೊಟ್ಟಿರುವ ಎರಡು ಪದ ಸೇರಿಸಿ ಒಂದೇ ಪದ ಮಾಡಿ.

ಸಂಚಾರ + ವಿಕಿರಣ =

ವರ್ಡ್‌ಗೇಮ್ ಫನ್ನಿ ಕ್ವಶ್ಚನ್

Which is the dangerous city?

Ans:_

ಗಣಿತದಲ್ಲಿ ಗರ್ದಿಗಮ್ಮತ್ತು

ನಮ್ಮೂರ ಶಂಕರಗೌಡರಿಗೆ 3 ಜನ ಗಂಡುಮಕ್ಕಳು. ಅವರು ತುಂಬಾ ಶ್ರೀಮಂತರು. ಸಾಕಷ್ಟು ಜೋಳ ಬೆಳೆದು ಪ್ರತಿವರ್ಷ ತಮ್ಮ 9 ಹಗೇವುಗಳಲ್ಲಿ ಶೇಖರಿಸಿಡುತ್ತಿದ್ದರು. ಆದರೆ ಗೌಡರು ತುಂಬಾ ಲೆಕ್ಕಾಚಾರದ ಮನುಷ್ಯ. ಈಗ ಅವರು 1ನೇ ಹಗೇವಿನಲ್ಲಿ 1 ಚೀಲ, 2ನೇ ಹಗೇವಿನಲ್ಲಿ 2 ಚೀಲ, 3ನೇ ಹಗೇವಿನಲ್ಲಿ 3 ಚೀಲ ಹೀಗೆ 9 ಹಗೇವಿನಲ್ಲಿ 9 ಚೀಲ ಜೋಳ ತುಂಬಿಸಿದ್ದರು. ಗೌಡರು ತೀರಿಕೊಂಡರು. ನಂತರ ಮಕ್ಕಳು ಹಗೇವು ತೆಗೆಯದೇ 9ನೇ ಹಗೇವಿನಲ್ಲಿರುವ ಜೋಳ ಸಮನಾಗಿ ಹಂಚಿಕೊಳ್ಳುತ್ತಾರೆ. ಪ್ರತಿಯೊಬ್ಬರಿಗೂ 3 ಹಗೇವಿನಲ್ಲಿರುವ ಜೋಳ ಸಮನಾಗಿ ಬರಬೇಕು. ನೀವು ಹಂಚಿ ನೋಡೋಣ.

1 ಚೀಲ	2 ಚೀಲ	3 ಚೀಲ
4 ಚೀಲ	5 ಚೀಲ	6 ಚೀಲ
7 ಚೀಲ	8 ಚೀಲ	9 ಚೀಲ

ಜಾಣಪದ ಆಟ ಪದ–ಒಗಟು

ನಾನೊಂದು ಆರು ಅಕ್ಷರಗಳ ಸಂಯುಕ್ತ ಪದ

ನನ್ನ ☐ ☐ ☐ ☐ ☐ ☐

1 + 2 ಅಕ್ಷರ ಸೇರಿಸಿದರೆ	ಮಾಲೆ
1 + 3	ಹುಲಿಯನ್ನು ಹೊಡೆದವ
1 + 4	ರುಚಿ
1 + 6	ಕೂಡ
2 + 1	ದ್ರವ
2 + 4	ಸೂರ್ಯ
2 + 5	ಉಪ್ಪಿಟ್ಟಿನ ನುಚ್ಚು
1 + 5 + 2	ಕುದುರೆ ಹತ್ತುವವ
4 + 2 + 1	ದ್ವೇಷ
4 + 2 + 3	ಅಪರೂಪ
4 + 5 + 6	ಮದುವೆ
5 + 1	ಇರುವಿಕೆ
5 + 2	ಏಳು ದಿನದ ಅವಧಿ

ಆರು ಅಕ್ಷರದ ಆ ಶಬ್ದ ಯಾವುದು ತಿಳಿಯಿತೇ?

ನಾಲಗೆ ತೊಡರು

ಇದನ್ನು 10 ಬಾರಿ ಬೇಗಬೇಗನೇ ಹೇಳಲು ಪ್ರಯತ್ನಿಸಿ...

ಚಿಂಪ್ರಕೆಂಪಗಂಗಮ್ಮ

ಜಾಣಪದ ಆಟ 2

2. ಇಲ್ಲಿ ಕೊಟ್ಟಿರುವ ‘ಹೊಟ್ಟೆ’ ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಹೊ	ಟ್ಟೆ		
2	ಹೊ	ಟ್ಟೆ		
3	ಹೊ	ಟ್ಟೆ		
4	ಹೊ	ಟ್ಟೆ		
5	ಹೊ	ಟ್ಟೆ		

ಅಕ್ಷರ ಪಟ್ಟಿ

ಕ	ಡು	ಚ್ಚು	ಬಾ	ಪಾ
ಕಿ	ರೆ	ರಿ	ಯ	ಹೊ

ಮೋಜಿನ ಇಂಗ್ಲಿಷ್

ಇಲ್ಲಿ ‘ft’ಯಿಂದ ಕೊನೆಗೊಳ್ಳುವ 5 ಪದಗಳನ್ನು ಬರೆಯಿರಿ.

1		ft
2		ft
3		ft
4		ft
5		ft

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಮಾರುತಿಗುಡಿ 2.ಶಬರಿಮಲೆ 3.ಹಾಸನಜಿಲ್ಲೆ 4.ಬಾಡಿದಹೂವು 5.ಜಾಣಹುಡುಗಿ

ಶಬ್ದಾಟ: ಪುನರ್ವಸತಿ

ಬ್ರೇನ್‌ವ್ಹೀಟಾ ಆಟ: 710 = OIL

ವರ್ಡ್‌ಗೇಮ್: WONDER

ಹುಡುಕಾಟ: ನವರಸನಾಯಕ

ಮೋಜಿನ ಇಂಗ್ಲಿಷ್: 1.ANANT 2.ANAND 3.KISHOR 4.PRASAD 5.NITHIN 6.ROHIT 7.VINAYAK 8.SANJAY

ಜಾಣಪದ ಆಟ: 1.ಆತನ 2.ಕೇತನ 3.ಚೇತನ 4.ಜತನ 5.ಪತನ 6.ನೂತನ 7.ವೇತನ 8.ಜತನ 1.ತನಕ 2.ಜನಕ 3.ಬೆನಕ 4.ಕನಕ 5.ನಾನಕ 6.ಪಾನಕ 7.ಕನಕ 8.ಶುನಕ

ಜಾಣಪದ ಆಟ 2: 1.ರಾಜ್ಯಪಾಲ 2.ರಾಜ್ಯಭಾರ 3.ರಾಜ್ಯಶಾಸ್ತ್ರ 4.ರಾಜ್ಯಸಭೆ 5.ರಾಜ್ಯಸೂತ್ರ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...


ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು




ಹಿಮಾಶ್ರೀ ಎಸ್. ಬೆಂಗಳೂರು



ಹರ್ಷವರ್ಧನ್ ಕೆ.ಎಂ. ದಾವಣಗೆರೆ



ಚಿತ್ರಾರ್ಥ್ ಶಿಡ್ಲೆಹಳ್ಳಿ



ಶ್ರೀನಿವಾಸ ಎಸ್. ಬೆಂಗಳೂರು ದಕ್ಷಿಣ



ಸಂಸ್ಕೃತಿ ಎಸ್.ಆರ್. ಮಡಿಕೇರಿ



ಸಂಹಿತ್ ಎಚ್. ಶೆಟ್ಟಿ ಉಡುಪಿ

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹488-740
ದ್ವಿತಳಿ (ಬಿ.ವಿ)	₹335-879

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹215
ಆರ್‌ಎಸ್‌ಎಸ್-5	₹209
ಗುಡ್ ಲಾಟ್	₹190

ಹಾವೇರಿ: ನಿವೇಶನ ಬೆಲೆ ಶೇ 33ರಷ್ಟು ಏರಿಕೆ

ಬೆಂಗಳೂರಿನಾಚೆ ಇರುವ ನಗರಗಳಲ್ಲಿನ ನಿವೇಶನಗಳ ಬೆಲೆಯಲ್ಲಿ ಭಾರಿ ಹೆಚ್ಚಳ: ಕ್ರೆಡಾಯ್

• ಗಂಜಿ ಆದಿಶೇಷ

ಬೆಂಗಳೂರು: ರಾಜ್ಯದ ಪ್ರಮುಖ ಜಿಲ್ಲಾ ಕೇಂದ್ರಗಳ ಪೈಕಿ ಹಾವೇರಿಯಲ್ಲಿ ನಿವೇಶನಗಳ ಬೆಲೆಯು ಕಳೆದ ವರ್ಷದಲ್ಲಿ ಗರಿಷ್ಠ ಪ್ರಮಾಣದ ಏರಿಕೆ ಕಂಡಿದೆ. ಇಲ್ಲಿ ಬೆಲೆಯು ವರ್ಷದ ಅವಧಿಯಲ್ಲಿ ಶೇ 33ರಷ್ಟು ಜಿಗಿದಿದೆ. ಇದೇ ಅವಧಿಯಲ್ಲಿ ರಾಜ್ಯದಲ್ಲಿ ನಿವೇಶನಗಳ ಸರಾಸರಿ ದರವು ಶೇ 15ರಷ್ಟು ಏರಿಕೆಯಾಗಿದೆ.

ಬೆಂಗಳೂರು ನಗರ ಪ್ರದೇಶಕ್ಕಿಂತಲೂ ಇತರ ನಗರಗಳಲ್ಲಿ ನಿವೇಶನಗಳ ಬೆಲೆಯಲ್ಲಿ ಭಾರಿ ಪ್ರಮಾಣದ ಏರಿಕೆ ಆಗಿದೆ.

2024ರಲ್ಲಿ ಹಾವೇರಿಯಲ್ಲಿ ಪ್ರತಿ ಚದರ ಅಡಿ ಜಾಗದ ದರ ಸರಾಸರಿ ಅಂದಾಜು ₹3 ಸಾವಿರ ಇತ್ತು. ಇದು 2025ರಲ್ಲಿ ₹4 ಸಾವಿರಕ್ಕೆ ಏರಿಕೆಯಾಗಿದೆ. ಹಾವೇರಿ ನಂತರದ ಸ್ಥಾನದಲ್ಲಿ ಮಂಡ್ಯ ನಗರ ಇದ್ದು, ಇಲ್ಲಿ ಚದರ ಅಡಿ ನಿವೇಶನದ ಬೆಲೆ ಶೇ 25ರಷ್ಟು ಹೆಚ್ಚಳವಾಗಿದೆ. ಬೆಲೆಯು ₹8 ಸಾವಿರಕ್ಕೆ ತಲುಪಿದೆ ಎಂದು ಕ್ರೆಡಾಯ್ ಸಂಸ್ಥೆ ತಿಳಿಸಿದೆ.

ಬೆಂಗಳೂರು ನಗರದಲ್ಲಿ (ಅಪಾರ್ಟ್‌ಮೆಂಟ್‌ಗಳು) ಚದರ ಅಡಿ ಬೆಲೆ ಶೇ 10ರಷ್ಟು ಏರಿಕೆಯಾಗಿದ್ದು, ಸರಾಸರಿ ₹10 ಸಾವಿರ ಆಗಿದೆ. ಉಡುಪಿಯಲ್ಲಿ ಶೇ 7ರಷ್ಟು ಹೆಚ್ಚಳವಾಗಿದೆ.

'ಜಮೀನಿನ ವೆಚ್ಚ, ಕಟ್ಟಡದ ನಿರ್ಮಾಣ ವೆಚ್ಚ, ಸರ್ಕಾರದ ಶುಲ್ಕಗಳು ಸೇರಿದಂತೆ ವಿವಿಧ ಬೆಲೆಗಳು ಏರಿಕೆ ಕಂಡಿವೆ. ಇವೇ ಮನೆ ಬೆಲೆ ಹೆಚ್ಚಳಕ್ಕೆ ಪ್ರಮುಖ ಕಾರಣಗಳು' ಎಂದು ಕ್ರೆಡಾಯ್‌ನ ಕರ್ನಾಟಕ ಘಟಕದ ಅಧ್ಯಕ್ಷ ಭಾಸ್ಕರ್ ಟಿ. ನಾಗೇಂದ್ರಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

ಇಲ್ಲಿಯವರೆಗೆ ಬೆಂಗಳೂರಿಗೆ ಸೀಮಿತವಾಗಿದ್ದ ಮಾಹಿತಿ ತಂತ್ರಜ್ಞಾನ ವಲಯವೂ ಸೇರಿ ಹಲವಾರು ವಲಯಗಳ ಉದ್ಯಮಗಳು ಈಗ ಬೆಂಗಳೂರಿನಾಚೆಗೆ ಗಮನ ನೀಡಿವೆ. ರಾಜ್ಯದ ಎರಡು ಮತ್ತು ಮೂರನೇ ಹಂತಗಳ ನಗರಗಳಲ್ಲಿ ಮೂಲಸೌಕರ್ಯ ಹೆಚ್ಚಾಗುತ್ತಿವೆ. ಇದು ಕೂಡ ಮನೆಗಳ ದರ ಹೆಚ್ಚಳಕ್ಕೆ ಕಾರಣ ಎಂದು ಹೇಳಿದರು.

ಹುಬ್ಬಳ್ಳಿಯ ಸುತ್ತಲೂ ಅಂದಾಜು 100 ಕಿ.ಮೀ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗಿವೆ. ಅಲ್ಲದೆ, ಬೇಡಿಕೆಗೆ ತಕ್ಕಷ್ಟು ನಿವೇಶನಗಳು ಈ ಭಾಗದಲ್ಲಿ ಲಭ್ಯವಿಲ್ಲ. ಇರುವ ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಉಂಟಾಗಿದೆ. ಹೀಗಾಗಿ ಹಾವೇರಿ, ದಾವಣಗೆರೆ, ಹುಬ್ಬಳ್ಳಿ–ಧಾರವಾಡದ ಸುತ್ತ ನಿವೇಶನ ಬೆಲೆ ಹೆಚ್ಚಳವಾಗಿದೆ ಎಂದು ತಿಳಿಸಿದರು.

ರಾಜ್ಯದ ಪ್ರಮುಖ ನಗರಗಳಲ್ಲಿ ನಿವೇಶನದ ಚದರ ಅಡಿ ಬೆಲೆ ಸರಾಸರಿ (₹ಗಳಲ್ಲಿ)

ನಗರಗಳು	2024	2025	2024-25ರಲ್ಲಿ ಹೆಚ್ಚಳ (%)
ಬೆಂಗಳೂರು ನಗರ*	9,000	10,000	10
ಮೈಸೂರು	6,000	7,000	16
ಮಂಗಳೂರು	5,000	6,000	20
ಹುಬ್ಬಳ್ಳಿ–ಧಾರವಾಡ	5,000	6,000	20
ಬೆಳಗಾವಿ	4,200	4,550	8
ಉಡುಪಿ	4,500	4,800	7
ದಾವಣಗೆರೆ	5,500	6,500	18
ಕಲಬುರಗಿ	4,000	4,500	12.5
ಶಿವಮೊಗ್ಗ	4,500	5,000	11
ಹಾವೇರಿ	3,000	4,000	33
ಮಂಡ್ಯ	6,500	8,000	25

* ಬೆಂಗಳೂರು ನಗರದಲ್ಲಿ ಅಪಾರ್ಟ್‌ಮೆಂಟ್‌ಗಳ ಬೆಲೆಯಲ್ಲಿನ ಏರಿಕೆಯನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ, ಉಳಿದ ನಗರಗಳಲ್ಲಿ ನಿವೇಶನವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ

ಆಧಾರ: ಕ್ರೆಡಾಯ್

'ಸಂಘರ್ಷ: ಇನ್ನಷ್ಟು ಬೆಲೆ ಹೆಚ್ಚಳ ಸಾಧ್ಯತೆ'

'ಕೋವಿಡ್ ಪೂರ್ವಕ್ಕೆ ಹೋಲಿಸಿದರೆ ಬೆಂಗಳೂರಿನಲ್ಲಿ ಮನೆಗಳ ಬೆಲೆಯಲ್ಲಿ ಶೇ 50ರಿಂದ ಶೇ 60ರಷ್ಟು ಹೆಚ್ಚಳವಾಗಿದೆ. ಕಳೆದ ಮೂರು ಆರ್ಥಿಕ ವರ್ಷದಲ್ಲಿ ಮನೆಗಳ ಬೆಲೆಯು ಹೆಚ್ಚು ಏರಿಕೆ ಕಂಡಿತ್ತು. ಆದರೆ, 2024–25ರಲ್ಲಿ ಮನೆ ದರ ಹೆಚ್ಚಳವು ವೇಗ ಕಳೆದುಕೊಂಡಿದ್ದು, ಸರಾಸರಿ ಶೇ 8ರಷ್ಟಾಗಿದೆ' ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಪ್ರಶಾಂತ್ ಠಾಕೂರ್ ಹೇಳಿದರು.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಸಂಘರ್ಷವು ದೇಶದ ರಿಯಲ್ ಎಸ್ಟೇಟ್ ವಲಯದ ಮೇಲೆ ಪರಿಣಾಮ ಬೀರಿದೆ. ಇದರಿಂದ ನಿರ್ಮಾಣ ವೆಚ್ಚವು ಹೆಚ್ಚಳವಾಗಲಿದ್ದು, ಮುಂದಿನ ದಿನಗಳಲ್ಲಿ ಮನೆಗಳ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹24000
ಎಸಿ	₹14150
ಆರ್‌ಪಿ	₹18650
ಆರ್‌ಸಿ	₹9950

ಪಶ್ಚಿಮ ಏಷ್ಯಾ ಬಿಕ್ಕಟ್ಟು: ಪ್ರಧಾನಿ ಮೋದಿ ಹೇಳಿಕೆ

'ರಾಷ್ಟ್ರೀಯ ಹಿತಾಸಕ್ತಿ ರಕ್ಷಣೆಗೆ ಆದ್ಯತೆ'

ನೊಯ್ಡಾ (ಉತ್ತರ ಪ್ರದೇಶ) (ಪಿಟಿಐ): 'ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಹಲವು ಸವಾಲುಗಳನ್ನು ಒಡ್ಡುತ್ತಿದ್ದು, ಭಾರತ ಇವುಗಳನ್ನು ತನ್ನೆಲ್ಲ ಶಕ್ತಿಯೊಂದಿಗೆ ಸಮರ್ಥವಾಗಿ ಎದುರಿಸುತ್ತಿದೆ. ದೇಶದ ಜನರ ಹಿತಾಸಕ್ತಿ ರಕ್ಷಣೆಗೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಇಲ್ಲಿಗೆ ಸಮೀಪದ ಜೆವರ್‌ನಲ್ಲಿ ನೂತನ ನೊಯ್ಡಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿದ ಬಳಿಕ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಸಕ್ತ ಬಿಕ್ಕಟ್ಟನ್ನು ದೇಶದ ಜನರು ಶಾಂತ ಚಿತ್ತ, ತಾಳ್ಮೆ ಹಾಗೂ ಒಗ್ಗಟ್ಟಿನಿಂದ ಎದುರಿಸಬೇಕು. ಇದು ಜಾಗತಿಕ ಬಿಕ್ಕಟ್ಟು ಆಗಿದ್ದರೂ ಭಾರತದ ಹಿತಾಸಕ್ತಿಗಳ ರಕ್ಷಣೆಯೇ ನಮ್ಮ ಆದ್ಯತೆಯಾಗಬೇಕು. ಇದೇ ನಮ್ಮ ದೊಡ್ಡ ಶಕ್ತಿ' ಎಂದು ಮೋದಿ ಹೇಳಿದರು.

'ಪಶ್ಚಿಮ ಏಷ್ಯಾ ಯುದ್ಧದಿಂದಾಗುತ್ತಿರುವ ಪರಿಣಾಮಗಳ ಕುರಿತು ಸಂಸತ್‌ನಲ್ಲಿಯೂ ನಾನು ಚರ್ಚಿಸಿದ್ದೇನೆ. ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೂ ವ್ಯಾಪಕ ಸಮಾಲೋಚನೆ ನಡೆಸಿರುವೆ' ಎಂದ ಅವರು, 'ಇಂತಹ ಸಂಕಷ್ಟದ ಸಮಯದಲ್ಲಿ ರಾಜಕೀಯ ಪಕ್ಷಗಳು, ವಿಶೇಷವಾಗಿ ಉತ್ತರ ಪ್ರದೇಶದಲ್ಲಿನ ಪಕ್ಷಗಳು ಬೇಜವಾಬ್ದಾರಿಯುತ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು' ಎಂದು ಮನವಿ ಮಾಡಿದರು.

'ದೇಶದ 140 ಕೋಟಿ ಜನರು ಒಟ್ಟಾಗಿ ಶ್ರಮಿಸಿದಾಗ 'ವಿಕಸಿತ ಭಾರತ' ಕನಸು ಸಾಕಾರಗೊಳ್ಳಲು ಸಾಧ್ಯ. ದೇಶದ ಜನರು ಒಗ್ಗಟ್ಟಾಗುವುದರಿಂದ ಜಾಗತಿಕ ವಿದ್ಯಮಾನಗಳು ಒಡ್ಡುವ ಸವಾಲುಗಳನ್ನು ಎದುರಿಸಲೂ ಸಾಧ್ಯವಾಗುವುದು' ಎಂದರು.



ಭಾರತವು ಕಚ್ಚಾ ತೈಲ ಹಾಗೂ ನೈಸರ್ಗಿಕ ಅನಿಲಕ್ಕಾಗಿ ಕೊಲ್ಲಿ ರಾಷ್ಟ್ರಗಳನ್ನು ಅವಲಂಬಿಸಿದೆ. ಅಲ್ಲಿನ ಬಿಕ್ಕಟ್ಟಿನಿಂದಾಗಿ ಕಂಡುಬರುತ್ತಿರುವ ಹೊರೆಯನ್ನು ದೇಶದ ಜನರ ಮೇಲೆ ಬೀಳದಂತೆ ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ

ನರೇಂದ್ರ ಮೋದಿ, ಪ್ರಧಾನಿ

ನೂತನ ವಿಮಾನ ನಿಲ್ದಾಣ ಕುರಿತು ಪ್ರಸ್ತಾಪಿಸಿದ ಅವರು, 'ಈ ವಿಮಾನನಿಲ್ದಾಣ ಪೂರ್ಣಪ್ರಮಾಣದಲ್ಲಿ ಕಾರ್ಯಾಚರಣೆ ಆರಂಭಿಸಿದಲ್ಲಿ, ಇಲ್ಲಿಂದ ಪ್ರತಿ ಎರಡು ನಿಮಿಷಕ್ಕೊಂದು ವಿಮಾನ ಟೇಕಾಫ್ ಆಗಲಿದೆ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ವೇಗ ಸಿಗಲಿದ್ದು ರೈತರು, ಸಣ್ಣ ವರ್ತಕರು ಹಾಗೂ ಯುವಕರಿಗೆ ಹೊಸ ಅವಕಾಶಗಳು ಸೃಷ್ಟಿಯಾಗಲಿವೆ' ಎಂದರು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ ನಾಯ್ಡು ಉಪಸ್ಥಿತರಿದ್ದರು.

ದೆಹಲಿಯ 2ನೇ ವಿಮಾನ ನಿಲ್ದಾಣ

ಜೆವರ್ ಬಳಿ ಶನಿವಾರ ಉದ್ಘಾಟನೆಗೊಂಡ ನೊಯ್ಡಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು, ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಸೇವೆ ಒದಗಿಸುವ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿದೆ.

₹11,200 ಕೋಟಿ ವೆಚ್ಚದಲ್ಲಿ ಮೊದಲ ಹಂತದ ಕಾಮಗಾರಿ ಪೂರ್ಣಗೊಳಿಸಲಾಗಿದೆ. ರಸ್ತೆ, ರೈಲ್ವೆ ಹಾಗೂ ಮೆಟ್ರೊ ರೈಲುಗಳಿಂದ ಈ ವಿಮಾನನಿಲ್ದಾಣ ಸಂಪರ್ಕ ಹೊಂದಿದ್ದು, ಬಹುವಿಧದ ಸಾರಿಗೆ ಹಬ್ ಆಗಿ ಇದು ಅಭಿವೃದ್ಧಿಗೊಳ್ಳಲಿದೆ.

ಈ ವಿಮಾನನಿಲ್ದಾಣವು ಆರಂಭಿಕ ಹಂತದಲ್ಲಿ ವರ್ಷಕ್ಕೆ 1.2 ಕೋಟಿ ಪ್ರಯಾಣಿಕರಿಗೆ ಸೇವೆ ಒದಗಿಸಲಿದೆ. ನಂತರದಲ್ಲಿ ವಾರ್ಷಿಕ 7 ಕೋಟಿ ಪ್ರಯಾಣಿಕರಿಗೆ ಸೇವೆ ಒದಗಿಸುವಷ್ಟು ಸಾಮರ್ಥ್ಯ ಹೊಂದಲಿದೆ. ಆರಂಭದಲ್ಲಿ ವಾರ್ಷಿಕ 2.5 ಲಕ್ಷ ಟನ್ ಸರಕು ನಿರ್ವಹಣೆ ಸಾಮರ್ಥ್ಯ ಹೊಂದಿದೆ.

ನೇಪಾಳ: ಮಾಜಿ ಪ್ರಧಾನಿ ಒಲಿ ಬಂಧನ

ಒಂದನೇ ಪುಟದಿಂದ...

'ಗುಂಡು ಹಾರಿಸಲು ಯಾರಾದರೂ ಆದೇಶ ನೀಡಿದ್ದಾರೆಯೇ ಎಂಬುದು ಸಾಬೀತಾಗಿಲ್ಲ. ಆದರೆ, ಗುಂಡು ಹಾರಿಸುವುದನ್ನು ಯಾರೂ ತಡೆಯಲಿಲ್ಲ. ಇದು ನಿರ್ಲಕ್ಷ್ಯ ಧೋರಣೆಯಾಗಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

'ಒಲಿ ಮತ್ತು ರಮೇಶ್ ಸೇರಿ ಕೆಲವರು ಕ್ರಿಮಿನಲ್ ಅಪರಾಧ ಎಸಗಿದ್ದಾರೆ. ಇವರಿಗೆ ಮೂರರಿಂದ 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬೇಕು' ಎಂದು ಸಮಿತಿ ಶಿಫಾರಸು ಮಾಡಿದೆ. 'ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಲು ನಾನು ಆದೇಶ ನೀಡಿಲ್ಲ' ಎಂದು ಒಲಿ ಅವರು ಹೇಳಿದ್ದರು. ಚುನಾವಣೆಯಲ್ಲಿ ಸೋತ ಬಳಿಕ 'ಎಎಫ್‌ಪಿ' ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ್ದ ಒಲಿ, 'ಪ್ರತಿಭಟನೆಯನ್ನು ಒಳನುಸುಳುಕೋರರು ನಡೆಸಿದ್ದಾರೆ' ಎಂದಿದ್ದರು.

ಪ್ರತಿಭಟನೆ ವೇಳೆ ಮೃತಪಟ್ಟವರ ಕುಟುಂಬಗಳು ಒಲಿ ಅವರ ಬಂಧನವನ್ನು ಸ್ವಾಗತಿಸಿವೆ.

ವೈದ್ಯಕೀಯ ತಪಾಸಣೆ: 'ಬಂಧನದ ಬಳಿಕ ಒಲಿ ಅವರನ್ನು ತ್ರಿಭುವನ್ ವಿಶ್ವವಿದ್ಯಾಲಯದ ಆಸ್ಪತ್ರೆಗೆ ವೈದ್ಯಕೀಯ ತಪಾಸಣೆಗಾಗಿ ಕೊಂಡೊಯ್ಯಲಾಯಿತು. ಹೃದಯ ಮತ್ತು ಮೂತ್ರಪಿಂಡದ ಸಮಸ್ಯೆ ಇದ್ದಿದ್ದರಿಂದ ವೈದ್ಯರ ಸಲಹೆಯಂತೆ ಆಸ್ಪತ್ರೆಗೆ ದಾಖಲು ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕಾನೂನಿಗಿಂತ ಯಾರೂ ಮಿಗಿಲಲ್ಲ. ಇದು ಸೇಡಿನ ರಾಜಕಾರಣವಲ್ಲ. ನ್ಯಾಯದಾನದ ಆರಂಭವಷ್ಟೆ. ದೇಶವು ಹೊಸ ದಿಕ್ಕಿನಲ್ಲಿ ಸಾಗುತ್ತಿದೆ

ಸುಧಾನ್ ಗುರಂಗ್, ಗೃಹ ಸಚಿವ

ನನ್ನ ಬಂಧನವು ಪ್ರತೀಕಾರದ ಕೃತ್ಯ. ನಾನು ಕಾನೂನು ಹೋರಾಟ ನಡೆಸುತ್ತೇನೆ. ನೀವು (ವಕೀಲರು) ಸಜ್ಜಾಗಿ

ಕೆ.ಪಿ. ಶರ್ಮಾ ಒಲಿ, ಮಾಜಿ ಪ್ರಧಾನಿ

ಬಂಧನ ವಿರೋಧಿಸಿ ಪ್ರತಿಭಟನೆ

ಸಿಪಿಎನ್–ಯುಎಂಎಲ್ ಪಕ್ಷದ ಮುಖ್ಯಸ್ಥರಾದ ಒಲಿ ಅವರನ್ನು ಬಂಧಿಸಿರುವುದನ್ನು ವಿರೋಧಿಸಿ ಪಕ್ಷದ ನೂರಾರು ಕಾರ್ಯಕರ್ತರು ಶನಿವಾರ ದೇಶದಾದ್ಯಂತ ಪ್ರತಿಭಟನೆ ನಡೆಸಿದ್ದಾರೆ. 'ಆಲ್ ನೇಪಾಳ ನ್ಯಾಷನಲ್ ಫ್ರೀ ಸ್ಟೂಡೆಂಟ್ಸ್ ಯೂನಿಯನ್' ವಿದ್ಯಾರ್ಥಿ ಸಂಘಟನೆ ಕೂಡ ಪ್ರತಿಭಟನೆಯಲ್ಲಿ ಭಾಗವಹಿಸಿದೆ.

'ಒಲಿ ಅವರನ್ನು ತಕ್ಷಣವೇ ಬಿಡುಗಡೆ ಮಾಡಿ', 'ಪ್ರತೀಕಾರದ ರಾಜಕಾರಣ ನಿಲ್ಲಿಸಿ' ಮತ್ತು 'ದೇಶದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿ' ಎಂದು ಹೊಸ ಸರ್ಕಾರದ ವಿರುದ್ಧ ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿದರು. ಪೊಲೀಸರ ಮೇಲೆ ಕಲ್ಲು ತೂರಿದರಲ್ಲದೆ, ಸಮಿತಿಯ ವರದಿಯ ಪ್ರತಿಯನ್ನು ಬೆಂಕಿ ಹಚ್ಚಿ ಸುಟ್ಟರು. ಪ್ರತಿಭಟನಕಾರರನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿದರು.

ಕದನ ವಿರಾಮ: ಪಾಕ್‌ನಲ್ಲಿ ಸಭೆ ನಿಗದಿ

ಇಸ್ಲಾಮಾಬಾದ್ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿಯ ವಿದೇಶಾಂಗ ಸಚಿವರು ಇಸ್ಲಾಮಾಬಾದ್‌ನಲ್ಲಿ ಭಾನುವಾರ ಮತ್ತು ಸೋಮವಾರ ಸಭೆ ನಡೆಸಲಿದ್ದಾರೆ.

'ಮಾತುಕತೆ ಮತ್ತು ರಾಜತಾಂತ್ರಿಕತೆ ಮೂಲಕ ಮಾತ್ರ ಯುದ್ಧವನ್ನು ನಿಲ್ಲಿಸಬಹುದು' ಎಂದಿರುವ ಪಾಕಿಸ್ತಾನ, ಈ ನಿಟ್ಟಿನಲ್ಲಿ 'ವಿಶ್ವಾಸಾರ್ಹ ಮಧ್ಯಸ್ಥಿಕೆದಾರನ ಪಾತ್ರ' ವಹಿಸುವುದಾಗಿ ಹೇಳಿದೆ.

ವಿದೇಶಾಂಗ ಸಚಿವರಾದ ಪಾಕಿಸ್ತಾನದ ಇಶಾಕ್ ದಾರ್, ಸೌದಿಯ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್, ಟರ್ಕಿಯ ಹಕನ್ ಫಿದಾನ್, ಈಜಿಪ್ಟ್‌ನ ಬದ್ರ್ ಅಬ್ದಲತಿ ಅವರು ಇರಾನ್–ಅಮೆರಿಕ, ಇಸ್ರೇಲ್ ನಡುವಿನ ಯುದ್ಧ ಮತ್ತು ಇದರಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೃಷ್ಟಿಯಾಗಿರುವ ತೈಲ, ಅನಿಲ ಬಿಕ್ಕಟ್ಟಿನ ಕುರಿತು ಸಮಗ್ರ ಚರ್ಚೆ ನಡೆಸುವ ಸಾಧ್ಯತೆಗಳಿವೆ.

ಅಮೆರಿಕ ಈಗಾಗಲೇ ಇರಾನ್ ಮುಂದಿಟ್ಟಿರುವ 15 ಅಂಶಗಳ ಕದನ ವಿರಾಮ ಒಪ್ಪಂದ ಮಾತುಕತೆ ಪ್ರಸ್ತಾವದ ಕುರಿತೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

'ಪಾಕಿಸ್ತಾನವು ಸೌದಿ ಅರೇಬಿಯಾ, ಟರ್ಕಿ ಮತ್ತು ಈಜಿಪ್ಟ್ ದೇಶಗಳೊಂದಿಗಿನ ಸಂಬಂಧವನ್ನು ಹೆಚ್ಚು ಗೌರವಿಸುತ್ತದೆ. ಈ ಮಾತುಕತೆಗೆ ವೇದಿಕೆ ಕಲ್ಪಿಸುವ ಮೂಲಕ ಈ ದೇಶಗಳೊಂದಿಗಿನ ಸಂಬಂಧವನ್ನು ಮತ್ತಷ್ಟು ಬಲಪಡಿಸಿಕೊಳ್ಳುವ ಅವಕಾಶವನ್ನೂ ಪಡೆದುಕೊಂಡಿದೆ. ಸಭೆಯ ಬಳಿಕ ವಿದೇಶಾಂಗ ಸಚಿವರು ಪ್ರಧಾನಿ ಶೆಹಬಾಜ್ ಶರೀಫ್ ಅವರನ್ನೂ ಭೇಟಿಯಾಗಲಿದ್ದಾರೆ' ಎಂದು ಪಾಕಿಸ್ತಾನದ ವಿದೇಶಾಂಗ ಇಲಾಖೆ ಪ್ರಕಟಣೆ ತಿಳಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ಸಭೆಯನ್ನು ಈ ಮೊದಲು ಟರ್ಕಿಯಲ್ಲಿ ಆಯೋಜಿಸಲು ತೀರ್ಮಾನಿಸಲಾಗಿತ್ತು. ಆದರೆ, ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಮನವಿಯ ಮೇರೆಗೆ ಇಸ್ಲಾಮಾಬಾದ್‌ಗೆ ಸ್ಥಳಾಂತರಿಸಲಾಗಿದೆ ಎಂದು ಜಿಯೊ ನ್ಯೂಸ್ ವರದಿ ಮಾಡಿದೆ.

ಸುದ್ದಿ 2 ನಿಮಿಷ

'ಪಿಎನ್‌ಜಿ ಜಾಲ ವಿಸ್ತರಣೆ'

ನವದೆಹಲಿ (ಪಿಟಿಐ): ನಗರ ಪ್ರದೇಶಗಳಲ್ಲಿ ಕೊಳವೆ ಮೂಲಕ ನೈಸರ್ಗಿಕ ಅನಿಲ ಪೂರೈಕೆ (ಪಿಎನ್‌ಜಿ) ಜಾಲವನ್ನು ತ್ವರಿತವಾಗಿ ವಿಸ್ತರಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ದೇಶದಾದ್ಯಂತ ಸುಮಾರು 50 ಲಕ್ಷದಷ್ಟು ಹೊಸ 'ಪಿಎನ್‌ಜಿ' ಸಂಪರ್ಕ ನೀಡಲು ಸರ್ಕಾರ ಉದ್ದೇಶಿಸಿದ್ದು, 'ಏಕ ಗವಾಕ್ಷಿ' ವ್ಯವಸ್ಥೆ ಮೂಲಕ ತ್ವರಿತ ಅನುಮೋದನೆ ನೀಡಬೇಕು ಎಂದು ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಮನೋಹರ್ ಲಾಲ್ ಖಟ್ಟರ್ ಹೇಳಿದರು.

ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶದಲ್ಲಿ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಎಲ್‌ಪಿಜಿ ಬೇಡಿಕೆಯನ್ನು ತಗ್ಗಿಸಲು ಮತ್ತು ಎಲ್‌ಪಿಜಿಗಿಂತಲೂ ಸುರಕ್ಷಿತ ವಾದ ಪಿಎನ್‌ಜಿ ಬಳಕೆಯನ್ನು ಉತ್ತೇಜಿಸಲು ಕ್ರಮ ವಹಿಸುವಂತೆ ಖಟ್ಟರ್, ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ, ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಮತ್ತಿತ ರರು ಭಾಗವಹಿಸಿದ್ದ ಸಭೆಯು ಒತ್ತಾಯಿಸಿದೆ.

ಈಗಾಗಲೇ ಮೂಲಸೌಕರ್ಯ ಅಭಿವೃದ್ಧಿಯಾಗಿರುವ ಪ್ರದೇಶಗಳಲ್ಲಿ ತ್ವರಿತವಾಗಿ ಪಿಎನ್‌ಜಿ ಸಂಪರ್ಕ ಕಲ್ಪಿಸಲು ರಾಜ್ಯ ಸರ್ಕಾರಗಳು ಮತ್ತು ಆಯಾ ನಗರ ಸ್ಥಳೀಯ ಸಂಸ್ಥೆಗಳು ಕ್ರಮ ವಹಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದ್ದಾರೆ.

ವದಿನಾರ್ ಬಂದರು ತಲುಪಿದ 'ಜಗ್ ವಸಂತ್'



ಅಹಮದಾಬಾದ್ (ಪಿಟಿಐ): 47 ಸಾವಿರ ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತಿರುವ ಭಾರತದ ಧ್ವಜ ಹೊಂದಿರುವ 'ಜಗ್ ವಸಂತ್' ಹೆಸರಿನ ಹಡಗು ಹೊರ್ಮುಜ್ ಜಲಸಂಧಿಯನ್ನು ದಾಟಿ, ಗುಜರಾತ್‌ನ ವದಿನಾರ್ ಬಂದರನ್ನು ತಲುಪಿದೆ.

ಕುವೈತ್‌ನ ಮಿನಾ ಅಲ್ ಅಹ್ಮದಿ ಬಂದರಿನಿಂದ ಎಲ್‌ಪಿಜಿ ಹೊತ್ತ ಈ ಹಡಗು, ಶುಕ್ರವಾರ ರಾತ್ರಿ 8.30ಕ್ಕೆ ವದಿನಾರ್‌ಗೆ ಬಂದಿದೆ ಎಂದು ಬಂದರಿನ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಈ ಪೈಕಿ 20 ಸಾವಿರ ಟನ್ ಮುಂಬೈಗೆ ಮತ್ತು 9 ಸಾವಿರ ಟನ್ ಎಲ್‌ಪಿಜಿ ಮಂಗಳೂರಿಗೆ ರವಾನಿಸಲಾಗುವುದು ಎಂದು ತಿಳಿಸಿದ್ದಾರೆ.

ಸಂಘರ್ಷ ಕಣಕ್ಕೆ ಹೂಥಿ ಪ್ರವೇಶ

ಒಂದನೇ ಪುಟದಿಂದ...

ತನ್ನ ವೈಮಾನಿಕ ರಕ್ಷಣಾ ವ್ಯವಸ್ಥೆ ಮೇಲೆ ಯೆಮನ್‌ನಿಂದ ದಾಳಿ ನಡೆದಿರುವುದನ್ನು ಇಸ್ರೇಲ್ ಸೇನೆ ದೃಢಪಡಿಸಿದೆ.

ಅಮೆರಿಕ ಸೇನಾನೆಲೆ ಮೇಲೆ ದಾಳಿ: ಸೌದಿ ಅರೇಬಿಯಾದಲ್ಲಿನ ಅಮೆರಿಕದ ಸೇನಾ ನೆಲೆಯನ್ನು ಗುರಿಯಾಗಿಸಿ ಇರಾನ್ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಅಮೆರಿಕದ 10ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿದ್ದಾರೆ.

ಪ್ರಿನ್ಸ್ ಸುಲ್ತಾನ್ ಸೇನಾ ನೆಲೆಯನ್ನು ಗುರಿಯಾಗಿಸಿ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಇಂಧನ ಭರ್ತಿ ಮಾಡುವ ಅಮೆರಿಕದ ಹಲವು ವಿಮಾನಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

28-03-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1775 (1770)
ಒಂದು ವಾರದ ಡೆಲಿವರಿ	1770 (1765)
ಪಾಮ್ ವಾರದ ಡೆಲಿವರಿ	1433 (1438)
ಸೂರ್ಯಕಾಂತಿ ಎಣ್ಣೆ ಕಚ್ಚಾ	1605 (1610)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,45,400 (1,43,400)
ಬೆಳ್ಳಿ ಕೆ.ಜಿಗೆ	2,28,000 (2,24,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1765 (1760)
ಸೋಯಾ (ರಿಫೈನ್ಡ್)	₹1545 (1550)
ಸೂರ್ಯಕಾಂತಿ (ರಿಫೈನ್ಡ್)	₹1705 (1710)
ಪಾಮೋಲಿನ್	₹1435 (1440)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹425	100 ಕ್ಕೆ	₹425
12 ಕ್ಕೆ	₹60		

ಭಾರತದ ಐವರಿಗೆ ಗಾಯ

- ಯುಎಇನ ಅಬುಧಾಬಿಯ ಖಲೀಫಾ ಕೈಗಾರಿಕಾ ಪ್ರದೇಶದಲ್ಲಿ ಕ್ಷಿಪಣಿಯ ಅವಶೇಷ ಬಿದ್ದು ಭಾರತದ ಐವರು ಗಾಯಗೊಂಡಿದ್ದಾರೆ.
- ಒಮಾನ್‌ನ ಸಲಾಲ ಬಂದರಿನಲ್ಲಿದ್ದ ಅಮೆರಿಕದ ಸರಕು ಸಾಗಾಣಿಕೆ ಹಡಗಿನ ಮೇಲೆ ದಾಳಿ ಮಾಡಿರುವುದಾಗಿ ಇರಾನ್ ಹೇಳಿದೆ.
- ಡ್ರೋನ್ ದಾಳಿಯಿಂದ ಕುವೈತ್ ವಿಮಾನ ನಿಲ್ದಾಣದ ರೆಡಾರ್ ವ್ಯವಸ್ಥೆಗೆ ಹಾನಿಯಾಗಿದೆ

ಎಲ್‌ಪಿಜಿ ಮೇಲ್ವಿಚಾರಣೆಗೆ ಸಮಿತಿ

ಒಂದನೇ ಪುಟದಿಂದ...

ಗೃಹ ಬಳಕೆ, ಶಾಲೆ, ಆಸ್ಪತ್ರೆಗಳಿಗೆ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಯಾಗದಂತೆ ನೋಡಿಕೊಳ್ಳುವುದು, ಸ್ಥಳೀಯ ಬೇಡಿಕೆ ಮತ್ತು ಸಿಲಿಂಡರ್‌ಗಳ ಲಭ್ಯತೆಯ ಆಧಾರದಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ವಿತರಣೆ. ನಿಯಂತ್ರಣ ಕೊಠಡಿಗಳ ಸ್ಥಾಪನೆ, ಎಲ್‌ಪಿಜಿ ವಿತರಣಾ ಏಜೆನ್ಸಿಗಳು, ಗೋದಾಮುಗಳ ತಪಾಸಣೆ, ಕಾಳಸಂತೆ ಮಾರಾಟ ತಡೆಗೆ ಕಠಿಣ ಕ್ರಮಗಳನ್ನು ಕೈಗೊಳ್ಳುವುದು, ಗೃಹ ಬಳಕೆಯ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸದಂತೆ ನಿಗಾವಹಿಸುವುದು. ತೈಲ ಮಾರುಕಟ್ಟೆ ಕಂಪನಿಗಳ ಸಹಕಾರ ಪಡೆದು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಸಮಿತಿಗೆ ನೀಡಲಾಗಿದೆ.

'ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಮಿತಿ ಅಸ್ತಿತ್ವಕ್ಕೆ ಬಂದಿದ್ದು, ಕಾರ್ಯಾಚರಣೆ ಆರಂಭಿಸಿವೆ. ಆದರೆ, ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸಮಿತಿಯ ಅಧ್ಯಕ್ಷರು, ಸದಸ್ಯರು ಚುನಾವಣಾ ಕೆಲಸದಲ್ಲಿ ನಿರತರಾಗಿದ್ದಾರೆ. ಎಲ್‌ಪಿಜಿ ಸಿಲಿಂಡರ್ ಸಮಸ್ಯೆಗಳಿಗೆ ಯಾರೊಬ್ಬರೂ ಸ್ಪಂದಿಸುತ್ತಿಲ್ಲ' ಎಂದು ಹಲವು ನಾಗರಿಕರು ದೂರಿದ್ದಾರೆ .

ನ್ಯೂಯಾರ್ಕ್ ಟೈಮ್ಸ್ ವರದಿ • ಕಾಂಗ್ರೆಸ್ ಆಕ್ರೋಶ • ವರದಿ ತಳ್ಳಿಹಾಕಿದ ಕೇಂದ್ರ ಸರ್ಕಾರ

'ಮೋದಿ–ಟ್ರಂಪ್ ಮಾತುಕತೆ: ಮಸ್ಕ್ ಭಾಗಿ'

ಪ್ರಜಾವಾಣಿ ವಾರ್ತೆ/ಪಿಟಿಐ

ವಾಷಿಂಗ್ಟನ್/ನವದೆಹಲಿ: 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ದೂರವಾಣಿ ಸಂಭಾಷಣೆ ನಡೆಸಿದ ಸಂದರ್ಭದಲ್ಲಿ ಉದ್ಯಮಿ ಇಲಾನ್ ಮಸ್ಕ್ ಅವರೂ ಭಾಗವಹಿಸಿದ್ದರು' ಎಂದು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ವರದಿ ಮಾಡಿದೆ.

ಅಮೆರಿಕದ ಇಬ್ಬರು ಅಧಿಕಾರಿಗಳು ನೀಡಿದ ಮಾಹಿತಿಯನ್ನು ಆಧರಿಸಿ ಪತ್ರಿಕೆ ವರದಿ ಸಿದ್ಧಪಡಿಸಿದೆ. 'ಎರಡು ದೇಶಗಳ ಇಬ್ಬರು ನಾಯಕರು ಮಾತನಾಡುವ ವೇಳೆ ಖಾಸಗಿ ವ್ಯಕ್ತಿಯೊಬ್ಬರು ದೂರವಾಣಿ ಕರೆಯಲ್ಲಿ ಭಾಗವಹಿಸುವುದು ಸಾಮಾನ್ಯ ವಿಚಾರವಲ್ಲ. ಬಹುಶಃ ಟ್ರಂಪ್ ಮತ್ತು ಮಸ್ಕ್ ಅವರ ಮಧ್ಯೆ ಇದ್ದ ಅಸಮಾಧಾನವು ಅಂತ್ಯಗೊಂಡಿರಬಹುದು ಎನಿಸುತ್ತದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಪತ್ರಿಕಾ ವರದಿ ಕುರಿತ ಪ್ರಶ್ನೆಗೆ ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕೆರೋಲಿನ್ ಲೀವಿಟ್ ಪ್ರತಿಕ್ರಿಯಿಸಿ, 'ಪ್ರಧಾನಿ ಮೋದಿ ಅವರೊಂದಿಗೆ ಟ್ರಂಪ್ ಅವರಿಗೆ ಅತ್ಯುತ್ತಮ ಸ್ನೇಹವಿದೆ. ಮಾತುಕತೆಯು ಫಲಪ್ರದವಾಗಿತ್ತು' ಎಂದಷ್ಟೇ ಹೇಳಿದರು. 'ಮಾತುಕತೆ ವೇಳೆ ಮಸ್ಕ್ ಅವರು ಒಂದೊಮ್ಮೆ ಮಾತನಾಡಿದ್ದರೆ ಏನು ಮಾತನಾಡಿದರು ಎಂಬ ಬಗ್ಗೆ ಮಾಹಿತಿ ಇಲ್ಲ' ಎಂದು ವರದಿಯಲ್ಲಿ ಹೇಳಲಾಗಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾದ ಬಳಿಕ ಟ್ರಂಪ್ ಮತ್ತು ಮೋದಿ ಮಂಗಳವಾರ ಮೊದಲ ಬಾರಿ ಮಾತುಕತೆ ನಡೆಸಿದ್ದರು. 'ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕುರಿತು ಮಾತುಕತೆ ನಡೆಸಿದೆವು' ಎಂದು ಶ್ವೇತಭವನದ ಅಧಿಕಾರಿಗಳು ಮತ್ತು ಪ್ರಧಾನಿ ಮೋದಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಂಚಿಕೊಂಡಿದ್ದರು. ಆದರೆ, ಮಸ್ಕ್ ಭಾಗವಹಿಸಿದ್ದರ ಬಗ್ಗೆ ಯಾರೂ ಮಾಹಿತಿ ಹಂಚಿಕೊಂಡಿರಲಿಲ್ಲ.

ಮಸ್ಕ್‌ಗಾಗಿ ಲಾಭ–ನಷ್ಟದ ಲೆಕ್ಕಾಚಾರ?: 'ಮಸ್ಕ್ ಅವರು ಮಾತುಕತೆಯಲ್ಲಿ ಯಾಕೆ ಭಾಗವಹಿಸಿದ್ದರು ಎಂಬ ಬಗ್ಗೆ ನಿಖರವಾಗಿ ತಿಳಿದಿಲ್ಲ. ಆದರೆ, ಸೌದಿ ಅರೇಬಿಯಾ, ಕತಾರ್ ಸೇರಿದಂತೆ ಪಶ್ಚಿಮ ಏಷ್ಯಾದಲ್ಲಿ ಮಸ್ಕ್ ಅವರು ಭಾರಿ ಪ್ರಮಾಣದಲ್ಲಿ ಹೂಡಿಕೆ ಮಾಡಿದ್ದಾರೆ. ಭಾರತದಲ್ಲಿಯೂ ಭಾರಿ ಪ್ರಮಾಣದಲ್ಲಿ ಹೂಡಿಕೆ ಮಾಡಲು ಮಸ್ಕ್ ತುದಿಗಾಲಿನಲ್ಲಿ ಇದ್ದಾರೆ' ಎಂದು ನ್ಯೂಯಾರ್ಕ್ ಟೈಮ್ಸ್ ತನ್ನ ವರದಿಯಲ್ಲಿ ಹೇಳಿದೆ.

'ಬಿಕ್ಕಟ್ಟಿನ ಚರ್ಚೆಯೋ? ಉದ್ಯಮದ ಅಜೆಂಡಾವೋ?'

ಜಾಗತಿಕ ಬಿಕ್ಕಟ್ಟಿನ ಕುರಿತು ಎರಡು ದೇಶಗಳ ನಾಯಕರು ಮಾತುಕತೆ ನಡೆಸುವಾಗ ಉದ್ಯಮಿಯೊಬ್ಬರು ಯಾಕೆ ಭಾಗಿಯಾಗಿದ್ದರು? ಮಾತುಕತೆಯಲ್ಲಿ ಮಸ್ಕ್ ಅವರ ಪಾತ್ರವೇನು? ಇದು ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕುರಿತ ಮಾತುಕತೆಯೊ ಅಥವಾ ಇನ್ನೊಂದು ಉದ್ಯಮದ ಅಜೆಂಡಾವೋ? ಮಸ್ಕ್ ಭಾಗವಹಿಸಿದ್ದರ ಕುರಿತು ಮೋದಿ ಸರ್ಕಾರ ಯಾಕೆ ಮಾಹಿತಿ ಬಹಿರಂಗ ಮಾಡಲಿಲ್ಲ?

ಯುದ್ಧದ ಕುರಿತು ಜಗತ್ತಿನ ಇತರೆ ದೇಶಗಳ ನಾಯಕರೊಂದಿಗೆ ಟ್ರಂಪ್ ಮಾತುಕತೆ ನಡೆಸಿದ್ದಾರೆ. ಆ ವೇಳೆ ಯಾವ ಉದ್ಯಮಿಯೂ ಭಾಗವಹಿಸಿರಲಿಲ್ಲ. ಮೋದಿ ಅವರೊಂದಿಗೆ ಇಂಥದ್ದು ಯಾಕೆ ನಡೆಯುತ್ತದೆ? ಮಾತುಕತೆಯು ಫಲಪ್ರದವಾಗಿತ್ತು ಎಂದು ಶ್ವೇತಭವನ ಹೇಳಿದೆ. ಹಾಗಾದರೆ, ಲಾಭ ಆಗಿದ್ದು ಯಾರಿಗೆ? ಈ ಎಲ್ಲದಕ್ಕೂ ದೇಶಕ್ಕೆ ಉತ್ತರ ನೀಡಬೇಕು

ಕಾಂಗ್ರೆಸ್, 'ಎಕ್ಸ್' ಪೋಸ್ಟ್

'ಅಮೆರಿಕ ಸ್ಪಷ್ಟನೆ ನೀಡಲಿ'

ಮಾರ್ಚ್ 24ರಂದು ಟ್ರಂಪ್ ಹಾಗೂ ಮೋದಿ ಅವರ ಮಧ್ಯೆ ಮಾತ್ರವೇ ಮಾತುಕತೆ ನಡೆದಿದೆ. ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ಕುರಿತು ಮಾತುಕತೆ ನಡೆದಿದೆ. ನಮ್ಮ ಪ್ರಧಾನಿ ಅವರು ಟ್ರಂಪ್ ಅವರೊಂದಿಗೆ ಮಾತ್ರವೇ ಮಾತನಾಡಿದ್ದಾರೆ. ಒಂದು ವೇಳೆ ಮಾತುಕತೆಯಲ್ಲಿ ಯಾರಾದರೂ ಇತರರು ಭಾಗಿಯಾಗಿದ್ದರೆ, ಮಾತುಕತೆಯನ್ನು ಆಲಿಸುತ್ತಿದ್ದರೆ, ಈ ಬಗ್ಗೆ ಅಮೆರಿಕವೇ ಸ್ಪಷ್ಟನೆ ನೀಡಬೇಕು

ರಣಧೀರ್ ಜೈಸ್ವಾಲ್, ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರ



‘ಚಿನ್ನಸ್ವಾಮಿ’ಯಲ್ಲಿ ಆರ್‌ಸಿಬಿ ಶುಭಾರಂಭ

ಡಫಿ ಅಮೋಘ ಬೌಲಿಂಗ್ • ವಿರಾಟ್–ದೇವದತ್ತ ಶತಕದ ಜೊತೆಯಾಟ • ಸನ್‌ರೈಸರ್ಸ್‌ಗೆ ನಿರಾಸೆ

• ಗಿರೀಶದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೆ ‘ಕೆಂಪು ಸಾಗರ’ದ ಅಲೆಗಳೆದ್ದವು. ಏನೇ ಆದರೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ತಮ್ಮ ಬದ್ಧತೆ ಎಂಬುದನ್ನು ಅಭಿಮಾನಿಗಳು ತೋರಿಸಿದರು. ಸುಮಾರು ಹನ್ನೊಂದು ತಿಂಗಳಿಂದ ಭಣಗುಟ್ಟಿದ್ದ ಅಂಗಳದಲ್ಲಿ ಮತ್ತೆ ಕ್ರಿಕೆಟ್ ಚೆಂಡು ಪುಟಿದೆದ್ದಿತು. ಆರ್‌ಸಿಬಿ.. ಆರ್‌ಸಿಬಿ.. ಕೂಗುಗಳು, ದಿವಂಗತ ಪುನೀತ್ ರಾಜಕುಮಾರ್ ಅವರನ್ನು ನೆನಪಿಸಿದ ಹಾಡಿನ ತುಣುಕುಗಳು, ಡಿಜೆ ಸಂಗೀತ ಪ್ರತಿಧ್ವನಿಸಿದವು.

ಶನಿವಾರ ಸಂಜೆಯ ಸೂರ್ಯ ಪಶ್ಚಿಮದತ್ತ ಮುಖ ಮಾಡುತ್ತಲೇ ಮೈದಾನದಲ್ಲಿ ಚೆಲ್ಲಿದ ಹೊನಲು ಬೆಳಕಿನಲ್ಲಿ ಆಟ ರಂಗೇರಿತು. ‘ಹಾಲಿ ಚಾಂಪಿಯನ್’ ಆರ್‌ಸಿಬಿ ತಂಡವು ಸನ್‌ರೈಸರ್ಸ್ ಹೈದರಾಬಾದ್ ಎದುರು 6 ವಿಕೆಟ್‌ಗಳಿಂದ ಗೆದ್ದು, ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ 19ನೇ ಆವೃತ್ತಿಯಲ್ಲಿ ಶುಭಾರಂಭ ಮಾಡಿತು.

ಪದಾರ್ಪಣೆ ಪಂದ್ಯವಾಡಿದ ಜೇಕಬ್ ಡಫಿ (4–0–22–3) ನಿಖರ ದಾಳಿಯ ನಡುವೆಯೂ ಅಮೋಘ ಬ್ಯಾಟಿಂಗ್ ಮಾಡಿದ ಇಶಾನ್ ಕಿಶನ್ (80; 38ಎಸೆತ) ನೆರವಿನಿಂದ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 201 ರನ್ ಗಳಿಸಿತು. ಬೆಟ್ಟದಂತೆ ಕಂಡ ಈ ಗುರಿಯು ‘ಸ್ಥಳೀಯ ಹೀರೊ’ ದೇವದತ್ತ ಪಡಿಕ್ಕಲ್ (61; 26ಎ) ಮತ್ತು ‘ಚೇಸಿಂಗ್ ಮಾಸ್ಟರ್’ ವಿರಾಟ್ ಕೊಹ್ಲಿ (ಅಜೇಯ 69; 38ಎ) ಅವರ ಆಟದಿಂದಾಗಿ ಮಂಜಿನಂತೆ ಕರಗಿತು. ಆತಿಥೇಯರು 15.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 203 ರನ್ ಗಳಿಸಿದರು. ನಾಯಕ ರಜತ್ ಪಾಟೀದಾರ್ 12 ಎಸೆತಗಳಲ್ಲಿ 31 ರನ್ ಗಳಿಸಿ ಉಪಯುಕ್ತ ಕಾಣಿಕೆ ನೀಡಿದರು.

ಉದ್ಯಾನನಗರಿಯ ಅಭಿಮಾನಿಗಳಿಗೆ ಬಹಳ ದಿನಗಳ ನಂತರ ತಮ್ಮ ನೆಚ್ಚಿನ ವಿರಾಟ್ ‘ಲವಲವಿಕೆ’ಯ ಹಾವಭಾವಗಳನ್ನು ಕಣ್ತುಂಬಿಕೊಳ್ಳುವ ಅವಕಾಶ ಒದಗಿಬಂದಿತು. ಅವರ ಬ್ಯಾಟಿಂಗ್ ಸೊಬಗನ್ನೂ ಸವಿದರು.

ವಿರಾಟ್ ಅವರು ಮೂರು ಪ್ರಮುಖ ಜೊತೆಯಾಟಗಳಲ್ಲಿ ಭಾಗಿಯಾದರು. ತಾಳ್ಮೆಯ ಬ್ಯಾಟಿಂಗ್‌ಗೆ ಹೆಚ್ಚು ಒತ್ತು ಕೊಟ್ಟರು. ದೇವದತ್ತ ಪಡಿಕ್ಕಲ್ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 101 ರನ್ ಸೇರಿಸಿದರು. ಅದರಲ್ಲಿ ದೇವದತ್ತ ಪಾಲು 61 ರನ್. ನಾಯಕ ರಜತ್ ಜೊತೆಗೆ ವಿರಾಟ್ 53 (22ಎ) ರನ್ ಕಲೆಹಾಕಿದರು. ಮುರಿಯದ ಐದನೇ ವಿಕೆಟ್ ಜತೆಯಾಟದಲ್ಲಿ ಟಿಮ್ ಡೇವಿಡ್ ಅವರೊಂದಿಗೆ 40 ರನ್ ಕೂಡ ಸೂರೆ ಮಾಡಿದರು. ಎಂಟನೇ ಓವರ್‌ನಲ್ಲಿ ಕ್ಯಾಚ್ ಕೈಚೆಲ್ಲಿದ್ದ ಹೆನ್ರಿಚ್ ಕ್ಲಾಸೆನ್ ಕೊಟ್ಟ ಜೀವದಾನವನ್ನು ವಿರಾಟ್ ಸಮರ್ಥವಾಗಿ ಬಳಸಿಕೊಂಡರು.

ಡಫಿ ದಾಳಿ: ಐಪಿಎಲ್ ಮಿನಿ ಹರಾಜಿನಲ್ಲಿ ಕಿವೀಸ್ ಬೌಲರ್ ಡಫಿಯನ್ನು ಎರಡು ಕೋಟಿ ರೂಪಾಯಿಗೆ ಆರ್‌ಸಿಬಿ ಖರೀದಿಸಿದಾಗ ಸಾಮಾಜಿಕ ಜಾಲತಾಣಗಳಲ್ಲಿ ಅಚ್ಚರಿ ವ್ಯಕ್ತವಾಗಿತ್ತು. ಆದರೆ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಅವರ ಸಾಧನೆ ಉತ್ತಮವಾಗಿತ್ತು. ಅವರ ಸಾಮರ್ಥ್ಯ ಮೊದಲ ಪಂದ್ಯದಲ್ಲಿಯೇ ಸಾಬೀತಾಯಿತು. ಒಂದೇ ಸ್ಪೆಲ್‌ನಲ್ಲಿ ಎಲ್ಲ ನಾಲ್ಕು ಓವರ್ ಮುಗಿಸಿದ ಡಫಿ ಪಂದ್ಯಶ್ರೇಷ್ಠ ಗೌರವಕ್ಕೂ ಪಾತ್ರರಾದರು.

ಅನುಭವಿ ಜೋಶ್ ಹೇಜಲ್‌ವುಡ್ ಮತ್ತು ಯಶ್ ದಯಾಳ್ ಅವರಿಲ್ಲದ ಕೊರತೆಯನ್ನು ಡಫಿ ನೀಗಿಸಿದರು. ಪರಿಣಾಮಕಾರಿ ಶಾಟ್ ಪಿಚ್ ಎಸೆತಗಳನ್ನು ಪ್ರಯೋಗಿಸಿದರು. ತಮ್ಮ ಎರಡನೇ ಓವರ್‌ನಲ್ಲಿ ಆರಂಭಿಕ ಜೋಡಿ ಅಭಿಷೇಕ್ ಶರ್ಮಾ ಮತ್ತು ಟ್ರಾವಿಸ್ ಹೆಡ್ ವಿಕೆಟ್‌ಗಳನ್ನು ಕಬಳಿಸಿದರು. ಇನ್ನೊಂದು ಓವರ್‌ನಲ್ಲಿ ನಿತೀಶ್ ಕುಮಾರ್ ವಿಕೆಟ್ ಅವರಿಗೆ ಲಭಿಸಿತು.

ಅಭಿಷೇಕ್ ಈ ಪಂದ್ಯದಲ್ಲಿಯೂ ಸಿಕ್ಸರ್ ಮೂಲಕವೇ ತಮ್ಮ ಖಾತೆ ತೆರೆದಿದ್ದರು. ಟಿ20 ಮಾದರಿಯಲ್ಲಿ 16ನೇ ಹಾಗೂ ಐಪಿಎಲ್‌ನಲ್ಲಿ ಐದನೇ ಸಲ ಅವರು ಈ ಸಾಧನೆ ಮಾಡಿದರು.

ಇಶಾನ್ ಬ್ಯಾಟಿಂಗ್; ಸಾಲ್ಟ್ ಕ್ಯಾಚ್: ಈ ಇನಿಂಗ್ಸ್‌ನಲ್ಲಿ ಆರ್‌ಸಿಬಿಯ ಫಿಲ್ ಸಾಲ್ಟ್ ಅವರ ಫೀಲ್ಡಿಂಗ್ ಅಮೋಘವಾಗಿತ್ತು. ಅವರು ಪಡೆದ ಅಮೋಘ ಕ್ಯಾಚ್‌ನಿಂದಾಗಿ ಇಶಾನ್ ಶತಕದ ಆಸೆ ಕಮರಿತು. ಎಂಟು ಬೌಂಡರಿ, ಐದು ಸಿಕ್ಸರ್ ಹೊಡೆದು ತಮ್ಮ ತಂಡಕ್ಕೆ ಬಲ ತುಂಬಿದರು. ಇಶಾನ್, ಹೆನ್ರಿಚ್ ಕ್ಲಾಸೆನ್ ಜೊತೆಗೆ ನಾಲ್ಕನೇ ವಿಕೆಟ್‌ಗೆ 97 ರನ್ ಸೇರಿಸಿದ್ದರು.

16ನೇ ಓವರ್‌ನಲ್ಲಿ ಇಶಾನ್ ಅವರು ಅಭಿನಂದನ್ ಸಿಂಗ್ ಅವರ ಎಸೆತವನ್ನು ಬೌಂಡರಿಗೆರೆ ದಾಟಿಸುವ ಪ್ರಯತ್ನ ಮಾಡಿದರು. ಅದರೆ ಪಾಯಿಂಟ್ ಕಡೆಯಿಂದ ಓಡುತ್ತ ಬಂದ ಸಾಲ್ಟ್ ಹಾಗೇ ನೆಗೆದು ಒಂದೇ ಕೈಯಲ್ಲಿ ಕ್ಯಾಚ್ ಪಡೆದ ರೀತಿ ಅಮೋಘವಾಗಿತ್ತು. ಬ್ಯಾಟರ್ ಇಶಾನ್ ಸೇರಿದಂತೆ ಮೈದಾನದಲ್ಲಿದ್ದ ಎಲ್ಲರೂ ಅರೆಕ್ಷಣ ಅವಾಕ್ಕಾದರು. ತದನಂತರ ಅಂಕಿತ್ ವರ್ಮಾ ಅಮೋಘವಾಗಿ ಬ್ಯಾಟಿಂಗ್ ಮಾಡಿ ತಂಡದ ಮೊತ್ತ ಹೆಚ್ಚಿಸಿದರು.

ಮುಖ್ಯಾಂಶಗಳು

- ವಿರಾಟ್ ಮೂರು ಪ್ರಮುಖ ಜೊತೆಯಾಟಗಳಲ್ಲಿ ಭಾಗಿ
- ಜೇಕಬ್ ಡಫಿ ಪದಾರ್ಪಣೆ ಪಂದ್ಯದಲ್ಲಿ ಮಿಂಚು
- ಕ್ರೀಡಾಂಗಣದಲ್ಲಿ ಸೇರಿದ್ದ 30 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು

4,027
ಆರ್‌ಸಿಬಿ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಚೇಸಿಂಗ್ ವೇಳೆ ಗಳಿಸಿದ ಒಟ್ಟು ರನ್ ದಾಖಲೆ

3,078
ಐಪಿಎಲ್‌ನಲ್ಲಿ ಇಶಾನ್ ಕಿಶನ್ ಗಳಿಸಿದ ರನ್. 3000 ಸಾವಿರ ರನ್ ಮೈಲಿಗಲ್ಲು ದಾಟಿದ ಭಾರತದ ಆರನೇ ಬ್ಯಾಟ್ಸ್‌ಮನ್ ಅವರಾಗಿದ್ದಾರೆ



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ದೇವದತ್ತ ಪಡಿಕ್ಕಲ್ ಮತ್ತು ವಿರಾಟ್ ಕೊಹ್ಲಿ ಜೊತೆಯಾಟ
ಪ್ರಜಾವಾಣಿ ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್

- ಹೋದ ವರ್ಷ ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತರಾದ 11 ಅಭಿಮಾನಿಗಳ ಗೌರವಾರ್ಥ ಅಷ್ಟೇ ಸಂಖ್ಯೆಯ ಆಸನಗಳನ್ನು ಖಾಲಿ ಬಿಡಲಾಯಿತು. ಪಿ ಒನ್ ಗ್ಯಾಲರಿಯಲ್ಲಿ ಸಿಂಗರಿಸಿದ ಆಸನಗಳನ್ನು ಖಾಲಿ ಇಡಲಾಯಿತು. ಮುಂದಿನ ಎಲ್ಲ ಪಂದ್ಯಗಳಿಗೂ ಇದೇ ಪದ್ಧತಿ ಮುಂದುವರಿಯಲಿದೆ.
- ಕಾಲ್ತುಳಿತ ಪ್ರಕರಣದಲ್ಲಿ ಸಾವಿಗೀಡಾದವರ ಗೌರವಕ್ಕಾಗಿ ಒಂದು ನಿಮಿಷ ಮೌನಾಚರಣೆ ನಡೆಸಲಾಯಿತು. ಆಟಗಾರರು ತಮ್ಮ ತೋಳುಗಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಆಡಿದರು.
- ಪಂದ್ಯಕ್ಕೂ ಮುನ್ನ ನಡೆದ ಅಭ್ಯಾಸದಲ್ಲಿ ಆಟಗಾರರು 11 ಸಂಖ್ಯೆ ಜೆರ್ಸಿ ಧರಿಸಿದ್ದರು
- ಹಿನ್ನೆಲೆ ಗಾಯಕ ವಿಜಯಪ್ರಕಾಶ್ ಅವರು ರಾಷ್ಟ್ರ ಗೀತೆ ಹಾಡಿದರು
- ಎರಡು ಸಾವಿರಕ್ಕೂ ಹೆಚ್ಚು ಪೊಲೀಸರು, ಭದ್ರತಾ ಸಿಬ್ಬಂದಿ ಮತ್ತು ಕಮಾಂಡೊಗಳು ನಿಯೋಜನೆಯಾಗಿದ್ದರು.
- ಐಸಿಸಿ ಮುಖ್ಯಸ್ಥ ಜಯ್ ಶಾ, ಬಿಸಿಸಿಐ ಅಧ್ಯಕ್ಷ ಮಿಥುನ್ ಮನ್ಹಾಸ್, ಖಜಾಂಚಿ ರಘುರಾಮ್ ಭಟ್, ಐಪಿಎಲ್ ಚೇರ್ಮನ್ ಅರುಣ್ ಧುಮಾಲ್ ಹಾಜರು.
- ವಿರಾಟ್ ಕೊಹ್ಲಿ ಪತ್ನಿ, ಬಾಲಿವುಡ್ ತಾರೆ ಅನುಷ್ಕಾ ಶರ್ಮಾ, ಮಹಿಳಾ ಕ್ರಿಕೆಟಿಗರಾದ ಸ್ಮೃತಿ ಮಂಧಾನ, ಜಿಮಿಮಾ ರಾಡ್ರಿಗಸ್ ಹಾಜರಿದ್ದರು.


ಕಳೆದ ವರ್ಷ ಕಾಲ್ತುಳಿತ ದುರಂತದಲ್ಲಿ ಮೃತಪಟ್ಟ 11 ಮಂದಿಯ ಗೌರವಾರ್ಥ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದ ವೇಳೆ ಅಷ್ಟೇ ಆಸನಗಳನ್ನು ಖಾಲಿ ಬಿಡಲಾಯಿತು

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್
9 ವಿಕೆಟ್‌ಗೆ 201 (20 ಓವರ್‌ಗಳಲ್ಲಿ)
ಹೆಡ್ ಸಿ ಸಾಲ್ಟ್ ಬಿ ಡಫಿ 11 (9ಎ, 4x2)
ಅಭಿಷೇಕ್ ಸಿ ಜಿತೇಶ್ ಬಿ ಡಫಿ 7 (8ಎ, 6x1)
ಇಶಾನ್ ಸಿ ಸಾಲ್ಟ್ ಬಿ ಅಭಿನಂದನ್ 80 (38ಎ, 4x8, 6x5)
ನಿತೀಶ್ ಸಿ ಅಭಿನಂದನ್ ಬಿ ಡಫಿ 1 (6ಎ)
ಕ್ಲಾಸೆನ್ ಸಿ ಸಾಲ್ಟ್ ಬಿ ಶೆಫರ್ಡ್ 31 (22ಎ, 4x2, 6x1)
ಸಲೀಲ್ ಸಿ ಪಡಿಕ್ಕಲ್ ಬಿ ಸುಯಶ್ 9 (6ಎ, 6x1)
ಅನಿಕೇತ್ ಸಿ ಕೊಹ್ಲಿ ಬಿ ಶೆಫರ್ಡ್ 43 (18ಎ, 4x3, 6x4)
ಹರ್ಷ್ ಸಿ ಪಡಿಕ್ಕಲ್ ಬಿ ಶೆಫರ್ಡ್ 3 (3ಎ)
ಹರ್ಷಲ್ ಸಿ ಪಡಿಕ್ಕಲ್ ಬಿ ಭುವನೇಶ್ವರ್ 0 (2ಎ)
ಡೇವಿಡ್ ಪೈನ್ ಔಟಾಗದೇ 6 (5ಎ)
ಜಯದೇವ್ ಉನದ್ಕತ್ ಔಟಾಗದೇ 4 (3ಎ)
ಇತರೆ: 6 (ಲೆಗ್‌ಬೈ 2, ವೈಡ್ 4)
ವಿಕೆಟ್ ಪತನ: -18 (ಅಭಿಷೇಕ್ ಶರ್ಮಾ, 2.1), 2-23 (ಟ್ರಾವಿಸ್ ಹೆಡ್, 2.6), 3-29 (ನಿತೀಶ್ ಕುಮಾರ್ ರೆಡ್ಡಿ, 4.2), 4-126 (ಹೆನ್ರಿಕ್ ಕ್ಲಾಸೆನ್, 13.1), 5-137 (ಸಲೀಲ್ ಅರೋರಾ, 14.3), 6-155 (ಇಶಾನ್ ಕಿಶನ್, 15.6), 7-167 (ಹರ್ಷ್ ದುಬೆ, 16.6), 8-174 (ಹರ್ಷಲ್ ಪಟೇಲ್, 17.5), 9-192 (ಅನಿಕೇತ್ ವರ್ಮಾ, 18.6)
ಬೌಲಿಂಗ್: ಜೇಕಬ್ ಡಫಿ 3–0–22–3, ಭುವನೇಶ್ವರ್ ಕುಮಾರ್ 4–0–31–1, ಅಭಿನಂದನ್ ಸಿಂಗ್ 3–0–38–1, ರೊಮೆರಿಯೊ ಶೆಫರ್ಡ್ 4–0–54–3, ಸುಯಶ್ ಶರ್ಮಾ 3–0–28–1, ಕೃಣಾಲ್ ಪಾಂಡ್ಯ 2–0–26–0

ರಾಯಲ್ ಚಾಲೆಂಜರ್ಸ್ ಬೆಂಗಳೂರು
4 ವಿಕೆಟ್‌ಗೆ 203 (15.4 ಓವರ್‌ಗಳಲ್ಲಿ)
ಸಾಲ್ಟ್ ಸಿ ಕ್ಲಾಸೆನ್ ಬಿ ಉನದ್ಕತ್ 8 (7ಎ, 4x2)
ವಿರಾಟ್ ಕೊಹ್ಲಿ ಔಟಾಗದೇ 69 (38ಎ, 4x5, 6x5)
ಪಡಿಕ್ಕಲ್ ಸಿ ಕ್ಲಾಸೆನ್ ಬಿ ಹರ್ಷ್ 61 (26ಎ, 4x7, 6x4)
ಪಾಟೀದಾರ್ ಸಿ ಹರ್ಷ್ ಬಿ ಡೇವಿಡ್ 31 (12ಎ, 4x2, 6x3)
ಜಿತೇಶ್ ಸಿ ಉನದ್ಕತ್ ಬಿ ಡೇವಿಡ್ 0 (1ಎ)
ಟಿಮ್ ಡೇವಿಡ್ ಔಟಾಗದೇ 16 (10ಎ, 4x1, 6x1)
ಇತರೆ: 18 (ಬೈ 8, ಲೆಗ್‌ಬೈ 3, ವೈಡ್ 7)
ವಿಕೆಟ್ ಪತನ: 1-9 (ಫಿಲ್ ಸಾಲ್ಟ್, 1.1), 2-110 (ದೇವದತ್ತ ಪಡಿಕ್ಕಲ್, 8.4), 3-163 (ರಜತ್ ಪಾಟೀದಾರ್, 12.2), 4-163 (ಜಿತೇಶ್ ಶರ್ಮಾ, 12.3)
ಬೌಲಿಂಗ್: ನಿತೇಶ್ ಕುಮಾರ್ ರೆಡ್ಡಿ 2–0–19–0, ಜಯದೇವ್ ಉನದ್ಕತ್ 3–0–29–1, ಡೇವಿಡ್ ಪೈನ್ 3–0–35–2, ಹರ್ಷ್ ದುಬೆ 3–0–35–1, ಇಶಾನ್ ಮಾಲಿಂಗ 2–0–35–0, ಹರ್ಷಲ್ ಪಟೇಲ್ 2.4–0–39–0
ಪಂದ್ಯದ ಆಟಗಾರ: ಜೇಕಬ್ ಡಫಿ

ಫಲಿತಾಂಶ
ಆರ್‌ಸಿಬಿ ತಂಡಕ್ಕೆ 6 ವಿಕೆಟ್ ಜಯ

ಆರನೇ ಪ್ರಶಸ್ತಿಗಾಗಿ ಮುಂಬೈ ಇಂಡಿಯನ್ಸ್ ಅಭಿಯಾನ


ಅಜಿಂಕ್ಯ ರಹಾನೆ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಐದು ಸಲದ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು ಕಳೆದ ಐದು ವರ್ಷಗಳಿಂದ ಪ್ರಶಸ್ತಿ ಬರ ಎದುರಿಸುತ್ತಿದೆ. ಈ ಬಾರಿ ಅದನ್ನು ನೀಗುವ ಕನಸಿನೊಂದಿಗೆ ಕಣಕ್ಕಿಳಿಯಲಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡವು ಕೋಲ್ಕತ್ತ ನೈಟ್‌ರೈಡರ್ಸ್ ವಿರುದ್ಧ ಆಡಲಿದೆ. ‘ಮುಂಬೈಕರ್’ ಅಜಿಂಕ್ಯ ರಹಾನೆ ಅವರು ಕೋಲ್ಕತ್ತ ತಂಡವನ್ನು ಮುನ್ನಡೆಸುತ್ತಿದ್ದಾರೆ.

ಮುಂಬೈ ತಂಡವು 2013-2020ರ ನಡುವೆ ಐದು ಬಾರಿ ಟ್ರೋಫಿ ಜಯಿಸಿತ್ತು. ಹೋದ ವರ್ಷ ಹಾರ್ದಿಕ್ ಬಳಗವು ಎರಡನೇ ಕ್ವಾಲಿಫೈಯರ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು ಸೋತಿತ್ತು. ಟೆಸ್ಟ್ ಮತ್ತು ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಪಡೆದಿರುವ ರೋಹಿತ್ ಶರ್ಮಾ ನಿರಾಳರಾಗಿದ್ದಾರೆ. ಕೆಲವು ತಿಂಗಳ ಹಿಂದೆ ಏಕದಿನ ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದರು. ಅದೇ ವಿಶ್ವಾಸದಲ್ಲಿ ಇಲ್ಲಿಯೂ ಕಣಕ್ಕಿಳಿಯಲಿದ್ದಾರೆ.

ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕತ್ವ ವಹಿಸಿದ್ದ ಸೂರ್ಯಕುಮಾರ್ ಯಾದವ್, ಸ್ಫೋಟಕ ಶೈಲಿಯ ಬ್ಯಾಟರ್ ತಿಲಕ್ ವರ್ಮಾ ಮತ್ತು ‘ಯಾರ್ಕರ್ ಕಿಂಗ್’ ಜಸ್‌ಪ್ರೀತ್ ಬೂಮ್ರಾ ಅವರು ಮುಂಬೈ ತಂಡದ ಪ್ರಮುಖ ಶಕ್ತಿಯಾಗಿದ್ದಾರೆ. ಇವರೆಲ್ಲರೂ ವಿಶ್ವಕಪ್ ವಿಜೇತ ತಂಡದಲ್ಲಿದ್ದರು ಎಂಬುದೂ ವಿಶೇಷ. ವಿದೇಶಿ ಆಟಗಾರರಾದ ರಯಾನ್ ರಿಕೆಲ್ಟನ್, ಶೆರ್ಫೇನ್ ರುದರ್‌ಫೋರ್ಡ್, ಕಾರ್ಬಿನ್ ಬಾಷ್, ಮಿಚೆಲ್ ಸ್ಯಾಂಟನರ್, ವಿಲ್ ಜ್ಯಾಕ್ಸ್ ಮತ್ತು ಅನುಭವಿ ವೇಗಿ ಟ್ರೆಂಟ್ ಬೌಲ್ಟ್ ಕೂಡ ತಂಡವನ್ನು ಗೆಲುವಿನತ್ತ ಮುನ್ನಡೆಸಬಲ್ಲರು. ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಮತ್ತು ದೀಪಕ್ ಚಾಹರ್ ಅವರು ವೇಗದ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಕೋಲ್ಕತ್ತ ತಂಡವು ಮುಂಬೈಗೆ ಸಮಬಲದ ಸವಾಲು ಒಡ್ಡುವ ಸಾಮರ್ಥ್ಯ ಹೊಂದಿದೆ. ಉಪನಾಯಕ ರಿಂಕು ಸಿಂಗ್, ಆಲ್‌ರೌಂಡರ್ ಸುನಿಲ್ ನಾರಾಯಣ್, ಸ್ಪಿನ್ ಮೋಡಿಗಾರ ವರುಣ್ ಚಕ್ರವರ್ತಿ, ಅಂಗ್‌ಕ್ರಿಷ್ ರಘುವಂಶಿ, ಫಿನ್ ಅಲೆನ್, ಟಿಮ್ ಸೀಫರ್ಟ್, ರಾಹುಲ್ ತ್ರಿಪಾಠಿ, ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಅವರು ತಂಡದಲ್ಲಿದ್ದಾರೆ. ಮುಸ್ತಫಿಝುರ್ ರೆಹಮಾನ್ ಅವರನ್ನು ಕೈಬಿಟ್ಟ ಕಾರಣದಿಂದಾಗಿ ವೇಗದ ಬೌಲಿಂಗ್ ಹೊಣೆಯು ನವದೀಪ್ ಸೈನಿ ಹಾಗೂ ಉಮ್ರಾನ್ ಮಲಿಕ್ ಅವರ ಮೇಲೆ ಬೀಳುವ ಸಾಧ್ಯತೆ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್


ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ

ಆರಂಭಿಕ ಪಂದ್ಯಗಳಿಗೆ ಧೋನಿ ಅಲಭ್ಯ



ನವದೆಹಲಿ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ದಿಗ್ಗಜ ಆಟಗಾರ ಮಹೇಂದ್ರ ಸಿಂಗ್ ಧೋನಿ ಅವರು ಸ್ನಾಯುಸೆಳೆತ ದಿಂದಾಗಿ ಇಂಡಿಯನ್ ಪ್ರೀಮಿಯರ್ ಲೀಗ್‌ನ ಆರಂಭದ ಕೆಲವು ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಏಪ್ರಿಲ್ 5ರಂದು ನಡೆಯುವ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಅವರು ಕಣಕ್ಕಿಳಿಯುವುದು ಅನುಮಾನ.

‘ಮೀನಖಂಡದ ಸ್ನಾಯುಸೆಳೆತಕ್ಕೆ ಒಳಗಾಗಿರುವ ಧೋನಿ ಅವರು ಸದ್ಯ ‘ಪುನಶ್ಚೇತನ’ದಲ್ಲಿದ್ದಾರೆ. ಹೀಗಾಗಿ, ಐಪಿಎಲ್‌ನ ಮೊದಲ ಎರಡು ವಾರಗಳಲ್ಲಿ ಅವರು ತಂಡದ ಪರ ಆಡುವುದು ಅನುಮಾನ’ ಎಂದು ಸಿಎಸ್‌ಕೆ ಫ್ರ್ಯಾಂಚೈಸಿಯು ‘ಎಕ್ಸ್’ನಲ್ಲಿ ಶನಿವಾರ ತಿಳಿಸಿದೆ.

44 ವರ್ಷ ವಯಸ್ಸಿನ ಧೋನಿ ಅವರು 2020ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಪಡೆದ ನಂತರ ಐಪಿಎಲ್‌ನಲ್ಲಿ ಮಾತ್ರ ಆಡುತ್ತಿದ್ದಾರೆ. ಅದರಿಂದಾಗಿ ಫಿಟ್‌ನೆಸ್ ಕಾಯ್ದುಕೊಳ್ಳು ವುದು ಅವರಿಗೆ ಸವಾಲಾಗಿದೆ. ಅವರು 2023ರಲ್ಲಿ ಮಂಡಿನೋವಿಗೆ ಶಸ್ತ್ರಚಿಕಿತ್ಸೆ ಯನ್ನೂ ಮಾಡಿಸಿಕೊಂಡಿದ್ದಾರೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗುವಾಹಟಿಯಲ್ಲಿ ಸೋಮವಾರ ನಡೆಯುವ ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದೊಂದಿಗೆ ಅಭಿಯಾನ ಆರಂಭಿಸಲಿದೆ.

ಕ್ಯಾಂಡಿಡೇಟ್ಸ್ ಚೆಸ್ ಇಂದಿನಿಂದ • ಮಹಿಳಾ ವಿಭಾಗದಲ್ಲಿ ದಿವ್ಯಾ, ವೈಶಾಲಿ ಸ್ಪರ್ಧೆ

ಪ್ರಜ್ಞಾನಂದಗೆ ಪ್ರಬಲ ಸವಾಲು

ಪಫೋಸ್ (ಸೈಪ್ರಸ್), (ಪಿಟಿಐ): ಪ್ರತಿಷ್ಠಿತ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ಭಾನುವಾರ ಇಲ್ಲಿ ಆರಂಭವಾಗಲಿದೆ. ಓಪನ್ ವಿಭಾಗದಲ್ಲಿ ಆಡುತ್ತಿರುವ ಎಂಟು ಮಂದಿಯಲ್ಲಿ ಭಾರತದ ಏಕೈಕ ಆಟಗಾರ ನಾಗಿರುವ ಆರ್.ಪ್ರಜ್ಞಾನಂದ ಅವರಿಗೆ ಪ್ರಬಲ ಸವಾಲು ಎದುರಾಗಿದೆ.

ಏಪ್ರಿಲ್ 16ರವರೆಗೆ ನಡೆಯಲಿರುವ ಈ ಟೂರ್ನಿಯು, ವಿಶ್ವ ಚಾಂಪಿಯನ್ ಗುಕೇಶ್ ಡಿ. ಅವರಿಗೆ ಸವಾಲು ಹಾಕುವ ಆಟಗಾರನನ್ನು ನಿರ್ಧರಿಸಲಿದೆ. ಟೂರ್ನಿಯು ‘ಡಬಲ್ ರೌಂಡ್‌ರಾಬಿನ್’ ಮಾದರಿಯಲ್ಲಿ ನಡೆಯಲಿದೆ. ಅಂದರೆ ಪ್ರತಿ ಆಟಗಾರ ಎದುರಾಳಿಯನ್ನು ತಲಾ ಎರಡು ಬಾರಿ ಎದುರಿಸಬೇಕಾಗುತ್ತದೆ.

ಅತಿ ಹೆಚ್ಚು ಪಾಯಿಂಟ್ಸ್ ಕಲೆಹಾಕುವ ಆಟಗಾರ ವಿಜೇತನಾಗಲಿದ್ದಾರೆ. ವಿಶ್ವ ಚಾಂಪಿಯನ್ ಪಟ್ಟಕ್ಕಾಗಿ ಸೆಣಸಾಟ ಈ ವರ್ಷದ ಕೊನೆಯಲ್ಲಿ ನಡೆಯಲಿವೆ.

ಮಹಿಳೆಯರ ವಿಭಾಗದ ಟೂರ್ನಿಯೂ ಜೊತೆಯಲ್ಲೇ ನಡೆಯಲಿದ್ದು ವಿಜೇತ ಆಟಗಾರ್ತಿ, ಹಾಲಿ ವಿಶ್ವ ಚಾಂಪಿಯನ್ ಚೀನಾದ ಜು ವೆನ್‌ಜುನ್ ಅವರಿಗೆ ಚಾಲೆಂಜರ್ ಆಗುವ ಅರ್ಹತೆ ಪಡೆಯುತ್ತಾರೆ.


ದಿವ್ಯಾ


ವೈಶಾಲಿ

ಮುಖ್ಯಾಂಶಗಳು

- ಒಟ್ಟು ಬಹುಮಾನ ಮೊತ್ತ ₹9.49 ಕೋಟಿ
- ಓಪನ್ ವಿಭಾಗಕ್ಕೆ ₹6.65 ಕೋಟಿ ಬಹುಮಾನ
- ಮಹಿಳಾ ವಿಭಾಗಕ್ಕೆ ₹2.85 ಕೋಟಿ ಬಹುಮಾನ

ಆಟಗಾರರ ಇತ್ತೀಚಿನ ಫಾರ್ಮ್ ಗಮನಿಸಿದರೆ, ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಫ್ಯಾಬಿಯಾನೊ ಕರುವಾನ ಅವರು ಪ್ರಶಸ್ತಿಗೆ ನೆಚ್ಚಿನ ಆಟಗಾರ ಎನಿಸಿದ್ದಾರೆ. ರೇಟಿಂಗ್ ಆಧಾರದಲ್ಲಿ ಈ ಟೂರ್ನಿಗೆ ಅರ್ಹತೆ ಪಡೆದಿರುವ ಹಿಕಾರು ನಕಾಮುರಾ (ಅಮೆರಿಕ) ಅವರನ್ನು ಕಡೆ-ಗಣಿಸುವಂತಿಲ್ಲ.


ಭಾರತದ ಆರ್.ಪ್ರಜ್ಞಾನಂದ

ಡಚ್ ಗ್ರ್ಯಾಂಡ್‌ಮಾಸ್ಟರ್ ಅನಿಶ್ ಗಿರಿ ಅವರು ಇತ್ತೀಚಿನ ಕೆಲ ತಿಂಗಳಿಂದ ಉತ್ತಮವಾಗಿ ಆಡುತ್ತಿರುವ ಕಾರಣ ಅವರ ಮೇಲೆಯೂ ಕಣ್ಣಿಡಬಹುದು. ಚೀನಾದ ವೀ ಯಿ, ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್, ರಷ್ಯಾದ (ಇಲ್ಲಿ ಫಿಡೆ ಧ್ವಜದಡಿ ಆಡುವ) ಆ್ಯಂಡ್ರಿ ಇಸಿಪೆಂಕೊ ಮತ್ತು ಜರ್ಮನಿಯ ಮಥಾಯಸ್ ಬ್ಲೂಬಮ್ ಜೊತೆ ಭಾರತದ ಪ್ರಜ್ಞಾನಂದ ಕಣದಲ್ಲಿರುವ ಇತರ ಐದು ಆಟಗಾರರು.

ಪ್ರಜ್ಞಾನಂದ ಅವರು ಉತ್ತಮ ಲಯದಲ್ಲೇನೂ ಇಲ್ಲ. ಆದರೆ ಫೆಬ್ರುವರಿಯಲ್ಲಿ ಟಾಟಾ ಸ್ಟೀಲ್ ಟೂರ್ನಿ ಆಡಿದ ನಂತರ ಅವರು ಬೇರೆಲ್ಲೂ ಆಡದೇ ಈ ಟೂರ್ನಿಗೆ ತಮ್ಮ ನೆರವು ತಂಡದೊಡನೆ ಸಿದ್ಧತೆ ನಡೆಸಿದ್ದಾರೆ. ಇಲ್ಲಿ ಉತ್ತಮ ಸಾಧನೆಯ ವಿಶ್ವಾಸದಲ್ಲಿದ್ದಾರೆ.

ಕಳೆದ ವರ್ಷದ ಕೊನೆಯಲ್ಲಿ ಗೋವಾದಲ್ಲಿ ವಿಶ್ವಕಪ್ ಗೆಲ್ಲುವ ಮೂಲಕ ಅಚ್ಚರಿಗೆ ಕಾರಣರಾದ ಜಾವೊಖಿರ್ ಸಿಂದರೋವ್ ಅವರು ‘ಡಾರ್ಕ್‌ಹಾರ್ಸ್’ (ಅನಿರೀಕ್ಷಿತವಾಗಿ ಯಶಸ್ಸು ಪಡೆಯಬಲ್ಲ ಆಟಗಾರ) ಎನಿಸಿದ್ದಾರೆ. ಇದು ಅವರಿಗೆ ಮೊದಲ ಕ್ಯಾಂಡಿಡೇಟ್ಸ್ ಟೂರ್ನಿ.

ಮಹಿಳಾ ವಿಭಾಗದಲ್ಲಿ ಮಾಜಿ ವಿಶ್ವ ಚಾಂಪಿಯನ್ ತಾನ್ ಝೊಂಗ್‌ಯಿ (ಚೀನಾ) ಫೇವರಿಟ್ ಆಟಗಾರ್ತಿಯಾಗಿ ಕಾಣುತ್ತಿದ್ದಾರೆ. ಭಾರತದ ಕೋನೇರು ಹಂಪಿ, ಸುರಕ್ಷತೆಯ ಕಳವಳ ವ್ಯಕ್ತಪಡಿಸಿ ಹಿಂದೆಸರಿದ ಬಳಿಕ ಉಕ್ರೇನ್‌ನ ಅನ್ನಾ ಮುಝಿಚುಕ್ ಅವಕಾಶ ಪಡೆದಿದ್ದಾರೆ.

ಆದರೆ ಎಲ್ಲರ ಕಣ್ಣು, ಹೋದ ವರ್ಷ ಅನಿರೀಕ್ಷಿತವಾಗಿ ವಿಶ್ವಕಪ್ ಚಾಂಪಿಯನ್ ಆದ ದಿವ್ಯಾ ದೇಶಮುಖ್ ಅವರ ಆಟದತ್ತ ಇದೆ. ಭಾರತದ ಆರ್.ವೈಶಾಲಿ ಅವರೂ ಹೋರಾಟಗಾರ್ತಿ. ಚೀನಾದ ಝು ಜಿನೆರ್ ಯಾವುದೇ ಎದುರಾಳಿಯನ್ನು ಇಕ್ಕಟ್ಟಿಗೆ ಸಿಲುಕಿಸಬಲ್ಲ ಸಾಮರ್ಥ್ಯ ಹೊಂದಿದ್ದಾರೆ.

ತೇಜಸ್ವಿನ್ ಶಂಕರ್ ಗೆಲುವಿನ ಆರಂಭ



ನವದೆಹಲಿ (ಪಿಟಿಐ): ಭಾರತದ ತೇಜಸ್ವಿನ್ ಶಂಕರ್ ಅವರು ಋತುವಿನ ಮೊದಲ ಡೆಕಾಥ್ಲಾನ್‌ನ ಸ್ಪರ್ಧೆಯನ್ನು ಯಶಸ್ಸಿನೊಡನೆ ಆರಂಭಿಸಿದರು. ಅಮೆರಿಕದ ಟೆಕ್ಸಾಸ್‌ನಲ್ಲಿ ನಡೆದ ಡೇವಿಡ್ ನೋಬೆಲ್ ರಿಲೇಸ್ 2026 ಅಥ್ಲೆಟಿಕ್ ಕೂಟದಲ್ಲಿ 7947 ಅಂಕ ಕಲೆಹಾಕಿ ಅಗ್ರಸ್ಥಾನ ಪಡೆದರು.

ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆ ಕೂಡ. ಕೇವಲ 53 ಪಾಯಿಂಟ್‌ಗಳಿಂದ 8000ದ ಮೈಲಿಗಲ್ಲು ತಪ್ಪಿಸಿಕೊಂಡರು.

ಕಳೆದ ವರ್ಷ ಪೋಲೆಂಡ್‌ನಲ್ಲಿ ನಡೆದ ಕೂಟವೊಂದರಲ್ಲಿ ಅವರು ಸ್ಥಾಪಿಸಿದ್ದ ರಾಷ್ಟ್ರೀಯ ದಾಖಲೆ (7826) ಗಿಂತ ಇದು ಉತ್ತಮ ನಿರ್ವಹಣೆ ಎನಿಸಿತು. ಆದರೆ ಅಥ್ಲೀಟ್‌ಗಳಿಗೆ ಜಂಪ್ ಮತ್ತು ಓಟದ ಸ್ಪರ್ಧೆಗಳಿಗೆ ನಿಗದಿಗಿಂತ ಹೆಚ್ಚು ಮಿತಿಯಲ್ಲಿ ಗಾಳಿಯ ನೆರವು ದೊರೆತರೆ, ವಿಶ್ವ ಅಥ್ಲೆಟಿಕ್ಸ್ ಅದನ್ನು ದಾಖಲೆಗೆ ದಾಖಲೆಗೆ ಪರಿಗಣಿಸುವುದಿಲ್ಲ.

ವಿ.ವಿ ಕೊಕ್ಕೊ: 4 ತಂಡಗಳು ಅರ್ಹತೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಆತಿಥೇಯ ದಾವಣಗೆರೆ, ಮಂಗಳೂರು, ಬೆಂಗಳೂರು ಉತ್ತರ ಮತ್ತು ಕ್ಯಾಲಿಕಟ್ ವಿಶ್ವವಿದ್ಯಾಲಯದ ಪುರುಷರ ತಂಡಗಳು ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಕೊಕ್ಕೊ ಟೂರ್ನಿಗೆ ಅರ್ಹತೆ ಪಡೆದಿವೆ.

ದಾವಣಗೆರೆ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಟೂರ್ನಿಯಲ್ಲಿ 89 ತಂಡ ಪಾಲ್ಗೊಂಡಿದ್ದವು. ಈ ಪೈಕಿ ಎಂಟು ತಂಡಗಳು ಅರ್ಹತಾ ಹಂತ ಪ್ರವೇಶಿಸಿದ್ದವು.


ವಿ.ವಿ.ಆವರಣದಲ್ಲಿ ಶನಿವಾರ ನಡೆದ ಅರ್ಹತಾ ಹಂತದ ಪಂದ್ಯದಲ್ಲಿ ದಾವಣಗೆರೆ ವಿಶ್ವವಿದ್ಯಾಲಯ 13–11 ಪಾಯಿಂಟ್ಸ್‌ನಿಂದ ಮದ್ರಾಸ್ ವಿಶ್ವ ವಿದ್ಯಾಲಯ ತಂಡವನ್ನು ಮಣಿಸಿತು. ಆತಿಥೇಯ ತಂಡದ ಟಿ. ಹುಲಗಪ್ಪ ಮತ್ತು ಜೆ.ಜಿ.ಶರತ್ ಉತ್ತಮ ಆಟ ಆಡಿದರು. ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ 16–15ರಿಂದ ಕೊಯಮತ್ತೂರಿನ ಭಾರತಿಯಾರ್ ವಿ.ವಿ. ತಂಡದ ವಿರುದ್ಧ ಜಯಗಳಿಸಿತು.

ಮಂಗಳೂರು ವಿಶ್ವವಿದ್ಯಾಲಯ ತಂಡವು 14–4 ರಿಂದ ಮೈಸೂರು ವಿ.ವಿ ವಿರುದ್ಧದ ಪಂದ್ಯವನ್ನು ಏಕಪಕ್ಷೀಯವಾಗಿ ಗೆದ್ದುಕೊಂಡಿತು. ಅಭಿಜಿತ್ ಮತ್ತು ನಿಖಿಲ್ ಉತ್ತಮ ಸಾಮರ್ಥ್ಯ ತೋರಿದರು. ಕ್ಯಾಲಿಕಟ್ ವಿಶ್ವವಿದ್ಯಾಲಯ ತಂಡ 18–16ರಿಂದ ಕೇರಳ ವಿಶ್ವವಿದ್ಯಾಲಯ ತಂಡವನ್ನು ಸೋಲಿಸಿತು.

ಅಖಿಲ ಭಾರತ ಟೂರ್ನಿ ಏಪ್ರಿಲ್ 12 ರಿಂದ 16ರವರೆಗೆ ಕಾನ್ಪುರದಲ್ಲಿರುವ ಛತ್ರಪತಿ ಸಾಹೂಜಿ ಮಹಾರಾಜ್ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ.

ದಾವಣಗೆರೆ, ಮಂಗಳೂರು, ಬೆಂಗಳೂರು ಉತ್ತರ ಮತ್ತು ಕ್ಯಾಲಿಕಟ್ ತಂಡಗಳು ದಕ್ಷಿಣ ವಲಯ ಟೂರ್ನಿಯ ಲೀಗ್ ಹಂತಕ್ಕೂ ಮುನ್ನಡೆದಿದ್ದು, ಅಗ್ರ 4 ಸ್ಥಾನಗಳಿಗಾಗಿ ಪೈಪೋಟಿ ನಡೆಸಲಿವೆ.

ಸ್ಯಾಫ್ ಫುಟ್‌ಬಾಲ್: ಭಾರತಕ್ಕೆ ಬಿ ಗುಂಪಿನಲ್ಲಿ ಅಗ್ರಸ್ಥಾನ



ಮಾಲಿ (ಪಿಟಿಐ): ಭಾರತ ತಂಡವು, ಸ್ಯಾಫ್ 20 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್ ಕೊನೆಯ ಲೀಗ್ ಪಂದ್ಯದಲ್ಲಿ ಶನಿವಾರ ಬಾಂಗ್ಲಾದೇಶ ತಂಡದ ಎದುರು 1–1 ಡ್ರಾ ಸಾಧಿಸಿತು.

ಹಾಲಿ ಚಾಂಪಿಯನ್ ಭಾರತ ತಂಡವು ಮೊದಲ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ 3–0 ಗೆಲುವು ಸಾಧಿಸಿತ್ತು. ಭಾರತ ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದರೆ, ಕಡಿಮೆ ಗೋಲು ಸರಾಸರಿಯಿಂದ ಬಾಂಗ್ಲಾದೇಶ ಎರಡನೇ ಸ್ಥಾನ ಪಡೆಯಿತು. ಉಭಯ ತಂಡಗಳು ತಲಾ 4 ಅಂಕ ಗಳಿಸಿವೆ.

ಮಹೇಶ್ ಗವಳಿ ನೇತೃತ್ವದ ತಂಡವು ಬುಧವಾರ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಭೂತಾನ್ ತಂಡವನ್ನು ಎದುರಿಸಲಿದೆ.

ಸುರೇಶ್, ಆಕಾಂಕ್ಷಾ ದಾಖಲೆ

ಪ್ರಜಾವಾಣಿ ವಾರ್ತೆ



ಮಂಗಳೂರು: ತಮಿಳುನಾಡಿನ ಸುರೇಶ್ ಬಿ. ಮತ್ತು ಒಡಿಶಾದ ಆಕಾಂಕ್ಷಾ ಪರೀದಾ ಶನಿವಾರ ಮುಕ್ತಾಯಗೊಂಡ ರಾಷ್ಟ್ರೀಯ ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ 120 ಕೆಜಿ ಮತ್ತು ಮಹಿಳೆಯರ 84 ಕೆಜಿ + ವಿಭಾಗದಲ್ಲಿ ದಾಖಲೆ ಮಾಡಿದರು.

ಕರ್ನಾಟಕ ಪವರ್ ಲಿಫ್ಟಿಂಗ್ ಸಂಸ್ಥೆಯ ಆಶ್ರಯದಲ್ಲಿ ಕಶಾರ್ಪ್ ಫಿಟ್ನೆಸ್ ಸಂಸ್ಥೆ ನಗರದಲ್ಲಿ ಅಯೋಜಿಸಿದ್ದ ಚಾಂಪಿಯನ್‌ಷಿಪ್‌ನಲ್ಲಿ ಸುರೇಶ್ ಎರಡು ದಾಖಲೆ ತಮ್ಮದಾಗಿಸಿಕೊಂಡರು. 802.5 ಕೆಜಿ ಎತ್ತಿದ ಅವರು ಒಟ್ಟು ಭಾರದಲ್ಲೂ 355 ಕೆಜಿಯೊಂದಿಗೆ ಡೆಡ್‌ಲಿಫ್ಟ್ ವಿಭಾಗದಲ್ಲೂ ದಾಖಲೆ ತಮ್ಮದಾಗಿಸಿ-ಕೊಂಡರು. ಸ್ಕ್ವಾಟ್‌ನಲ್ಲಿ ಅವರು 285 ಮತ್ತು ಬೆಂಚ್ ಪ್ರೆಸ್‌ನಲ್ಲಿ 162.5 ಕೆಜಿ ಭಾರ ಎತ್ತಿದರು.

ಪದಕ ಗೆಲ್ಲಲು ಸಾಧ್ಯವಾಗದೇ ಇದ್ದರೂ ರಾಜಸ್ಥಾನದ ಪ್ರಭ್‌ಜೀತ್ ಸಿಂಗ್ ಸಂಧು ಸ್ಕ್ವಾಟ್‌ನಲ್ಲಿ 330 ಕೆಜಿಯೊಂದಿಗೆ ದಾಖಲೆ ಬರೆದರು. ನವದೆಹಲಿಯ ಮನ್‌ಪ್ರೀತ್ ಸಿಂಗ್ 790 ಕೆಜಿ (ಸ್ಕ್ವಾಟ್ 285, ಬೆಂಚ್ ಪ್ರೆಸ್ 187.5, ಡೆಡ್‌ಲಿಫ್ಟ್ 317 ಕೆಜಿ) ಎತ್ತಿ ಬೆಳ್ಳಿ ಪದಕ ಗಳಿಸಿದರೆ, ಮಧ್ಯಪ್ರದೇಶದ ಮಯಂಕ್ ಜೋಶಿ (786 ಕೆಜಿ; ಸ್ಕ್ವಾಟ್ 321, ಬೆಂಚ್ ಪ್ರೆಸ್ 152.5, ಡೆಡ್‌ಲಿಫ್ಟ್ 312.5) ಕಂಚಿನ ಪದಕ ಗೆದ್ದರು.

ಆಕಾಂಕ್ಷಾ ಒಟ್ಟು 478.5 ಕೆಜಿ (ಸ್ಕ್ವಾಟ್ 211, ಬೆಂಚ್ ಪ್ರೆಸ್ 95, ಡೆಡ್‌ಲಿಫ್ಟ್ 172.5) ಸಾಧನೆ ಮಾಡಿದರು. ಸ್ಕ್ವಾಟ್ ಮುಕ್ತ ವಿಭಾಗದಲ್ಲಿ ಅವರ ಸಾಧನೆ ದಾಖಲೆ ಆಯಿತು. ಮಹಾರಾಷ್ಟ್ರದ ಕರೋಲಿನ್ ಪೆಟ್ಸಿ (ಒಟ್ಟು 472.5ಕೆಜಿ) ಬೆಳ್ಳಿ ಮತ್ತು ತಮಿಳುನಾಡಿನ ಆಮೋದಿನಿ ರಾಮಕೃಷ್ಣನ್ (ಒಟ್ಟು 460ಕೆಜಿ) ಕಂಚಿನ ಪದಕ ಗಳಿಸಿದರು.

ಮಹಿಳೆಯರ 84 ಕೆಜಿ ವಿಭಾಗದಲ್ಲಿ ಪಶ್ಚಿಮ ಬಂಗಾಳದ ಸುಮಿತಾ ಮರಿಕ್ (ಒಟ್ಟು 435 ಕೆಜಿ) ಚಿನ್ನ ಗೆದ್ದುಕೊಂಡರು. ಅಸ್ಸಾಂನ ಕುಕಿ ಬೋರಾ (427.5 ಕೆಜಿ) ಮತ್ತು ಒಡಿಶಾದ ರಾಜಸ್ಮಿತಾ ಸಾಹು (425ಕೆಜಿ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಈಜು: ರಾಜ್ಯ ಪುರುಷರಿಗೆ ಸಮಗ್ರ ಪ್ರಶಸ್ತಿ


ಮಣಿಕಂಠ

ರಾಯಪುರ (ಪಿಟಿಐ): ಕರ್ನಾಟಕ ಪುರುಷರ ತಂಡವು ಇಲ್ಲಿ ನಡೆಯುತ್ತಿರುವ ಚೊಚ್ಚಲ ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದ ಈಜು ಸ್ಪರ್ಧೆಯ ಸಮಗ್ರ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಮಹಿಳೆಯರ ವಿಭಾಗದಲ್ಲಿ ಒಡಿಶಾ ತಂಡವು ಚಾಂಪಿಯನ್ ಆಯಿತು.

ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ದಾಖಲೆಯ 15 ಚಿನ್ನ, ಐದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳೊಂದಿಗೆ ಕರ್ನಾಟಕದ ಈಜುಪಟುಗಳು ಶನಿವಾರ ಅಭಿಯಾನ ಮುಗಿಸಿದರು.

ಒಟ್ಟು 123 ಅಂಕಗಳನ್ನು ಸಂಪಾದಿಸಿದ ಕರ್ನಾಟಕದ ಪುರುಷರ ತಂಡ ಈಜಿನಲ್ಲಿ ‘ಪವರ್‌ಹೌಸ್’ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿತು. ಮಣಿಕಂಠ ಎಲ್. ಎಂಟು ಚಿನ್ನ ಮತ್ತು ಒಂದು ಬೆಳ್ಳಿ ಸೇರಿ ಒಂಬತ್ತು ಪದಕ ಗೆದ್ದರೆ, ಧೋನೀಶ್ ಎನ್. ಐದು ಚಿನ್ನ ಸೇರಿ ಆರು ಪದಕ ತಮ್ಮದಾಗಿಸಿಕೊಂಡರು. ಅಸ್ಸಾಂ (69 ಅಂಕ) ಎರಡನೇ ಸ್ಥಾನ ಗಳಿಸಿತು.

ಒಡಿಶಾ ಮಹಿಳಾ ತಂಡವು 102 ಅಂಕಗಳೊಂದಿಗೆ ಸಮಗ್ರ ಪ್ರಶಸ್ತಿ ಗೆದ್ದಿತು. 50 ಅಂಕ ಗಳಿಸಿದ ಕರ್ನಾಟಕ ಎರಡನೇ ಸ್ಥಾನ ಪಡೆಯಿತು. ರಾಜ್ಯದ ಮೇಘಾಂಜಲಿ ನಾಲ್ಕು ಚಿನ್ನ ಸೇರಿ ಆರು ಪದಕ ಜಯಿಸಿದರು. ಆತಿಥೇಯ ಛತ್ತೀಸಗಢ (38 ಅಂಕ) ಮೂರನೇ ಸ್ಥಾನ ಗಳಿಸಿತು.

ಈಜು ಸ್ಪರ್ಧೆಯ ಕೊನೆಯ ದಿನ ಧೋನೀಶ್ ಎನ್. ಬೆಳ್ಳಿ ಪದಕ ಗೆದ್ದರು. ಪುರುಷರ 50 ಮೀ ಬ್ಯಾಕ್‌ಸ್ಟ್ರೋಕ್ ನಲ್ಲಿ ಅವರು 31.39 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಕೂಟದ ಪದಕ ಪಟ್ಟಿಯಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿ ಮುಂದುವರಿಸಿದೆ. ಒಡಿಶಾ (7 ಚಿನ್ನ, 3 ಬೆಳ್ಳಿ, 10 ಕಂಚು) ಎರಡನೇ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸುದ್ದಿ

ರಾಷ್ಟ್ರೀಯ ರಿಲೇ: ಕರ್ನಾಟಕಕ್ಕೆ 5 ಪದಕ

ಬೆಂಗಳೂರು: ಕರ್ನಾಟಕದ 20 ವರ್ಷದೊಳಗಿನ ಅಥ್ಲೀಟ್‌ಗಳು ಚಂಡೀಗಢದಲ್ಲಿ ಶನಿವಾರ ನಡೆದ ಮೂರನೇ ಆವೃತ್ತಿಯ ರಾಷ್ಟ್ರೀಯ ಓಪನ್ ರಿಲೇ ಸ್ಪರ್ಧೆಯಲ್ಲಿ ಎರಡು ಬೆಳ್ಳಿ ಸೇರಿ ಐದು ಪದಕ ಜಯಿಸಿದರು.

ಸರ್ವಜೀತ್, ಯಶಸ್ ಡಿ., ರೀಹಾನ್ ಕುಮಾರ್ ಹಾಗೂ ಆಯುಷ್ ದೇವಾಡಿಗ ಅವರನ್ನೊಳಗೊಂಡ ರಾಜ್ಯ ತಂಡವು 20 ವರ್ಷದೊಳಗಿನ ಪುರುಷರ 4x100 ಮೀ. ರಿಲೇಯಲ್ಲಿ ಬೆಳ್ಳಿ ಪದಕ (42.03 ಸೆಕೆಂಡು) ಗೆದ್ದುಕೊಂಡಿತು. ತಮಿಳುನಾಡಿನ ಓಟಗಾರರು 41.58 ಸೆಕೆಂಡುಗಳಲ್ಲಿ ಗುರಿ ತಲುಪಿ, ಚಿನ್ನದ ಪದಕ ತಮ್ಮದಾಗಿಸಿಕೊಂಡರು.

4x100 ಮೀ. ಮಿಶ್ರ ರಿಲೇಯಲ್ಲಿ ಅತೀಕ್ ಅಹಮದ್, ಸೃಷ್ಟಿ ವಿ., ಹೇಮಂತ್ ಗೌಡ ಎಂ.ವೈ. ಹಾಗೂ ಲೇಖನಾ ಎಸ್.ಪ್ರಸಾದ್ ಅವರು ಆಕರ್ಷಕ ಪ್ರದರ್ಶನ ತೋರಿದರಾದರೂ ಬೆಳ್ಳಿ ಪದಕಕ್ಕೆ (45.69 ಸೆ.) ತೃಪ್ತಿಪಡಬೇಕಾಯಿತು. ಚಂಡೀಗಢ (45.44 ಸೆ.) ಹಾಗೂ ಪಂಜಾಬ್ (45.92 ಸೆ.) ತಂಡಗಳು ಕ್ರಮವಾಗಿ ಚಿನ್ನ ಹಾಗೂ ಕಂಚು ಜಯಿಸಿದವು. ಪುರುಷರ 4x400 ಮೀ. ರಿಲೇ, ಮಹಿಳೆಯರ 4x100 ಮೀ. ಮತ್ತು 4x400 ಮೀ. ರಿಲೇ ಸ್ಪರ್ಧೆಗಳಲ್ಲಿ ರಾಜ್ಯದ ಅಥ್ಲೀಟ್‌ಗಳು ಕಂಚು ಗೆದ್ದುಕೊಂಡರು.

ಶೂಟಿಂಗ್ ವಿಶ್ವಕಪ್: ಭಾರತಕ್ಕೆ ನಿರಾಸೆ

ಟ್ಯಾಂಜಿಯರ್, (ಮೊರಕ್ಕೊ) (ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಶನಿವಾರ ನಿರಾಸೆ ಮೂಡಿಸಿದರು. ಶಾಟ್‌ಗನ್ ಸ್ಕೀಟ್ ವಿಭಾಗದಲ್ಲಿ ದೇಶದ ಯಾವುದೇ ಸ್ಪರ್ಧಿಗಳಿಗೆ ಫೈನಲ್‌ಗೆ ಅರ್ಹತೆ ಪಡೆಯಲು ಸಾಧ್ಯವಾಗಲಿಲ್ಲ. ಒಲಿಂಪಿಯನ್ ಮಹೇಶ್ವರಿ ಚೌಹಾನ್ ಅವರು ಮೊದಲ ದಿನ ನಡೆದ ಅರ್ಹತಾ ಸುತ್ತಿನಲ್ಲಿ ಉತ್ತಮ ಪ್ರದರ್ಶನ ತೋರಿ, ಅಗ್ರ ಎಂಟರ ಸಮೀಪಕ್ಕೆ ಬಂದರೂ ಫೈನಲ್ ಟಿಕೆಟ್ ಲಭಿಸಲಿಲ್ಲ.

ಮಹೇಶ್ವರಿ ನಾಲ್ಕನೇ ಮತ್ತು ಐದನೇ ಸರಣಿಯಲ್ಲಿ 23 ಮತ್ತು 21 ಅಂಕ ಸೇರಿದಂತೆ ಒಟ್ಟು 113 ಪಾಯಿಂಟ್ಸ್ ಗಳಿಸಿದರು. ಭಾರತದ ಸ್ಪರ್ಧಿಗಿಂತ ಎರಡು ಅಂಕ ಹೆಚ್ಚು ಪಡೆದ ಕತಾರ್‌ನ ರೀಮ್ ಘನೆಮ್ ಅಲ್ ಶರ್ಶಾನಿ (115) ಎಂಟನೇ ಸ್ಥಾನದೊಂದಿಗೆ ಫೈನಲ್ ಸುತ್ತು ಪ್ರವೇಶಿಸಿದರು. ಪುರುಷರ ವಿಭಾಗದಲ್ಲಿ ಪರಂಪಾಲ್ ಸಿಂಗ್ 117 ಅಂಕಗಳೊಂದಿಗೆ 26ನೇ ಸ್ಥಾನ ಪಡೆದು ನಿರಾಸೆ ಮೂಡಿಸಿದರು.

ಟಿ.ಟಿ: ಸಿದ್ಧಾಂತ್ ಕಂಚು ‘ಡಬಲ್’ ಸಾಧನೆ


ಪ್ರಶಸ್ತಿ ಜತೆ ಸಿದ್ಧಾಂತ್ ಹಾಗೂ ಸಾತ್ವಿಕ್

ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಆಟಗಾರ ಸಿದ್ಧಾಂತ್ ಎಂ. ಅವರು ಗುಜರಾತ್‌ನ ಗಾಂಧಿಗ್ರಾಮದಲ್ಲಿ ನಡೆದ 87ನೇ ಸಬ್ ಜೂನಿಯರ್ ಮತ್ತು ಕೆಡೆಟ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಡಬಲ್ ಸಾಧಿಸಿದರು.

ಸಿದ್ಧಾಂತ್ ಅವರು 13 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ 2–3ರಿಂದ (7–11, 15–13, 8–11, 13–11, 11–6) ಬಂಗಾಳದ ಆರೀವ್ ದತ್ತ ವಿರುದ್ಧ ಪರಾಭವಗೊಂಡರು. 13 ವರ್ಷದೊಳಗಿನ ಬಾಲಕರ ಡಬಲ್ಸ್‌ನಲ್ಲಿ ಸಹೋದರ ಎಂ.ಸಾತ್ವಿಕ್ ಜೊತೆಗೂಡಿ ಎರಡನೇ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಈ ಜೋಡಿ ಸೆಮಿಫೈನಲ್‌ನಲ್ಲಿ 6–11, 11–7, 7–11, 12–10, 5–11ರಿಂದ ಪಂಜಾಬ್‌ನ ತ್ರಿಜಾಲ್ ವೊಹ್ರಾ ಹಾಗೂ ಸಾತ್ವಿಕ್ ಶರ್ಮಾ ವಿರುದ್ಧ ಸೋಲು ಕಂಡಿತು.

ಟೈಗರ್ ವುಡ್ಸ್ ಬಂಧನ– ಬಿಡುಗಡೆ



ಜುಪಿಟರ್ ದ್ವೀಪ (ಅಮೆರಿಕ, ಎಪಿ): ದಿಗ್ಗಜ ಗಾಲ್ಫ್ ಆಟಗಾರ ಟೈಗರ್ ವುಡ್ಸ್ (50) ಅವರು ಚಲಾಯಿಸುತ್ತಿದ್ದ ರೇಂಜ್ ರೋವರ್ ಕಾರು ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಪ್ರಕರಣದ ಸಂಬಂಧ, ಮದ್ಯ ಸೇವಿಸಿ ಕಾರು ಚಲಾಯಿಸಿದ ಶಂಕೆ ಮೇಲೆ ಪೊಲೀಸರು ವುಡ್ಸ್ ಅವರನ್ನು ಶುಕ್ರವಾರ ಬಂಧಿಸಿದ್ದರು.

ಬಂಧನದ ಕೆಲ ಗಂಟೆಗಳ ಬಳಿಕ ವುಡ್ಸ್ ಅವರು ಜಾಮೀನಿನ ಮೇಲೆ ಬಿಡುಗಡೆ ಯಾಗಿದ್ದಾರೆ. ‘ವುಡ್ಸ್ ಅವರು ವೇಗವಾಗಿ ಕಾರು ಚಲಾಯಿಸಿ ಅಪಘಾತ ಮಾಡಿದ್ದಾರೆ. ಅವರು ಮದ್ಯ ಸೇವಿಸಿರುವಂತಹ ಲಕ್ಷಣಗಳು ಕಂಡುಬಂದಿದ್ದರಿಂದ ‘ಬ್ರೆಥ್‌ಲೈಸರ್’ನಲ್ಲಿ ಪರೀಕ್ಷಿಸಲಾಯಿತು. ಅವರ ದೇಹದಲ್ಲಿ ‘ಆಲ್ಕೊಹಾಲ್’ ಅಂಶ ಇರುವುದು ಪತ್ತೆಯಾಗ ಲಿಲ್ಲ. ಬಳಿಕ, ಮೂತ್ರ ಪರೀಕ್ಷೆಗೆ ವುಡ್ಸ್ ಅವರು ನಿರಾಕರಿಸಿದ್ದರಿಂದ ಬಂಧಿಸಲಾಯಿತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ಭಾನುವಾರ • ಮಾರ್ಚ್ 29, 2026

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಸಪ್ತಗಿರಿ ಪ್ರೋಮೋಟರ್ಸ್ ಮತ್ತು ಡೆವಲಪರ್ಸ್ ವತಿಯಿಂದ

Sapthagiri PROMOTERS & DEVELOPERS

DISCOUNT Rs.199/- Sq.ft. on Spot Booking


ಸಪ್ತಗಿರಿ ಎನ್‌ಕ್ಲೇವ್



ತುಮಕೂರು ರಸ್ತೆ ದಾಬಸ್‌ಪೇಟೆ ಸಿಟಿ ಹತ್ತಿರ

300 ಅಡಿ STRR ರಿಂಗ್ ರಸ್ತೆಗೆ ಹೊಂದಿಕೊಂಡಂತೆ

A KHATHA SITES

BMRDA APPROVED



*Actual Pictures

AMENITIES

Rain Water Drains
Avenue Plantation
Drainage Facility
Electricity Facility
Street Lights
Water Facility
Sanitary Facility
Plots With Clear Title
Gated Community
Round The Clock Security
Wide White Topped Roads (CC Road)
Perfectly Aligned Plots For Vasthu

Ready for Registration

*T&C apply

ಬುಕ್ಕಿಂಗ್ ಮತ್ತು ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ: **7026 33 00 66**

SAPTHAGIRI MS FORTUNE CiTY



NELAMANGALA (Just 10 min. drive from Nelamangala Bus stop)

100% Site Realeased & Layout work completed

A Khatha is Ready for Registration

A KHATHA SITES

BMRDA APPROVED

*Actual Pictures




Offer Price ~~3,000/-~~ 2,799/- Sq.ft.

AMENITIES

Drainage Facility
Electricity Facility
Street Lights
Water Facility
Sanitary Facility
Gated Community
Wide White Topped Roads (CC Road)

9686 49 49 49

ಬ್ಯಾಂಕ್‌ನ ಸಾಲ ಸೌಲಭ್ಯ

ಬುಕ್ಕಿಂಗ್ ಮತ್ತು ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ: **7026 11 88 99**

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

ANJANAPURA 1ST Block 40×60 North Facing BDA Site For Sale Price 2.4cr Negotiable. Contact: 9845298419

Arkavathi Layout

30X40 BDA Site for Sale Arkavathy, Opp Lake/ Park Venkateshwara 3rd Block, North Facing: 9844171085/ 9449007777

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES, BRINDAVAN ASSOCIATES- 9980863245/ 9945333993

SITE SALE: Banashankari 6th Stage, 3rd Block BDA 30x40 South and North Facing. Call: 9740148870.

SITE FOR SALE in BANASHANKARI 6th Stage 7th Block 40x60 East Facing 3.50Cr CONTACT: 9535575774

BANASHANKARI 6TH Stage 1st Block. 30x40 Site For Sale Near NPS School. Brokers Excuse. 9686026739.

Basavanagudi

50X80 NORTH East Corner and 40x40 Commercial Property in Basavanagudi Buyers and Sellers Contact 8618373754

Hanumanthnagar

40X60 NORTH and East Hanumathanagar, N/West N.R. Colony, 40x60 N/West Girinagar. Sellers/ Buyers Contact 8618373754

Kempegowda Layout

ARKAVATI ALTERNENT Site Sale SF. BDA 30ft Road, Rs.1Cr 15Lac Negotiable Nada Prbhu Kempegowda Layout 8th, Block D' Sector Near Mysore Road: 9611577666

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Multiple Locations

BANASHANKARI 6TH Stage, Nadaprabhu Kempegowda Layout, Vishweshwariah, BDA Site, Houses are available. Contact: 9900999919.

Vishweshwariah Layout

LANDS AVAILABLE FOR SALE
BIDADI, RAMANAGAR, CHANNAPATTANA, NELAMANGALA, DEVANAHALLI, DABASPETE, STRR Road, HOSAKOTE
Extent of 5 to 50 Acres
Suitable for Warehouse, Industrial, Villa Plots, Farmhouse.
Interested Contact:
9845488488

BDA SITE SALE VISHWESHWARAIAH LAYOUT 2nd Block 40X60 NORTH FACE NEAR 100FT ROAD GOOD LOCATION CONTACT: 8892901567

"DIRECT OWNER" 40x60 E/F Site Sale VISHWESHWARAIAH LAYOUT BLOCK-1 Behind 100ft Road,Bank loan Available. 9742681666

VISHWESHWARAYY A LAYOUT BDA Site for sale West facing 30x40, 3rd block Broker excuse Contact: 7349549087

BDA SITE For Sale @ Vishweshwaraiah Layout 30x40, 40x60, 50x80 Contact: 6363496142 9845555666

Nagarabhavi

"AVAILABLE 30X40,40X60, 50x80`Sites for`Sale in Nagarbhavi, ITI, NGEF Layout, Vishveshwaraiah Layout, Banashankari 6th-Stage, Kempegowda Layout. Call: 9945494074"

"NAGARABHAVI DEEPA-COMPLEX 40x60 East North corner 80% White, 40x60 East Commercial 60'ft Road. 9448432633"

Rajajinagar

"AVAILABLE COMMERCIAL 45x85 Esst facing Site 80'ft Road Rajajinagar Dr.RajKumar Road. Contact: 9632788913"

Jayanagar

JAYANAGAR-4TH 'T'-BLOCK 33rd Cross Old House Sale 40x52 N/F Prime Location Call- 9845030368 (Brokers Excuse)

Rajarajeshwari Nagar

BDA AUCTION North West Corner Site MEASURING 5.95mtr X 12.2mtr (72.59 sq.mtr) at Banashankari 5th Stage, Near Channasandra (R.R.Nagar), Bangalore. CONTACT: 9845913977

Sanjaynagar

SANJAYNAGAR KEB LAYOUT BDA 1050 sft North West Corner 40 feet Road E-Khatha, Call: 7829203369

Vidyaranyapura

SAMBRAM COLLEGE Near Amba Bhavani Temple Back,Side 30x40, 37.5x40 WF BBMP B/E Katha, 40x60 WF Best County 2, DC Conversion A/E Katha: 8296895858

Yeshwanthpur

SALE COMMERCIAL BDA Site Facing Tumkur Road, Opposite Metro cash and carry, Mandovi Motors, Measuring 40x125, Owner 9480060249.

J P Nagar

JPNAGAR 7TH PHASE AVAILABLE MEASURING 45x40, 2 SITES SOUTH EAST CORNER AND SOUTH WEST CORNER, BBMP E KHATA (11B)- 7022435107

Bannerghatta Road

SITE FOR sale: 40/60ft, NF, @Raja Iris Residencial layout,1.5 cr. ,Begur koppa road, Cont: 9035917223

Jakkur

JAKKUR ARKAVATI 7th, 3rd, 2nd: 30x40, 20x30. MCECHS Duplex 4BHK East House 4.30crs. 9535658860

Murugeshpalya

WIND TUNNEL ROAD, SALE Plot with Old House, 44.5x30 feet, A-Katha, West, Excellent Location. 7022334447 7022334448

Nelamangala

NELAMANGALA SALE BMRDA 40x60 west Near Dr. Punith Rajkumar BDA VILLA Good Location contact- 9035010595

FOR SALE
30000 SQ.FT.BUILDING WITH 3 FLOORS AND PARKING AT ESI LAYOUT, KUDLU GATE,
CONTACT
9880498007
Email- associates.blr10@gmail.com

Basaweshwaranagar

***BASAVESHWARANAGAR* 40X60** VVS COLLEGE back-side RESIDENTIAL EAST FACING BDA SITE FOR SALE. Contact: 9945079777

Kengeri

FOR SALE: BBMP A Khatha Sites at Kengeri, 500 meters from the Metro Station with Cauvery Water. Contact: 9606342643

WEEKEND CORNER ಕ್ಲಾಸಿಫೈಡ್ಸ್

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

House

BTM Layout

BDA 40X60 House for Sale G+1. near BTM Metro. Rs.33,800/- psqft. Brokers Excuse. 9480255422.

Basaweshwaranagar

BASAVESWARNAGAR BEML LAYOUT 39x60 SF 4BHK Duplex House Sale, All Teakwood, Carpark, Prime Location: 9448324477/ 7795163795

Jayanagar

RAGGIGUDDA 30X40 North BDA, clear title, old house, near Metro Station (Agents Excuse) Murali- 9845232711

J P Nagar

J.P.NAGAR 4TH Phase 30x40, South, old house, BDA clear title near Ringroad, Suraj Realtors- 9845232711

J.P.NAGAR 3RD Phase 30x40 East facing old house (Mini forest) clear title, Suraj Realtors- 9845232711

Kanakapura Road

"FOR RENT 2BHK close to Forum South Mall, Konanakunte Metro Station, Kumaran School. 9845286505"

Ullal

***MUNESWARA NAGAR** Ullal Main- Road* 30x40 East Facing House ground 2BHK 1,2,3 Floors 3BHK with car- parking. ₹2,95,00,000/- ABHILASHA CONSULTANT: 9480565758

Flat

Kanakapura Road

PRIME CENTREO, Acacia tower 1454 sft ready flat for sale near Vajarahalli metro. Ct 9962372203.

Nagarabhavi

FLATS FOR-SALE @ Nagarabhavi Chandra Layout 2 & 3 BHK Ready to Move In Good Location Call:9538472420 9845066608

Tumkur Road

60X40 `A`KHATHA 100Square Building, 8Flats, 8Carpark Walkable Chikkabidarakallu Metro`& Adjacent-to Prestige Jindal-City. 7.02.Cr. 7019455938.

Agricultural Land

Chikkaballapura

AGRICULTURAL LAND-SALE 15 K.M. From CHIKKABALLAPUR, 8 K.M. From HYDERABAD HIGHWAY. Suitable: FARMHOUSE 7019666458.

Commercial Building

K R Puram

STANDALONE BUILDING Krishnarajapuram 4000 square feet occupied by reputed tenants good ROI. 6374573379

Commercial Land

Kengeri

SALE- CONVERTED Betterment Paid Land extent 35000 sqft A Khata. E Khata available. Opp to Kengeri Metro Station, Rs. 12000 per sqft. Brokers Excuse. Contact: 9880459141.

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

Jayanagar

JAYANAGAR 9TH Block 30x40 Commercial vacant Site near Central Mall (good footfall) Suraj Realtors- 9845232711

Rajajinagar

RAJAJINAGAR BDA Commercial Property 70x110 West Facing Gayathri Nagar Main Road Contact: 7899570235

Vishweshwariah Layout

COMMERCIAL PROPERTY: For Sale/ Rent/ Lease Land Space: 7000 Sqft Built up Area 25000 Sqft Basement + Stilt + Ground + 3 Floors, For Multipurpose use including Showrooms, Retail outlets, Warehouse. Prime location 100 ft ring road 5th block Vishweshwaraiah Layout. Contact: 8431895685/ 9591037315

General

Out-Station

MUMBAI SEA FACE JOINT DEVELOPMENT PROPERTIES AVAILABLE SRADEVELOPMENTS, REDEVELOPMENTS. GOA SALE CASINO 5STAR HOTEL. 9702932709

Industrial & Factory

Out-Station

INDUSTRIAL PROPERTY FOR SALE OR LEASE

60 gunthas (1.5 Acres) K.I.A.D.B. HONAGA Industrial Area, Honaga, Belagavi, Karnataka. Clear title, protected boundries, water tank, bore well, toilet facility, 150 KVA connection (HT Line),500 KVA transformer # 30 ft Road at one side.. Directly connected to Puna-Bangalore highway.(400 mtr from NH4)

CONTACT NO:- MOB :- 9448274014

Tumkur Road

SALE 10/ 12/ 30/ 105 Acres Industrial, Warehouse, Commercial, Residential Land. Dabaspet Nelamangala. NAIK: 9141326819

SALE/ BUILT to suit, 10 Acres Industrial Converted Land Suitable for Warehouse, Industry, Dabaspet 9141326819

REAL ESTATE BUYING

Commercial Land

Devanahalli

WE HAVE Buyers for 10acres to 30acres Land around Devanahalli for educational institutions. Any Engineering college either closed or Running with 10 to 30acres Land can'also contact us. Clear titles. Arun 9845077299.

Industrial & Factory

General

LOOKING FOR 40000 sft shed with power for a manufacturing unit with 20 feet space all around it. Location is in and around Nelamangala or on Kunigal road. Call: 9845031885

LOOKING FOR 2 Acre Industrial Land With Clear Holding for a Manufacturing Unit in and around Nelamangala or Kunigal Road. Call: 9341927505

Sites

Banashankari

BDA SITES WANTED ARKAVATI, ANJANAPURA, BANASHANKARI 6TH STAGE, VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA Sites Arkavathi, Nadaprabhu Kempegowda & BDA other Layouts. Contact: SAPTHAGIRI (Opposite BDA Head Office):: 9036360366

Nagarabhavi

WANTED BDA SITE 30x40, 40x60, 50x80 Vishweswaraiah, Nagarabhavi, NGF, ITI, MPM, RHCS, Kempegowda Layout. 9008418631.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

'WE-FIX' LEAKING ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING. MACBOND. 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

RENTAL AVAILABLE Commercial Space Jayanagar 3rd Block Indoor space 1400 sft Outdoor space 650 sft Contact: 9591243838

MULTISTORIED CORNER Building available for rent 1 & 2 floor commercial space suitable for Bank and office 2,250 Sqft Each. 2 BHK & 3 BHK apartment available with stilt parking at medahalli Junction, NH: 75, B'lore East, BBMP Limits Contact :9108460024, 9449446676

Industrial And Factory

General

FOR RENT Kiadb Malur in 1.5 acre Industrial sheds 10000 5000 sft office 2500 sft workers & security. Power 200Hp. Contact 9845037777

House

RENT: 2BHK Ist Floor, Girinagar, 1BHK, Ist Floor, Hanumanthnagar, Amenities, Semi furnished. Owner: 78925-30410/ 9448809902

JOB OPPORTUNITIES

Domestic Helpers / Housekeeping

WANTED IMMEDIATELY HOUSEKEEPING STAFF 20 NO's (ONLY MALE CANDIDATE) LOCATION HORNADU ANNAPOORNESHWARI TEMPLE SALARY 15000 FOR 8 HRS, PLUS OT, ESI & PF, FREE FOOD & ACCOMODATION. CONTACT:- 6366521234 / 9620627627

Multiple Vacancy

SESHADRIPURAM EDUCATIONAL TRUST
27, Nagappa Street, Seshadripuram
Bengaluru-560 020. Phone: 22955350
Website: www.set.edu.in / E-mail : set.edu.in@gmail.com

Seshadripuram Institute of Technology, Mysuru

An upcoming engineering college with a vision of become an institution that is "shaping tomorrow's engineers today" is looking for

PRINCIPAL

The candidate needs to have proven track record in academic leadership with team building, accreditation processes, and institutional development. Desired attributes are administrative experience with knowledge of AICTE/GoK/VTU norms and excellent interpersonal communication skills.

Qualification as per AICTE/VTU norms and should be above 50 years of age.

Candidates who have served as Principal/Dean/ Director will be preferred. AICTE VII pay scale is implemented and gross salary will be commensurate with experience and credentials.

Last date to apply: 11.04.2026

Eligible candidates may apply in handwritten application along with a detailed resume, passport size photo & copies of testimonials etc. to the **Honorary General Secretary, Seshadripuram Educational Trust, Bengaluru** through e-mail to **set.edu.in@gmail.com**

N. R. Pandith Aradhya, President — Dr. Wooday P. Krishna, Honorary General Secretary

POMPOWER

A leading brand in the manufacture of Online UPS, Solar Hybrid and On-grid Inverters, and EV Chargers, is looking for the following positions.

1. **GENERAL MANAGER, MARKETING:** 5 to 6 years of experience in UPS systems/ Solar Inverters.
2. **ASST. GENERAL MANAGER, MARKETING:** 4 to 5 years of experience selling Solar Inverters or UPS for industrial / commercial offices.
3. **SALES EXECUTIVES:** 1 to 2 years of experience selling UPS.
4. **SERVICE EXECUTIVES:** ITI / Diploma in Electrical/Electronics with 1 to 2 years of experience in UPS / Solar Inverters.

For Walk-in Interview Call: 9035010265
Share your resume at: pompower@pompower.in
No.75, 6th A Main, 3rd Phase, Peenya Industrial Area, Bangalore - 560 058.

ANGELS HIGH School M.C.Layout, Vijayanagar, Bangalore. Required Experienced Nursery Teachers, Science & Maths for High School and Coordinator. 8431812577/ 9986555788.

NIRMAN INTERNATIONAL PUBLIC SCHOOL- CBSE,7th Block, Vishweshwaraiah Layout, Bangalore-91 Requires qualified TEACHERS with strong spoken English skills for all subjects from Nursery to Grade X. Walk-in on all working days. Contact: 8123030731/ 9986055970 Mail: nirmaninfo24@gmail.com

Teachers/ Professors

ST.CHARLES HIGH SCHOOL#1086 1st Block,3rd Stage Adarsha Layout Basaveshwaranagar Bangalore-79. Phone:080-23235220/ 9449150749. Invites the Applications from Trained and Experienced English Medium-Teachers for Nursery,Primary,and High School to teach all the Subjects including-Computer,CP.Ed and Drawing.Qualification required:NTT,TCH D.Ed,B.Sc B.Ed,BA B.Ed.

ST. MARTIN'S High School, 7th Cross, Behind Anjan Theatre, Magadi road, Bengaluru- 560023. Require: - Head Mistress & Academic Advisor (Urdu), qualified and trained teachers for Nursery, Primary High School to teach all the subjects including computer, PE and Drawing. Preferably ladies. Contact number: 080-23101999, 9916184299, 9591990199.

WANTED ENGLISH and SOCIAL STUDIES TEACHERS for High School Salary Negotiable. Walk-in- Interview on working days 'JNANADEEPTHI ENGLISH SCHOOL', #56, 6th Main, Avalahalli, BDA Layout, Girinagar, Bangalore-85. Phone: 26748056 (Near 36A Bus-stop)

WANTED TEACHERS ICSE Curriculum ENGLISH BA, MA, MATHS, CHEMISTRY, HINDI & P.E Contact OXFORD PUBLIC SCHOOL. Srikantapura Anchepalya Near Jindal Public School Tumkur Road Bangalore. Mobile No: 9001111030, 9620075574

ADITYA PUBLIC HIGH SCHOOL
607, 21st Cross, Laxman Rao Nagar, Koramangala, Vivekanagar (Post), B-47.
REQUIRED TEACHER'S
Teach from LKG to 10th Std for all the Subjects
Qualification: SSLC, PUC, NTT, TCH, D.Ed, Degree, B.Ed
Contact Immediately
8073093749
9481255196
9980876238

REQUIRED EXPERIENCED Primary and High School Teachers with B.A / B.Sc, B.Ed / M.A / M.Sc, M.Ed to teach Science, Social Science, Mathemetics, English, Hindi & PE Teacher. Required Librarian, Lab Assistant & Drivers. Walk-in- interview. Contact: Lalith Castle International School, Rajarajeshwari Nagar, Blore-98. Mob: 9620464800 Email: lcis.rrnagar@gmail.com

CAMLIN ENGLISH School State Board 6th 'C' Main, 4th Cross, Hampinagar Bengaluru-560104 080-23301363 REQUIRES TEACHERS for High, Middle and Primary School. English, Kannada, Maths, Science, Social Computer, Physical Education. WALK-IN INTERVIEW or Resume to Email: camlinschool84@ gmail.com

WANTED TRAINED Graduates and post Graduates for primary and high school, with Min 5years of Experience with Fluent English. English(MA.B ed) Kannada(MA.B ed)Social Science(MA,BA,B ed) Maths&Science(M.sc,B ed) Hindi(B.A, B ed) Physical Education(C.P ed/ B.P ed) Computer (BCA) Contact: 9632315392 Walk-in for an interview on 6/4/26 &8/4/26 Between 10-30 to1-30 Pandit Jawaharlal Nehru Memorial High School 4th main road,9th cross chamrajpet,Near Nayara petrol Bunk Bangalore-18

V.E.T.GROUP OF INSTITUTIONS
14th Main, 2nd Phase, J.P.Nagar, Bangalore - 560 078.
Ph : 080-2658 6808 / 2658 4760

WANTED TEACHING FACULTY & NON-TEACHING STAFF

SCHOOL - V.V.Puram / J.P.Nagar

Science Teachers	B.Sc,M.Sc, B.Ed., 3 Yrs Exp.
English Teachers	B.A,M.A, B.Ed., 3 Years Exp.
Social Teachers	B.A., M.A, B.Ed., 3 Yrs. Exp.
Maths Teachers	B.Sc,M.Sc, B.Ed., 3 Yrs. Exp.
Physical Education	B.P.Ed, (Preferably Female)
Computer Teachers	BCA / B.Sc-Comp. / M.Sc-Comp.
Sanskrit	B.A.,M.A.,B.Ed.,
Hindi	B.A.,M.A.,B.Ed.,
Teacher (Primary)	Any Degree with D.Ed / B.Ed
Mother Teacher	B.A.,B.Sc.,B.Ed., 3 Yrs Exp.

ADMIN

Clerk / Admin	Any Degree with Computer Knowledge & Good Communication Skills

WALK - IN - INTERVIEW
on 01st and 02nd April 2026
between 9.30 am and 2.30 pm at
J.P.Nagar Campus

E-mail : vetinst@rediffmail.com / parvathi3838@gmail.com

Wanted

WANTED: OFFICE Executive (Male/ Female) for a Hydraulic Trading Company to take care of day to day office work (Qtn, Invoice, Eway bill making, keeping Inventory Records etc). Computer skills must. E-Mail resume to: vandec.office@gmail.com. WALK IN INTERVIEW AT VANDEC, 47, RAR MANSION, 1ST MAIN ROAD, ROYAN CIRCLE, CHAMRAJPET, BLR-18, PHONE: 41223132/ 9886477315

Cook

WANTED COOK for Factory Director & staff. Electronics city area. (Bangalore). both Non veg/veg. Breakfast /lunch/ dinner for 6 to 8 people daily. Can provide Free single person accommodation/ food. Clean & No bad habits. Call 9886972374 or 9980283865

Marketing & Sales

WANTED MARKETING EXEUTIVES & TELECALLERS for Real Estate Company in Budigere Cross Call- 7349613954 chekkeraporperties.com

AUTOMOTIVE

Four Wheelers Selling

Benz

MERCEDES BENZ GLS450D 2025 MODEL SOLITURE BLUE 11,500 KMS, BRAND NEW CAR FOR SALE EX-SHOWROOM PRICE: 1.25 CRORES, DIRECT BUYERS ONLY. CONTACT: 9036051000/ 9035011001.

Others

AUDI-A6 MODEL 2017 1st OWNER, 17000 KM, WHITE COLOUR, FANCY NUMBER, Excellent condition: 9740999060

MATRIMONIAL

Grooms Wanted

Hindu

SEEKING ALIANCE from upper caste for Bangalore based beautiful girl 1995/5'6',MArch daughter of Army officer.Mother, sister doctors.Contact 9885186147

Muslim

GROOM WANTED
Sunni Muslim Educated 26 years 5'1", Masters from UK. Looking for a Well Educated Suitable Boy. For further details Contact : 9845066818

Wanted Groom
Sunni Muslim girl, 2003 born, B.Com, from a highly respected affluent family, seeking a cultured and well-matched partner.
(080-69072057)

Brides Wanted

Muslim

Wanted Bride
Sunni Muslim doctor (1997), MBBS/MD – General Medicine, from an affluent Bangalore family, seeking a suitable match.
080-69072057

Telugu

Wanted Bride
Balija Telugu (Naidu) | 1995 Born | 5'11"Well-educated, handsome boy from a reputed high-class business family, Bangalore .
(9972605001)

BUSINESS

Business Offers

Business For Sale

A PREMIUM laundry outlet with all laundry equipment for sale in electronic city, for details call 9945831641

EDUCATIONAL

Distance Education

CHEMISTRY PLUS2 Boards, JEE, NEET Online by reputed tutor from Kolkata. Chatterjee Sir Mob: 9674959386

PERSONAL

Change of Name

CHANGE OF NAME
I, **MOHAMED JUNAID**, residing at No.46, 4th Cross, Vinayakanagar, J P Nagar, 5th Phase, Bengaluru-560078, have changed my name to **MOHAMMED JUNAID** vide affidavit dated 02-03-2026 before notary Mohammed Hussain K, Bengaluru.
Henceforth I shall be called **MOHAMMED JUNAID** only

I MAVILLA SAI SREYA, A-Block 308, Splendid Royale Apartment, ITI Layout, 3rd Main, Bengaluru-68, have changed my name to MAVILLA SAI SHHREYYA Vide affidavit dated-28/03/2026.

Community Centre (R) - 1956

COMMUNITY INSTITUTE OF MANAGEMENT STUDIES (CIMS)

Accredited by NAAC, Affiliated to Dr. Manmohan Singh Bengaluru City University, Approved by AICTE, New Delhi
LOCATED IN PRIME LOCATION NEAR ASHOKA PILLAR, II BLOCK JAYANAGAR, BENGALURU

ADMISSIONS OPEN FOR 2026 - 27

KARNATAKA GOVERNMENT QUOTA SEATS FOR MBA & MCA 2026

PGCET Entrance exam date has been announced in KEA website. Exam will be conducted on **24th May 2026** all over Karnataka. Students who want to complete MBA & MCA in a very less fees, kindly register before 8th April 2026 in the kea.kar.nic.in website. Even final Semester Degree Students can register.

CIMS Government Quota Seats — MBA- 90 Seats, MCA- 60 Seats

Note: Students who want to pursue higher education but stepping back due to financial problem, Kindly utilize this government benefits

ವಿಶೇಷ ಸೂಚನೆ: ಉನ್ನತ ವ್ಯಾಸಂಗ ಮಾಡಲು ಬಯಸುವ, ಆರ್ಥಿಕ ಸಮಸ್ಯೆಯಿಂದ ಅಧ್ಯಯನದಿಂದ ಹಿಂದೆ ಸರಿಯುತ್ತಿರುವ ವಿದ್ಯಾರ್ಥಿಗಳು, ದಯವಿಟ್ಟು ಈ ಸರ್ಕಾರಿ ಸೌಲಭ್ಯಗಳನ್ನು ಬಳಸಿಕೊಳ್ಳಿ.

CIMS is conducting FREE! PGCET coaching classes for all MBA & MCA aspirants at CIMS Campus in April month. Interested students join the whatsapp group for receiving all details of **PGCET - 2026**

MERIT SCHOLARSHIP
Students joining our institution from **PGCET within 5000 Rank** will be given a Scholarship of **Rs.40,000/-** in 1st Year

PGCET CODE: MBA - B153 / MCA – C528

Placement Summary for 2023 - 2025

Total No. of Companies	68
Total No. of Students in the college (MBA & MCA)	300
Total No. of Students not opted/ not eligible for Placements	53
Total No. of Students opted for Placements	247
Total No. of students placed*	216
Percentage	88%
Highest Package	12 LPA
Average Package	6 LPA

CIMS RANK HOLDERS OF BATCH 2023-2025

100% Result


MCA RANK HOLDERS


2nd Rank 92.81%
Ms. JOSHI ARYA SUHAS


4th Rank 91.74%
Ms. MEGHANA H


5th Rank 91.44%
Ms. NANDINI R

MBA RANK HOLDERS


2nd Rank 83.37%
Ms. SOWMYA SHREE K


4th Rank 81.93%
Ms. CHANDANA N

For Admission enquiry contact: **9731022994 / 080 26577851**
Website: www.cimsbschool.org / Email ID: admissions@cimsbschool.org